
ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

15 ಜುಲೈ 2015 ಪುಟ 20 ರೂ. 15/-

ಸಲಿಂಗ ಕಾಮ ಪ್ರೇಮ ಎಂಬ ವಿಸ್ಮಯ


ಲೋಕಾಯುಕ್ತಕ್ಕೆ ಬಿಸಿನೀರು





ಯಾರು ಈ ಹೊಟ್ಟೆ ಕೃಷ್ಣ?

ಧರ್ಮ'ಕ್ಷೇತ್ರ'ದ ಭೂದಾಹಿಗಳಿಗೆ 'ಧರ್ಮಾಘಾತ'



ಉತ್ತರ ಕನ್ನಡ:

ಡಾನ್ ದೇಶಪಾಂಡೆ ವಿರುದ್ಧ ಬಂಡೆದ್ದ ಕಾಂಗ್ರೆಸ್ ಶಾಸಕರು!




ಮಂಡ್ಯ

ಅನ್ನದಾತನ ಆತ್ಮಹತ್ಯೆಯೂ ಮೈಷುಗರ್ಸ್ ಅವಸಾನವೂ

ಸಕ್ಕರೆ ಬಿಕ್ಕಟ್ಟು-1

ಉತ್ತರಿಸಿಕೊಳ್ಳಬೇಕಾದ ಪ್ರಶ್ನೆಗಳು



ಈ ಲೇಖನ ಬರೆಯುತ್ತಿರುವ ಹೊತ್ತಿಗೆ, ಕರ್ನಾಟಕದ ವಿಧಾನಮಂಡಲ ಅಧಿವೇಶನದಲ್ಲಿ ಭಾರೀ ಕೋಲಾಹಲ ನಡೆದಿದೆ. ಇಡೀ ಸನ್ನಿವೇಶಕ್ಕೆ ಬಿಸಿ ಹತ್ತಿದ್ದು ಕರ್ನಾಟಕದ ರೈತಸಂಘದ, ಏಕೈಕ ಶಾಸಕ ಪುಟ್ಟಣ್ಣಯ್ಯನವರ ಸ್ವಂತ ಕ್ಷೇತ್ರದಲ್ಲಿ ಒಬ್ಬ ಕಬ್ಬು ಬೆಳೆಗಾರ ಬೆಂಕಿಯಲ್ಲಿ ಸುಟ್ಟು ಸತ್ತು ಹೋದ ನಂತರ. ಆದರೆ, ಈ ಘಟನೆ ನಡೆಯುವುದಕ್ಕೂ ಮುಂಚಿನಿಂದಲೂ ಕಬ್ಬು ಮತ್ತು ಸಕ್ಕರೆ ಸದ್ದು ಮಾಡುತ್ತಲೇ ಇದೆ. ಹಿಂದಿನ ವರ್ಷ ಇದೇ ಬೆಳಗಾವಿ ಅಧಿವೇಶನದ ಸಂದರ್ಭದಲ್ಲೇ, ಸುವರ್ಣ ವಿಧಾನಸೌಧದ ಮುಂದೆ ಧರಣಿ ಕೂತ ಕಬ್ಬು ಬೆಳೆಗಾರ ವಿಠಲ ಅರಭಾವಿ ವಿಷ ಕುಡಿದು ಸತ್ತಿದ್ದರು. ಹೆಚ್ಚು ಕಡಿಮೆ ಆಗಿನಿಂದಲೂ ಕಬ್ಬು ಬೆಳೆಗಾರರ ಸಮಸ್ಯೆ ಮತ್ತು ಸಕ್ಕರೆ ಬಿಕ್ಕಟ್ಟು ದಿನೇ ದಿನೇ ಕಗ್ಗಂಟಾಗುತ್ತಲೇ ಇದೆ. ಸಿದ್ದರಾಮಯ್ಯನವರು ವಿಧಾನಸಭೆಯಲ್ಲಿ 'ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲೇ ಯಾವ ರಾಜ್ಯ ಸರ್ಕಾರವೂ ನಮ್ಮಷ್ಟು ಕಬ್ಬು ಬೆಳೆಗಾರರ ರಕ್ಷಣೆಗೆ ಬಂದಿಲ್ಲ' ಎಂದು ಹೇಳುತ್ತಿದ್ದಾರೆ. 'ಕೇಂದ್ರ ಸರ್ಕಾರದ ಎಫ್‌ಆರ್‌ಪಿಗಿಂತ ಹೆಚ್ಚು ದರವನ್ನು ಹಿಂದಿನ ವರ್ಷ ನಿಗದಿ ಮಾಡಿದ್ದೆವು. ಕಾರ್ಖಾನೆಗಳು ಕೊಡಬೇಕೆಂದು ನಿಗದಿ ಮಾಡಿದ್ದ ದರದ ಮೇಲೆ 150 ರೂ.ಗಳನ್ನು ಸರ್ಕಾರದಿಂದ ನೀಡುತ್ತೇವೆಂದು ವಾಗ್ದಾನ ಮಾಡಿದ್ದೆವು. ಅದನ್ನು ನೇರವಾಗಿ ರೈತರ ಖಾತೆಗಳಿಗೆ ತಲುಪಿಸಿದ್ದೇವೆ. ಈಗ ಹೊಸ ದರವನ್ನು ನೀಡಲು ನಿರಾಕರಿಸುತ್ತಿರುವ ಖಾಸಗಿ ಸಕ್ಕರೆ ಕಾರ್ಖಾನೆಗಳಲ್ಲಿನ ದಾಸ್ತಾನನ್ನು ಜಪ್ತಿ ಮಾಡಿದ್ದೇವೆ. ಇದು ಹಿಂದೆಂದೂ ಯಾವ ಸರ್ಕಾರವೂ ತೆಗೆದುಕೊಳ್ಳದೇ ಇರುವ ಕ್ರಮ'. ಹಾಗಾದರೆ ವಾಸ್ತವವೇನು? ಸಿದ್ದರಾಮಯ್ಯನವರ ಸರ್ಕಾರ ಮಾಡಬೇಕಾದ್ದನ್ನೆಲ್ಲಾ ಮಾಡಿದೆಯೇ?

ಈ ಸಮಸ್ಯೆ ಇರುವುದು ಕೇವಲ ಕರ್ನಾಟಕದಲ್ಲಲ್ಲ. ಉದಾಹರಣೆಗೆ, ದೇಶದ ಸಕ್ಕರೆ ಕೊಳ್ಳದ ಪ್ರಮುಖ ರಾಜ್ಯ ಮಹಾರಾಷ್ಟ್ರದಲ್ಲಿ ಶೇ.15ರಷ್ಟು ಕಾರ್ಖಾನೆಗಳು ಬಾಗಿಲು ಮುಚ್ಚಿವೆ. ಆದ್ದರಿಂದ ಮೋದಿ ಸರ್ಕಾರವು ಜೂನ್ 10ರಂದು ಒಂದು ಘೋಷಣೆ ಮಾಡಿತು. ಕಾರ್ಖಾನೆಗಳು ರೈತರಿಗೆ ನೀಡಬೇಕಾದ ಬಾಕಿಯನ್ನು ನೀಡಲು ಅನುಕೂಲವಾಗಲೆಂದು ಕೇಂದ್ರ ಸರ್ಕಾರವೇ 6,000 ಕೋಟಿ ರೂ.ಗಳ ಬಡ್ಡಿ ರಹಿತ ಸಾಲವನ್ನು ನೀಡಲಾಗುತ್ತದೆ ಎಂಬುದೇ ಆ ಘೋಷಣೆ. ಆ ಹೊತ್ತಿಗೆ ಕಾರ್ಖಾನೆಗಳು ರೈತರಿಗೆ ನೀಡಬೇಕಿದ್ದ ಬಾಕಿ ಸುಮಾರು 21,000 ಕೋಟಿ ರೂ.ಗಳು. ಹಿಂದಿನ ಯುಪಿಎ ಸರ್ಕಾರವೂ ಡಿಸೆಂಬರ್ 2013ರಲ್ಲಿ ಇದೇ ರೀತಿ 6,600 ಕೋಟಿ ರೂ.ಗಳ ಬಡ್ಡಿರಹಿತ ಸಾಲವನ್ನು ರೈತರಿಗೆ ನೀಡಿತ್ತು. ಪ್ರಸ್ತುತ ವರ್ಷ ಮೇಲೆ ಹೇಳಲಾಗಿರುವ ಸಾಲ ನೀಡಿಕೆಯ ಜೊತೆಗೆ, ಸರ್ಕಾರವೂ ಇನ್ನೂ ಕೆಲವು ಕ್ರಮಗಳನ್ನು ಕೈಗೊಂಡಿದೆ. ವಿದೇಶದಿಂದ ಆಮದಾಗುವ ಸಕ್ಕರೆಗೆ ವಿಧಿಸುವ ಸುಂಕವನ್ನು ಶೇ.25ರಿಂದ 40ಕ್ಕೆ ಏರಿಸಲಾಯಿತು. ಇದರಿಂದ ದೇಶದೊಳಗೆ ಸಕ್ಕರೆ ಬರುವುದು ಕಡಿಮೆಯಾಗುತ್ತದೆ. ಸಕ್ಕರೆ ರಫ್ತು ಮಾಡಲು ಸಬ್ಸಿಡಿಯನ್ನು ಹೆಚ್ಚಿಸಲಾಗಿದೆ. ಇದರಿಂದ ದೇಶದಿಂದ ಹೊರಗೆ ಹೋಗುವ ಸಕ್ಕರೆ ಪ್ರಮಾಣ ಹೆಚ್ಚಾಗುತ್ತದೆ. ಪೆಟ್ರೋಲ್ ಜೊತೆ ಬೆರೆಸಬಲ್ಲ ಕಬ್ಬಿನ ಉಪ ಉತ್ಪನ್ನ ಎಥನಾಲ್ ಬೆಲೆಯನ್ನೂ ಹೆಚ್ಚಿಸಲಾಗಿದೆ. ಇವೆಲ್ಲವೂ ತಾವು ಮಾಡಿದ್ದು ಎಂದು ಕೇಂದ್ರ ಸರ್ಕಾರವು ಹೇಳುತ್ತಿದೆ. ಹಾಗಾದರೆ ಮೋದಿ ಸರ್ಕಾರವು ಈ ನಿಟ್ಟಿನಲ್ಲಿ ಮಾಡಬಹುದಾದ್ದೆಲ್ಲವನ್ನೂ ಮಾಡಿದೆಯೇ?

ಅಂಕಿ-ಅಂಶಗಳನ್ನು ಮುಂದಿಟ್ಟು ದೇಶದ ಸಕ್ಕರೆ ಉದ್ದಿಮೆಯ ಪ್ರತಿನಿಧಿಗಳು ಹೀಗೆ ಹೇಳುತ್ತಿದ್ದಾರೆ. 'ಕಳೆದ ಸಾರಿ 243.73 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗಿತ್ತು. ಈ ವರ್ಷದ ಏಪ್ರಿಲ್ ಕೊನೆಯ ಹೊತ್ತಿಗೆ ಗೋದಾಮುಗಳಲ್ಲಿ ಸಂಗ್ರಹವಾಗಿರುವ ಒಟ್ಟು ಸಕ್ಕರೆಯು ಸುಮಾರು 100 ಲಕ್ಷ ಟನ್‌ಗಳಾಗಿದ್ದು, ಅದರಲ್ಲಿ ಮುಂದಿನ ಮೂರ್ನಾಲ್ಕು ತಿಂಗಳಲ್ಲಿ 600 ಲಕ್ಷ ಟನ್ ಖರ್ಚಾಗಬಹುದೆಂಬ ನಿರೀಕ್ಷೆಯಿದೆ. ಉಳಿದ 400 ಲಕ್ಷ ಟನ್ ಜೊತೆಗೆ ಈ ಸಾರಿಯ ನಿರೀಕ್ಷೆ - ಸುಮಾರು 280 ಲಕ್ಷ ಟನ್ ಸೇರಿಕೊಳ್ಳುತ್ತದೆ.' 'ಭಾರತದ ಕಬ್ಬು ಬೆಳೆಗಾರರಿಗೆ ನೀಡುತ್ತಿರುವ ಕಬ್ಬು ದರವು ಪ್ರಪಂಚದಲ್ಲೇ ಅತ್ಯಂತ ಹೆಚ್ಚು. ಅದನ್ನು ಇನ್ನೂ ಹೆಚ್ಚಿಸುವುದು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ, ಕಳೆದ ವರ್ಷದ ಸಕ್ಕರೆ ಇನ್ನೂ ಉಳಿದುಕೊಂಡಿರುವ ಪರಿಸ್ಥಿತಿಯಲ್ಲಿ, ಕಳೆದ ವರ್ಷದ ರೈತರ ಬಾಕಿಯನ್ನು ಇನ್ನೂ ತೀರಿಸಿಲ್ಲದ ಪರಿಸ್ಥಿತಿಯಲ್ಲಿ, ಈ ವರ್ಷವೂ ಉತ್ಪಾದನೆ ಬಹಳ ಹೆಚ್ಚಾಗಿದೆ ಮತ್ತು ಸಕ್ಕರೆ ಬೆಲೆ ಮತ್ತಷ್ಟು ಕುಸಿದಿದೆ. ಹಾಗಾಗಿ ಈ ಬಿಕ್ಕಟ್ಟು ಉಂಟಾಗಿದೆ. 6,000 ಕೋಟಿ ರೂ.ಗಳ ಬಡ್ಡಿರಹಿತ ಸಾಲವು ತಮ್ಮ ಸಮಸ್ಯೆಯನ್ನೇನೂ ನಿವಾರಿಸುವುದಿಲ್ಲ, ಈಗ ಸರ್ಕಾರ ಇನ್ನೂ ಒಂದಷ್ಟು ಕೈ ಚಾಚಿ ತಮ್ಮ ನೆರವಿಗೆ ನಿಲ್ಲಬೇಕು'. ಅವರು ಹೇಳುತ್ತಿರುವ ಒಂದು ತಕ್ಷಣದ ಪರಿಹಾರ ಹೀಗಿದೆ. ಕೇಂದ್ರ ಸರ್ಕಾರವು 3 ಮಿಲಿಯನ್ (30 ಲಕ್ಷ) ಟನ್‌ಗಳಷ್ಟು ಸಕ್ಕರೆಯನ್ನು ಕೊಂಡುಕೊಂಡು ಅದನ್ನು ಬಫರ್‌ಆಗಿ ಬಳಸಬೇಕು. ಹೀಗೆ ಮಾಡಿದಾಗ ಉದ್ದಿಮೆಗೆ 7000-8000 ಕೋಟಿ ರೂ.ಗಳಷ್ಟು ಬಂಡವಾಳವೂ ದೊರೆಯುತ್ತದೆ. ಮಾರುಕಟ್ಟೆಯಲ್ಲೂ ಬೆಲೆ ನಿಯಂತ್ರಣಕ್ಕೆ ಬರುತ್ತದೆ. ನಾವು ಉಸಿರಾಡಲು ಸಾಧ್ಯವಾಗುತ್ತದೆ, ಹೌದೇ? ಕಾರ್ಖಾನೆಗಳು ಏನೂ ಮಾಡಲು ಸಾಧ್ಯವಿಲ್ಲವೇ? ಈ ರೀತಿ 30 ಲಕ್ಷ ಟನ್ ಸಕ್ಕರೆ ಬಫರ್ ಸಂಗ್ರಹ ಮಾಡಿಕೊಂಡರೆ ಅದು ಶಾಶ್ವತವಾಗಿ ಸಮಸ್ಯೆಯನ್ನು ಬಗೆಹರಿಸುತ್ತದೆಯೇ?

ಉದ್ದಿಮೆದಾರರ ಪ್ರಕಾರ ಮೇಲೆ ಹೇಳಲಾದ ಕಾರಣಗಳಿಂದ 2012-13ರಲ್ಲಿ 166 ಸಕ್ಕರೆ ಕಾರ್ಖಾನೆಗಳು ಕೆಲಸ ಸ್ಥಗಿತಗೊಳಿಸಿದ್ದರೆ, 2013-14ರಲ್ಲಿ ಅವುಗಳ ಸಂಖ್ಯೆ 189ಕ್ಕೆ ಏರಿತು. ಇಲ್ಲಿ ಹೇಳಲಾಗಿರುವ ಎಲ್ಲಾ ಅಂಕಿ-ಅಂಶಗಳು ಮತ್ತು ಮಾಹಿತಿಗಳು ಇಡೀ ದೇಶಕ್ಕೆ ಸಂಬಂಧಿಸಿದ್ದು ಮತ್ತು ಎಲ್ಲವೂ ಸ್ಪಷ್ಟಪಡಿಸುವುದು ಒಂದು ಅಂಶವನ್ನು - ಈ ವರ್ಷದ ಬಿಕ್ಕಟ್ಟು ಬಹು ನಿರೀಕ್ಷಿತವಾದದ್ದು. ಇದರ ಸೂಚನೆಯು ಕನಿಷ್ಠ 3 ವರ್ಷಗಳ ಈ ಒಂದು ವರ್ಷ ಹೇಗೋ ಕಾಲ ಕಳೆಯೋಣ ಎಂದು ಭಾವಿಸಿರುತ್ತವೆ. ಕಡಿಮೆ ಉತ್ಪಾದನೆ ಮತ್ತು ಹೆಚ್ಚಿನ ಉತ್ಪಾದನೆಯ ಮಧ್ಯದ ಒಂದೆರಡು ವರ್ಷಗಳಲ್ಲಿ ಇದೇ ಕಾರಣಕ್ಕೆ ಕೆಲವು ನೂರು (ಕೆಲವೊಮ್ಮೆ ಸಾವಿರ) ರೈತರು ಪ್ರಾಣ ಕಳೆದುಕೊಳ್ಳುತ್ತಾರೆ. ಸರ್ಕಾರಗಳ ಮಟ್ಟಿಗೆ ಇದೂ ಸಹಜವೇನಾ? ಹೇಗೂ ಮುಂದಿನ ವರ್ಷ ಉತ್ಪಾದನೆ ಕುಸಿಯಬಹುವುದರಿಂದ, ಬೆಲೆ ಹೆಚ್ಚಾಗುತ್ತದೆ ಎಂದು ಸುಮ್ಮನಿದ್ದಾರೆಯೇ?

ಹಾಗಾದರೆ, ಇಂತಹ ಅನಿಶ್ಚಿತತೆಯ ನಡುವೆ ಸಕ್ಕರೆ ಉದ್ದಿಮೆ ಬಿದ್ದು ಹೋಗುತ್ತದೆಯೇ ಎಂದು ಕೇಳಿಕೊಂಡರೆ, ಇಲ್ಲ, ಬದಲಿಗೆ ಅದು ಇನ್ನಷ್ಟು ವಿಸ್ತರಿಸುವ ಕಡೆಗೇ ಸಾಗಿದೆ. ಕಬ್ಬು ಬೆಳೆಯುವ ರಾಜ್ಯಗಳಲ್ಲಿ ನೀರಾವರಿ ಪ್ರದೇಶ ವಿಸ್ತರಣೆಯಾದ ಹಾಗೆಲ್ಲಾ, ಕಬ್ಬು ಬೆಳೆಯ ಪ್ರದೇಶವೂ ವಿಸ್ತರಣೆಯಾಗುತ್ತಿದೆ. 1997-98ರಲ್ಲಿ 39.29 ಲಕ್ಷ ಹೆಕ್ಟೇರ್‌ಗಳಿದ್ದ ಕಬ್ಬು ಬೆಳೆಯುವ ಪ್ರದೇಶವು 2010-11ರ ಹೊತ್ತಿಗೆ 49.44 ಲಕ್ಷ ಹೆಕ್ಟೇರ್‌ಗಳಿಗೆ ಏರಿದೆ. (ಅಂದರೆ 25 ಲಕ್ಷ ಎಕರೆಗಳಷ್ಟು ಹೆಚ್ಚು!) ಇದರ ಜೊತೆಗೆ, ಎಲ್ಲರೂ ಪತ್ರಿಕೆಗಳಲ್ಲಿ ಗಮನಿಸಿರುವ ಹಾಗೆ ಕರ್ನಾಟಕವೊಂದರಲ್ಲೇ ಇನ್ನೂ 40 ಹೊಸ ಕಾರ್ಖಾನೆಗಳಿಗೆ ಅನುಮತಿ ನೀಡುವ ಪ್ರಕ್ರಿಯೆ ಜಾರಿಯಲ್ಲಿದೆ. ಹಾಗಾದರೆ, ಇದರ ಒಳಮರ್ಮವೇನು? ಇದು ಮತ್ತಷ್ಟು ಹೊಸ ಸಮಸ್ಯೆಗಳನ್ನು ಮೇಲೆ ಹಾಕಿಕೊಳ್ಳುವುದಾ? ಅಥವಾ ಕರ್ನಾಟಕದಲ್ಲಿ ಮತ್ತು ದೇಶದಲ್ಲಿ ರೈತರು ಮತ್ತಷ್ಟು ಶ್ರೀಮಂತರಾಗಲಿದ್ದಾರಾ?

ಹಾಕಿಕೊಂಡಲ್ಲಿ ಮಾತ್ರ ಸರಿಯಾದ ಉತ್ತರಗಳು ಸಿಗ... ಬೇಡಿಕೆ - ಪೂರೈಕೆ ಹಾಗೂ ಅದಕ್ಕೆ ತಕ್ಕಂತೆ ... ಅರ್ಥಶಾಸ್ತ್ರದ ಈ ಪ್ರಾಥಮಿಕ ಅಂಶವು ಕಬ್ಬು ... ಸಕ್ಕರೆ ಉದ್ದಿಮೆಯ ನಡುವಿನ ಸಂಬಂಧಕ್ಕೂ ಅನ್ವಯಿಸ... ಸಕ್ಕರೆ ಉದ್ದಿಮೆ ಮತ್ತು ಮಾರುಕಟ್ಟೆಯ ನಡ... ಸಂಬಂಧಕ್ಕೂ ಅನ್ವಯಿಸುತ್ತದೆ. ಆದರೆ, ನೂರೆಂಟು ಬ... ಬೆಳೆಗಳನ್ನು ಬೆಳೆಯುತ್ತಿರುವ ರೈತರು ಈ ದೇಶದಲ್ಲಿ... ದಿನೇ ದಿನೇ ಅವರೆಲ್ಲರೂ ಒಂದಲ್ಲ ಒಂದು ರೀತಿ... ಮಾರುಕಟ್ಟೆಯ ಜೊತೆಗೆ ಹೆಚ್ಚೆಚ್ಚು ಬೆಸೆದುಕೊಳ್ಳು... ಅಥವಾ ಅಂತಹ ಪರಿಸ್ಥಿತಿಗೆ ಅವರನ್ನು ದೂಡಲಾಗ... ಮಾನ್ಸೂನ್ ಮಳೆ ಎಂಬ ಪ್ರಾಕೃತಿಕ ಏರುಪೇರು... ಮತ್ತೊಂದು ಅಂಶವೂ ಅವರ ಬೆಳೆ, ಬೆಲೆ ಮತ್ತು ಬ... ಮೇಲೆ ಪ್ರಭಾವ ಬೀರುತ್ತಿರುತ್ತದೆ. ಅದಲ್ಲದೇ ಜ... ಮಾರುಕಟ್ಟೆಯ ಜೊತೆ ನೇರ ಸಂಬಂಧ ಹೊಂದಿ... ಏರುಪೇರುಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಹ... ಇವೆಲ್ಲವನ್ನೂ ಕೂಲಂಕಷವಾಗಿ ಪರಿಗಣಿಸಿ, ಕಬ್ಬು -... ಬಿಕ್ಕಟ್ಟನ್ನು ವಿಶ್ಲೇಷಿಸುವ ಕೆಲಸ ಆಗಬೇಕಿದೆ. ಅದ... ಲೇಖನಗಳ ಸರಣಿಯಲ್ಲಿ ಮಾಡಲು ಉದ್ದೇಶಿಸಲಾ...

ಮೇಲೆ ಪ್ರಸ್ತುತ ಬಿಕ್ಕಟ್ಟಿನ ಹಿನ್ನೆಲೆಯನ್ನು ವಿವರಿಸ... ಕೆಳಗೆ ಸಕ್ಕರೆ ಉದ್ದಿಮೆಗೆ ಸಂಬಂಧಿಸಿದ ಕೆಲವು ಪ್ರಾ... ಅಂಶಗಳನ್ನು ನೀಡಲಾಗಿದೆ. ಮುಂದಿನೆರಡು ವಾರ... ವಿವಿಧ ಹಿತಾಸಕ್ತಿಗಳ ವಾದಸರಣಿಗಳನ್ನು ಪರಿಶೀಲಿಸಿ ... ಅಭಿಪ್ರಾಯಕ್ಕೆ ತಲುಪಲು ಪ್ರಯತ್ನಿಸಲಾಗುತ್ತದೆ.





ಹಿಂದೆಯೇ ಸಿಕ್ಕಿತ್ತು. ಈ ರೀತಿಯ ಬಿಕ್ಕಟ್ಟು ಉಂಟಾದಾಗ ಆತ್ಮಹತ್ಯೆಗಳೂ ಆಗುತ್ತಿರುವುದನ್ನು ಕಳೆದ 15 ವರ್ಷಗಳಲ್ಲಿ ಇಡೀ ದೇಶ ಕಂಡಿದೆ. 2007ರ ಬಿಕ್ಕಟ್ಟಿನ ಸಂದರ್ಭದಲ್ಲೂ ಆತ್ಮಹತ್ಯೆ ಮಾಡಿಕೊಂಡವರಲ್ಲಿ ಗಣನೀಯ ಸಂಖ್ಯೆಯ ರೈತರು ಕಬ್ಬು ಬೆಳೆಗಾರರಾಗಿದ್ದರು. ಹಾಗಿದ್ದ ಮೇಲೆ ಯುಪಿಎ ಸರ್ಕಾರವಾಗಲೀ, ಎನ್‌ಡಿಎ ಸರ್ಕಾರವಾಗಲೀ ಪರಿಸ್ಥಿತಿಯನ್ನು ಬದಲಾಯಿಸಲು ಏಕೆ ಸಾಧ್ಯವಾಗಲಿಲ್ಲ?

ಮೇಲೆ ಉದಾಹರಿಸಿರುವುದು ಕಳೆದ 7-8 ವರ್ಷಗಳ ಕುರಿತಾದದ್ದು. ಈ ಒಂದು ದಶಕದ ನಿರ್ದಿಷ್ಟ ಅಂಶಗಳಾಚೆ ಇನ್ನೂ ಒಂದು ಸಾರ್ವತ್ರಿಕ ಅಂಶವಿದೆ. ಭಾರತದ ಸಕ್ಕರೆ ಉದ್ದಿಮೆಗೆ ಅದರದ್ದೇ ಆದ ಒಂದು ಆವರ್ತವಿದೆ (Indian sugar cycle). 4-5 ವರ್ಷಗಳ ಕಾಲ ಸಕ್ಕರೆ ಬೆಲೆಯೂ ಹೆಚ್ಚಾಗುತ್ತಾ, ಕಬ್ಬು ಮತ್ತು ಸಕ್ಕರೆ ಉತ್ಪಾದನೆಯೂ ಹೆಚ್ಚಾಗುತ್ತಾ ಸಾಗುತ್ತದೆ. ನಂತರದ 2-3 ವರ್ಷಗಳಲ್ಲಿ ಕಬ್ಬು ಮತ್ತು ಸಕ್ಕರೆ ಉತ್ಪಾದನೆಯೂ ಕುಸಿಯುತ್ತದೆ. ಮತ್ತೆ ಯಥಾಪ್ರಕಾರ ಇದೇ ಆವರ್ತದ ಪುನರಾವರ್ತನೆ ನಡೆಯುತ್ತದೆ. ಈ ವರ್ಷದ ಬಿಕ್ಕಟ್ಟಿನ ಕಾರಣಕ್ಕೆ ಮುಂದಿನ ವರ್ಷ ರೈತರು ಗಣನೀಯ ಪ್ರಮಾಣದಲ್ಲಿ ಕಬ್ಬಿನಿಂದ ಬೇರೆ ಬೆಳೆಗೆ ಬದಲಿಸಿಕೊಳ್ಳುತ್ತಾರೆ. ಉತ್ಪಾದನೆ ಕುಸಿಯುತ್ತದೆ. ಇದನ್ನು ಒಂದು ರೀತಿಯಲ್ಲಿ 'ಸಹಜ ಆವರ್ತ'ವೆಂತಲೂ ಭಾವಿಸಿರುವ ಸರ್ಕಾರಗಳು

ಈ ಎಲ್ಲಾ ಪ್ರಶ್ನೆಗಳನ್ನು ಕೇಳಲೇಬೇಕಾದುದಕ್ಕೆ ಕಾರಣಗಳಿವೆ. ನಿಮಗೆ ಯಾವ ಪತ್ರಿಕೆಯನ್ನು ತಿರುವಿ ಹಾಕಿದರೂ ಸಮಾನವಾದ ಕೆಲವು ಅಂಕಿ-ಅಂಶಗಳು ಹಾಗೂ ವಾದಸರಣಿ ಕಾಣಸಿಗುತ್ತವೆ. ಉತ್ಪಾದನೆಯಲ್ಲಿ ಸತತ ಹೆಚ್ಚಳ ಮತ್ತು ಗೋದಾಮಿನಲ್ಲಿ ಹೆಚ್ಚು ಸಂಗ್ರಹ. ಅವೆಲ್ಲದರ ಮೇಲೆ ಈ ವರ್ಷ ಮತ್ತಷ್ಟು ಹೆಚ್ಚಿನ ಉತ್ಪಾದನೆಯ ನಿರೀಕ್ಷೆ. ಹೀಗಾಗಿ ಬಿಕ್ಕಟ್ಟು. ಇಷ್ಟು ಸರಳವಾದ ಅಂಕಗಣಿತವೇ ಸಮಸ್ಯೆಯ ಮೂಲವಾಗಿದ್ದರೆ, ಬಹಳ ದೊಡ್ಡ ಇಕ್ಕಟ್ಟೇನಿಲ್ಲ, ಅಥವಾ ಪ್ರತೀ ನಾಲ್ಕೈದು ವರ್ಷಕ್ಕೆ ಒಂದೊಂದು ಬೆಳೆಯ ರೈತರು ಇಂತಿಷ್ಟು ಪ್ರಮಾಣದಲ್ಲಿ ಆತ್ಮಹತ್ಯೆಯನ್ನೂ ಮಾಡಿಕೊಳ್ಳುವುದು 'ಸ್ವಾಭಾವಿಕ ಮತ್ತು ಭಾರತದ ಪ್ರಸ್ತುತ ಕೃಷಿ ಆವರ್ತದ ಅವಿಭಾಜ್ಯ ಅಂಗ' ಎಂದು ಷರಾ ಬರೆಯಬೇಕಾಗುತ್ತದೆ.

ಮೇಲೆಲ್ಲೂ ರೈತರು ಏನು ಹೇಳುತ್ತಿದ್ದಾರೆ, ಏನು ಹೇಳಬೇಕು ಎಂಬುದನ್ನು ಗುರುತಿಸಿಲ್ಲ. ರೈತರ ಪರವಾಗಿ ಹಲವು ರೈತ ಸಂಘಟನೆಗಳು ತಮ್ಮದೇ ವಾದವನ್ನು ಮುಂದಿಡುತ್ತಿದ್ದಾರೆ. ಅವನ್ನೂ ಗಮನದಲ್ಲಿಟ್ಟುಕೊಂಡು ರೈತರು-ಕಾರ್ಮಿಕರು ಮತ್ತು ಗ್ರಾಹಕರ ಹಿತಾಸಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಸರಿಯಾದ ಉತ್ತರಗಳನ್ನು ಹುಡುಕಿಕೊಳ್ಳುವ ಅಗತ್ಯವಿದೆ. ನಾವು ಉತ್ತರಿಸಿಕೊಳ್ಳಬೇಕಾದ ಪ್ರಶ್ನೆಗಳು ಯಾವುವು ಎಂಬುದನ್ನು ಸರಿಯಾಗಿ ಗುರುತು

ಭಾರತದಲ್ಲಿ ಸಕ್ಕರೆ ಉದ್ದಿಮೆಯು ಎರಡನೇ ... ದೊಡ್ಡ ಕೃಷಿ ಆಧಾರಿತ ಉದ್ದಿಮೆಯಾಗಿದೆ (ಮೊದಲನೆ... ಹತ್ತಿ ಬೆಳೆ ಆಧಾರಿತ ಉದ್ದಿಮೆ). ಸುಮಾರು 5 ... ರೈತರು (ಮತ್ತು ಅವರ ಕುಟುಂಬಗಳು) ಕಬ್ಬು ಬೆಳೆ... ಬೆಳೆಯುತ್ತಿದ್ದಾರೆ. 5 ಲಕ್ಷ ಜನ ಕಾರ್ಮಿಕರು ನೇ... ಸಕ್ಕರೆ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಾರೆ. ... ಭಾರತದ ಸಕ್ಕರೆ ಉದ್ದಿಮೆಯ ಉತ್ಪನ್ನವು ಸು... 80,000 ಕೋಟಿ ಮೌಲ್ಯವುಳ್ಳದ್ದಾಗಿದೆ. ಹಾಲಿ ದೇ... ಸುಮಾರು 640 ಸಕ್ಕರೆ ಕಾರ್ಖಾನೆಗಳಿವೆ. ಮಹಾ... ಉತ್ತರ ಪ್ರದೇಶ, ಕರ್ನಾಟಕ, ತಮಿಳುನಾಡು, ಆಂಧ್ರ... ಗುಜರಾತ್ ಹಾಗೂ ಇನ್ನೂ ಹಲವು ರಾಜ್ಯಗಳು ... ಕಬ್ಬು ಬೆಳೆಯುವ ಪ್ರಮಾಣ ಇದೇ ಅನುಕ್ರಮಣಿಕೆ... ಸಕ್ಕರೆ ಉತ್ಪಾದನೆಯಲ್ಲಿ ತೊಡಗಿವೆ.

ಪ್ರಪಂಚದಲ್ಲಿ ಬ್ರೆಜಿಲ್ ದೇಶವು ಅತ್ಯಂತ ... ಸಕ್ಕರೆ ಉತ್ಪಾದಿಸುವ ದೇಶವಾಗಿದ್ದರೆ, ... ಎರಡನೆಯದಾಗಿದೆ. ಆದರೆ, ಸಕ್ಕರೆ ಬಳಕೆಯಲ್ಲಿ ಭಾ... ಮೊದಲ ಸ್ಥಾನದಲ್ಲಿದೆ. ಶೇ.95ರಿಂದ 98ರಷ್ಟು ... ಉತ್ಪಾದನೆಯನ್ನು ದೇಶದೊಳಗೇ ಬಳಸಲಾಗುತ್ತದೆ. ... ಭಾರತದ ಸಕ್ಕರೆಯ ಬೆಲೆಯು ಪ್ರಪಂಚದಲ್ಲೇ ... ಹೆಚ್ಚಾದುದಾಗಿದೆ. ಬ್ರೆಜಿಲ್ ಹಾಗೂ ಇನ್ನಿತರ ದೇ... ಹೋಲಿಸಿದರೆ, ಪ್ರತಿ ಹೆಕ್ಟೇರ್‌ಗೆ ಬೆಳೆಯಲಾಗುವ... ಪ್ರಮಾಣ ಹಾಗೂ ಪ್ರತಿ ಟನ್‌ಗೆ ಉತ್ಪಾದನೆಯ... ಸಕ್ಕರೆಯ ಪ್ರಮಾಣವು ಕಡಿಮೆಯಿರುವುದೂ ... ಕಾರಣವಾಗಿದೆ. 2007ರ ಹೊತ್ತಿಗೆ ಭಾರತದ ... ಪ್ರತಿ ಹೆಕ್ಟೇರ್‌ಗೆ ಸರಾಸರಿ 80 ಟನ್ ಬೆಳೆಯ... ಪ್ರಪಂಚದ ಇತರೆಡೆ ಅದರ ಪ್ರಮಾಣ 88ರಿಂದ 3... ಟನ್‌ವರೆಗೆ ಇದೆ. ಪ್ರತಿ ಟನ್ ಕಬ್ಬಿಗೆ ಸಕ್ಕರೆ ಉ... ಭಾರತದಲ್ಲಿ ಸರಾಸರಿ ಶೇ.9.5ರಿಂದ ಶೇ.10 ... ಇತರೆ ಸಕ್ಕರೆ ಉತ್ಪಾದಕ ದೇಶಗಳಲ್ಲಿ ಅದು ಶೇ.1... 14 ಇದೆ.

ಇನ್ನು ಒಟ್ಟಾರೆ ಉತ್ಪಾದನೆಯ ವಿ... ಬರುವುದಾದರೆ, ಮೇಲೆ ಹೇಳಲಾದ ಏರು... ಹೊರತುಪಡಿಸಿದರೆ, ಕಳೆದ 15 ವರ್ಷಗಳಲ್ಲಿ ಕಬ್ಬು ... ಸಕ್ಕರೆ ಉತ್ಪಾದನೆಯ ಏರಿಕೆಯ ದಿಕ್ಕಿನಲ್ಲೇ ಇದೆ ... ನೋಡಿ). ಹೀಗಿರುವಾಗ ಮುಂದಿನ ದಿನಗಳಲ್ಲೂ ... ಭಾರತದ ಕೃಷಿಕರಲ್ಲಿ ಒಂದು ಭಾಗವು ... ತೊಡಗಿಸಿಕೊಳ್ಳುವ ಪ್ರಮುಖ ಕ್ಷೇತ್ರಗಳಲ್ಲೊಂದಾಗ... ಹಾಗಾಗಿ ಈ ಸಮಸ್ಯೆಯ ಸಂಪೂರ್ಣ ವಿಶ್ಲೇಷಣೆ... ಜರೂರಾಗಿದೆ.

ಒಟ್ಟು ಸಕ್ಕರೆ ಉತ್ಪಾದನೆ (ಲಕ್ಷ ಟನ್‌ಗಳಲ್ಲಿ)

ಸಕ್ಕರೆ ವರ್ಷ (ಅಕ್ಟೋಬರ್‌ನಿಂದ ಸೆಪ್ಟೆಂಬರ್‌ವರೆಗೆ)	ಕಬ್ಬಿನ ಉತ್ಪಾದನೆಯ ಪ್ರಮಾಣ	ಸಕ್ಕರೆ ಉತ್ಪಾದನೆಯ ಪ್ರಮಾಣ
2001-02	2972.08	185.28
2002-03	2873.83	201.45
2003-04	2338.62	135.46
2004-05	2370.88	126.90
2005-06	2811.72	192.67
2006-07	3555.20	283.67
2007-08	3481.88	263.57
2008-09	2850.29	145.39
2009-10	2923.02	189.12
2010-11	3423.82	243.94
2011-12	3610.37	263.43
2012-13	3389.63	251.41
2013-14	3500.21	243.73

ಎದೆಗಾರ ಮೋದಿಗೆ ಮಹಿಳೆಯರ ಕಾಟ



ಕಂಡಹಾಗೆ
• ಗೌರಿ ಲಂಕೇಶ್
editorlankesh@gmail.com

ಲೋಹ ಪುರುಷ್', 'ವಿಕಾಸ್ ಪುರುಷ್', '56 ಇಂಚ್ ಎದೆಗಾರ' ಮೋದಿಗೆ ಈಗ ಮಹಿಳೆಯರ ಕಾಟ. ಪಾಪ! ಅವರನ್ನೆಲ್ಲ ಹೇಗೆ ನಿಭಾಯಿಸಬೇಕೆಂದೇ ಆತನಿಗೆ ಗೊತ್ತಾಗುತ್ತಿಲ್ಲ.

ಎಲ್.ಕೆ. ಅಡ್ವಾಣಿಯ ಶಿಷ್ಯೆ ಮತ್ತು ಕರ್ನಾಟಕದ ಗಣಿಕಳ್ಳರ 'ಅಮ್ಮ' ಸುಷ್ಮಾ ಸ್ವರಾಜ್ ಅಂದರೆ ಮೋದಿಗೆ ಮೊದಲಿನಿಂದಲೂ ಅಷ್ಟಕಷ್ಟೇ. ಅಂತಹ ಸುಷ್ಮಾ ಐಪಿಎಲ್ ಕ್ರಿಮಿ ಲಲಿತ್ ಮೋದಿಗೆ ನೆರವಾದದ್ದು ಹೊರಬೀಳುತ್ತಿದ್ದಂತೆ 'ಭ್ರಷ್ಟಾಚಾರದ ವಿರುದ್ಧ ಹೋರಾಡುವ ವೀರ' ಮೋದಿ ಆಕೆಯನ್ನು ತತ್‌ಕ್ಷಣವೇ ಸಂಪುಟದಿಂದ ಒದ್ದೋಡಿಸಬೇಕಿತ್ತು. ಆದರೆ ಆಕೆಯ ಕೈಬಿಟ್ಟಿದ್ದರೆ ಅದು ಕಾಂಗ್ರೆಸ್ ಪಕ್ಷದ ಗೆಲುವಾಗುತ್ತಿತ್ತು. ತನಗೆ ಮುಖಭಂಗವಾದರೂ ಸೈ, ಕಾಂಗ್ರೆಸ್ ಗೆಲ್ಲಕೂಡದು ಎಂಬ ನಿಲುವಿನ ಮೋದಿ ಸುಷ್ಮಾಳನ್ನು ಸಹಿಸಿಕೊಂಡಿರಲು ನಿರ್ಧರಿಸಿದ್ದಾನೆ.

ಸುಷ್ಮಾ ಮಾಡಿದ್ದು ಪರಮ ದೇಶಭಕ್ತೆಯ ಕರ್ತವ್ಯ ಎಂದೆಲ್ಲ ಚಿಡ್ಡಿಗಳು ಬಾಯಿಬಡಿದುಕೊಳ್ಳುತ್ತಿರುವಾಗಲೇ ಸಿಕ್ಕಿಬಿದ್ದವಳು ವಸುಂಧರ ರಾಜೆ. ಈ ವಸುಂಧರ ಮತ್ತು ಕ್ರಿಮಿನಲ್ ಬುದ್ಧಿಯ ಲಲಿತ್ ಮೋದಿಯ ವ್ಯವಹಾರಿಕ ಸಂಬಂಧ ಹಳೇ ಸುದ್ದಿ. ಆಕೆ ಈ ಹಿಂದೆಯೂ ರಾಜಸ್ಥಾನದ ಮುಖ್ಯಮಂತ್ರಿಯಾಗಿದ್ದಾಗ ಆಕೆಯ ಅಕ್ಕಪಕ್ಕ ಠಳಾಯಿಸುತ್ತಾ ಅನಭಿಷಕ್ತ ದೊರೆಯಂತೆ ಮೆರೆದಿದ್ದವನೇ ಈ ಲಲಿತ್ ಮೋದಿ. ಈತ ಐಪಿಎಲ್ ಅವ್ಯವಹಾರದಲ್ಲಿ ಸಿಕ್ಕಿಹಾಕಿಕೊಂಡಾಗ ಈ ದೇಶದಿಂದ ಪರಾರಿಯಾಗಲು ಈ ವಸುಂಧರಳೇ ನೆರವಾಗಿದ್ದಳು ಎಂಬುದೀಗ ಬಯಲಾಗಿದೆ. ಮಾತ್ರವಲ್ಲ, ವಸುಂಧರ ಮತ್ತು ಆಕೆಯ ಮಗ ಲಲಿತ್ ಮೋದಿಯೊಂದಿಗೆ ಬಿಸಿನೆಸ್ ನಡೆಸುತ್ತಿದ್ದಾರೆಂದೂ, ಈ ಮೂವರು ಸೇರಿ ರಾಜಸ್ಥಾನದಲ್ಲಿ ಒಂದು ಅರಮನೆಯನ್ನೇ ಲಪಟಾಯಿಸಿದ್ದರು ಎಂದೂ ಈಗ ಬಹಿರಂಗಗೊಂಡಿದೆ. ಇಂತಹ ವಸುಂಧರಳನ್ನು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸಬೇಕೆಂದು ಕಾಂಗ್ರೆಸ್ ಒತ್ತಾಯಿಸುತ್ತಿದೆ. ಆದರೆ "ನನ್ನನ್ನು ಉರುಳಿಸಿದರೆ ರಾಜಸ್ಥಾನದಲ್ಲಿ ಬಿಜೆಪಿ ಸರ್ಕಾರವನ್ನೇ ಉರುಳಿಸುತ್ತೇನೆ" ಎಂದು ವಸುಂಧರ ಹಾಕಿರುವ ಬೆದರಿಕೆಗೆ ಉಕ್ಕಿನ ಮೋದಿ ಪುಕ್ಕ ಆಗಿದ್ದಾನೆ.

ಸುಷ್ಮಾ ಎಂಬ ತಲೆನೋವು, ವಸುಂಧರ ಎಂಬ ಬೆನ್ನುನೋವು ಸಾಲದೆಂಬಂತೆ ಸ್ಮೃತಿ ಇರಾನಿ ಈಗ ಮೋದಿಗೆ ಎದೆನೋವನ್ನೂ ತಂದಿಟ್ಟಿದ್ದಾಳೆ. ತನ್ನ ವಿದ್ಯಾರ್ಹತೆ ಬಗ್ಗೆ ಸ್ಮೃತಿ ಚುನಾವಣಾ ಆಯೋಗಕ್ಕೆ ಕೊಟ್ಟಿದ್ದ ಸುಳ್ಳಿನ ಪ್ರಮಾಣಪತ್ರಗಳ ತಕರಾರು ಈಗ ನ್ಯಾಯಾಲಯದ ಮೆಟ್ಟಿಲು ಏರಿದೆ. ಇತ್ತೀಚೆಗೆ ದೆಹಲಿಯ ಆಪ್ ಸರ್ಕಾರದ ಮಂತ್ರಿ ಜಿತೇಂದ್ರ ತೋಮರ್ ಎಂಬಾತ ಕೂಡ ಇಂತಹದ್ದೇ ಸುಳ್ಳು ಪ್ರಮಾಣಪತ್ರ ಕೊಟ್ಟಿದ್ದಕ್ಕೆ ಆತನನ್ನು ಪೊಲೀಸರು ಬಂಧಿಸುವಂತೆ ಮೋದಿ ನೋಡಿಕೊಂಡಿದ್ದ. ಈಗ ಮೋದಿಯ ಆಪ್ತ ಸಚಿವೆಯೇ ಅಂತಹದ್ದೇ ಹಳ್ಳಕ್ಕೆ ಬಿದ್ದಿದ್ದಾಳೆ. ಆದರೆ ಆಕೆಯನ್ನು ಬಂಧಿಸುವುದಿರಲಿ, ಸಂಪುಟದಿಂದಲೂ ಗೇಟ್‌ಪಾಸ್ ಕೊಡದ 56 ಇಂಚ್ ಎದೆಗಾರ ಮಳ್ಳನಂತೆ ತೆಪ್ಪಗಿದ್ದಾನೆ!

ಕೇಂದ್ರದಲ್ಲಿ ಈ ಮೂವರು ಮಹಿಳಾ ಮಂತ್ರಿಣಿಯರ ಎಡವಟ್ಟುಗಳ ನಡುವೆಯೇ ಮಹಾರಾಷ್ಟ್ರದ ಬಿಜೆಪಿ ಸರ್ಕಾರದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯಾಗಿರುವ ಪಂಕಜಾ ಮುಂಡೆಯೂ ಮೋದಿಯ ಮಂಡೆ ಬಿಸಿಯಾಗುವುದಕ್ಕೆ ಕಾರಣಳಾಗಿದ್ದಾಳೆ. ಕಳೆದ ಫೆಬ್ರವರಿ 13 ರಂದು ಈ ಮುಂಡೆ ಮಹರಾಯ್ತಿ ಒಂದೇ ಒಂದು ಟೆಂಡರ್ ಅನ್ನೂ ಕರೆಯದೆ ಅಂಗನವಾಡಿಗಳಿಗೆ ತಿಂಡಿ, ಚಾಪೆ, ಪುಸ್ತಕ ಇತ್ಯಾದಿಗಳನ್ನು ಸರಬರಾಜು ಮಾಡಲು 230 ಕೋಟಿ ರೂಪಾಯಿಗಳ ಕಾಂಟ್ರಾಕ್ಟ್‌ಗಳನ್ನು ಪಾಸ್ ಮಾಡಿದ್ದಾಳೆ. ಅಪೌಷ್ಟಿಕತೆಯಿಂದ ನರಳುತ್ತಿರುವ ಬಡಮಕ್ಕಳಿಗೆ ಈ ಪ್ರಾಮಾಣಿಕಗಿತ್ತಿಯಿಂದಾಗಿ ಕಳಪೆ ಆಹಾರ ಕೊಡಲಾಗುತ್ತಿದೆ ಎಂದೂ, ಸುಪ್ರೀಂಕೋರ್ಟ್ ಕೊಟ್ಟಿರುವ ಆದೇಶಗಳನ್ನು ಮುರಿದು ಬೇಕಾಬಿಟ್ಟಿಯಾಗಿ ಕಾಂಟ್ರಾಕ್ಟ್‌ಗಳನ್ನು ನೀಡಲಾಗಿದೆ ಎಂದೂ ಆರೋಪಿಸಿ ಕಾಂಗ್ರೆಸ್ ನಾಯಕರೊಬ್ಬರು ಮೊನ್ನೆ ಭ್ರಷ್ಟಾಚಾರ ತಡೆ ಮಂಡಳಿಗೆ ದೂರು ಸಲ್ಲಿಸಿದ್ದಾರೆ.

ದೇಶವನ್ನು ಅಭಿವೃದ್ಧಿ ಮಾಡುತ್ತೀನಿ, ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುತ್ತೀನಿ, ಕಪ್ಪು ಹಣವನ್ನು ವಾಪಸ್ ತಂದು ಜನರ ಜೇಬು ತುಂಬಿಸುತ್ತೀನಿ ಎಂದೆಲ್ಲ ಚೀರಾಡಿದ್ದ ಮೋದಿ ಈಗ ಯಾವುದನ್ನೂ ಮಾಡದೆ ಎಲ್ಲಾ ರಂಧ್ರಗಳನ್ನು ಮುಚ್ಚಿಕೊಂಡು ಮನಮೋಹನ್ ಸಿಂಗ್ ಅವರಿಗಿಂತ 'ಮೌನಿ' ಆಗಿದ್ದಾನೆ. ಉತ್ತರ ಕುಮಾರನ ಪೌರುಷ ಒಲೆಯ ಮುಂದೆ ಎಂಬಂತೆ ಮೋದಿಯ ಪೌರುಷ ಚುನಾವಣೆಯ ಮುನ್ನ ಎಂದರೆ ಸರಿಯಾದೀತು ಅಲ್ಲವೆ?

ಸುಷ್ಮಾ, ವಸುಂಧರ, ಸ್ಮೃತಿ ಮತ್ತು ಪಂಕಜಾ ಎಂಬ ಬಿಜೆಪಿ ಮಹಿಳೆಯರು ವಿವಾದ, ಅವ್ಯವಹಾರ, ಸುಳ್ಳು ಮತ್ತು ಭ್ರಷ್ಟಾಚಾರಕ್ಕೆ ಸುದ್ದಿ ಮಾಡಿದ ವಾರದಲ್ಲೇ ಇನ್ನೂ ಮೂವರು ಮಹಿಳೆಯರು ತಮ್ಮ ದಿಟ್ಟತನಕ್ಕೆ ವಿವಿಧ ಕಡೆಗಳಿಂದ ಮೆಚ್ಚುಗೆ ಪಡೆದಿದ್ದಾರೆ. ಅವರಲ್ಲಿ ಒಬ್ಬಾಕೆ ನಿಶ್ರೀನ್ ಝೂಫ್ರಿ. 2002ರ ಗುಜರಾತ್ ನರಮೇಧದಲ್ಲಿ ಬರ್ಬರವಾಗಿ ಕೊಲೆಯಾದ ಮಾಜಿ ಸಂಸದ ಇಶಾನ್ ಝೂಫ್ರಿ ಅವರ್ ಪುತ್ರಿ ಈ ನಿಶ್ರೀನ್.


ಸ್ಮೃತಿ


ಸುಷ್ಮಾ



ವಸುಂಧರ ರಾಜೆ


ಪಂಕಜಾ ಮುಂಡೆ

ಹೆಣ್ಣುಮಕ್ಕಳ ಮಹಾನ್ ರಕ್ಷಕ ತಾನೆಂಬಂತೆ ಪೋಸು ಕೊಡುವ ಮೋದಿ ಇತ್ತೀಚೆಗೆ 'ಮಗಳೊಂದಿಗೆ ಸೆಲ್ಫಿ' ಎಂಬ ಟ್ವಿಟರ್ ಆಂದೋಲನವನ್ನು ಪ್ರಾರಂಭಿಸಿದ್ದ. (ಬೇರೆ ಏನನ್ನೂ ಕಿಸಿದು ಗುಡ್ಡೆಹಾಕದಿದ್ದರೂ ಟ್ವಿಟರ್‌ನಲ್ಲಿ 'ಅಭಿವೃದ್ಧಿ' ಮಾಡುವುದು ಮೋದಿಗೆ ಕರಗತವಾಗಿ ಹೋಗಿದೆ!) ಮಗಳೊಂದಿಗೆ ಫೋಟೋ ತೆಗೆದುಕೊಂಡರೆ ಸಮಾಜದಲ್ಲಿ ಹೆಣ್ಣುಮಕ್ಕಳ ಸ್ಥಾನಮಾನ ಹೆಚ್ಚಾಗುತ್ತದೆಂಬ ಭ್ರಮೆಯಲ್ಲಿರುವ ಮೋದಿ "ಅಂತಹ ಸೆಲ್ಫಿಗಳನ್ನು ನನಗೆ ಕಳುಹಿಸಿ, ಚೆಂದವಾದ ಮೂರು ಸೆಲ್ಫಿಗಳಿಗೆ ಬಹುಮಾನವುಂಟು" ಎಂದೂ ಹೇಳಿದ್ದ. ಇದು ಹೇಗಿದ್ದರೂ ಸೆಲ್ಫಿ ಯುಗ; ಜನ ಕುಂತರೂ, ನಿಂತರೂ ಸೆಲ್ಫಿ ಫೋಟೋ ತೆಗೆದುಕೊಂಡು ಫೇಸ್‌ಬುಕ್‌ನಲ್ಲೋ, ಟ್ವಿಟರ್‌ನಲ್ಲೋ ಹಾಕುತ್ತಿರುತ್ತಾರೆ. ಒಂದು ನಯಾಪೈಸೆಯೂ ಖರ್ಚಾಗದ, ಕಿಂಚಿತ್ತೂ ಶ್ರಮ ವಹಿಸುವ ಅಗತ್ಯತೆ ಇಲ್ಲದ ಕಾರ್ಯ ಇದು. ಜನ ಮರುಳೋ, ಜಾತ್ರೆ ಮರುಳೋ ಎಂಬಂತೆ ಸಾವಿರಾರು ಜನ ತಮ್ಮ ಹೆಣ್ಣುಮಕ್ಕಳೊಂದಿಗೆ ಸೆಲ್ಫಿ ತೆಗೆದುಕೊಂಡು ಅವುಗಳನ್ನು ಶೇರ್ ಮಾಡಲಾರಂಭಿಸಿದರು.


ನಿಶ್ರೀನ್


ಕವಿತಾ


ಶ್ರುತಿ

ತನ್ನ ತಂದೆಯನ್ನು ಕೊಂದ ಮೋದಿ ಹೀಗೆ 'ಮಗಳೊಂದಿಗೆ ಸೆಲ್ಫಿ' ಎಂಬ 'ಕ್ರಾಂತಿ'ಯನ್ನು ಮಾಡುತ್ತಿದ್ದರೆ ಇಶಾನ್ ಝೂಫ್ರಿ ಅವರ ಪುತ್ರಿ ನಿಶ್ರೀನ್ ಝೂಫ್ರಿಗೆ ಹೇಗನ್ನಿಸಿರಬೇಡ? ಸರಿ, ಆಕೆ ತನ್ನ ತಂದೆಯೊಂದಿಗಿರುವ ಒಂದು ಹಳೇ ಫೋಟೋವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಳಲ್ಲದೆ 'ಇದು ಆತನನ್ನು ಕಾಡುತ್ತಿರಲಿ' ಎಂದೂ ಆಶಿಸಿದಳು. ಜೊತೆಗೆ ಆಕೆಯ ತಂದೆ ಸತ್ತ ದಿನದ ಹಲವು ನೆನಪುಗಳನ್ನೂ ಹಂಚಿಕೊಂಡಳು. ಆದರ ಅನುವಾದ ಹೀಗಿದೆ: "ನನ್ನ ಸಂಗಾತಿ ಭಾರತೀಯರೆ, ಅಪ್ಪ ನನಗೆ ನೆನಪಾಗುತ್ತಿದ್ದಾರೆ. ಅದು 2002ರ ಫೆಬ್ರವರಿ 28ರ ಮಧ್ಯಾಹ್ನ. ಗೋಧ್ರಾದಲ್ಲಿ ಕರಸೇವಕರ ಸಾವಿಗೆ ಪ್ರತೀಕಾರ ತೆಗೆದುಕೊಳ್ಳಲು ಸಾವಿರಾರು ಗೂಂಡಾಗಳು ಖಡ್ಗಗಳನ್ನು ಹಿಡಿದು ಗುಲ್ಬರ್ಗ್ ಸೊಸೈಟಿಯನ್ನು ಸುತ್ತುವರೆದಿದ್ದರು. ಅದಾಗಲೇ ಅಪ್ಪ ಮತ್ತು ಅವನ ತಂದೆಯ ರುಂಡಗಳನ್ನು ಅವರ ಮನೆ ಮುಂದೆಯೇ ಕತ್ತರಿಸಿಹಾಕಿದ್ದರು. ನನ್ನ ಅಪ್ಪನ ಮನೆ ಇಡೀ ಕಾಂಪ್ಲೆಕ್ಸ್‌ನ ಮಧ್ಯಭಾಗದಲ್ಲಿ ಇದ್ದಿದ್ದರಿಂದ ಜನ ನಮ್ಮ ಮನೆಯತ್ತ ಧಾವಿಸುತ್ತಿದ್ದರು. ಗೂಂಡಾಗಳು ಸುತ್ತಮುತ್ತಲಿನ ಮನೆಗಳಿಗೆ ಬೆಂಕಿ ಹಚ್ಚುತ್ತಿದ್ದರು. ಪಕ್ಕದ ಮನೆಯ ಮಗಳನ್ನು ಹೊರಗೆಳೆದು ಅವಳನ್ನು ಹಿಂಸಿಸುತ್ತಿದ್ದರು. ಆಕೆಯ ತಾಯಿ ಮಗಳನ್ನು ಎಳೆಯುತ್ತಿದ್ದರೂ ಅವರು ಆಕೆಯನ್ನು ಬಿಡುತ್ತಿಲ್ಲ, ತಾಯಿ ತನ್ನ ಮಗಳನ್ನು ರಕ್ಷಿಸುವಲ್ಲಿ ವಿಫಲಳಾದಳು. ಒಂದಿಬ್ಬರು ಮಕ್ಕಳು ಎದುರಿನ ಬಯಲಿನಲ್ಲಿ ಓಡುತ್ತಿದ್ದರು. ಅವರ ಮೈಮೇಲೆ ಸೀಮೆಎಣ್ಣೆ ಸುರಿದಿದ್ದರಿಂದ ಅವರು ನೋವಿನಿಂದ ಚೀರುತ್ತಿದ್ದರು. ಸಾಮಾನ್ಯವಾಗಿ ಅದೇ ಮಕ್ಕಳು ಇಷ್ಟು ಹೊತ್ತಿಗೆ ಅದೇ ಬಯಲಿನಲ್ಲಿ ಕ್ರಿಕೆಟ್ ಆಟವಾಡುತ್ತಿದ್ದರು. ಅಮ್ಮಿ (ತಾಯಿ ಝಾಕಿಯಾ ಝಾಫ್ರಿ) ಅಷ್ಟುಹೊತ್ತಿಗಾಗಲೇ ಹಲವು ಮಹಿಳೆಯರು ಮತ್ತು ಮಕ್ಕಳೊಂದಿಗೆ ಎರಡನೆ ಮಹಡಿಯಲ್ಲಿ ಬಚ್ಚಿಟ್ಟುಕೊಂಡಿದ್ದರು. ನಾಲ್ಕೂ ದಿಕ್ಕುಗಳಿಂದ ಮನೆಯ ಮೇಲೆ ಕಲ್ಲುಗಳು ಬೀಳುತ್ತಿದ್ದವು. ಅಷ್ಟು ಹೊತ್ತಿಗೆ ಸುತ್ತಮುತ್ತಲಿನ ಪ್ರದೇಶದ ಎಲ್ಲಾ ಮುಸಲ್ಮಾನರು ಒಂದೋ ಕೊಲೆಯಾಗಿದ್ದರು, ಗಾಯಗೊಂಡಿದ್ದರು ಅಥವಾ ನಮ್ಮ ಮನೆಯನ್ನು ಹೊಕ್ಕಿದ್ದರು. ನಮ್ಮ ಮನೆಯ ಮೇಲೆ ಸೀಮೆಎಣ್ಣೆ ತುಂಬಿರುವ ಬೆಂಕಿಯ ಚೆಂಡುಗಳು ಬೀಳಲಾರಂಭಿಸಿದವು. ಗ್ಯಾಸ್ ಸಿಲಿಂಡರ್‌ಗಳನ್ನು ಮನೆ ಒಳಗೆ ತೂರಲಾರಂಭಿಸಿದರು. ಈಗ ಅಪ್ಪ ಪ್ರಾಯಶಃ ಮನೆಯ ಮುಂದೆ ಇರಬೇಕು. ಮಕ್ಕಳನ್ನು ಮತ್ತು ಮಹಿಳೆಯರನ್ನು ಬಿಟ್ಟುಬಿಡಿ ಎಂದು ಆ ಗೂಂಡಾಗಳಲ್ಲಿ ಅಪ್ಪ ಅಂಗಲಾಚುತ್ತಿರಬೇಕು. ಗೂಂಡಾಗಳು ತನ್ನನ್ನು ಜೀವಂತ ಬಿಡುವುದಿಲ್ಲ ಎಂದು ಅಪ್ಪನಿಗೂ ಗೊತ್ತಾಗಿರಬೇಕು. ಈ ಎಲ್ಲಾ ಗೊಂದಲಗಳ ನಡುವೆಯೂ ಮನೆ ಕೆಲಸದಲ್ಲಿ ಅಮ್ಮನಿಗೆ ನೆರವಾಗುವ ಲೀಲಾಬೇನ್ ಕೂಡ ತನ್ನೊಂದಿಗೆ ಮಹಡಿಯಲ್ಲಿರುವುದು ಅಮ್ಮನ ಅರಿವಿಗೆ ಬಂತು. ತನ್ನೊಂದಿಗೆ ಲೀಲಾಬೇನ್ ಯಾಕೆ ಸಾಯಬೇಕೆಂದು ನಿರ್ಧರಿಸಿದ ಅಮ್ಮ ಮನೆಯ ಹಿಂದಿರುವ ಬಾಲ್ಕನಿಗೆ ಆಕೆಯನ್ನು ಕರೆದುಕೊಂಡು ಹೋಗಿ, ಸುತ್ತುವರಿದಿದ್ದ ಗೂಂಡಾಗಳಿಗೆ ಕೈಮುಗಿದು 'ಈಕೆ ಹಿಂದೂ, ಇವಳನ್ನು ಕರೆದುಕೊಂಡು ಹೋಗಿ' ಎಂದು ಬೇಡಿದಳು. ಅಮ್ಮ ಮತ್ತು ಇತರೆ ಮಹಿಳೆಯರು ಲೀಲಾಬೇನ್‌ಳನ್ನು ಕೆಳಗಿರುವ ನೀರಿನ ಟ್ಯಾಂಕ್ ಮೇಲೆ ಇಳಿಸುತ್ತಿರುವಾಗ ಅವರ ಮೇಲೆಯೇ ಕಲ್ಲುಗಳು ಬೀಳಲಾರಂಭಿಸಿದವು. ಅಮ್ಮ ಮತ್ತೆ ಓಡಿಹೋಗಿ ಬಚ್ಚಿಟ್ಟುಕೊಂಡರು. ಅಷ್ಟುಹೊತ್ತಿಗೆ ಎರಡನೆ ಮಹಡಿಗೂ ಬೆಂಕಿ ಬಿದ್ದಿತ್ತು.

ಭಾರತದಲ್ಲಿ ಕೋಟ್ಯಾಂತರ ಕರುಣಾಮಯಿ ಅಮ್ಮಿಯರಿದ್ದಾರೆ. ಅವರಲ್ಲಿ ನನ್ನ ಅಮ್ಮಿಯೂ ಒಬ್ಬರು.

ಗುಜರಾತಿನಲ್ಲಿ ಫೆಬ್ರವರಿ 27, 2002ರಂದು ಪ್ರಾರಂಭವಾದ, ಹಲವು ತಿಂಗಳುಗಳ ಕಾಲ ಮುಂದುವರೆದ ಮಾರಣಹೋಮದಲ್ಲಿ ಮಡಿದ ಎಲ್ಲರಿಗೂ ದುಃಖಿಸೋಣ. ನಮ್ಮ ಪ್ರಸ್ತುತ ಸರ್ಕಾರದ ಮುಖ್ಯಸ್ಥನಾಗಿರುವ ಮನುಷ್ಯನೇ ಅಧಿಕಾರ ಪಡೆಯುವುದಕ್ಕಾಗಿ ನಡೆಸಿದ ಯಶಸ್ವೀ ಮಾರಣಹೋಮ ಇದಾಗಿತ್ತು ಎಂಬುದನ್ನು ಮರೆಯದಿರೋಣ."

'ಮಗಳೊಂದಿಗೆ ಸೆಲ್ಫಿ'ಯಲ್ಲಿ ತಲ್ಲೀನರಾಗಿದ್ದ ಜನರಿಗೆ ಇಶಾನ್ ಝೂಫ್ರಿ ಅವರ ಮಗಳು ಕೊಟ್ಟ ಶಾಕ್ ಅಂತಿಂತಹದ್ದಾಗಿರಲಿಲ್ಲ. ನಿಜವಾಗಲೂ ಮೋದಿ ಎಂತಹ ವ್ಯಕ್ತಿ ಎಂಬುದರ ಬಗ್ಗೆ ನಿಶ್ರೀನ್ ಜನರನ್ನು ಮತ್ತೊಮ್ಮೆ ಎಚ್ಚರಿಸಿದರು.

ನಿಶ್ರೀನಳಂತೆ ಮೋದಿಯ ನಿಜಬಣ್ಣದ ಬಗ್ಗೆ ದನಿ ಎತ್ತಿದ್ದು ಶ್ರುತಿ ಸೇಥ್ ಎಂಬ ನಟಿ. ಹೆಚ್ಚಾಗಿ ಹಿಂದಿ ಸೀರಿಯಲ್‌ಗಳಲ್ಲಿ ನಟಿಸಿರುವ ಶ್ರುತಿ ಓರ್ವ ಹೆಣ್ಣುಮಗಳ ತಾಯಿ ಕೂಡ ಹೌದು. 'ಮಗಳೊಂದಿಗೆ ಸೆಲ್ಫಿ' ಕುರಿತು ಪ್ರತಿಕ್ರಿಯಿಸಿದ ಶ್ರುತಿ "ಸೆಲ್ಫಿ ಮೂಲಕ ಬದಲಾವಣೆ ಸಾಧ್ಯವಿಲ್ಲ ಮಿಸ್ಟರ್ ಪಿಎಂ. ಸುಧಾರಣೆಗೆ ಪ್ರಯತ್ನಿಸಿ" ಎಂದಳಲ್ಲದೆ ಅದಕ್ಕೆ 'ಸೆಲ್ಫಿ ಅಬ್‌ಸೆಸ್ಡ್ ಪಿಎಂ' ಎಂಬ ಹ್ಯಾಶ್‌ಟ್ಯಾಗ್ ಹಾಕಿದಳು. ಅದು ಕಂಡದ್ದೇ ತಡ ಮೋದಿ ಭಕ್ತರು ಆಕೆ ಮಹಿಳೆ ಎಂಬುದನ್ನೂ ಮರೆತು ಬಾಯಿಗೆಬಂದಂತೆ ಕೆಂಡ ಕಾರಲಾರಂಭಿಸಿದರು. ಶ್ರುತಿಯನ್ನು ಸೂಳೆ, ದೇಶದ್ರೋಹಿ, ಪ್ರಚಾರಪ್ರಿಯೆ ಎಂದೆಲ್ಲ ದೂಷಿಸಿದರು. ಅವರು ಎಂತಹ ಮಟ್ಟಕ್ಕೆ ಇಳಿದರೆಂದರೆ ಆಕೆಯ ಚಿಕ್ಕಮಗಳನ್ನೂ ನಿಂದಿಸಿದರು. ಅದೆಲ್ಲವನ್ನೂ ಧೈರ್ಯವಾಗಿಯೇ ಎದುರಿಸಿದ ಶ್ರುತಿ "ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಕ್ಕೇ ನೀವೆಲ್ಲ ನನ್ನನ್ನು, ನನ್ನ ಹೆತ್ತವರನ್ನು, ಗಂಡನನ್ನು, ಮಗಳನ್ನು, ನನ್ನ ವೃತ್ತಿಯನ್ನು ತೆಗಳಿದ್ದೀರಿ. ನಿಮ್ಮೆಲ್ಲರ ಅಂಧಕಾರ ನೋಡಿದರೆ ಹತಾಶೆಯಾಗುತ್ತದೆ" ಎಂದಳು. ಮಾತ್ರವಲ್ಲ "ಭಿನ್ನ ಅಭಿಪ್ರಾಯಕ್ಕೆ ಇಷ್ಟೊಂದು ದ್ವೇಷ ಕಾರಿಕೊಂಡಿದ್ದನ್ನು ನೋಡಿದರೆ ಈ ದೇಶದಲ್ಲಿ ಮಹಿಳೆಯರಿಗೆ ಸ್ಥಾನವೇ ಇಲ್ಲವೆನಿಸುತ್ತದೆ" ಎಂದು ಹೇಳುವ ಮೂಲಕ ಮೋದಿ ಮತ್ತು ಆತನ ಅಭಿಮಾನಿ ವೃಂದಕ್ಕೆ ಸರಿಯಾದ ತಪರಾಕಿ ಕೊಟ್ಟಳು.

ಹಾಗೆಯೇ ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಮತ್ತು ಸಿಪಿಐ (ಎಂಎಲ್) ಪಕ್ಷದ ನಾಯಕಿಯೂ ಆಗಿರುವ ಕವಿತಾ ಕೃಷ್ಣನ್ ಕೂಡ ಮೋದಿಯನ್ನು ಟೀಕಿಸಿದಳು. 'ಮಗಳೊಂದಿಗೆ ಸೆಲ್ಫಿಯನ್ನು ಹಂಚಿಕೊಳ್ಳುವ ಮುನ್ನ ಜೋಕೆ! ಹೆಣ್ಣುಮಕ್ಕಳಿಗೆ ಕಾಟ ಕೊಡುವ ಚಟ ಆತನಿಗಿದೆ' ಎಂದು ಟ್ವೀಟ್ ಮಾಡಿದ ಕವಿತಾ ಅದರೊಂದಿಗೆ 'ಲೇಮ್ ಡಕ್ ಪಿಎಂ' (ದುರ್ಬಲ ಪಿಎಂ) ಎಂಬ ಹ್ಯಾಶ್‌ಟ್ಯಾಗ್ ಹಾಕಿದಳು. ಎಲ್ಲರಿಗೂ ಗೊತ್ತಿರುವಂತೆ ಆಕೆ ಉಲ್ಲೇಖಿಸಿದ್ದು ಮೋದಿ ಮತ್ತು ಆತನ ಮಿತ್ರ ಅಮಿತ್ ಶಾ ಓರ್ವ ಯುವತಿಯ ಹಿಂದೆ ಗುಜರಾತ್ ಪೊಲೀಸರನ್ನು ನಿಯೋಗಿಸಿ ಆಕೆಯ ಚಲನವಲನಗಳ ಮೇಲೆ ನಿಗಾ ಇಟ್ಟದ್ದು.

ವಿಚಿತ್ರವೆಂದರೆ ಹೆಣ್ಣುಮಕ್ಕಳ ರಕ್ಷಣೆಗಾಗಿ ಸೆಲ್ಫಿ ತೆಗೆದುಕೊಳ್ಳುವಲ್ಲಿ ನಿರತರಾಗಿದ್ದ ಮೋದಿ ಭಕ್ತರು ಕವಿತಾ ಕೂಡ ಓರ್ವ ಮಹಿಳೆಯೆಂಬುದನ್ನು ಮರೆತು 'ಈ ಸೂಳೆಯನ್ನು ಜೈಲಿಗೆ ಹಾಕಿ' ಎಂದೆಲ್ಲಾ ಹರಿಹಾಯಲಾರಂಭಿಸಿದರು. ಆದರೆ ಇದ್ಯಾವುದರಿಂದಲೂ ಕವಿತಾ ಧೃತಿಗೆಡಲಿಲ್ಲ. ಬದಲಾಗಿ 'ಮೋದಿ ಬೆಂಬಲಿಗರ ಪ್ರತಿಕ್ರಿಯೆಗಳು ನಿಜವಾಗಲೂ ಅವರೆಷ್ಟು ಮಹಿಳಾ ವಿರೋಧಿಗಳು ಎಂಬುದನ್ನು ತೋರಿಸುತ್ತವೆ' ಎಂದು ಹೇಳುವ ಮೂಲಕ ಮತ್ತೊಮ್ಮೆ ಮೋದಿ ಮತ್ತಾತನ ಬೆಂಬಲಿಗರ ವೃಂದಕ್ಕೇ ಮುಖಭಂಗ ಮಾಡಿದಳು.

ಹೀಗೆ ಮೋದಿಗೆ ಮಹಿಳೆಯರ ಕಾಟ ಪಾರವಿಲ್ಲದೇ ಸಾಗಿತು. ಒಂದೆಡೆ ತನ್ನ ಪಕ್ಷದಲ್ಲೇ ಇರುವ ಮಹಿಳಾಮಣಿಗಳ ಹಗರಣಗಳು, ಇನ್ನೊಂದೆಡೆ ಆತನ ವಿರೋಧಿ ಪಾಳೆಯದಲ್ಲಿರುವ ಪ್ರಗತಿಪರ ಮಹಿಳೆಯರ ಟೀಕಾಸ್ತ್ರಗಳು. ಮೋದಿ ಅಸಹಾಯಕನಂತೆ ಕೈ ಚೆಲ್ಲಿ ಕುಳಿತುಕೊಂಡಿದ್ದರೆ ಅಚ್ಚರಿ ಇಲ್ಲ! ■

ಧರ್ಮ'ಕ್ಷೇತ್ರ'ದ ಭೂದಾಹಿಗಳಿಗೆ 'ಧರ್ಮಾ'ಘಾತ

ಒಳ್ಳೆಯತನದ ಸೋಗಿನಲ್ಲಿ ಎಂಥಾ ಕೆಟ್ಟ ಕೆಲಸ ಮಾಡಿದರೂ ಬಚಾವಾಗಿಬಿಡಬಹುದು ಅಂತ ಕೆಲವರು ಭಾವಿಸಿಕೊಂಡಿದ್ದಾರೆ. ಅದು ಪರಿಶುದ್ಧ ಭ್ರಮೆ ಅಷ್ಟೆ. ಜೂನ್ 22ರಂದು ಪುತ್ತೂರು ಉಪವಿಭಾಗದ ಸಹಾಯಕ ಆಯುಕ್ತ ಬಸವರಾಜು ಹೊರಡಿಸಿರುವ ಆದೇಶ ಅಂತಹ ಭ್ರಮಾಜೀವಿಗಳಿಗೆ ಸರಿಯಾದ ಪಾಠವನ್ನೇ ಕಲಿಸುವಂತಿದೆ. ಅಂದಹಾಗೆ, ಆ ಸರ್ಕಾರಿ ಆದೇಶದಿಂದ ನಟ್ಟನಡುಬೀದಿಯಲ್ಲಿ ಬೆತ್ತಲಾಗಿರೋದು 'ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಎಜುಕೇಷನ್ ಸೊಸೈಟಿ'ಯ (ಎಸ್‌ಡಿಎಂ) ಅಕ್ರಮ ಭೂವಂಚನೆಗಳು. ಈ ಎಸ್‌ಡಿಎಂ ಶಿಕ್ಷಣ ಸಂಸ್ಥೆಗೆ ಧರ್ಮಸ್ಥಳದ ಸ್ವಯಂಘೋಷಿತ ಧರ್ಮಾಧಿಕಾರಿ ಡಿ.ವಿರೇಂದ್ರ ಹೆಗ್ಗಡೆಯವರೇ ರೂವಾರಿ ಅನ್ನೋದು ಎಲ್ಲರಿಗೂ ತಿಳಿದಿರುವಂಥದ್ದು.


ಒಂದಲ್ಲ, ಎರಡಲ್ಲ ಬರೋಬ್ಬರಿ 132 ಎಕರೆಯಷ್ಟು ಕೃಷಿ ಭೂಮಿಯನ್ನು ಈ ಎಸ್‌ಡಿಎಂ ಶಿಕ್ಷಣ ಸಂಸ್ಥೆ ಬೆಳ್ತಂಗಡಿ ತಾಲ್ಲೂಕಿನ ಕಸಬಾ, ಉಜಿರೆ, ಓಡಿಲ್ನಾಳ್ ಗ್ರಾಮಗಳಲ್ಲಿ ಕಾನೂನುಬಾಹಿರವಾಗಿ ತನ್ನದಾಗಿಸಿಕೊಂಡಿತ್ತು, ಆ ಎಲ್ಲಾ ಜಮೀನುಗಳ ಪರಭಾರೆಯ 25 ಕ್ರಯಪತ್ರಗಳು ತಯಾರಾದದ್ದು ಬೆಳ್ತಂಗಡಿ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ. ಅಷ್ಟೂ ಕ್ರಯಪತ್ರಗಳನ್ನು ರದ್ದುಪಡಿಸಿರುವ ಸಹಾಯಕ ಆಯುಕ್ತರ ಆದೇಶವು, ಆ ಜಮೀನುಗಳ ಒಡೆತನವನ್ನು ಇನ್ನು ಮುಂದೆ 'ಸರ್ಕಾರ' ಎಂದು ಗುರುತಿಸುವಂತೆ ಬೆಳ್ತಂಗಡಿ ತಹಶೀಲ್ದಾರರಿಗೆ ನಿರ್ದೇಶನ ನೀಡಿದೆ. ಅಲ್ಲಿಗೆ ರಂಜನ್‌ರಾವ್ ಯರ್ಡೂರರ ನೇತೃತ್ವದಲ್ಲಿ ನಾಗರಿಕ ಸೇವಾಟ್ರಸ್ಟ್ ಕಳೆದ ಒಂದು ವರ್ಷದಿಂದ ನಡೆಸಿದ ಹೋರಾಟ ಸಾರ್ಥಕವಾದಂತಾಗಿದೆ. ಅಟ್ ದಿ ಸೇಮ್ ಟೈಮ್, ಧರ್ಮಾಧಿಕಾರಿಗಳ ಮುಖವಾಡವೂ ಕಳಚಿಬಿದ್ದಿದೆ.

ಅಸಲಿಗೆ ಎಸ್‌ಡಿಎಂ ಶಿಕ್ಷಣ ಸಂಸ್ಥೆ ರಾಜ್ಯದ ಬೇರೆಬೇರೆ ಕಡೆ ಕೃಷಿ ಭೂಮಿಯನ್ನು ಲಪಟಾಯಿಸಲು ಶುರು ಮಾಡಿದ್ದು 1993ರಿಂದ. ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ವಿಧಿ 63 (7) ಎ ಪ್ರಕಾರದ ಯಾವುದೇ ಒಂದು ಧಾರ್ಮಿಕ ಮತ್ತು ಶೈಕ್ಷಣಿಕ ಸಂಸ್ಥೆ ಕೃಷಿಭೂಮಿಯನ್ನು ಹೊಂದಲು ಖಂಡಿತ ಅವಕಾಶವಿದೆ. ಆದರೆ ಆ ಜಮೀನಿನಿಂದ ಬಂದ ಸಂಪೂರ್ಣ ಆದಾಯವನ್ನು/ಉತ್ಪನ್ನವನ್ನು ಸಂಸ್ಥೆಯ ಧ್ಯೇಯೋದ್ದೇಶಕ್ಕೆ ಮಾತ್ರ ಬಳಸಬೇಕು. ಇಲ್ಲಿ ಎಸ್‌ಡಿಎಂ ಶಿಕ್ಷಣ ಸಂಸ್ಥೆಯಾಗಿರೋದರಿಂದ ಕೃಷಿ ಜಮೀನಿನ ಆದಾಯವನ್ನು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲು, ಸಮಾಜದಲ್ಲಿ ಶಿಕ್ಷಣವನ್ನು ಪ್ರಚುರಪಡಿಸಲು ಮಾತ್ರ ಬಳಸಬೇಕು. ಇದರ ಜೊತೆಗೆ ಮತ್ತೂ ಒಂದಿಷ್ಟು ಕರಾರುಗಳಿವೆ. ಏನೆಂದರೆ ಯಾವುದೇ ಒಂದು ಧಾರ್ಮಿಕ ಅಥವಾ ಶಿಕ್ಷಣ ಸಂಸ್ಥೆ ಕಾಯ್ದೆ ಪ್ರಕಾರ ಕೃಷಿ ಜಮೀನನ್ನು ತನ್ನದಾಗಿಸಿಕೊಂಡರೆ ಜಮೀನು ಪಡೆದುಕೊಂಡ ಒಂದು ವರ್ಷದೊಳಗೆ ಸಂಸ್ಥೆ ಆ ಜಮೀನಿನಲ್ಲಿ ಕೃಷಿ ಕಾರ್ಯ ಆರಂಭಿಸಬೇಕು; ಜಮೀನು ನೀಡಲ್ಪಟ್ಟ ಐದು ವರ್ಷದ ಒಳಗಾಗಿ ವ್ಯವಸಾಯ ಮಾಡುವುದನ್ನು ಬಿಟ್ಟರೆ ಜಮೀನು ಸರ್ಕಾರದ ಸ್ವಾಧೀನಕ್ಕೆ ಒಳಪಡುತ್ತದೆ; ಪಡೆದ ಜಮೀನನ್ನು ಕೃಷಿಗಾಗಿ ಮಾತ್ರವೇ ಉಪಯೋಗಿಸಬೇಕೆ ವಿನಃ ಬೇರಾವುದೇ ಚಟುವಟಿಕೆಗಳಿಗೆ ಬಳಸಬಾರದು. ಆದರೆ ಎಸ್‌ಡಿಎಂ ಶಿಕ್ಷಣ ಸಂಸ್ಥೆ ಈ ಕರಾರುಗಳ್ಯಾವನ್ನೂ ಪೂರೈಸಿದ ನಿದರ್ಶನಗಳೇ ಇಲ್ಲ.


ಇದೆಲ್ಲಾ ಒತ್ತಟ್ಟಿಗಿರಲಿ, ಆ ಜಮೀನುಗಳನ್ನು ತನ್ನದಾಗಿಸಿಕೊಳ್ಳಲು ಎಸ್‌ಡಿಎಂ ಶಿಕ್ಷಣ ಸಂಸ್ಥೆ ನಡೆಸಿರುವ ಕಸರತ್ತುಗಳೇ ಕಾನೂನುಬಾಹಿರವಾಗಿವೆ. ಮೊದಲನೆಯದಾಗಿ ಈ ಸಂಸ್ಥೆ ಸ್ಥಾಪನೆಯಾದದ್ದೇ 1985ರಲ್ಲಿ, ಅಂದರೆ ಭೂಸುಧಾರಣೆ ಕಾಯ್ದೆಯ ಸೆಕ್ಷನ್ 63 (7)ರ ಪ್ರಕಾರ ಕೃಷಿಭೂಮಿಯನ್ನು ಹೊಂದಲು ಅರ್ಹತೆಯೇ ಇದಕ್ಕಿಲ್ಲ. ಎಸ್‌ಡಿಎಂ ಶಿಕ್ಷಣ ಸಂಸ್ಥೆಯ ಅಧ್ಯಕ್ಷರೂ ಆದ ಡಿ. ವಿರೇಂದ್ರ ಹೆಗ್ಗಡೆಯವರು 05.01.1993ರಂದು ಮೈಸೂರು ಉಪವಿಭಾಗದ ಸಹಾಯಕ ಆಯುಕ್ತರಿಗೆ ಅರ್ಜಿಯೊಂದನ್ನು ಸಲ್ಲಿಸಿ ತಮ್ಮ ಶಿಕ್ಷಣ ಸಂಸ್ಥೆ ಉಚಿತ ಶಿಕ್ಷಣ ನೀಡುತ್ತಿದ್ದು, ಸಮಾಜದ ಅಭ್ಯುದಯಗಳಲ್ಲಿ ತೊಡಗಿಸಿಕೊಂಡಿರುವುದರಿಂದ ಕೃಷಿ ಜಮೀನನ್ನು ಹೊಂದಲು ಅನುಮತಿ ನೀಡಬೇಕೆಂದು ಕೇಳಿಕೊಂಡಿದ್ದರು. ಕಾಯ್ದೆ ಸೆಕ್ಷನ್ 80ರ ಪ್ರಕಾರ ಧಾರ್ಮಿಕ ಅಥವಾ ಶಿಕ್ಷಣ ಸಂಸ್ಥೆ ಕೃಷಿ ಜಮೀನನ್ನು ಹೊಂದಲು ಅನುಮತಿ ನೀಡುವ ಅಧಿಕಾರ ಸಹಾಯಕ ಆಯುಕ್ತರಿಗೆ ಇಲ್ಲವೇ ಇಲ್ಲ. ಆ ಹಕ್ಕು ಇರುವುದು ಸರ್ಕಾರ ಮತ್ತು ಡೆಪ್ಯುಟಿ ಕಮೀಷನರ್‌ರಿಗೆ ಮಾತ್ರ. ಸಹಾಯಕ ಆಯುಕ್ತರು ಹೆಚ್ಚೆಂದರೆ ಯೋಜನಾ ನಿರಾಶ್ರಿತರಿಗೆ, ಜಮೀನು ಇಲ್ಲದ ಕೃಷಿ ಕಾರ್ಮಿಕರಿಗೆ, ಜೀತಮುಕ್ತ ಕಾರ್ಮಿಕರಿಗೆ ಮತ್ತು ಜಮೀನು ಇರುವ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲೇ ಇರುವ ಜಮೀನು ಇಲ್ಲದ ಆದಾಯದ ಮೂಲ ಇಪ್ಪತ್ತು ಸಾವಿರಕ್ಕಿಂತ ಕಡಿಮೆ ಇರುವ ನಿರ್ಗತಿಕರಿಗೆ ಜಮೀನು ನೀಡಬಹುದಷ್ಟೆ. ಈ ಯಾವ ಅರ್ಹತೆಯೂ ಇಲ್ಲದ ಎಸ್‌ಡಿಎಂ ಶಿಕ್ಷಣ ಸಂಸ್ಥೆ ನೇರವಾಗಿ ಸರ್ಕಾರ ಅಥವಾ ಡೆಪ್ಯುಟಿ ಕಮೀಷನರ್ ಬಳಿ ಹೋಗದೆ ತಮಗೆ ಅನುಕೂಲವಾಗಬಹುದಾದ ಸಹಾಯಕ ಆಯುಕ್ತರ ಬಳಿ ಅರ್ಜಿ ಸಲ್ಲಿಸಿದ್ದು ಅದು ಮಾಡಿದ ಬಹುದೊಡ್ಡ ಪ್ರಮಾದ. ಅವರ ಅರ್ಜಿಗೆ ಪ್ರತಿಯಾಗಿ ಯಾವ ತಕರಾರೂ ಇಲ್ಲದೆ 20.02.1993ರಂದು ಸಹಾಯಕ ಆಯುಕ್ತರು ಅನುಮತಿಯನ್ನೂ ನೀಡಿದ್ದರು.



ಸೇವಾ ಟ್ರಸ್ಟ್‌ನ ಪತ್ರಿಕಾಗೋಷ್ಠಿ


ಸಹಾಯಕ ಆಯುಕ್ತ ಬಸವರಾಜು

ಸರಿ ಹೀಗೆ ನೀಡಲ್ಪಟ್ಟ ಅನುಮತಿ ಆದೇಶ ಮಾನ್ಯ ಎಂದೇ ಪರಿಗಣಿಸಿಕೊಳ್ಳೋಣ. ಹಾಗಾದರು ಅದು ಮೈಸೂರು ಉಪವಿಭಾಗಕ್ಕೆ ಮಾತ್ರವೇ ಅನ್ವಯವಾಗುವಂತದ್ದು ಮತ್ತು ಆದೇಶದ ಅವಧಿ ಒಂದು ವರ್ಷಕ್ಕೆ ಮಾತ್ರವೇ ಸೀಮಿತವಾದುದು. ಅನುಮತಿ ನೀಡುವಾಗ ತಮ್ಮ ಆದೇಶಪತ್ರ ಸಂಖ್ಯೆ ಎಲ್‌ಆರ್‌ಎಫ್/101/92-93ಯಲ್ಲಿ ಮೈಸೂರು ನಗರದಲ್ಲಿ ಚಟುವಟಿಕೆ ನಡೆಸಲು ಕೃಷಿ ಭೂಮಿ ಹೊಂದಲು ಅನುಮತಿ ನೀಡಲಾಗಿದೆ ಎಂಬುದನ್ನು ಸಹಾಯಕ ಆಯುಕ್ತರು ಸ್ಪಷ್ಟವಾಗಿ ನಮೂದಿಸಿದ್ದಾರೆ. ಆದರೆ ವಿರೇಂದ್ರ ಹೆಗ್ಗಡೆಯವರ ಒಡೆತನದ ಎಸ್‌ಡಿಎಂ ಶಿಕ್ಷಣ ಸಂಸ್ಥೆ ಮೈಸೂರು ಉಪವಿಭಾಗಕ್ಕೆ ಗಿಟ್ಟಿಸಿಕೊಂಡ ಅನುಮತಿಯನ್ನೇ ತೋರಿಸಿ, ಬೆಳ್ತಂಗಡಿಯಲ್ಲಿ ಜಮೀನು ಖರೀದಿ ಮಾಡಿದೆ, ಅದೂ ಆದೇಶದ ಒಂದು ವರ್ಷದ ಅವಧಿ ಮುಗಿದ ಎಷ್ಟೋ ವರ್ಷಗಳ ತರುವಾಯ. ಬೆಳ್ತಂಗಡಿ ಮೈಸೂರು ವಲಯಕ್ಕೇ ಸೇರುವುದರಿಂದ ಅದೇ ಆದೇಶದಡಿ ಇಲ್ಲಿ ಖರೀದಿ ಮಾಡಿದ್ದೇವೆಂದು ಸಮಜಾಯಿಷಿ ಕೊಟ್ಟುಕೊಳ್ಳಬಹುದು. ಆದರೆ ಆದೇಶ ಸಿಕ್ಕಿರೋದು ಮೈಸೂರು ಉಪವಿಭಾಗಕ್ಕೆ ಮಾತ್ರ, ವಲಯಕ್ಕೆ ಅಲ್ಲ. ಇದೊಂತರ ಮೈಸೂರು ತಾಲ್ಲೂಕಿನಲ್ಲಿ ಜಮೀನು ಖರೀದಿಸಲು ಅನುಮತಿ ಗಿಟ್ಟಿಸಿಕೊಂಡು ನಂತರ ಹುಣಸೂರು ತಾಲ್ಲೂಕಿನಲ್ಲಿ ಜಮೀನು ಖರೀದಿಸಿ ಹುಣಸೂರು ಕೂಡಾ ಮೈಸೂರು ಜಿಲ್ಲೆಗೇ ಸೇರುತ್ತದಲ್ಲವಾ ಅಂತ ಮೊಂಡು ವಾದ ಮಂಡಿಸಿದಂತಿದೆ. ಹುಣಸೂರು ತಾಲ್ಲೂಕು ಮೈಸೂರು ಜಿಲ್ಲೆಗೇನೊ ಸೇರುತ್ತದೆ, ಆದರೆ ಅವಕಾಶ ಸಿಕ್ಕಿರೋದು 'ಜಿಲ್ಲೆ'ಗೆ ಅಲ್ಲ, ಮೈಸೂರು 'ತಾಲ್ಲೂಕಿ'ಗೆ ಮಾತ್ರ ಎಂಬ ಸೂಕ್ಷ್ಮವನ್ನು ಮರೆಮಾಚುವ ಸಂಚು ಅಲ್ಲಿರುತ್ತೆ. ಮೈಸೂರು 'ಉಪವಿಭಾಗ' ಮತ್ತು 'ವಲಯ' ಇವೆರಡನ್ನೂ ಪರ್ಯಾಯವಾಗಿಸಿಕೊಂಡು ಎಸ್‌ಡಿಎಂ ಶಿಕ್ಷಣ ಸಂಸ್ಥೆ ಮಾಡಿರೋದು ಕೂಡಾ ಅದನ್ನೇ. ಇನ್ನು ಅನುಮತಿಯ ಆದೇಶದಲ್ಲಿ 20 ಯೂನಿಟ್ ಕೃಷಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗುತ್ತಿದೆ ಎಂದು ಉಲ್ಲೇಖಿಸಲಾಗಿದೆ. ಕಾಯ್ದೆ ಪ್ರಕಾರ ಒಂದು ಯೂನಿಟ್ ಎಂದರೆ 1 ಎಕರೆ. ಅಲ್ಲಿಗೆ ಎಸ್‌ಡಿಎಂ ಶಿಕ್ಷಣ ಸಂಸ್ಥೆ ಹೆಚ್ಚೆಂದರೆ 20 ಎಕರೆ ಕೃಷಿ ಜಮೀನನ್ನು ಹೊಂದಬಹುದು. ಆದರೆ ಉಜಿರೆ, ಕುವೆಟ್ಟು, ಓಡಿಲ್ನಾಳ್, ಬೆಳ್ತಂಗಡಿಗಳಲ್ಲಿ ಇದು ಖರೀದಿಸಿರೋದು ಒಟ್ಟು 132 ಎಕರೆ. ಅಲ್ಲಿಯೂ ಕೂಡಾ ನಿಯಮಗಳನ್ನು ಸಾರಾಸಗಟಾಗಿ ಮುರಿದು ಬಿಸಾಕಲಾಗಿದೆ.



ತಾಲ್ಲೂಕು	ಗ್ರಾಮ	ಸ. ನಂಬರ್	ವಿಸ್ತೀರ್ಣ	ಖರೀದಿ ಮಾಡಿದವರ ಹೆಸರು	ಖರ	ದಸ್ತಾವೇಜು ನಂಬರ್	ಷರಾ
ಬೆಳ್ತಂಗಡಿ	ಕುವೆಟ್ಟು	100/2ಎ1	2-00	[illegible]	[illegible]	87/07-08	
ಬೆಳ್ತಂಗಡಿ	ಉಜಿರೆ	100/1ಎ	1-22	[illegible]	[illegible]	87/07-08	
ಬೆಳ್ತಂಗಡಿ	ಕುವೆಟ್ಟು	113/2ಎ	0-89	[illegible]	[illegible]	87/07-08	
ಬೆಳ್ತಂಗಡಿ	ಓಡಿಲ್ನಾಳ	126	17-52	[illegible]	[illegible]	295/07-08	
ಬೆಳ್ತಂಗಡಿ	ಬೆಳ್ತಂಗಡಿ	56/1	0-74	[illegible]	[illegible]	[illegible] 1/ 99-2000	
ಬೆಳ್ತಂಗಡಿ	ಬೆಳ್ತಂಗಡಿ	59/2ಎ	7-42	[illegible]	[illegible]	[illegible] 1/ 99-2000	

ನಿರ್ಣಯಕ ಅಂಶಗಳು:

[illegible]

(1) ದಿನಾಂಕ: 20.02.1993ರಂದು ಮೈಸೂರು ಉಪವಿಭಾಗಾಧಿಕಾರಿಗಳು [illegible]

(2) [illegible] ಕರ್ನಾಟಕ ಭೂಸುಧಾರಣೆ 1961ರ ಕಲಂ 63(7)ರ [illegible] 20 [illegible] ಕಲಂ 80 [illegible]

(3) [illegible]

(4) [illegible] ಕರ್ನಾಟಕ ಭೂಸುಧಾರಣೆ ಕಾಯಿದೆ 1961/74 ಕಲಂ 79(ಬಿ) [illegible] ದಿನಾಂಕ: 20.02.1993ರ [illegible]

(5) [illegible] ದಿ:20.02.1993ರ [illegible] ಕಲಂ 79(A), 79(B) ಮತ್ತು 79(C) [illegible]

ಆದೇಶ

[illegible] ದಿನಾಂಕ:20.02.1993ರ [illegible] ಕಲಂ 80 [illegible] ಕಲಂ 83ರ [illegible]

ಅಸಿಂಧುಗೊಳಿಸಿದ ಆದೇಶಪ್ರತಿ

ಸಹಾಯಕ ಕಮೀಷನರ್ ಪುತ್ತೂರು. ದ. ಕ.

ಇಲ್ಲಿ ಇನ್ನೂ ಒಂದು ಸಂಗತಿಯಿದೆ. ಏನೆಂದರೆ 01.03.1974ರ ನಂತರ ಎಸ್‌ಡಿಎಂ ಶಿಕ್ಷಣ ಸಂಸ್ಥೆ ಖರೀದಿಸಿದ ಯಾವುದೇ ಕೃಷಿ ಜಮೀನಿಗೆ ಕಾಯ್ದೆಯ ನಿಯಮ 30ರ ಸೆಕ್ಷನ್ 79 (2) (ಬಿ) ಪ್ರಕಾರ ನಮೂನೆ 13ರಲ್ಲಿ ಘೋಷಣೆಯನ್ನು ಸಲ್ಲಿಸಬೇಕು. ಇಂತಹ ಘೋಷಣೆಯನ್ನು ಸಲ್ಲಿಸದಿದ್ದರೆ ಅಥವಾ ದೋಷಪೂರಿತ ಘೋಷಣೆಯನ್ನು ಸಲ್ಲಿಸಿದರೆ ದಂಡ/ಶಿಕ್ಷೆಗೆ ಗುರಿಪಡಿಸುವ ಅವಕಾಶವೂ ಇದೆ. ಆ ನಿಟ್ಟಿನಿಂದ ನೋಡಿದಾಗಲೂ ಎಸ್‌ಡಿಎಂ ಅಧ್ಯಕ್ಷ ವೀರೇಂದ್ರ ಹೆಗ್ಗಡೆಯವರು ಮತ್ತು ಕಾರ್ಯದರ್ಶಿ ಬಿ. ಯಶೋವರ್ಮ ಇಬ್ಬರೂ ಶಿಕ್ಷಾರ್ಹ ಅಪರಾಧಿಗಳೆನಿಸುತ್ತಾರೆ. ಇದೊಂದೇ ಅಪರಾಧವಲ್ಲ, ದೋಷಪೂರಿತ ದಾಖಲೆಗಳನ್ನು ಸೃಷ್ಟಿಸಿದ (ಅರ್ಹರಲ್ಲದ ಸಹಾಯಕ ಆಯುಕ್ತರಿಂದ ಅನುಮತಿ ಗಿಟ್ಟಿಸಿದ್ದು) ಮತ್ತು ಆ ದಾಖಲೆಯ ಆಧಾರದಲ್ಲಿ ಸರ್ಕಾರಿ ಅಧಿಕಾರಿಗಳನ್ನು ವಂಚಿಸಿ ಅವರು ಕಾರ್ಯಗತಗೊಳ್ಳುವಂತೆ ಮಾಡಿದ ಆರೋಪದಲ್ಲೂ ಐಪಿಸಿ ಸೆಕ್ಷನ್ 182 ಮತ್ತು 199ರ ಪ್ರಕಾರ ಅವರ ಮೇಲೆ ಕ್ರಮಕೈಗೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಜನರಿಗೆ ಧರ್ಮಸ್ಥಳದ ಮೇಲೆ ಮುಗ್ಧ ನಂಬಿಕೆ

'ಧರ್ಮ'ದ ಒಡೆತನವೂ, 'ಸ್ಥಳ'ದ ಆದಾಯವೂ....

ಕ್ಷೇತ್ರದ ಹೆಸರು ಕೇಳಿದರೆ ಸಾಮಾನ್ಯವಾಗಿ ಜನರಲ್ಲಿ ಭಯ, ಭಕ್ತಿ ಎಂಬೆರಡು ಭಾವನೆ ಬಿಟ್ಟು ಮತ್ತೇನೂ ಉಳಿಯುವುದಿಲ್ಲ, ಆದರೆ ಅದರ ಹಿಂದಿರುವ ಆಸ್ತಿಸಾಮ್ರಾಜ್ಯ ಅರ್ಥಾತ್ ಒಡೆತನ ಉಸಾಬರಿಯ ಕಿರಿಕ್ಕು ಬಹಳ ಜನಕ್ಕೆ ಗೊತ್ತಿದ್ದಂತಿಲ್ಲ, 'ಇದೊಂದು ಖಾಸಗಿ ದೇವಸ್ಥಾನ. ಸರಕಾರ ಇದನ್ನು ಮುಟ್ಟುವಂತಿಲ್ಲ' ಎಂದು ಸಾಮಾನ್ಯವಾಗಿ ಎಲ್ಲರೂ ಅಂದುಕೊಂಡಿದ್ದಾರೆ. ಆದರೆ ವಾಸ್ತವ ಮತ್ತು ಸತ್ಯಸಂಗತಿಗಳು ಇದಕ್ಕೆ ತದ್ವಿರುದ್ಧವಾಗಿದೆ.

ವೀರೇಂದ್ರ ಹೆಗ್ಗಡೆಯವರ ಕುಟುಂಬ, ಅವರ ತಂದೆ ರತ್ನವರ್ಮ ಹೆಗ್ಗಡೆಯವರ ಕಾಲದಿಂದಲೂ ಧರ್ಮಸ್ಥಳದ ಮಂಜುನಾಥಸ್ವಾಮಿ ದೇವಸ್ಥಾನದ ಮಾಲಿಕರು ತಾವೇ ಎಂದು ಪ್ರತಿಪಾದಿಸುತ್ತಾ ಬಂದಿದ್ದಾರೆ; ದೇವಸ್ಥಾನದ ಖಾಸಗಿ ಒಡೆತನವನ್ನು ಮುಂದುವರೆಸಿಕೊಂಡು ಬರುವಲ್ಲಿ ಯಶಸ್ವಿಯಾಗಿದ್ದಾರೆ. ಈ ರತ್ನವರ್ಮ ಹೆಗ್ಗಡೆಯವರು ಒಮ್ಮೆ ಶಾಸಕರಾಗಿಯೂ ಅಧಿಕಾರ ನಡೆಸಿದ್ದರೆನ್ನುವುದು ನಿಮಗೆ ತಿಳಿದಿರಲಿ. ಹಿಂದೊಮ್ಮೆ ಮದ್ರಾಸ್ ಹಿಂದೂ ರಿಲಿಜಿಯಸ್ ಎಂಡೋಮೆಂಟ್ ಆಕ್ಟ್-1926 ಪ್ರಕಾರ ಅಂದಿನ ಕಮಿಷನರ್ ಈ ದೇವಸ್ಥಾನವನ್ನು ಧಾರ್ಮಿಕ ದತ್ತಿ ಇಲಾಖೆ ಪಡೆದಿತ್ತು, ಆಗ ರತ್ನವರ್ಮ ಹೆಗ್ಗಡೆಯವರು ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸಿ ದಾವೆ ಹೂಡಿದ್ದರು. ಪ್ರಕರಣ ಸುಪ್ರೀಂಕೋರ್ಟ್‌ವರೆಗೆ ಎಡತಾಕಿತ್ತು, ಆಗ ಇದ್ದ ಕಾನೂನುಗಳ ಪ್ರಕಾರ ರತ್ನವರ್ಮ ಹೆಗ್ಗಡೆಯವರ ಪರವಾಗಿ ತೀರ್ಪು ಬಂದಿದ್ದೇನೊ ನಿಜ. ಆದರೆ ಈಗ ಕಾನೂನುಗಳೂ ಬದಲಾಗಿವೆ. ಅವತ್ತಿನ ಆದೇಶವನ್ನೇ ಈಗಲೂ ಮುಂದುವರೆಸುವ ಅಗತ್ಯ ಖಂಡಿತ ಇಲ್ಲ. ಬದಲಾದ ಕಾನೂನು ಜಾರಿಯಾಗಿ ಸದರಿ ದೇವಸ್ಥಾನ ಧಾರ್ಮಿಕ ದತ್ತಿ ಇಲಾಖೆಗೆ ಸೇರಬೇಕು. ಇಂತಹದ್ದೊಂದು ಜನಪರ ಕೂಗು ಹುಟ್ಟುಹಾಕಿರೋದು ಕೂಡಾ ಅದೇ ನಾಗರಿಕ ಸೇವಾಟ್ರಸ್ಟ್.

ಖಾಸಗಿ ದೇವಸ್ಥಾನಗಳಾಗಿದ್ದರೂ ಕೂಡಾ ಸಾರ್ವಜನಿಕರ ಪ್ರವೇಶಕ್ಕೆ ಅವಕಾಶ ನೀಡಿ ಜನರಿಂದ ಕಾಣಿಕೆ ಸ್ವೀಕರಿಸಿದಲ್ಲಿ ದೇವಸ್ಥಾನದ ಸ್ವರೂಪವು 'ಸಾರ್ವಜನಿಕ'ವಾಗುತ್ತದೆ ಎಂದು ಪ್ರಿವಿ ಕೌನ್ಸಿಲ್‌ನಿಂದ ಆರಂಭಿಸಿ (1924) ಇತ್ತೀಚಿನ ಸುಪ್ರೀಂ ಕೋರ್ಟ್ ಆದೇಶಗಳು ಸ್ಪಷ್ಟವಾಗಿ ಹೇಳಿರುತ್ತವೆ. ಈ ದೇವಸ್ಥಾನಕ್ಕೆ 1926ರಿಂದಲೇ ಸರಕಾರದಿಂದ ತಸ್ತೀಕು ಬರುತ್ತಿದ್ದ ದಾಖಲೆ ಲಭ್ಯವಾಗಿದೆ. ಅದರ ಪ್ರಕಾರ ಕುಡುಮದ ಮಂಜುನಾಥಸ್ವಾಮಿಗೆ ವಾರ್ಷಿಕ ರೂ:220-00 ಮತ್ತು ಕುಡುಮ ಭೂತಕ್ಕೆ ವಾರ್ಷಿಕ ರೂ:88.00 ತಸ್ತೀಕು ಪಾವತಿಯಾಗುತ್ತಿತ್ತು, ಹಾಗಿದ್ದ ಮೇಲೆ ಅದು ಶುದ್ಧ ಖಾಸಗಿ ಆಸ್ತಿಯಾಗಿಯೇ ಹೇಗೆ ಉಳಿಯುತ್ತದೆ.

'ಧರ್ಮಸ್ಥಳ' ಎಂಬುದು ಒಂದು **Integrated Institution.** ಆದ್ದರಿಂದ ಕಾಯ್ದೆಯಲ್ಲಿರುವಂತೆ 'ದೇವಸ್ಥಾನ' ಎಂಬ ಶಬ್ದದ ವ್ಯಾಪ್ತಿಗೆ ಬರುವುದಿಲ್ಲ ಎಂಬುದು ಹೆಗ್ಗಡೆ ಕುಟುಂಬದ ವಾದ. ಆದರೆ 2011 ರಲ್ಲಿ ಕಾಯ್ದೆ ಮಾಡಲಾದ ತಿದ್ದುಪಡಿ ಪ್ರಕಾರ ಈ ಪದಗಳನ್ನು ಕೈಬಿಡಲಾಗಿದೆ. ಆದ್ದರಿಂದ ಪ್ರಸ್ತುತ ಇದು ದೇವಸ್ಥಾನವಾಗಿದ್ದು, ಕಾಯ್ದೆಯ ವ್ಯಾಪ್ತಿಗೆ ಬರುತ್ತದೆ. ಅಲ್ಲದೆ 1976 ರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಈ ಪ್ರಕರಣದ ಕುರಿತಂತೆ ತ್ರಿಸದಸ್ಯ ಪೀಠವು ನೀಡಿದ ಆದೇಶದಲ್ಲಿ 'ಅಗತ್ಯವಿದ್ದಲ್ಲಿ ಕಾಯ್ದೆ ತಿದ್ದುಪಡಿ ಮಾಡಬೇಕು (ಧಾರ್ಮಿಕದತ್ತಿ ಇಲಾಖಾ ವ್ಯಾಪ್ತಿಗೆ ತರಲು)' ಎಂದು ಉಲ್ಲೇಖಿಸಲಾಗಿದೆ. ಅವನ್ನೆಲ್ಲಾ ಆಧಾರವಾಗಿಟ್ಟುಕೊಂಡು ಸರ್ಕಾರ ದಿಟ್ಟ ಹೆಜ್ಜೆ ಇಟ್ಟದ್ದೇ ಆದರೆ ಕ್ಷೇತ್ರವನ್ನು ಇಲಾಖಾ ವ್ಯಾಪ್ತಿಗೆ ಒಳಪಡಿಸುವುದು ಕಷ್ಟವೇನೂ ಅಲ್ಲ.

ಅಂದಹಾಗೆ, ಶ್ರೀಕ್ಷೇತ್ರದ ವಾರ್ಷಿಕ ಆದಾಯ ಎಷ್ಟು ಗೊತ್ತೆ? ಬರೋಬ್ಬರಿ 400 ರಿಂದ 450 ಕೋಟಿ! ಅಷ್ಟು ಹಣದಲ್ಲಿ ಜನರ ಕಣ್ಣೊರೆಸುವ ಒಂದಷ್ಟು ಪುಡಿಗಾಸನ್ನು ಸ್ವಹಿತಾಸಕ್ತಿ ಆಧಾರಿತ ಸಮಾಜ ಸೇವೆಗೆ ಖರ್ಚು ಮಾಡುವುದು ಬಿಟ್ಟರೆ ಇನ್ನುಳಿದಂತೆ ಒಂದು ಕುಟುಂಬದ ಖಜಾನೆಯ ಬದಲಾಗುತ್ತಿದೆ. ದೇವಸ್ಥಾನದ ಆಡಳಿತವು ಈಗಲೂ ಡಿ. ವೀರೇಂದ್ರ ಹೆಗ್ಗಡೆಯವರ ಕುಟುಂಬದ ಕೈಯಲ್ಲಿದೆ. ಎಷ್ಟು ಆದಾಯವಿದೆ? ಯಾವುದಕ್ಕೆ ಖರ್ಚಾಗುತ್ತಿದೆ ಎಂಬುದರ ವಿವರವನ್ನು ಇವರ್‍ಯಾರೂ ಸಾರ್ವಜನಿಕವಾಗಿ ನೀಡಿಲ್ಲ. ಪಾರದರ್ಶಕತೆ ಅನ್ನೋದನ್ನು 'ಖಾಸಗಿ' ಒಡೆತನದಲ್ಲಿ ಊಹಿಸಲಿಕ್ಕೂ ಸಾಧ್ಯವಿಲ್ಲ. ಆದಾಯದ ನೆಪಕ್ಕೆ ಅಲ್ಲದಿದ್ದರು ಕಡೇಪಕ್ಷ ಮುಗ್ಧ ಜನರ 'ನಂಬಿಕೆ' ವಂಚನೆಗೊಳಗಾಗುತ್ತಿರುವುದನ್ನು ತಪ್ಪಿಸಲಿಕ್ಕಾದರು ಸರ್ಕಾರ ಒಂದು ನಿರ್ಧಾರಕ್ಕೆ ಬರಲೇಬೇಕಾಗಿದೆ.


ಇದ್ದಿದ್ದರಿಂದಲೋ ಅಥವಾ ಮೂಢ ಭಯವನ್ನು ಜನರಲ್ಲಿ ತುಂಬಿದ್ದರಿಂದಲೋ ಆರಂಭದಲ್ಲಿ ಎಸ್‌ಡಿಎಂ ಶಿಕ್ಷಣ ಸಂಸ್ಥೆ ನಡೆಸಿದ್ದ ಇಂತಹ ಭೂವಂಚನೆಗಳು ಬಯಲಿಗೆ ಬಂದಿರಲೇ ಇಲ್ಲ. ಆದರೆ 'ಸ್ಥಳ'ದ ಹಿಂದಿನ 'ಧರ್ಮ' ಮುಖವಾಡಗಳು ಒಂದೊಂದಾಗಿ ಕಳಚಿ ಬೀಳುತ್ತಿದ್ದಂತೆಯೇ ಒಂದಷ್ಟು ಪ್ರಜ್ಞಾವಂತರಿಗೂ ಅಲ್ಲಿನ ಭೂ ಅವ್ಯವಹಾರಗಳ ಸುಳಿವು ಸಿಕ್ಕಿತ್ತು. ಆಗ ಇದರ ವಿರುದ್ಧ ಸಂಘಟಿತ ಮತ್ತು ಕ್ರಮಬದ್ಧ ಹೋರಾಟಕ್ಕಿಳಿದಿದ್ದು 'ನಾಗರಿಕ ಸೇವಾ ಟ್ರಸ್ಟ್'ನ ಸ್ಥಾಪಕ ಟ್ರಸ್ಟಿಯಾದ ರಂಜನ್ ರಾವ್ ಯರ್ಡೂರರು. ಅವರಿಗೆ ಟ್ರಸ್ಟ್‌ನ ಅಧ್ಯಕ್ಷ ಕೆ. ಸೋಮನಾಥ ನಾಯಕ್, ಸಂಚಾಲಕ ಕೆ. ಸೋಮಶೇಖರ್, ಸಂಸ್ಥಾಪಕ ಉಪಾಧ್ಯಕ್ಷೆ ವಿದ್ಯಾ ನಾಯಕ್ ಮೊದಲಾದವರೆಲ್ಲ ಹೆಗಲುಕೊಟ್ಟು ನಿಂತಿದ್ದರು. ಹಾದಿ ಸರಳವಾಗೇನೂ ಇರಲಿಲ್ಲ. ಏಕೆಂದರೆ ಕೆಟ್ಟವರನ್ನು ಬಲು ಸುಲಭವಾಗಿ ಎದುರಿಸಬಹುದು. ಆದರೆ ಒಳ್ಳೆಯವರಂತಿರುವ ಕೆಟ್ಟವರನ್ನು ಎದುರಿಸುವುದು ಸುಲಭವಲ್ಲ. ಒಂದಷ್ಟು ಬೆದರಿಕೆಗಳು, ಅಡ್ಡಿಆತಂಕಗಳು ಸಹಜವಾಗಿಯೇ ಅವರನ್ನು ಹಿಮ್ಮೆಟ್ಟಿಸುವ ಪ್ರಯತ್ನ ಮಾಡಿದ್ದವು.

ಮಾಹಿತಿ ಹಕ್ಕು ಕಾಯ್ದೆಯಡಿ ಸಕಲಷ್ಟು ದಾಖಲೆಗಳನ್ನು ಕಲೆಹಾಕಿದ ನಾಗರಿಕ ಸೇವಾ ಟ್ರಸ್ಟ್ ಈ ಸಂಬಂಧ ಕಂದಾಯ ಸಚಿವರು ಮತ್ತು ಉನ್ನತ ಅಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸುತ್ತಲೇ ಬಂದಿತ್ತು. ಅಲ್ಲದೇ ಒಂದೆರಡು ಬಾರಿ ಪತ್ರಿಕಾಗೋಷ್ಠಿಯಲ್ಲಿ ನೇರವಾಗಿ ದಾಖಲೆ ಸಹಿತ ಆರೋಪವನ್ನೂ ಮಾಡಿತ್ತು. ಕೊನೆಗೆ ರಂಜನ್ ರಾವ್ ಯರ್ಡೂರ್‌ರು 25.4.2015ರಂದು ಪುತ್ತೂರು ಸಹಾಯಕ ಆಯುಕ್ತರಿಗೆ ದೂರೊಂದನ್ನು ನೀಡಿ, ತಮ್ಮಲ್ಲಿದ್ದ ದಾಖಲೆಗಳನ್ನೆಲ್ಲ ಸಲ್ಲಿಸಿ ಸೂಕ್ತ ತನಿಖೆ ನಡೆಸುವಂತೆ ಮನವಿ ಮಾಡಿಕೊಂಡಿದ್ದರು. ವಿಚಾರಣೆ ಕೈಗೆತ್ತಿಕೊಂಡ ಸಹಾಯಕ ಆಯುಕ್ತ ಬಸವರಾಜ್‌ರು 18.05.2015 ರಿಂದ 08.06.2015ರವರೆಗೆ ವಿಚಾರಣೆ ನಡೆಸಿ 22.06.2015ರಂದು ತಮ್ಮ ಆದೇಶವನ್ನು ಹೊರಡಿಸಿದ್ದಾರೆ.

ತಮ್ಮ ಆದೇಶದಲ್ಲಿ 20.02.1993ರಂದು ಮೈಸೂರು ಉಪವಿಭಾಗಾಧಿಕಾರಿಗಳು ಎಸ್‌ಡಿಎಂ ಶಿಕ್ಷಣ ಸಂಸ್ಥೆಗೆ ಕೃಷಿ ಜಮೀನು ಖರೀದಿಸಲು ನೀಡಿರುವ ಅನುಮತಿ ಕಾನೂನುಬಾಹಿರವಾದುದ್ದು ಎಂದು ಸ್ಪಷ್ಟವಾಗಿ ಉಲ್ಲೇಖಿಸಿರುವ ಬಸವರಾಜ್‌ರವರು ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 63(7)ರ ಅನ್ವಯ ಸಂಘಸಂಸ್ಥೆಗಳು ತಿದ್ದುಪಡಿ ಕಾಯಿದೆಯು ಜಾರಿಗೆ ಬರುವ ಮುನ್ನ ಹೊಂದಿರುವ ಕೃಷಿ ಜಮೀನಿನಲ್ಲಿ 20 ಯೂನಿಟ್‌ಗಳವರೆಗೆ ಇಟ್ಟುಕೊಳ್ಳಬಹುದೇ ವಿನಾಃ ಕಲಂ 80ರ ಉಲ್ಲೇಖದಂತೆ ಹೊಸದಾಗಿ ಖರೀದಿಸಲು ಅವಕಾಶವಿಲ್ಲವಾದ್ದರಿಂದ ಎಸ್‌ಡಿಎಂ ಖರೀದಿಸಿದ ಕೃಷಿ ಜಮೀನು ಮಾನ್ಯವಲ್ಲ ಎಂದು ಕಡ್ಡಿತುಂಡು ಮಾಡಿದಂತೆ ಷರಾ ಬರೆದಿದ್ದಾರೆ. ಅಲ್ಲದೇ ಅಂತಹ ದೋಷಪೂರಿತ ಆದೇಶದ ಪ್ರತಿಯನ್ನು ಸರಿಯಾಗಿ ಪರಿಶೀಲಿಸದೆ ಕೃಷಿ ಜಮೀನನ್ನು ಸಂಸ್ಥೆಗೆ ನೋಂದಾಯಿಸಿರುವ ಉಪನೋಂದಣಾಧಿಕಾರಿಗಳು ಕೂಡಾ ಕಾನೂನುಗಳನ್ನು ಉಲ್ಲಂಘಿಸಿರೋದನ್ನು ಅವರು ತಮ್ಮ ಆದೇಶದಲ್ಲಿ ದಾಖಲಿಸಿದ್ದಾರೆ. ಶಿಕ್ಷಣ ಸಂಸ್ಥೆಯವರು 1993ರಲ್ಲಿ ಮೈಸೂರು ಉಪವಿಭಾಗಾಧಿಕಾರಿ ನೀಡಿದ್ದ ನಡಾವಳಿಯನ್ನು ಬಳಸಿಕೊಂಡು ಹದಿಮೂರು ವರ್ಷಗಳ ನಂತರ ಕೃಷಿ ಜಮೀನನ್ನು ಖರೀದಿಸಿರೋದು ಭೂಸುಧಾರಣಾ ಕಾಯ್ದೆಯ ಕಲಂ 79 (ಎ), 79 (ಬಿ) ಮತ್ತು 79 (ಸಿ) ಗಳ ಸ್ಪಷ್ಟ ಉಲ್ಲಂಘನೆಯಾಗಿದ್ದು ತತ್‌ಕ್ಷಣದಿಂದಲೇ ಜಾರಿಗೆ ಬರುವಂತೆ ಆ ಸಂಬಂಧದ ಕ್ರಯಪತ್ರಗಳನ್ನು ಅಸಿಂಧುಗೊಳಿಸತಕ್ಕದ್ದು ಮತ್ತು ಆ ಎಲ್ಲಾ ಜಮೀನುಗಳ ಕಂದಾಯ ದಾಖಲೆಗಳಲ್ಲಿ 'ಸರ್ಕಾರ' ಅಂತ ನಮೂದಿಸತಕ್ಕದ್ದು ಎಂಬುದಾಗಿ ಬೆಳ್ತಂಗಡಿ ತಾಲ್ಲೂಕು ತಹಸೀಲ್ದಾರರಿಗೂ ಖಡಕ್ ಆದೇಶ ರವಾನಿಸಿದ್ದಾರೆ. ಬಸವರಾಜ್ ಹೊರತಾಗಿ ಬೇರೆ ಯಾರೇ ಅಧಿಕಾರಿ ಆ ಜಾಗದಲ್ಲಿದ್ದಿದ್ದರೂ ಇಂತಹ ದಿಟ್ಟ ಆದೇಶ ಹೊರಬೀಳುತ್ತಿದ್ದುದರಲ್ಲಿ ಅನುಮಾನವೇ ಇಲ್ಲ ಎನ್ನಬಹುದಿತ್ತು, ಆದರೆ ಮೊದಲಿನಿಂದಲೂ ದಕ್ಷ ಅಧಿಕಾರಿ ಎನಿಸಿಕೊಂಡಿರುವ ಬಸವರಾಜ್ ಯಾವ ಪಟ್ಟುಗಳಿಗೂ ಬಗ್ಗದೆ ಪ್ರಾಮಾಣಿಕ ತನಿಖೆ ನಡೆಸಿ ನ್ಯಾಯಸಮ್ಮತ ಆದೇಶವನ್ನೇ ನೀಡಿದ್ದಾರೆ. ಅವರ ಈ ಆದೇಶ ಕೇವಲ ಭೂಅವ್ಯವಹಾರಕ್ಕೆ ಮಾತ್ರ ಸೀಮಿತವಾದುದಲ್ಲ, ಶ್ರೀಕ್ಷೇತ್ರದ ಕೌಟುಂಬಿಕ ಯಾಜಮಾನಿಕೆ ಮುಗ್ಧ ಜನರಿಗೆ ಭಕ್ತಿಯ ಹೆಸರಲ್ಲಿ ವಂಚಿಸುತ್ತಿರುವ ಹುನ್ನಾರವನ್ನೂ ಬಿಚ್ಚಿಟ್ಟಿದೆ. ಈಗಲಾದರೂ ಜನ ಎಚ್ಚೆತ್ತುಕೊಳ್ಳುತ್ತಾರಾ ನೋಡಬೇಕು. ಹಾಗೇನಾದರು ಜನಜಾಗೃತಿ ಮೂಡಿದ್ದೇ ಆದಲ್ಲಿ ಇಂತಹ ಮತ್ತಷ್ಟು ಹುಳುಕುಗಳು ಹೊರಬೀಳುವುದರಲ್ಲಿ ಸಂಶಯವೇ ಇಲ್ಲ. ಯಾಕೆಂದರೆ ಇದೇ ಎಸ್‌ಡಿಎಂ ಸಂಸ್ಥೆ ಶಿಕ್ಷಣ ಸಂಸ್ಥೆ, ಗ್ರಾಮಾಭಿವೃದ್ಧಿ ಹೆಸರಲ್ಲಿ ರಾಜ್ಯದ ಮೂಲೆಮೂಲೆಯಲ್ಲಿ ಸಾಕಷ್ಟು ಆಸ್ತಿಪಾಸ್ತಿಗಳನ್ನು ಖರೀದಿಸಿಟ್ಟುಕೊಂಡಿದೆ. ಅವುಗಳ ಹಿಂದೆಯು ಇಂತಹ ಹುನ್ನಾರ ನಡೆದಿಲ್ಲ ಎನ್ನುವುದಕ್ಕೆ ಏನು ಗ್ಯಾರಂಟಿ...?

■ ವರದಿಗಾರ

ಉತ್ತರ ಕನ್ನಡ: ಡಾನ್ ದೇಶಪಾಂಡೆ ವಿರುದ್ಧ ಬಂಡೆದ್ದ ಕಾಂಗ್ರೆಸ್ ಶಾಸಕರು!



ಉತ್ತರ ಕನ್ನಡ ಕಾಂಗ್ರೆಸ್‌ನಲ್ಲಿ ಭರ್ಜರಿ ಕಂಪನ ಆಗಿಹೋಗಿದೆ! ಜಿಲ್ಲಾ ರಾಜಕಾರಣದ ಮುದಿ ಡಾನ್ ಆರ್.ವಿ. ದೇಶಪಾಂಡೆ ವಿರುದ್ಧ ಶುರುವಾಗಿರುವ ಸಣ್ಣದೊಂದು ಅಸಮಾಧಾನ ದೊಡ್ಡ ವಿಪ್ಲವವಾಗುವ ಸಕಲ ಸೂಚನೆ ಹೊರಗೆಡವಿದೆ! ಸರಿಸುಮಾರು ಮೂರು ವಾರಗಳ ಹಿಂದೆ ಜರುಗಿದ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ಕೆಡಿಸಿಸಿ) ನಿರ್ದೇಶಕ ಮಂಡಳಿ ಚುನಾವಣೆ ಸಂದರ್ಭದಲ್ಲಿ ದೇಶಪಾಂಡೆಗೆ ತಿರುಗಿ ಬಿದ್ದಿದ್ದ ಸ್ವಪಕ್ಷದ ಶಾಸಕತ್ರಯರು ಮೊನ್ನೆಯ ಅಪೆಕ್ಸ್ ಬ್ಯಾಂಕ್ ಪ್ರತಿನಿಧಿ ಆಯ್ಕೆ ಪ್ರಕ್ರಿಯೆಯಲ್ಲಿ ಬಂಡಾಯದ ಬಾವುಟ ಮುಗಿಲೆತ್ತರಕ್ಕೆ ಹಾರಿಸಿಬಿಟ್ಟಿದ್ದಾರೆ! ಅಷ್ಟೇ ಅಲ್ಲ, ತಾನೊಬ್ಬ ಪ್ರಶ್ನಾತೀತ ನಾಯಕಾಗ್ರೇಸನೆಂಬ ಠೇಂಕಾರದಲ್ಲಿ ಮೆರೆದಾಡುತ್ತಿರುವ ಆರ್.ವಿ.ಗೆ ಬರೋಬ್ಬರಿ ಒಳಗುದ್ದು ಹಾಕಿ ಮಕಾಡೆ ಮಲಗಿಸಿದ್ದಾರೆ.

ಅನಾಹುತಕಾರಿ ಏದರು ಕೊಟ್ಟುಬಿಟ್ಟಿತು!


ಜತೆಗೆ ಜಿಲ್ಲೆಯ ಯಾವ ಸಮಸ್ಯೆಗೂ ಸ್ಪಂದಿಸದೆ ಮಗನ ಸೋಲಿಸಿದ ಸೇಡು ತೀರಿಸಿಕೊಳ್ಳುವ ಹಠದಿಂದ ಹಾರಾಡತೊಡಗಿದರು. ತನಗಾಗದ ಶಾಸಕರ ಬಾಲ ಕಟ್ ಮಾಡಲು ಅಧಿಕಾರಿಗಳನ್ನು ಛೂಬಿಡುತ್ತ ದೇಶಪಾಂಡೆ ಇಡೀ ಜಿಲ್ಲೆಯಲ್ಲಿ ಒಂಥರಾ ಅರಾಜಕತೆ ಸೃಷ್ಟಿಸಿದರು. ಇದು ಕಾಂಗ್ರೆಸ್‌ನಲ್ಲಿ ಹಾಹಾಕಾರಕ್ಕೆ ಕಾರಣವಾಯ್ತು. ಕಾಂಗ್ರೆಸ್‌ನ ಎಲ್ಲ ಶಾಸಕರು ದೇಶಪಾಂಡೆ ವಿರುದ್ಧ ಕತ್ತಿ ಮಸೆಯಲಾರಂಭಿಸಿದರು. ದೇಶಪಾಂಡೆ ಮೇಲೆ ದಾಳಿಗಿಳಿಯಲು ಸಮಯಕ್ಕಾಗಿ ಹೊಂಚುಹಾಕಿ ಕುಂತರು. ಅಂಥದೊಂದು ಮುಹೂರ್ತ ಸಿಕ್ಕಿದ್ದೇ ಕೆಡಿಸಿಸಿ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆ ವೇಳೆಯಲ್ಲಿ. ಬಾಸ್‌ನ ಮಣಿಸಲು ಎಮ್ಮೆಲ್ಸಿ ಘೋಟನೇಕರ್ ಮತ್ತು ಶಾಸಕರಾದ ಶಿವರಾಮ ಹೆಬ್ಬಾರ್, ಮಂಕಾಳ ವೈದ್ಯ ಸಿಂಡಿಕೇಟ್ ಕಟ್ಟಿಕೊಂಡರು.


ಈ ದೇಶಪಾಂಡೆ ವಿರೋಧಿ ಪಡೆಗೆ ನಾಯಕನಾದವನು ಶಿವರಾಮ ಹೆಬ್ಬಾರ್. ಒಂದು ಕಾಲದಲ್ಲಿ ಲಾರಿ ಡ್ರೈವರ್ ಆಗಿದ್ದ ಈ ಹೆಬ್ಬಾರ್ ಬಿಜೆಪಿಯ ಜಿಲ್ಲಾಧ್ಯಕ್ಷನಾಗಿದ್ದರೂ ಆ ಪಾರ್ಟಿಯ ಕಮ್ಯುನಲ್ ರೌಡಿ ಎಂಪಿ ಅನಂತ್ಕುಮಾರ್‌ನಿಂದ ಕೆನ್ನೆಗೆ ಬಾರಿಸಿಕೊಂಡು ಹೊರಬಿದ್ದವನು ಬಂದು ನೆಲೆ ನಿಂತಿದ್ದು ಮ್ಯಾಗಿಯ ಮಡಿಲಲ್ಲಿ. ಮ್ಯಾಗಿ ಈತನಿಗೆ ಎರಡು ಬಾರಿ ಯಲ್ಲಾಪುರ ಅಸೆಂಬ್ಲಿ ಟಿಕೆಟ್ ಕೊಡಿಸಿದರು. ಮೊದಲ ಪ್ರಯತ್ನದಲ್ಲಿ ಸೋತ ಹೆಬ್ಬಾರ್ ಈಗ ಕಾಂಗ್ರೆಸ್‌ನ ಪ್ರಭಾವಿ ಶಾಸಕರಲ್ಲಿ ಒಬ್ಬ. ಸಿಎಂ ಸಿದ್ದುರ ಆಪ್ತ ವಲಯದಲ್ಲಿ ಅದ್ಹೇಗೋ


ಬಂಡಾಯಗಾರರು ಮಾಡಿದ ತಂತ್ರಗಾರಿಕೆ ಮತ್ತು ಖತರ್‌ನಾಕ್ ಆಗಿತ್ತು. ಎಮ್ಮೆಲ್ಸಿಗಿರಿಯಿಂದ ಮಾಜಿಯಾಗುವ ಘೋಟನೇಕರ್‌ಗೆ ಜಿಲ್ಲಾಮಟ್ಟದ ಹುದ್ದೆ (ಕೆಡಿಸಿ ಬ್ಯಾಂಕ್ ಅಧ್ಯಕ್ಷತೆ)ಗೆ ತಂದು ದೇಶಪಾಂಡೆ ಮಣಿಸುವ ಯೋಚನೆ ಮಾಡಿದ್ದ ಹೆಬ್ಬಾರ್ ತಾನೇ ಅಪೆಕ್ಸ್ ಬ್ಯಾಂಕ್ ಪ್ರತಿನಿಧಿಯಾಗುವ ನಿರ್ಧಾರಕ್ಕೆ ಬಂದಿದ್ದರು.


ಕೆಡಿಸಿಸಿ ಬ್ಯಾಂಕ್ ಅಧ್ಯಕ್ಷ ಆಯ್ಕೆಗೆ ಘೋಟನೇಕರ್ ವಿರುದ್ಧ ನಿಂತಿದ್ದ ದೇಶಪಾಂಡೆಯ ಡಾರ್ಕ್‌ಹಾರ್ಸ್ ನಾಲಾಯಕ್ ಶಾಂತಾರಾಮ ಹೆಗಡೆ ಕೊನೇ ಗಳಿಗೆಯಲ್ಲಿ ಕಂಗಾಲು ಬಿದ್ದು ಆಘಾತದಿಂದ ಓಡಿಹೋದರು; ಉಪಾಧ್ಯಕ್ಷ ಸ್ಥಾನಕ್ಕೆ ನಿಂತಿದ್ದ ದೇಶಪಾಂಡೆಯ "ಸುಂದರ ರಾವಣ" ಶಿಷ್ಯ ಹೊನ್ನಾವರದ ಶಿವಾನಂದ ಹೆಗಡೆ ಎದುರಾಳಿ ಗ್ಯಾಂಗಿನ ಭಾಸ್ಕರ ಹೆಗಡೆ ಎದುರು ಹೀನಾಯವಾಗಿ ಸೋತು ಹೋದ! ಹಿತಶತ್ರು ದೇಶಪಾಂಡೆಗೆ ಕೆಡಿಸಿಸಿ ಬ್ಯಾಂಕ್ ಅಧ್ಯಕ್ಷ-ಉಪಾಧ್ಯಕ್ಷ ಆಯ್ಕೆಯಲ್ಲಿ ಬಲವಾದ ಒಳಗುದ್ದು ಹಾಕಿದ ಹೆಬ್ಬಾರ್-ಘೋಟನೇಕರ್ ಅಪೆಕ್ಸ್ ಬ್ಯಾಂಕ್‌ಗೆ ಕೆಡಿಸಿಸಿಯಿಂದ ಪ್ರತಿನಿಧಿ ಕಳಿಸುವ ಕುರುಸಿನಲ್ಲೂ ಮತ್ತೊಂದು ಹಳಿಯಾಳ್ ಹೊಡೆತ ಕೊಟ್ಟರು!


ಈಗ ಘೋಟನೇಕರ್ ಕೆಡಿಸಿಸಿ ಕಿರೀಟ ಕಟ್ಟಿಕೊಂಡಿದ್ದರೆ, ಹೆಬ್ಬಾರ್ ಅಪೆಕ್ಸ್ ಬ್ಯಾಂಕ್‌ಗೆ ಕೆಡಿಸಿಸಿ ಪ್ರತಿನಿಧಿಯಾಗಿ ಗೆದ್ದಿದ್ದಾರೆ. ಹೆಬ್ಬಾರ್ ಸೋಲಿಸಿದ್ದು ದೇಶಪಾಂಡೆಯ ಖಾಸಾ ಆದ್ಮಿ ಷಣ್ಮುಖಗೌಡರನ್ನು. ಎರಡು ಬಾರಿ ದೇಶಪಾಂಡೆ ಕೃಪೆಯಿಂದ ಅಪೆಕ್ಸ್ ಬ್ಯಾಂಕ್ ಪ್ರತಿನಿಧಿಯಾದ ಗೌಡ ಸಹಕಾರಿ ರಂಗಕ್ಕೇ ಕಳಂಕ. ಈತನಿಂದ ಜಿಲ್ಲೆಯ ಸಹಕಾರಿ ಕ್ಷೇತ್ರಕ್ಕೆ ಬಿಲ್ಲಿ











ಶಾಸಕರಾದಿಯಾಗಿ ತಾಲ್ಲೂಕ್ ಮಟ್ಟದ ಸಾಮಾನ್ಯ ಕಾರ್ಯಕರ್ತನವರೆಗಿನ ಅಷ್ಟೂ ಕಾಂಗ್ರೆಸಿಗರನ್ನು ಗುಲಾಮರಂತೆ ನಡೆಸಿಕೊಳ್ಳುವ ದೇಶಪಾಂಡೆಗೆ ಕಳೆದ ಲೋಕಸಭೆ ಚುನಾವಣೆ ಹೊತ್ತಲ್ಲೇ ಎಚ್ಚರಿಕೆ ಸಂದೇಶ ರವಾನೆಯಾಗಿತ್ತು. ಕಾಂಗ್ರೆಸ್‌ನ ಲೋಕಸಭಾ ಅಭ್ಯರ್ಥಿಯಾಗಿದ್ದ ದೇಶಪಾಂಡೆ ಸಾಹೇಬರ ಕುಲಕಂಠೀರವ ಪ್ರಶಾಂತ ದೇಶಪಾಂಡೆ ಸೋಲಿಗೆ ಅಂದು ಕಾಂಗ್ರೆಸ್‌ನ ಬಹುತೇಕರು ರಹಸ್ಯ ಕಾರ್ಯಾಚರಣೆ ನಡೆಸಿದ್ದರು. ದೇಶಪಾಂಡೆ ಸೊಕ್ಕು ಮುರಿಯುವ ತನ್ಮೂಲಕ ಜಿಲ್ಲಾ ಕಾಂಗ್ರೆಸ್‌ನಲ್ಲಿ ಆಂತರಿಕ ಪ್ರಜಾಪ್ರಭುತ್ವ ಸ್ಥಾಪಿಸುವ ಅಸಹಾಯಕ ಕಾಂಗ್ರೆಸಿಗರ ಪ್ರಯತ್ನ ಇದಾಗಿತ್ತು. ಮೋದಿ ಅಲೆಗಿಂತ ಜೋರಾಗಿ ಬೀಸಿದ ದೇಶಪಾಂಡೆ ವಿರೋಧಿ ತೂಫಾನ್‌ನಲ್ಲಿ ಪ್ರಶಾಂತ ತರಗೆಲೆಯಂತೆ ತತ್ತರಿಸಿಹೋದ. ವಿಪರ್ಯಾಸವೆಂದರೆ, ಮಗ ಹೀನಾಯವಾಗಿ ಸೋತರೂ ದೇಶಪಾಂಡೆಗೆ ಬುದ್ಧಿಯೇ ಬರಲಿಲ್ಲ.

ದೇಶಪಾಂಡೆಯ ದುರಹಂಕಾರದ ಸರ್ವಾಧಿಕಾರ ಇನ್ನಷ್ಟು ಬಿರುಸಾಯ್ತು. ಕಾಂಗ್ರೆಸ್‌ನ ಶಾಸಕರಾದ ಯಲ್ಲಾಪುರದ ಶಿವರಾಮ ಹೆಬ್ಬಾರ್, ಕುಮಟಾದ ಶಾರದಾ ಶೆಟ್ಟಿ ಹಾಗು ಕಾಂಗ್ರೆಸ್ ಸಹ-ಶಾಸಕರಾದ ಕಾರವಾರದ ಸತೀಶ್ ಸೈಲ್‌ರನ್ನು ಅಡಿಗಡಿಗೆ ತೊತ್ತುಳಿಯತೊಡಗಿದರು! ಮಗನ ಗೆಲುವಿಗೆ ಶ್ರಮಿಸಿದ್ದ ಭಟ್ಕಳದ ಮಂಕಾಳ ವೈದ್ಯನನ್ನು ಮೊದಮೊದಲು ಮುದ್ದಾಡಿದ ದೇಶಪಾಂಡೆ ಕಡೆಕಡೆಗೆ ಅದ್ಯಾಕೋ 'ಹಚಾ' ಎಂದು ಕಡೆಗಣಿಸಹತ್ತಿದರು. ಸ್ವಕ್ಷೇತ್ರ ಹಳಿಯಾಳದ ಬಲಾಢ್ಯ ಮರಾಠಾ ಜನಾಂಗದ ಎಮ್ಮೆಲ್ಸಿ ಎಸ್.ಎಲ್. ಘೋಟನೇಕರ್‌ಗೂ ದೇಶಪಾಂಡೆ ಹಣಿಯಲು ಹವಣಿಸಿದರು. ಮ್ಯಾಗಿಯ ಮುಳ್ಳಾಟದಿಂದ ಆಳಿಯ ಗ್ಯಾಂಗ್ ಕಸುವು ಕಳಕೊಂಡಿದ್ದು ದೇಶಪಾಂಡೆಯ ಏಕಚಕ್ರಾಧಿಪತ್ಯಕ್ಕೆ

ನುಸುಳಿಕೊಂಡಿರುವ ಈ ಚಾಲಾಕಿ ಪಟು ಆ ತಾಕತ್ತಿನಲ್ಲೇ ಡಾನ್ ದೇಶಪಾಂಡೆಗೆ ಸೆಡ್ಡು ಹೊಡೆದು ನಿಂತಿದ್ದಾರೆ.

ದೇಶಪಾಂಡೆಯ ದಾದಾಗಿರಿಯಿಂದ ಒಳಗೊಳಗೇ ಕೆರಳಿ ಕೆಂಡವಾಗಿದ್ದ ಎಮ್ಮೆಲ್ಸಿ ಘೋಟನೇಕರ್‌ನನ್ನು ಸೆಳೆದುಕೊಂಡ ಹೆಬ್ಬಾರ್‌ಗೆ ಭಟ್ಕಳದ ಮಂಕಾಳು ವೈದ್ಯನೆಂಬ ಭೂಗತ ಬಿಸ್ನೆಸ್ ಭೂಪನನ್ನು ಗ್ಯಾಂಗ್‌ಗೆ ಸೇರಿಸಿಕೊಳ್ಳಲು ಕಷ್ಟವೇನಾಗಲಿಲ್ಲ. ಕುಮಟಾದ ಶಾಸಕಿ ಶಾರದಾ ಶೆಟ್ಟಿ ಮತ್ತು ಕಾರವಾರದ ಸೈಲ್‌ಗೂ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ದೇಶಪಾಂಡೆ ವಿರುದ್ಧ ಹೆಜ್ಜೆ ಇಡಲೇಬೇಕಾಗಿತ್ತು. ಹೀಗಾಗಿ ಶಿವರಾಮ ಹೆಬ್ಬಾರ್‌ನ ಬಂಡಾಯ ಬಳಗ ಬಲವಾಯ್ತು! ದೇಶಪಾಂಡೆಯ ಗರಡಿಯಲ್ಲಿ ಪಳಗಿದ್ದ ಘೋಟನೇಕರ್‌ಗೆ ಗುರುವಿನ ಪಟ್ಟುಗಳೆಲ್ಲ ಗೊತ್ತಿದ್ದುದು ಹೆಬ್ಬಾರ್ ದಂಗೆಗೆ ಸಹಕಾರಿಯಾಯ್ತು. ತನಗೆ ಎರಡನೇ ಅವಧಿಗೆ ಎಮ್ಮೆಲ್ಸಿ ಛಾನ್ಸ್ ದೇಶಪಾಂಡೆ ಕೊಡಲಾರನೆಂಬ ಸಿಟ್ಟಲ್ಲಿ ಘೋಟನೇಕರ್ ಗೆಳೆಯ ಹೆಬ್ಬಾರ್ ಬೆನ್ನಿಗೆ ನಿಂತು ಬಂಡಾಯದ ಬೆಂಕಿಗೆ ತುಪ್ಪ ಸುರಿದದ್ದು ಕೆಡಿಸಿಸಿ ಬ್ಯಾಂಕ್ ಇಲೆಕ್ಷನ್ ಸಂದರ್ಭದಲ್ಲಿ ದೊಡ್ಡ ಬೆಂಕಿಯಾಯ್ತು!


ಘೋಟನೇಕರ್‌ಗೆ ಮತ್ತೆ ಎಮ್ಮೆಲ್ಸಿ ಮಾಡುವುದಿರಲಿ, ಕೆಡಿಸಿಸಿ ಬ್ಯಾಂಕಿನ ಗದ್ದುಗೆಯೂ ಸಿಗದಂತೆ ಮಾಡುವ ಹಠಕ್ಕೆ ದೇಶಪಾಂಡೆ ಬಿದ್ದಿದ್ದರು. ಕೆಡಿಸಿಸಿ ಬ್ಯಾಂಕಿಗೆ ದೇಶಪಾಂಡೆಯ ಆಯ್ಕೆ ಹೇತ್ಲಾಂಡಿ ಶಾಂತರಾಮ ಹೆಗಡೆ ಅಥವಾ ತನ್ನ ಪರಮ ಪಾತಕಿ ಶಿಷ್ಯ ಷಣ್ಮುಖ ಗೌಡನಾಗಿತ್ತು. ಇದರಲ್ಲಿ ಒಬ್ಬನಿಗೆ ಕೆಡಿಸಿಸಿ ಕಾರು ಕೊಡಿಸಿದರೆ, ಮತ್ತೊಬ್ಬನಿಗೆ ಅಪೆಕ್ಸ್ ಬ್ಯಾಂಕಿನ ಬೆಂಗಳೂರಿನ ಬಂಗ್ಲೆ ದಯಪಾಲಿಸುವ ಸ್ಕೆಚ್ ದೇಶಪಾಂಡೆ ಹಾಕಿದ್ದರು. ಇದಕ್ಕೆ ಸಮಾನಾಂತರವಾಗಿ


ಪ್ರಯೋಜನ ಆಗಿಲ್ಲ. ಬೆಂಗಳೂರಿನ ಅಪೆಕ್ಸ್ ಬ್ಯಾಂಕ್ ಅತಿಥಿಗೃಹದಲ್ಲಿ ಕುಳಿತ ಮೋಜು-ಜೂಜು ಮಾಡಿದ್ದೇ ಈತನ ಸಾಧನೆ. ಈತನನ್ನು ಸೋಲಿಸಿರುವ ಹೆಬ್ಬಾರ್ ಗುರಿ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷತೆ.


ಒಂದಂತೂ ಖರೆ. ದೇಶಪಾಂಡೆ ವಿರುದ್ಧದ ದಂಗೆ ಜಿಲ್ಲಾ ಕಾಂಗ್ರೆಸ್‌ನಲ್ಲಿ ಜೋರಾಗುತ್ತಿದೆ. ಘೋಟನೇಕರ್ ಆತನಿಗೀಗ ಬಗಲಲ್ಲಿನ ವೈರಿಯಾಗಿದ್ದಾರೆ. ಆತನ ಎಮ್ಮೆಲ್ಸಿ ಮಾಡಿದ್ದರಿಂದಲೇ ಹಳಿಯಾಳದ ಬಹುಸಂಖ್ಯಾತ ಮರಾಠರ ಮತ ಪಡೆದು ಪುನರ್ಜನ್ಮ ಕಂಡಿದ್ದ ದೇಶಪಾಂಡೆಗೆ ಮುಂದಿನ ಅಸೆಂಬ್ಲಿ ಇಲೆಕ್ಷನ್ ಅಷ್ಟು ಸುಲಭವಾಗದು. ಹಾಗೆಯೇ ಜಿಲ್ಲೆಯಲ್ಲಿ ಆತನ ಸಾರ್ವಭೌಮತ್ವಕ್ಕೆ ಧಕ್ಕೆ ಬರುವ ರಾಜಕೀಯ ಸಂಕೇತಗಳು ಈಗಲೇ ಗೋಚರಿಸಲಾರಂಭಿಸಿದೆ. ಶಾಸಕ ಹೆಬ್ಬಾರ್ ಎದುರಾಳಿ ದೇಶಪಾಂಡೆಗೆ ಮಣಿಸಲು ರಾಜ್ಯಸಭಾ ಸದಸ್ಯ ಬಿ.ಕೆ. ಹರಿಪ್ರಸಾದ್‌ರನ್ನು ಜಿಲ್ಲೆಗೆ ತರಲು ಸ್ಕೆಚ್ ಹಾಕಿದ್ದಾರೆ. ಇದಕ್ಕೆ ಜಿಲ್ಲೆಯ ಬಹುಸಂಖ್ಯಾತ ದೀವರ (ಈಡಿಗರ) ಬೆಂಬಲವಂತೂ ಇದ್ದೇ ಇದೆ. ದೇಶಪಾಂಡೆ ಬಗ್ಗುಬಡಿಯುವ ತಾಕತ್ತು ಹರಿಗಿದೆ ಎಂಬ ನಂಬಿಕೆ ಬಂಡಾಯಗಾರರದು.

ಕಳೆದ ಲೋಕಸಭೆ ಚುನಾವಣೆ ಹೊತ್ತಲ್ಲೇ ಹರಿಯನ್ನು ಕಾಂಗ್ರೆಸ್ ಕ್ಯಾಂಡಿಡೇಟ್ ಮಾಡುವ ಪ್ರಯತ್ನ ಒಂದು ನಡೆದಿತ್ತು. ಆದರೆ ಆಗ ಕಾಲ ಪಕ್ವವಾಗಿಲ್ಲವೆಂದು ಹರಿಯೇ ಹಿಂದೇಟು ಹಾಕಿದ್ದರು. ಈಗ ಮುಹೂರ್ತ ಕೂಡಿ ಬಂದಂತಿದೆ. ಜಿಲ್ಲೆಯ ಕಾಂಗ್ರೆಸ್ ರಾಜಕಾರಣದಲ್ಲಿ ಆಗುತ್ತಿರುವ ಕುತೂಹಲಕಾರಿ ಬೆಳವಣಿಗೆಗೆ ದೇಶಪಾಂಡೆ ಹಣಾಹಣೀ ಕೂಗಿಗೆ ಬಲಬರುತ್ತಿರುವುದು ಹರಿ ಎಂಟ್ರಿಗೆ ವೇದಿಕೆ ಸಜ್ಜಾಗುತ್ತಿರುವ ಸೂಚನೆಯಂತಿದೆ!

■ ನಮೂಹ


ನಿಂಗೇಗೌಡ


ರಾಜೇಂದ್ರ


ಶಿವಲಿಂಗೇಗೌಡ

ಮಂಡ್ಯ

ಅನ್ನದಾತನ ಆತ್ಮಹತ್ಯೆಯೂ ಮೈಷುಗರ್ಸ್ ಅವಸಾನವೂ

ಮಂಡ್ಯದ ತುಂಬೆಲ್ಲಾ ಒಂಥರಾ ಸೂತಕದ ಛಾಯೆ ಬಿದಿದಂತೆ ಭಾಸವಾಗುತ್ತಿದೆ. ಕಾರಣ ಇಷ್ಟೆ, ಯಾವ ರೈತ ಈ ದೇಶದ ಬೆನ್ನೆಲುಬು ಅಂತ ಕರೆಸಿಕೊಳ್ಳುತ್ತಾನೊ, ಅದೇ ರೈತ ಇವತ್ತು ಮಂಡ್ಯದ ಮಣ್ಣಿನಲ್ಲಿ ಸಾಲುಸಾಲಾಗಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ. ಇದು ಕೇವಲ ಮಂಡ್ಯದ ರೈತನೊಬ್ಬನ ಸಮಸ್ಯೆಯಲ್ಲ, ಇಡೀ ದೇಶದ ನೇಗಿಲಯೋಗಿ ಇವತ್ತು ದಾರಿಕಾಣದೆ ಅನಾಹುತದ ಹಾದಿ ತುಳಿಯುವಂತ ಸಂದರ್ಭ ಸೃಷ್ಟಿಯಾಗಿದೆ. ಕಬ್ಬನ್ನೇ ತಮ್ಮ ಪ್ರಮುಖ ವಾಣಿಜ್ಯ ಬೆಳೆಯನ್ನಾಗಿಸಿಕೊಂಡಿರುವ ಮಂಡ್ಯದ ಮಟ್ಟಿಗೆ ಅನ್ನದಾತನ ಸರಣಿ ಆತ್ಮಹತ್ಯೆ ದೊಡ್ಡ ಆಘಾತದಂತೆ ಕಾಡುತ್ತಿದೆ. ಕೇವಲ ಹದಿನೈದು ದಿನಗಳ ಅಂತರದಲ್ಲಿ ನಾಲ್ವರು ರೈತರು ಆತ್ಮಹತ್ಯೆ ಮಾಡಿಕೊಂಡಿರುವುದೇ ಇದಕ್ಕೆ ಸಾಕ್ಷಿ.

ಅನ್ನದಾತನ ಸರಣಿ ಆತ್ಮಹತ್ಯೆ


ಮಂಡ್ಯ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಜೂನ್ ತಿಂಗಳಿನಿಂದಲೇ ಸಕ್ಕರೆ ಕಾರ್ಖಾನೆಗಳ ಕೆಲಸ ಪ್ರಾರಂಭವಾಗುತ್ತವೆ. ಆದರೆ ಈ ಬಾರಿ ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯುವ ಕಾರ್ಯ ಪ್ರಾರಂಭಿಸಿಯೇ ಇಲ್ಲ, ಅದಕ್ಕೂ ಮಿಗಿಲಾಗಿ ಕಳೆದ ವರ್ಷದ ಕಬ್ಬು ಬಾಕಿಯನ್ನು ಕೊಡದೆ ರೈತರನ್ನು ಸತಾಯಿಸಲು ನಿಂತಿವೆ. ಸಾಲಸೋಲ ಮಾಡಿ ಭೂತಾಯಿಯ ಒಡಲು ತುಂಬಿಸಿರುವ ರೈತ ಅತ್ತ ಬಾಕಿಯೂ ಬಾರದೆ, ಇತ್ತ ಕಾರ್ಖಾನೆಗಳಿಲ್ಲದೆ ಬೆಳೆಯನ್ನು ಕಟಾವೂ ಮಾಡಲಾಗದೆ ಸಂದಿಗ್ಧ ಪರಿಸ್ಥಿತಿಗೆ ಸಿಲುಕಿದ್ದಾನೆ.

ಅನ್ನದಾತನ ಮೊದಲ ಅನಾಹುತ ಮಂಡ್ಯಕ್ಕೆ ಬಡಿದದ್ದು ಶ್ರೀರಂಗಪಟ್ಟಣ ತಾಲ್ಲೂಕಿನ ಚಿನ್ನೇನಹಳ್ಳಿಯ ರೈತ 58 ವರ್ಷ ವಯಸ್ಸಿನ ಸಿ. ರಾಜೇಂದ್ರ ಎಂಬಾತನ ಆತ್ಮಹತ್ಯೆಯ ಮೂಲಕ. ರೈತ ಸಂಘದ ಸಕ್ರಿಯ ಕಾರ್ಯಕರ್ತರಾಗಿದ್ದ ರಾಜೇಂದ್ರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಬ್ಯಾಂಕ್, ಖಾಸಗಿ ಲೇವಾದೇವಿಯಲ್ಲಿ ಕೈಸಾಲ ಸೇರಿದಂತೆ ಸುಮಾರು 12 ಲಕ್ಷದಷ್ಟು ಸಾಲ ತೆಗೆದು ಇದ್ದ 6 ಎಕರೆ ಜಮೀನಿನಲ್ಲಿ ಭತ್ತ, ಕಬ್ಬು ಹಾಕಿಸಿದ್ದರು. ಒಂದೆಡೆ ಸಾಲಗಾರರ ಕಾಟ, ಮತ್ತೊಂದೆಡೆ ಬ್ಯಾಂಕಿನ ನೋಟಿಸ್, ಇನ್ನೊಂದೆಡೆ ಭರವಸೆ ಮೂಡಿಸದ ಪೈರು ಇವುಗಳನ್ನೆಲ್ಲಾ ಕಂಡ ರಾಜೇಂದ್ರ ಜೂನ್ 19ರಂದು ತನ್ನ ಮನೆಯಲ್ಲಿಯೇ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದರು.

ಇದಾಗಿ ಒಂದು ವಾರ ಕಳೆಯುವ ಮುನ್ನವೇ ಜೂನ್ 24ರಂದು ಪಾಂಡವಪುರ ತಾಲ್ಲೂಕಿನ ಗಾಣದಹೊಸೂರಿನ 60 ವರ್ಷ ವಯಸ್ಸಿನ ಅಂಗವಿಕಲ ರೈತ ನಿಂಗೇಗೌಡರ ದಾರುಣ ಆತ್ಮಾಹುತಿ ಅನ್ನದಾತನ ಸಂಕಷ್ಟ ಸ್ಥಿತಿಯನ್ನು ಜನತೆಯ ಮುಂದೆ ಬಿಚ್ಚಿಟ್ಟಿತು. ಇದ್ದ 18 ಗುಂಟೆ ಜಮೀನಿನಲ್ಲಿ ಕಬ್ಬು ಬೆಳೆದಿದ್ದ ನಿಂಗೇಗೌಡ ಕಬ್ಬಿನ ಬೆಳೆಗಾಗಿ 2 ಲಕ್ಷ ರೂ. ಸಾಲ ಪಡೆದಿದ್ದರು. ಪತ್ನಿ ಬೋರಮ್ಮ, ಅಂಗವಿಕಲ ಮಗ ಈರೇಗೌಡ ಹಾಗೂ ಸೊಸೆ ಲಕ್ಷ್ಮಿ ಇರುವ ಸಣ್ಣ ಮನೆಯಲ್ಲೇ ಹಾಗೂಹೀಗೂ ಜೀವನ ನಡೆಸಿಕೊಂಡಿದ್ದರು. ಈ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗಳು ಕಬ್ಬನ್ನು ಸರಿಯಾಗಿ ಅರೆಯದೆ ಅವಧಿಗೂ ಮುನ್ನವೇ ಮುಚ್ಚಿದ್ದರಿಂದ ಕಂಗಾಲಾಗಿದ್ದ ನಿಂಗೇಗೌಡ ಕಬ್ಬನ್ನು ಆಲೆಮನೆಗೆ ಹೊಡೆದಿದ್ದರು. ಅಲ್ಲಿ ಆತನಿಗೆ ಸಿಕ್ಕಿದ್ದು ಪ್ರತಿ ಟನ್ನಿಗೆ 850ರಿಂದ 900 ರೂ. ಮಾತ್ರ. ಅದು ಸಾಲದ ಯಾವ ಮೂಲೆಗೂ ಸಾಕಾಗುತ್ತಿರಲಿಲ್ಲ, ಕಟಾವಿಗೆ ಬಂದಿದ್ದ ಉಳಿದ ಕಬ್ಬನ್ನೂ ದಲ್ಲಾಳಿಗಳು ಬಾಯಿಗೆ ಬಂದಂತೆ 700, 750 ರೂಪಾಯಿಗೆ ಕೇಳಿ ಆತನ ಆತ್ಮಸ್ಥೈರ್ಯವನ್ನು ಹಾಳುಗೆಡವಿದ್ದರು. ಆತನ ಹತಾಶೆ ಅದ್ಯಾವ ಮಟ್ಟಕ್ಕೆ ಮುಟ್ಟಿತ್ತೆಂದರೆ ತನ್ನ ಜಮೀನಿನ ಕಬ್ಬಿಗೆ ಬೆಂಕಿ ಹಚ್ಚಿ ಅದರೊಳಗೆ ತಾನೂ ಬಿದ್ದು ಸಜೀವ ದಹನವಾದರು. ಇದೀಗ ಅವರ ಇಡೀ ಕುಟುಂಬ ದುಡಿಯುವ ಜೀವವನ್ನು ಕಳೆದುಕೊಂಡು ದಿಗ್ಭ್ರಾಂತವಾಗಿ ಕೂತಿದೆ.

ಸಾವಿನ ಮನೆಯಲ್ಲಿ ರಾಜಕಾರಣ!

ಅಧಿಕಾರವಿಲ್ಲದೆ ರಾಜಕೀಯ ನಿರುದ್ಯೋಗಿಗಳಂತಾಗಿರುವ ವಿರೋಧ ಪಕ್ಷಗಳ ಮುಖಂಡರು ರೈತರು ಆತ್ಮಹತ್ಯೆ ಮಾಡಿಕೊಂಡ ಸುದ್ದಿ ತಿಳಿಯುತ್ತಿದ್ದಂತೆಯೇ ಸೂತಕದ ಮನೆಗೆ ದೌಡಾಯಿಸಿ ತಮ್ಮ ಪೊಲಿಟಿಕಲ್ ಚಾಳಿ ಮುಂದುವರೆಸಿದ್ದಾರೆ. ಜೂನ್ 26ರಂದು ಶಾಸಕ ಎನ್.ಚಲುವರಾಯಸ್ವಾಮಿ ಜೊತೆಗೂಡಿ ಗಾಣದಹೊಸೂರಿಗೆ ದೌಡಾಯಿಸಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ನಿಂಗೇಗೌಡರ ಕುಟುಂಬದವರಿಗೆ ಸಾಂತ್ವನ ಹೇಳಿ 1 ಲಕ್ಷ ರೂ ಪರಿಹಾರ ನೀಡಿಹೋಗಿದ್ದಾರೆ. ಅದರ ಬೆನ್ನಿಗೇ ಶಾಸಕ ಡಿ.ಸಿ.ತಮ್ಮಣ್ಣ 50 ಸಾವಿರ, ಕೆ.ಎಸ್.ಪುಟ್ಟಣ್ಣಯ್ಯ 25 ಸಾವಿರ, ಜಿಲ್ಲಾಡಳಿತ 1 ಲಕ್ಷ, ಯಡಿಯೂರಪ್ಪ 25 ಸಾವಿರ ನೆರವು ನೀಡಿ ಪೋಜು ಕೊಟ್ಟು ಮರಳಿ ತಮ್ಮ ರಾಜಕೀಯ ಗೂಡು ಸೇರಿಕೊಂಡಿದ್ದಾರೆ. ವಿರೋಧ ಪಕ್ಷಗಳೇ ಈ ಪರಿ ಅಬ್ಬರಿಸಿದ ಮೇಲೆ ಆಡಳಿತ ಪಕ್ಷ ಸುಮ್ಮನಿದ್ದರೆ ಚೆನ್ನಾಗಿರುತ್ತಾ, ಅದಕ್ಕೇ ಜಿಲ್ಲಾ ಉಸ್ತುವಾರಿ ಮಂತ್ರಿ ಅಂಬರೀಷ್ ಕೂಡಾ ಕಷ್ಟಪಟ್ಟು ನಿಂಗೇಗೌಡರ ಮನೆಗೆ ಹೋಗಿ ಮನೆ ಕೊಡಿಸುವ 'ಭರವಸೆ' ಕೊಟ್ಟು ಬಂದಿದ್ದಾರೆ. ಅದೇ ನಿಂಗೇಗೌಡ ಬದುಕಿದ್ದು, ಇವರೆಲ್ಲರ ಮನೆಗೆ ಎಡತಾಕಿ 'ಸ್ವಾಮಿ, ಸಾಲ ಮಾಡಿ ಸಂಕಷ್ಟದಲ್ಲಿದ್ದೇನೆ. ಬ್ಯಾಂಕ್‌ನಿಂದ ನೋಟಿಸ್ ಬಂದೈತೆ. ಒಂದಿಷ್ಟು ಹಣ ಕೊಡ್ರಿ. ಸಾಲ ತೀರಿಸ್ಕಂತೀನಿ' ಅಂದಿದಿದ್ದರೆ ಇವರೆಲ್ಲ ಇದೇರೀತಿ ಕೈಬಿಚ್ಚಿ ಕೊಡುತ್ತಿದ್ದರಾ?



ನಿಂಗೇಗೌಡರ ದುರಂತ ಕಣ್ಣಾಲಿಗಳಿಂದ ಮರೆಯಾಗುವ ಮುನ್ನವೇ ಜೂನ್ 28ರಂದು ಭಾನುವಾರ ಬೆಳ್ಳಂಬೆಳಗ್ಗೆ ಮತ್ತೊಂದು ಆಘಾತ ಕಾದಿತ್ತು. ಜಮೀನಿನ ಬಳಿ ಹೋಗಿ ಬರುತ್ತೇನೆಂದು ಮನೆಯಿಂದ ಹೊರಹೋಗಿದ್ದ ಕೆರಗೋಡು ಹೋಬಳಿ ಹೊನ್ನಾಯಕನಹಳ್ಳಿಯ ಶಿವಲಿಂಗೇಗೌಡ ಎಂಬ 37 ವರ್ಷದ ಯುವರೈತ ಬಾವಿಗೆ ಹಾರಿ ಪ್ರಾಣ ಕಳೆದುಕೊಂಡಿದ್ದರು. ಕಬ್ಬಿಗಾಗಿ ಸುಮಾರು 4 ಲಕ್ಷ ಸಾಲ ಮಾಡಿಕೊಂಡಿದ್ದ ಶಿವಲಿಂಗೇಗೌಡರಿಗೆ ಬ್ಯಾಂಕಿನವರು ಸಾಲ ವಾಪಸಾತಿಯ ನೋಟಿಸ್ ಕಳುಹಿಸಿದ್ದರು. ಕಬ್ಬು ಸರಬರಾಜು ಮಾಡಿದ ಕಾರ್ಖಾನೆಯಿಂದ ಇನ್ನೂ ಹಣ ಬಂದಿರಲಿಲ್ಲ, ಆದರೆ ಸಾಲಗಾರರ ಕಾಟ ಮಾತ್ರ ಜೋರಾಗಿತ್ತು, ಖಾಸಗಿ ಫೈನಾನ್ಸ್‌ದಾರರು ಕೂಡ ಶಿವಲಿಂಗೇಗೌಡರ ಮನೆಯ ಬಳಿ ಹಣಕ್ಕಾಗಿ ಪೀಡಿಸಲು ಶುರು ಮಾಡಿದ್ದರು. ಆ ಅನ್ನದಾತನಿಗೂ ಏಕೈಕ ದಾರಿಯಾಗಿ ಕಂಡದ್ದು ಆತ್ಮಹತ್ಯೆಯೇ!

ಇದಾಗಿ ಮಾರನೆ ದಿನವೇ ಮಂಡ್ಯ ತಾಲ್ಲೂಕಿನ ಪಣಕನಹಳ್ಳಿಯ ಮಹೇಶ್ ಎಂಬ ರೈತ ಕೂಡ ನೇಣಿಗೆ ಶರಣಾಗಿದ್ದಾರೆ. ತಂದೆ ಇಲ್ಲದ ಆತನ ಮೇಲೆ ಇಬ್ಬರು ಸೋದರಿಯರ ಮದುವೆ ಮಾಡುವ ಹೊಣೆ ಬಿದ್ದಿತ್ತು, ಆತನಿಗೂ ಇನ್ನು ಮದುವೆಯಾಗಿರಲಿಲ್ಲ, ಇದ್ದ 2.20 ಎಕರೆ ತುಂಡು ಜಮೀನಿನ ಮೇಲೆ ಭರವಸೆ ಇಟ್ಟು ಸಾಲ ಮಾಡಿ ಸಹೋದರಿಯರ ಮದುವೆ ಮಾಡಿ ಕಳುಹಿಸಿದ್ದ. ಮದುವೆ, ಬೇಸಾಯದ ಖರ್ಚು ಅಂತ ಅವನ ಮೇಲು 3 ರಿಂದ 4 ಲಕ್ಷ ಸಾಲವಿತ್ತು, ಅರ್ಧದಷ್ಟು ಜಮೀನಿನಲ್ಲಿ ಭತ್ತ ಹಾಕಿ, ಉಳಿದರ್ಧಕ್ಕೆ ಕಬ್ಬು ಹಾಕಿದ್ದ, ಕಬ್ಬಿಗೆ ಸರಿಯಾಗಿ ಬೆಲೆಯೇ ಸಿಕ್ಕಿರಲಿಲ್ಲ, ಭತ್ತವನ್ನು ಸಾಲಕೊಟ್ಟಿದ್ದ ಖಾಸಗಿ ಲೇವಾದೇವಿದಾರರು ಜಪ್ತಿ ಮಾಡಿಕೊಂಡಿದ್ದರು. ನೊಂದ ಮಹೇಶ ಮನೆಯಲ್ಲೇ ನೇಣಿಗೆ ಶರಣಾಗಿದ್ದರು.

ಕಾರ್ಖಾನೆಗಳ ಬಾಕಿ

ಸರ್ಕಾರಿ ಸ್ವಾಮ್ಯದ ಮಂಡ್ಯ ಮೈಷುಗರ್, ಪಾಂಡವಪುರದ ಪಿಎಸ್‌ಎಸ್‌ಕೆ, ಮದ್ದೂರು ತಾಲ್ಲೂಕಿನ ಕೊಪ್ಪದ ಎನ್‌ಎಸ್‌ಎಲ್ ಶುಗರ್ಸ್, ಭಾರತೀನಗರದ ಚಾಂಶುಗರ್ಸ್ ಮತ್ತು ಕೆ.ಆರ್.ಪೇಟೆಯ ಕೋರಮಂಡಲ್ ಶುಗರ್ಸ್- ಹೀಗೆ ಮಂಡ್ಯ ಜಿಲ್ಲೆಯಲ್ಲಿ 5 ಸಕ್ಕರೆ ಕಾರ್ಖಾನೆಗಳಿವೆ. 2013-14ನೇ ಸಾಲಿನಲ್ಲಿ ಸರ್ಕಾರ ಟನ್ ಕಬ್ಬಿಗೆ 2500 ರೂ. ಕನಿಷ್ಠ ಬೆಲೆ ನಿಗದಿ ಮಾಡಿತ್ತು ನಂತರ 150 ರೂ. ಪ್ರೋತ್ಸಾಹಧನವನ್ನೂ ರಾಜ್ಯ ಸರ್ಕಾರ ನಿಗದಿಪಡಿಸಿತ್ತು ಆದರೆ ಪ್ರತಿಟನ್‌ಗೆ 2500 ರೂ ನೀಡಿದ್ದು ಮೈಷುಗರ್ ಹಾಗೂ ಪಿಎಸ್‌ಎಸ್‌ಕೆ ಕಾರ್ಖಾನೆಗಳು ಮಾತ್ರ. ಇನ್ನುಳಿದ ಚಾಂಶುಗರ್ಸ್, ಎನ್‌ಎಸ್‌ಎಲ್ ಹಾಗೂ ಕೋರಮಂಡಲ್ ಶುಗರ್ಸ್ ಕಾರ್ಖಾನೆಗಳು ಟನ್ ಕಬ್ಬಿಗೆ ಕೊಟ್ಟಿದ್ದು 2400 ರೂ. ಮಾತ್ರ. ಬಾಕಿ ನೂರು ರೂಪಾಯಿಯನ್ನು ಇದುವರೆಗೂ ನೀಡಿಲ್ಲ, ಕಳೆದ ಸಾಲಿನಲ್ಲಿ ಮದ್ದೂರಿನ ಚಾಂಶುಗರ್ಸ್ 6.01 ಕೋಟಿ, ಕೊಪ್ಪದ ಎನ್‌ಎಸ್‌ಎಲ್ ಶುಗರ್ಸ್ 7.36 ಕೋಟಿ ಹಾಗೂ ಕೆ.ಆರ್.ಪೇಟೆಯ ಕೋರಮಂಡಲ್ ಶುಗರ್ಸ್ ಕಾರ್ಖಾನೆಗಳು 7.01 ಕೋಟಿ ರೂಪಾಯಿ ಬಾಕಿ ಉಳಿಸಿಕೊಂಡಿವೆ. ಈ ಮೂರು ಕಾರ್ಖಾನೆಗಳಿಂದ ಮಂಡ್ಯದ ರೈತರಿಗೆ 20.38 ಕೋಟಿ ರೂ. ಬಾಕಿ ಹಣ ಬರಬೇಕಿದೆ. ಇದಿಷ್ಟು 2013-14ನೇ ಸಾಲಿನ ಕತೆಯಾದರೆ, ಇನ್ನು 2014-15ರಲ್ಲಿ ಐದೂ ಕಾರ್ಖಾನೆಗಳಿಂದ ರೈತರಿಗೆ ಬರಬೇಕಾದ ಬಾಕಿ ಹಣದ ಮೊತ್ತ ಬರೋಬ್ಬರಿ 106.54 ಕೋಟಿ ರೂಪಾಯಿ!

ಕಬ್ಬು ಬೆಳೆದ ರೈತನ ದುಸ್ಥಿತಿಯ ಮತ್ತೊಂದು ಮಗ್ಗುಲೆಂದರೆ, ಕಬ್ಬು ಕಾರ್ಖಾನೆಗಳ ಕಳಪೆ ಕಾರ್ಯಕ್ಷಮತೆ. 2014-15ನೇ ಸಾಲಿನಲ್ಲಿ ಮೈಷುಗರ್ ಕಾರ್ಖಾನೆ 6,17,00 ಟನ್ ಕಬ್ಬು ಅರೆಯಲು ಒಪ್ಪಿಗೆ ಪಡೆದಿತ್ತು, ಆದರೆ ಈ ವರ್ಷ ಅರೆದ ಕಬ್ಬು 2,83,000 ಟನ್ ಮಾತ್ರ. ಇನ್ನುಳಿದ 3,34,000 ಟನ್ ಕಬ್ಬನ್ನು ಮಂಡ್ಯದ ರೈತರು ಕೊಳ್ಳೇಗಾಲದ ಕುಂತೂರು ಸಕ್ಕರೆ ಕಾರ್ಖಾನೆ ಹಾಗೂ ನಂಜನಗೂಡಿನ ಬನ್ನಾರಿ ಅಮ್ಮನ್ ಕಾರ್ಖಾನೆಗೆ ಸರಬರಾಜು ಮಾಡಿದ್ದಾರೆ. ಮತ್ತೂ ಕೆಲವರು ಆಲೆಮನೆಗೆ ಕಬ್ಬನ್ನು ಒಪ್ಪಿಸಿ ಅವರು ಕೊಟ್ಟಷ್ಟು ಬಿಡಿಗಾಸು ಪಡೆದು ಕಣ್ಣೀರಿಟ್ಟಿದ್ದಾರೆ.

ಮೈಷುಗರ್ ಉಳಿಸಿಕೊಳ್ಳಲೇಬೇಕಿದೆ

1932-33ನೇ ಸಾಲಿನಲ್ಲಿ ಪ್ರಾರಂಭವಾದ ಮೈಸೂರ್ ಸಕ್ಕರೆ ಕಂಪನಿ (ಮೈಷುಗರ್) ಜಿಲ್ಲೆಯ ಆರ್ಥಿಕ ಚೇತರಿಕೆಯಲ್ಲಿ ಪ್ರಧಾನ ಪಾತ್ರ ವಹಿಸಿದೆ. ಆದರೆ ಕಳೆದೊಂದು ದಶಕದಿಂದ ಸಾಲದ ಸುಳಿಗೆ ಸಿಲುಕಿರುವ ಮೈಷುಗರ್ ಮುಚ್ಚುವ ಭೀತಿ ಎದುರಿಸುತ್ತಿದೆ. ಒಂದು ವೇಳೆ ಮೈಷುಗರ್ ಕಾರ್ಖಾನೆ ಮುಚ್ಚಿದರೆ ಜಿಲ್ಲೆಯ ಎಕಾನಮಿ ಕುಸಿದು ಬೀಳುವುದರಲ್ಲಿ ಯಾವುದೇ ಅನುಮಾನವಿಲ್ಲ, ಇಡೀ ರಾಜ್ಯದಲ್ಲಿ ಸರ್ಕಾರಿ ಸ್ವಾಮ್ಯದ ಸಕ್ಕರೆ ಕಾರ್ಖಾನೆ ಎಂದರೆ ಮೈಷುಗರ್ ಮಾತ್ರ. ಮೈಷುಗರ್ ಕಾರ್ಖಾನೆ ಕಬ್ಬು ಬೆಲೆ ನಿಗದಿ ಮಾಡಿದ್ದನ್ನು ನೋಡಿಯೇ ರಾಜ್ಯದ ಉಳಿದ ಎಲ್ಲಾ ಸಕ್ಕರೆ ಕಾರ್ಖಾನೆಗಳು ಅದೇ ಹಾದಿಯಲ್ಲಿ ಸಾಗುತ್ತಿದ್ದವು. 2011ರವರೆಗೆ ಮೈಷುಗರ್ ಕಾರ್ಖಾನೆ ಒಂದು ಟನ್ ಕಬ್ಬಿಗೆ ಎಷ್ಟು ಹಣ ನಿಗದಿ ಮಾಡಿದೆಯೋ ಅದೇ ಬೆಲೆಯನ್ನು ಇತರೆ ಕಾರ್ಖಾನೆಗಳು ನೀಡುತ್ತಿದ್ದವು. ಆದರೆ 2011ರ ನಂತರ ಖಾಸಗಿ ಸಕ್ಕರೆ ಕಾರ್ಖಾನೆ ಮಾಲೀಕರ ಲಾಬಿ ಮೇಲುಗೈ ಸಾಧಿಸತೊಡಗಿತು. ಸರ್ಕಾರ ನಡೆಸುತ್ತಿದ್ದವರೇ ಊರಿಗೆ ಒಂದರಂತೆ ಸಕ್ಕರೆ ಕಾರ್ಖಾನೆ ಶುರು ಮಾಡಿದ್ದರಿಂದ ಸರ್ಕಾರಿ ಸ್ವಾಮ್ಯದ ಮೈಷುಗರ್ ಕಾರ್ಖಾನೆ ನೀಡುವ ಬೆಲೆಯನ್ನು ಕೊಡಲು ಸಾಧ್ಯವಿಲ್ಲ ಎಂದು ರೊಳ್ಳೆ ತೆಗೆಯತೊಡಗಿದರು. ರೈತರಿಗೆ ನ್ಯಾಯಸಮ್ಮತ ಬೆಲೆ (ಎಫ್‌ಆರ್‌ಪಿ) ನೀಡಬೇಕಾದ ಖಾಸಗಿ ಸಕ್ಕರೆ ಕಾರ್ಖಾನೆಗಳು ನಷ್ಟದ ಸಬೂಬು ಹೇಳಿ ಮೈಷುಗರ್ ನಿಗದಿ ಮಾಡಿದ ಬೆಲೆಯನ್ನು ನೀಡಲು ನಿರಾಕರಿಸಿಬಿಟ್ಟವು.


ಈ ಮಧ್ಯೆ ಮೈಷುಗರ್ ಕಾರ್ಖಾನೆ ಸುಮಾರು 400 ಕೋಟಿಗೂ ಹೆಚ್ಚು ಮೊತ್ತದ ಸಾಲಕ್ಕೆ ಸಿಲುಕಿತ್ತು, ಯಾವುದೇ ಸರ್ಕಾರ ಬಂದರೂ ಮೈಷುಗರ್ ಪುನಶ್ಚೇತನ ಆಗಲೇ ಇಲ್ಲ, ಆಳುವ ಸರ್ಕಾರಗಳು ಬಿಡುಗಡೆ ಮಾಡಿದ ನೂರಾರು ಕೋಟಿ ಹಣ ಭ್ರಷ್ಟ ಅಧ್ಯಕ್ಷರು ಹಾಗೂ ಅಧಿಕಾರಿಗಳ ಜಂಟಿ ಲೂಟಿಗೆ ಸಿಲುಕಿತೇ ವಿನಾಃ ಕಾರ್ಖಾನೆಯನ್ನು ಸಾಲದ ಸುಳಿಯಿಂದ ಮೇಲೆತ್ತಲು ಕಿಂಚಿತ್ತೂ ನೆರವಾಗಲಿಲ್ಲ. 2001ರಲ್ಲಿ ಐಎಎಸ್ ಅಧಿಕಾರಿ ರವಿಶಂಕರ್ ಮೈಷುಗರ್ ಎಂಡಿ ಆಗಿದ್ದ ಸಂದರ್ಭದಲ್ಲಿ ನೇಪಾಳಕ್ಕೆ ಸಕ್ಕರೆ ರಫ್ತು ಮಾಡಲು ಮಧ್ಯವರ್ತಿಯೊಬ್ಬರಿಗೆ ನೀಡಿದ 65 ಲಕ್ಷ ರೂ. ಮೌಲ್ಯದ ಡಿಡಿಯಲ್ಲಿ ವಂಚನೆ ನಡೆದು ಅಷ್ಟೂ ಹಣ ಮಧ್ಯವರ್ತಿಯ ಪಾಲಾಗುವಂತಾಗಿತ್ತು.

2006ರಲ್ಲಿ ಆಂಟೋನಿ ಮೆಂಡೋಜ ಎಂಡಿ ಆಗಿದ್ದ ಸಂದರ್ಭದಲ್ಲಿ ಕೋಜನರೇಷನ್ ಪ್ರಾರಂಭ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಹುಡ್ಕೋದಿಂದ 45 ಕೋಟಿ ರೂ. ಬಂದಿತ್ತು, ಇದರಲ್ಲಿ 5 ಕೋಟಿ ಹಣದಿಂದ ಕೋ-ಜೋನ್ ಘಟಕ ಪ್ರಾರಂಭಿಸಬೇಕಿತ್ತು, ಆದರೆ ಈ 5 ಕೋಟಿ ಹಣವನ್ನು ವ್ಯವಸ್ಥಾಪಕ ನಿರ್ದೇಶಕ ಮೆಂಡೋಜಾ ಬೇರೆ ಬಾಬ್ತಿಗೆ ಬಳಸಿಕೊಂಡಿದ್ದರಿಂದ ಕೋ-ಜೋನ್ ಘಟಕ


ಕಬ್ಬಿನ ಗದ್ದೆಯಲ್ಲಿ ಸಜೀವ ದಹನವಾದ ನಿಂಗೇಗೌಡ

ಪ್ರಾರಂಭವಾಗಲೇ ಇಲ್ಲ. ಕೋ-ಜೋನ್ ಘಟಕ ಪ್ರಾರಂಭವಾಗದೇ ಇದ್ದುದ್ದರಿಂದ ಕಾರ್ಖಾನೆ ಕಬ್ಬು ಬೆಳೆದ ರೈತರಿಗೆ ಸಕಾಲಕ್ಕೆ ಹಣ ಪಾವತಿಸಲು ಸಾಧ್ಯವಾಗಲಿಲ್ಲ, ಇದು ಕೂಡ ಮೈಷುಗರ್ ಆರ್ಥಿಕ ಕುಸಿತಕ್ಕೆ ಕಾರಣವಾಯಿತು. ಹಾಗೆಯೇ 2003ರಲ್ಲಿ ಎಂಡಿ ಆಗಿದ್ದ ಅಮರ್‌ನಾರಾಯಣ್ ಕೋರ್ಟ್ ಆದೇಶದಂತೆ 2 ಲಕ್ಷ ಸಕ್ಕರೆ ಮೂಟೆಗಳನ್ನು ಮುಕ್ತ ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದರಿಂದ ಕ್ವಿಂಟಲ್ ಒಂದಕ್ಕೆ 100 ರೂ.ಗಳಷ್ಟು ಹಣ ಖೋತಾ ಆಗಿತ್ತು.

ಇನ್ನು ಮೈಷುಗರ್ ಕಾರ್ಖಾನೆಗೆ ಅಧ್ಯಕ್ಷರಾಗಿ ಬಂದವರಲ್ಲಿ ಹಣ ಗೆಬರಿಕೊಂಡು ಹೋದವರೇ ಹೆಚ್ಚು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಮೈಷುಗರ್ ಅಧ್ಯಕ್ಷರಾಗಿದ್ದ ನಾಗರಾಜಪ್ಪ ಮೈಷುಗರ್ ಅನ್ನು ಭರ್ಜರಿಯಾಗಿ ಮೆತ್ತಾಗಿಸಿದ್ದ ಆತನ ಅವಧಿಯಲ್ಲಿ ಎ ಮಿಲ್ ದುರಸ್ತಿಗೆಂದು 58 ಕೋಟಿ ರೂ. ಖರ್ಚಾಗಿದೆ ಎಂದು ಲೆಕ್ಕಪತ್ರದಲ್ಲಿ ತೋರಿಸಲಾಗಿತ್ತು. ಅಸಲಿಗೆ ಅಷ್ಟು ದುಡ್ಡಿನಲ್ಲಿ ಹೊಸ ಮಿಲ್ಲನ್ನೇ ಹಾಕಬಹುದಿತ್ತು. ಇನ್ನು ಆತನ ಬೇಜವಾಬ್ದಾರಿ ಆಡಳಿತದಿಂದಾಗಿ 1.50 ಲಕ್ಷ ಲೀಟರ್ ಸ್ಪಿರಿಟ್ ಚರಂಡಿಗೆ ಹರಿದುಹೋಗಿತ್ತು. ಒಂದು ಲೀಟರ್ ಸ್ಪಿರಿಟ್ ಬೆಲೆ 35 ರೂ. ಅಂದುಕೊಂಡರೂ ಲಕ್ಷಾಂತರ ರೂಪಾಯಿ ಸುಖಾಸುಮ್ಮನೆ ಚರಂಡಿ ಪಾಲಾಗಿತ್ತು. ಸ್ಕ್ರಾಪ್ ಮಾರಾಟದಲ್ಲೂ ಆತ ಭರ್ಜರಿಯಾಗಿ ತಿಂದುಂಡು ತೇಗಿದ್ದ. ಕೊನೆಗೆ ಪ್ರಗತಿಪರ ಸಂಘಟನೆಗಳು ಬೀದಿಗಿಳಿದು ಪ್ರತಿಭಟಿಸಿದ ಮೇಲೆಯೇ ಅವನ ವಿರುದ್ಧ ಲೋಕಾಯುಕ್ತ ಪೊಲೀಸರು ದೂರು ದಾಖಲಿಸಿಕೊಂಡದ್ದು. ಕೇಸು



ದಾಖಲಾಗಿ 3 ವರ್ಷ ಕಳೆದರೂ ಮೊಕದ್ದಮೆ ಎಲ್ಲಿ ನಿಂತಿದೆಯೋ ಅಲ್ಲೇ ನಿಂತಿದೆ. ಇಂತವರಿಂದಾಗಿಯೇ ಮೈಷುಗರ್ಸ್ ದಿನದಿಂದ ದಿನಕ್ಕೆ ತನ್ನ ಸ್ವಾಸ್ಥ ಕಳೆದುಕೊಳ್ಳುತ್ತಾ ಬಂತು.

ಖಾಸಗಿ ಕಾರ್ಖಾನೆಗಳ ಲಾಭಿ

ಸರ್ಕಾರಿ ಸ್ವಾಮ್ಯದ ಮೈಷುಗರ್ ಸಕ್ಕರೆ ಕಾರ್ಖಾನೆ ಸರ್ಕಾರದ ಅಧೀನದಲ್ಲಿದ್ದುದರಿಂದ ಆ ಕಾರ್ಖಾನೆಯಲ್ಲಿ ನಡೆಯುವ ಪ್ರತಿ ವಿದ್ಯಮಾನವು ಸರ್ಕಾರಕ್ಕೆ ಗೊತ್ತಾಗುತ್ತಿತ್ತು. ಖಾಸಗಿ ಕಾರ್ಖಾನೆಗಳು ನಷ್ಟನಷ್ಟ ಎಂದು ಬಾಯಿ ಬಡಿದುಕೊಳ್ಳುತ್ತಿದ್ದರೂ ಸಕ್ಕರೆ ಉದ್ಯಮದ ಲಾಭ-ನಷ್ಟದ ಬಗ್ಗೆ ಸರ್ಕಾರಕ್ಕೆ ಸಂಪೂರ್ಣ ಮಾಹಿತಿ ಇರುತ್ತಿತ್ತು. ಕಳೆದ ಸಾಲಿನಲ್ಲಿ ಪ್ರತಿ ಟನ್ ಕಬ್ಬಿಗೆ ಸರ್ಕಾರ 2500 ರೂ. ನಿಗದಿ ಮಾಡಿದ ನಂತರ ಖಾಸಗಿ ಕಾರ್ಖಾನೆಗಳು ಅಷ್ಟು ಹಣ ಕೊಡಲು ಸಾಧ್ಯವಿಲ್ಲ ಎಂದು ಚೀರಿಕೊಂಡವು. ಅಸಲಿಗೆ 1 ಟನ್ ಕಬ್ಬಿನಲ್ಲಿ 95 ಕೆ.ಜಿ. ಸಕ್ಕರೆ, 40 ಕೆ.ಜಿ. ಮೊಲಾಸಿಸ್, 9 ಲೀಟರ್ ಸ್ಪಿರಿಟ್ (1 ಲೀ. 36 ರೂ.) ಸಿಗುತ್ತದೆ. ಭಟ್ಟಿ ಇಳಿಸಿ ಎಥೆನಾಲ್ ಮಾಡಿದರೆ ಕಡಿಮೆ ಎಂದರೂ 6 ಲೀಟರ್ (1 ಲೀ.-45 ರೂ.) ದೊರಕುತ್ತದೆ. ಆ ನಿಟ್ಟಿನಿಂದ ನೋಡಿದಾಗ ಕೇವಲ ಸಕ್ಕರೆ ಮಾತ್ರವಲ್ಲದೆ ಉಪ ಉತ್ಪಾದನೆಗಳಿಂದಲೂ ಸಾಕಷ್ಟು ಹಣ ಕಾರ್ಖಾನೆಗೆ ಬರುತ್ತದೆ. ಇನ್ನು ಕೋ-ಜನರೇಷನ್, ಡಿಸ್ಟಿಲರಿ ಘಟಕ ಇದ್ದರಂತೂ 1 ಟನ್ ಕಬ್ಬಿಗೆ 2500 ರೂ. ಕೊಡುವುದು ಕಷ್ಟ ಅಲ್ಲವೇ ಅಲ್ಲ. ಸರ್ಕಾರದಲ್ಲಿರುವ ಸಚಿವ, ಶಾಸಕರೇ ಸಕ್ಕರೆ ಕಾರ್ಖಾನೆಗಳ ಮಾಲೀಕರಾಗಿರುವುದರಿಂದ 2500 ರೂ. ಕೊಡುವುದು ಸಾಧ್ಯವಿಲ್ಲ ಎಂಬ ವರಾತ ತೆಗೆದಿದ್ದಾರೆ.

ಪ್ರಸ್ತುತ ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆ ಕೆ.ಜಿ.ಗೆ 19-20ರ ಆಸುಪಾಸಿನಲ್ಲಿರುವುದು ನಿಜ. ಖಾಸಗಿ ಸಕ್ಕರೆ ಕಾರ್ಖಾನೆಗಳು ಇದೇ ವಾದವನ್ನು ಮುಂದಿಟ್ಟುಕೊಂಡು ರೈತರಿಗೆ ಬಾಕಿ ಹಣ ನೀಡಲು ನಿರಾಕರಿಸುತ್ತಿವೆ. ಆದರೆ ಸಕ್ಕರೆ ಬೆಲೆ 48 ರೂ.ಗಳಾಗಿದ್ದಾಗ ನಮಗೆ ಲಾಭ ಹೆಚ್ಚು ಬಂದಿದೆ; ನೀವೂ ತೆಗೆದುಕೊಳ್ಳಿ ಅಂತ ರೈತರಿಗೆ ಪಾಲು ಕೊಟ್ಟಿದ್ದರೇ? ಕಳೆದ ಹಲವು ದಶಕಗಳಿಂದ ರೈತರನ್ನು ನಂಬಿಯೇ ಪ್ರತಿ ವರ್ಷ ಕೋಟಿ ಕೋಟಿ ಲಾಭವನ್ನು ಪಡೆಯುವ ಖಾಸಗಿ ಕಾರ್ಖಾನೆ ಮಾಲೀಕರು ಬಾಕಿ ಉಳಿದಿರುವ 100 ರೂ. ಹಣವನ್ನು ಕೊಡಲು ಓಡೇಟು ಹಾಕುತ್ತಿರುವುದು ರೈತಾಪಿ ವರ್ಗಕ್ಕೆ ಮಾಡುತ್ತಿರುವ ಮಹಾದ್ರೋಹವಾಗಿದೆ.

ಹಾಗೆ ನೋಡಿದರೆ, ಸಕ್ಕರೆ ಕಾರ್ಖಾನೆಗಳಿಗೆ ರೈತರೇ ಬೆನ್ನೆಲುಬು. ಆ ಬೆನ್ನೆಲುಬನ್ನೇ ಮುರಿದುಕೊಳ್ಳಲು ಮುಂದಾಗುತ್ತಿರೋದು ಜಾಣತನವೂ ಅಲ್ಲ, ಈ ಸತ್ಯ ಖಾಸಗಿ ಕಾರ್ಖಾನೆ ಮಾಲೀಕರಿಗೆ ಅರಿವಾಗಬೇಕಿದೆ. ಸರ್ಕಾರ ಈಗಾಗಲೇ ಸಕ್ಕರೆ ದಾಸ್ತಾನು ಜಪ್ತಿಗೆ ಮುಂದಾಗಿರುವುದು ಕೂಡ ಮುಂದಿನ ದಿನಗಳಲ್ಲಿ ರೈತರ ಪರಿಸ್ಥಿತಿ ಏನಾಗಬಹುದೋ ಎಂಬ ಆತಂಕ ಶುರುವಾಗಿದೆ. ಸರ್ಕಾರವೇ ಸಕ್ಕರೆ ದಾಸ್ತಾನು ವಶಪಡಿಸಿಕೊಂಡು ಅದನ್ನು ಮಾರಿ ರೈತರಿಗೆ ಹಣ ಕೊಡುವ ಪರಿಸ್ಥಿತಿ ಬಂದಿರೋದು ದುರದೃಷ್ಟಕರ. ಇದು ಸಕ್ಕರೆ ಕಾರ್ಖಾನೆಗಳು ಮತ್ತಷ್ಟು ಸಂಘರ್ಷಕ್ಕಿಳಿಯಲು ಎಡೆಮಾಡಿಕೊಡಲಿದ್ದು, ಅದರ ಪರಿಣಾಮ ಬೀಳೋದು ರೈತನ ಮೇಲೆಯೇ.

ಮದ್ಯದ ಮೇಲಿನ ತೆರಿಗೆಯಿಂದ ಸರ್ಕಾರಕ್ಕೆ ಪ್ರತಿ ವರ್ಷ 14,000 ಕೋಟಿ ಆದಾಯ ಹರಿದುಬರುತ್ತಿದೆ. ಇದರಲ್ಲಿ ಅರ್ಧದಷ್ಟು ಮೊತ್ತವನ್ನು ರೈತರಿಗೆ ಹಂಚಿದರೆ ಅನ್ನದಾತನ ಪರಿಸ್ಥಿತಿ ಸುಧಾರಿಸಬಹುದು. ಮದ್ಯ ತಯಾರಕರು ಶೇ. 90 ಭಾಗ ಸಕ್ಕರೆ ಕಾರ್ಖಾನೆಗಳು ನೀಡುವ ಸ್ಪಿರಿಟ್ ಅನ್ನೇ ಅವಲಂಬಿಸಿದ್ದಾರೆ. ಕಬ್ಬಿನ ಉಪ ಉತ್ಪನ್ನವಾದ ಮೊಲಾಸಿಸ್‌ನಿಂದ ಉತ್ಪಾದನೆಯಾಗುವ ಸ್ಪಿರಿಟ್‌ನಿಂದ ಮದ್ಯದ ಉದ್ಯಮಿ ಹಾಗೂ ಸರ್ಕಾರ ಸಾಕಷ್ಟು ಲಾಭ ಮಾಡುತ್ತಿವೆ. ಆದರೆ ಇದಕ್ಕೆ ಕಾರಣಕರ್ತರಾದ ರೈತರಿಗೆ ಇದರಲ್ಲಿ ಒಂದು ಪೈಸೆಯ ಲಾಭವಿಲ್ಲ.

ಮಂಡ್ಯ ಜಿಲ್ಲೆಯ ಆರ್ಥಿಕತೆಯ ಕೇಂದ್ರ ಬಿಂದು ಮೈಷುಗರ್ ಸಕ್ಕರೆ ಕಾರ್ಖಾನೆ ಇಂದು ಮುಚ್ಚುವ ಹಂತದಲ್ಲಿದೆ. ಕಾರ್ಖಾನೆಯ ಶವಪೆಟ್ಟಿಗೆಗೆ ಮೊಳೆ ಹೊಡೆಯುವುದಷ್ಟೇ ಬಾಕಿಯಿದೆ. ಮೈಷುಗರ್ ಅಭಿವೃದ್ಧಿ ವಿಚಾರಕ್ಕೆ ಸಂಬಂಧಿಸಿದಂತೆ ಸಕ್ಕರೆ ಸಚಿವ ಮಹದೇವಪ್ಪ ಒಂದು ಸಮಿತಿ ರಚಿಸಿದ್ದಾರೆ. ಕಬ್ಬು ಬೆಳೆಗಾರರ ಹಾಗೂ ನೌಕರರ ಸಮಸ್ಯೆಗಳ ಬಗ್ಗೆ ಪ್ರತಿ ತಿಂಗಳಿಗೊಂದು ಸಭೆ ಕರೆದು ಸಂಘಸಂಸ್ಥೆಗಳ ಮುಖಂಡರು, ಹೋರಾಟಗಾರರನ್ನು ಕರೆದು ಚರ್ಚೆ ನಡೆಸುವುದು ಸೇರಿದಂತೆ ಹಲವು ವಿಚಾರಗಳನ್ನು ಚರ್ಚೆ ಮಾಡಿ ಮೈಷುಗರ್ ಉಳಿಸಿಕೊಳ್ಳಲು ಮುಂದಾಗಿರುವುದು ಸ್ವಾಗತಾರ್ಹ. ಮೈಷುಗರ್ ಏನಾದರೂ ಮುಚ್ಚಿದರೆ ಜಿಲ್ಲೆಯ ಅನ್ನದಾತನ ಪರಿಸ್ಥಿತಿ ಮತ್ತಷ್ಟು ಸಂಕಷ್ಟಕ್ಕೆ ಒಳಗಾಗುವುದು ನಿಶ್ಚಿತ. ಅನ್ನದಾತನಿಗೆ ಸಂಕಷ್ಟ ಬಾರದಿರಲಿ ಎಂಬುದು ಜಿಲ್ಲೆಯ ಪ್ರತಿ ನಾಗರಿಕನ ಆಶಯವಾಗಿದೆ.

■ ಮಂಡ್ಯ ನಾಗೇಶ್


ಕೌಸರ್ ಬಾನು ನೆನಪಲ್ಲಿ ಕರಗಿಹೋದ ಸೆಲ್ಫಿ ಸಂಭ್ರಮ

ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ್ದ ಕರೆಯ ಮೇರೆಗೆ ನಮ್ಮ ಅನೇಕ ಸ್ನೇಹಿತರು ಮಗಳ ಜತೆ ತೆಗೆಸಿಕೊಂಡ ಸೆಲ್ಫಿಗಳನ್ನು ನೋಡಿದಾಗ ಖುಷಿಯಾಗುತ್ತದೆ. ಈ ಚಿತ್ರಗಳನ್ನೆಲ್ಲ ನೋಡುತ್ತಿದ್ದಾಗ ನನಗೂ ನನಗಿರುವ ಒಬ್ಬಳೇ ಮಗಳ ಜತೆ ಸೆಲ್ಫಿ ತೆಗೆದು ಪ್ರಧಾನಿಯವರಿಗೆ ಕಳುಹಿಸಿಕೊಡಬೇಕೆನಿಸಿತು. ಹಾಗೆಂದು ಯೋಚಿಸಿದಾಕ್ಷಣ ನುಗ್ಗಿ ಬಂದು ದಾಳಿಮಾಡುತ್ತಿವೆ ಹಾಳು ನೆನಪುಗಳು.

ನಮ್ಮ ಬಹಳಷ್ಟು ಯುವಜನರು ಯಾಕೆ ಇಷ್ಟೊಂದು ಖುಷಿಯಲ್ಲಿರುತ್ತಾರೆಂದರೆ ಅವರಿಗೆ ಇತಿಹಾಸದ ನೆನಪುಗಳಿರುವುದಿಲ್ಲ. ನನ್ನಂತಹ ಸ್ವಲ್ಪ ಹಿರಿಯರು ಅವರಂತೆ ಸದಾ ನಗುನಗುತ್ತಾ ಖುಷಿಖುಷಿಯಾಗಿರಲು ಸಾಧ್ಯವಾಗದೆ 'ಸಿನಿಕ'ರೆಂದು ಕರೆಸಿಕೊಳ್ಳುತ್ತಾ ನರಳಾಡುತ್ತಿರುವುದು ಯಾಕೆಂದರೆ ನಮ್ಮಲ್ಲಿ ಕಾಡುವ ನೆನಪುಗಳಿರುತ್ತವೆ.

ಗುಜರಾತ್‌ನಲ್ಲಿ ಕೋಮುಹಿಂಸಾಚಾರ ಭುಗಿಲೆದ್ದಾಗ ಫಿರೋಜ್ ಮನೆಯಲ್ಲಿರಲಿಲ್ಲ. 'ಸೀಮಂತ'ಕ್ಕೆ ಬಂದಿದ್ದ ಕೌಸರ್ ತಂದೆ, ಸಹೋದರ್ ಜಾಹಿದ್, ಆತನ ಪತ್ನಿ ಮತ್ತು ಇಬ್ಬರು ಮಕ್ಕಳು ಮನೆಯಲ್ಲಿದ್ದರು. ಆ ದಿನ ನರೋಡಾ ಪಾಟಿಯಾದ ಫಿರೋಜ್ ಮನೆಗೆ ನುಗ್ಗಿದ್ದ ದುರುಳರು ಮನೆಯಲ್ಲಿದ್ದವರನ್ನೆಲ್ಲ ಹೊರಗೆಳೆದು ತಂದಿದ್ದಾರೆ. ದುರುದ್ದೇಶವಿಟ್ಟುಕೊಂಡಿದ್ದ ದುರುಳರು ಕೌಸರ್ ತುಂಬು ಗರ್ಭಿಣಿಯೆಂದು ಗೊತ್ತಾದಾಗ ಇನ್ನಷ್ಟು ಕೆರಳಿರಬಹುದು. ಆ ಸಿಟ್ಟಿನಲ್ಲಿಯೇ ಆಕೆಯ ಹೊಟ್ಟೆಯನ್ನು ಸೀಳಿದ್ದಾರೆ, ಆ ಇರಿತಕ್ಕೆ ಭ್ರೂಣ ಹೊರಬಂದಿದೆ. ಅದರ ನಂತರ ಆಕೆಯನ್ನು ಬೆಂಕಿಗೆ ಎಸೆದಿದ್ದಾರೆ.

ಓಡೋಡುತ್ತಾ ಬಂದ ಗಂಡ ಕಂಡದ್ದು ಹೆಂಡತಿಯ ಅರ್ಧಸುಟ್ಟ ನಗ್ನದೇಹ. ಆ ಹಿಂಸಾಕಾಂಡದಲ್ಲಿ ಫಿರೋಜ್



ಸೆಲ್ಫಿ ಸಂಭ್ರಮದಲ್ಲಿ ನಮ್ಮ ಅನೇಕ ಸ್ನೇಹಿತರು ಮೈಮರೆತಿರುವಾಗ ಯಾವುದೋ ನೆನಪುಗಳ ಕಾಟದಿಂದಾಗಿ ನಿದ್ದೆಬಾರದೆ ಬೆಳಗಾವಿಯ ಹೋಟೇಲ್‌ನ ಹಾಸಿಗೆಯಲ್ಲಿ ಹೊರಳಾಡಿ ಮುಂಜಾನೆ ನಾಲ್ಕು ಗಂಟೆಗೆ ಎದ್ದು ಇದನ್ನು ಬರೆಯಲು ಕೂತಿರುವೆ.

ಸೆಲ್ಫಿ ಸಂಭ್ರಮದ ನಡುವೆ ನನ್ನನ್ನು ಕಾಡುತ್ತಿರುವ ಮಹಿಳೆ ಆಗಿನ್ನೂ 22ರ ಹರೆಯದವಳಾಗಿದ್ದ ಹೀನಾ ಕೌಸರ್ ಅಲಿಯಾಸ್ ಕೌಸರ್ ಬಾನು. ಆಕೆಯ ಹೊಟ್ಟೆಯಲ್ಲಿದ್ದ ಮಗು ಬದುಕಿದ್ದರೆ ಕಳೆದ ಭಾನುವಾರಕ್ಕೆ ಅದಕ್ಕೆ ಹದಿಮೂರು ವರ್ಷ ಐದು ತಿಂಗಳಾಗುತ್ತಿತ್ತು, ಕೌಸರ್ ಬಾನು ಕೂಡಾ ತನ್ನ ಮಗಳ ಜತೆ ಸೆಲ್ಫಿ ತೆಗೆದು ನರೇಂದ್ರ ಮೋದಿಯವರಿಗೆ ಕಳುಹಿಸಿಕೊಡುತ್ತಿದ್ದಳೋ ಏನೋ? ಆದರೆ ಹಾಗಾಗಲಿಲ್ಲ.

'ಚೋಟಾ ಕರ್ನಾಟಕ' ಎಂದೇ ಕರೆಯಲಾಗುವ ಅಹ್ಮದಾಬಾದ್‌ನ ನರೋಡಾ ಪಾಟಿಯಾದಲ್ಲಿ ಒಂದು ವರ್ಷದ ಹಿಂದೆಯಷ್ಟೇ ಮದುವೆಯಾಗಿದ್ದ ರಿಕ್ಷಾ ಚಾಲಕ ಫಿರೋಜ್ ಮತ್ತು ಕೌಸರ್ ಬಾನು ಬಡತನದಲ್ಲಿಯೂ ನೆಮ್ಮದಿಯವಾಗಿದ್ದರು. 2002ರ ಫೆಬ್ರವರಿ 28ರಂದು


ತಂಗಿ, ಮಾವ, ಕೌಸರ್ ಬಾನು ಸೋದರನ ಪತ್ನಿ ಮತ್ತು ಇಬ್ಬರು ಮಕ್ಕಳು ಕೂಡಾ ಪ್ರಾಣ ಕಳೆದುಕೊಂಡಿದ್ದರು. ಈ ಕುಟುಂಬ ಕರ್ನಾಟಕ ಮೂಲದ್ದು. ಅಹ್ಮದಾಬಾದ್‌ನಲ್ಲಿಯೇ ಇದ್ದ ಕೌಸರ್ ಬಾನು ತಂದೆ ಪ್ರಾಣ ಬೆದರಿಕೆಯ ಕಾರಣದಿಂದಾಗಿ ವರ್ಷಗಳ ಹಿಂದೆಯೇ ಕರ್ನಾಟಕಕ್ಕೆ ಹಿಂದಿರುಗಿದ್ದರು.

..... ಇಷ್ಟೆಲ್ಲ ನಡೆಯುತ್ತಿರುವಾಗ ಗುಜರಾತ್ ಎಂಬ ರಾಜ್ಯದಲ್ಲಿ, ಈಗಿನ 'ಬೇಟಿ ಬಚಾವೋ' ಆಂದೋಲನದ ನೇತಾರರು ಮತ್ತು ಈ ದೇಶದ ಪ್ರಧಾನಿಗಳೂ ಆಗಿರುವ ನರೇಂದ್ರ ಮೋದಿಯವರು ಮುಖ್ಯಮಂತ್ರಿಯಾಗಿದ್ದರು. 'ರಾಜಧರ್ಮ' ಪಾಲಿಸು ಎಂದು ಅವರ ಪಕ್ಷದ ಹಿರಿಯರೂ ಮತ್ತು ಆಗಿನ ಪ್ರಧಾನಿ ಅಟಲ ಬಿಹಾರಿ ವಾಜಪೇಯಿ ಕೂಗಿಕೂಗಿ ಹೇಳುತ್ತಿದ್ದರೂ ಮೋದಿ ಕಿವುಡಾಗಿದ್ದರು.

ಈ ನೆನಪುಗಳನ್ನು ಹೊತ್ತುಕೊಂಡು ನಾನು ನನ್ನ ಮಗಳೊಂದಿಗೆ ಸೆಲ್ಫಿ ತೆಗೆಸಿ ಪ್ರಧಾನಿಗೆ ಹೇಗೆ ಕಳುಹಿಸಲಿ? ನನ್ನ ಸ್ನೇಹಿತರ ಸೆಲ್ಫಿ ಸಂಭ್ರಮದಲ್ಲಿ ಹೇಗೆ ಕೂಡಿಕೊಳ್ಳಲಿ.

- ದಿನೇಶ್ ಅಮೀನ್ ಮಟ್ಟು

ಗೀತೆ ಮತ್ತು ರಾಮಾಯಣದ ಬಗ್ಗೆ ಚರ್ಚೆ ಮಾಡಿಯೇ ತೀರುತ್ತೇವೆ



ಭಗವದ್ಗೀತೆ ಮತ್ತು ರಾಮನನ್ನು ಕುರಿತ ಚರ್ಚೆ ಈಗ ಜೀವ ಪಡೆದುಕೊಂಡಿದೆ. ಇದು ಶುರುವಾಗಲಿಕ್ಕೆ ಕೇಂದ್ರ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಅವರು ಕಾರಣ ಎನ್ನಬೇಕು. ಅವರು ಭಗವದ್ಗೀತೆಯನ್ನು ರಾಷ್ಟ್ರೀಯ ಗ್ರಂಥ ಮಾಡಬೇಕು ಎಂಬ ವಿಚಾರವನ್ನು ಹರಿಯಬಿಟ್ಟರು.

ಈ ಸಂಬಂಧವಾಗಿ ಫೆಬ್ರವರಿ 15, 2015ರಂದು ಎಸ್‌ಸಿ/ಎಸ್‌ಟಿ ನೌಕರರು ಮತ್ತು ಅಧಿಕಾರಿಗಳ ಪರಿಷತ್ 'ಭಗವದ್ಗೀತೆ-ರಾಷ್ಟ್ರೀಯ ಪರಿಕಲ್ಪನೆ ಮತ್ತು ಘರ್‌ವಾಪಸಿ' ಎಂಬ ವಿಚಾರಸಂಕಿರಣವನ್ನು ಏರ್ಪಡಿಸಿತ್ತು. ಇದು ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರವಾದ ಮಾನಸ ಗಂಗೋತ್ರಿಯ ರಾಣಿ ಬಹದೂರ್ ಸಭಾಂಗಣದಲ್ಲಿ ನಡೆಯಿತು.

ಆ ವಿಚಾರಸಂಕಿರಣದಲ್ಲಿ ಮಾತನಾಡುತ್ತ ನಾನು "ಗೀತೆಯಲ್ಲಿ ಅಧ್ಯಾತ್ಮದ ಅಮೃತ ಇದೆ. ಹಾಗೆಯೇ ಜಾತಿಯ ವಿಷಾದವೂ ಇದೆ. ಇದು ಚಾತುರ್ವರ್ಣವನ್ನು ಪ್ರತಿಪಾದಿಸುವ, ಮೇಲುಕೀಳನ್ನು ಪ್ರತಿಪಾದಿಸುವ ಗ್ರಂಥ, ಶೋಷಣೆಯನ್ನು ಪವಿತ್ರೀಕರಿಸುವ ಗ್ರಂಥ. ಎಲ್ಲಾ ಸ್ತ್ರೀಯರು (ಬ್ರಾಹ್ಮಣ ಮಹಿಳೆಯರೂ ಸೇರಿದಂತೆ), ವೈಶ್ಯರೂ ಮತ್ತು ಶೂದ್ರರೆಲ್ಲ ಪಾಪಿಗಳು (ಅಧ್ಯಾಯ 9, ಶ್ಲೋಕ 32) ಎಂದು ಶೇಕಡ 98 ಮಂದಿಯನ್ನು ಕರೆದು ಅಪಮಾನಪಡಿಸುತ್ತದೆ. ಇಂಥ ಶ್ಲೋಕಗಳನ್ನು ಸುಡಬೇಕು" ಎಂದೆ. ಗೀತೆಯ ಈ ಮಾತು ಎಷ್ಟು ಸರಿ? ಎಂದು ಮೂಲಭೂತವಾದಿಗಳು ಯೋಚಿಸದೆ ನನ್ನನ್ನು ಕೊಲ್ಲುತ್ತೇವೆ ಎಂದು ನನಗೆ ಬೆದರಿಕೆ ಹಾಕಿದರು.

ಆಮೇಲೆ ಮೈಸೂರಿನಲ್ಲಿ ಪೇಜಾವರ ಶ್ರೀಗಳು ಭಗವದ್ಗೀತೆಯನ್ನು ಟೀಕಿಸುವವರಿಗೆ ವಿವೇಕ ಇಲ್ಲ ಎಂದು ಹೇಳಿ ಮುಕ್ತ ಚರ್ಚೆಗೆ ಮನುವಾದಿಗಳನ್ನು ಆಹ್ವಾನಿಸಿದರು ಹಾಗು ವಿಶೇಷವಾಗಿ ನನ್ನನ್ನೂ ಕರೆದರು.

ಇದನ್ನೆಲ್ಲ ಗಮನಿಸಿದ ಕರ್ನಾಟಕ ದಲಿತ ವೆಲ್‌ಫೇರ್ ಟ್ರಸ್ಟ್‌ನ ಅಧ್ಯಕ್ಷರಾದ ಶಾಂತರಾಜು ಅವರು ಒಂದು ವಿಚಾರಸಂಕಿರಣವನ್ನು ಮಾಡಬೇಕೆಂದು ನಿರ್ಧರಿಸಿ ಪೇಜಾವರ ಸ್ವಾಮಿಗಳು ಸೇರಿದಂತೆ ಮನುವಾದಿಗಳಿಗೆ- ಸಂತೋಷ್ ಸ್ವಾಮೀಜಿ, ಪ್ರಣವಾನಂದ ಸ್ವಾಮೀಜಿ, ಪ್ರಮೋದ್ ಮುತಾಲಿಕ್- ಪತ್ರ ಬರೆದು ಚರ್ಚೆಗೆ ಆಹ್ವಾನಿಸಿದರು. ಶಾಂತರಾಜು ಅವರ ಪತ್ರಕ್ಕೆ ಯಾರೂ ಉತ್ತರಿಸಲಿಲ್ಲ, ಆದರೆ ಪೇಜಾವರ ಶ್ರೀಗಳು ಶಾಂತರಾಜು ಅವರಿಗೆ ಜೂನ್ 4, 2015ರಂದು ಸುಮಾರು ಸಂಜೆ 5 ಗಂಟೆಗೆ ತಮ್ಮ ಪಿ.ಎ. ಮೂಲಕ ಕರೆ ಮಾಡಿಸಿ ಮಾತನಾಡಿದರು. "ಈ ದಿನ ನಿಮ್ಮ ಪತ್ರ ನನ್ನ ಕೈ ಸೇರಿದೆ. ನೀವು ಜೂನ್ 7, 2015ರಂದು ಕಾರ್ಯಕ್ರಮ ನಿಗದಿಪಡಿಸಿದ್ದೀರಿ. ಅಂದು ನನಗೆ ಬಿಡುವಿಲ್ಲ, ಬೇರೆ ದಿನಾಂಕ ತಿಳಿಸಿ. ನಾನು ಸಿದ್ಧನಿದ್ದೇನೆ" ಎಂದರು. "ತಮಗೆ ಅನುಕೂಲವಾದ ತಾರೀಕನ್ನು ತಿಳಿಸಿ" ಎಂದು ಶಾಂತರಾಜು ಅವರು ಶ್ರೀಗಳಿಗೆ ತಿಳಿಸಿದರು. ಅದರಂತೆ ಅವರು "ಜೂನ್ 21ರಂದು ಇಟ್ಟುಕೊಳ್ಳಿ, ಬರುತ್ತೇನೆ" ಎಂದು ಹೇಳಿದರು. ಶಾಂತರಾಜು ಅವರು ಪೇಜಾವರ ಶ್ರೀಗಳು ಕೊಟ್ಟ ದಿನಾಂಕವನ್ನು ಖಚಿತಪಡಿಸಿಕೊಂಡು, ಮೈಸೂರು ವಿಶ್ವವಿದ್ಯಾನಿಲಯದ ರಾಣಿ ಬಹದ್ದೂರ್ ಸಭಾಂಗಣವನ್ನು ಕಾಯ್ದಿರಿಸಲು ಬಾಡಿಗೆ ಹಣವಾದ ರೂ. 13,910/- ನಗದು ಮತ್ತು ಮುಂಗಡ ಹಣವಾದ 18 ಸಾವಿರಕ್ಕೆ ಡಿಡಿ ಕಟ್ಟಿ ಎಲ್ಲಾ ಸಿದ್ಧತೆಗಳನ್ನು ಮಾಡಿದರು.


ಆದರೆ ಜೂನ್ 17, 2015ರಂದು ಶಾಂತರಾಜು ಅವರಿಗೆ ದೂರವಾಣಿ ಕರೆಯೊಂದು ಬಂತು. "ನಿಮ್ಮ ಕಾರ್ಯಕ್ರಮ ಸೂಕ್ಷ್ಮ ವಿಷಯಕ್ಕೆ ಸಂಬಂಧಪಟ್ಟದ್ದರಿಂದ ಮಾನ್ಯ ಕುಲಪತಿಗಳು 21.06.2015ರ ಕಾರ್ಯಕ್ರಮಕ್ಕೆ ಸಭಾಂಗಣ ಕೊಟ್ಟುದ್ದನ್ನು ರದ್ದುಪಡಿಸಿದ್ದಾರೆ" ಎಂದು ತಿಳಿಸಿದರು.

ಆಮೇಲೆ ಅದೇ ಜೂನ್ 21ರಂದು ಕೇಂದ್ರ ಸರ್ಕಾರ ಯೋಗ ದಿನಾಚರಣೆ ಮಾಡುವ ಸುದ್ದಿ ಬಂತು. ಈ ಸಂದರ್ಭದಲ್ಲಿ ಟಿವಿ-9 ವ್ಯವಸ್ಥಾಪಕರು ಪೇಜಾವರ ಶ್ರೀಗಳಿಗೆ 'ಯೋಗ ರತ್ನ' ಪ್ರಶಸ್ತಿ ನೀಡಲು ನಿರ್ಧರಿಸಿದರು. ಇದರಿಂದ ಶ್ರೀಗಳ ಕೋರಿಕೆಯ ಮೇರೆಗೆ ಆಯೋಜಿಸಿದ್ದ ಕಾರ್ಯಕ್ರಮವನ್ನು ಅನಿವಾರ್ಯವಾಗಿ ಮುಂದೂಡಬೇಕಾಯಿತು. ಅನಂತರ ಶಾಂತರಾಜು ಅವರಿಗೆ ಪೇಜಾವರ ಶ್ರೀಗಳೇ ಕರೆ ಮಾಡಿ "ಜೂನ್28 ರಂದು ಬರುತ್ತೇನೆ. ಕಾರ್ಯಕ್ರಮ ಇಟ್ಟುಕೊಳ್ಳಿ" ಎಂದರು ಹಾಗೂ ಭಗವದ್ಗೀತೆ ಪರವಾಗಿ ಮಾತನಾಡಲು ಕೆಲವರ ಹೆಸರುಗಳನ್ನು ದೂರವಾಣಿ ಮೂಲಕ ಶಾಂತರಾಜು ಅವರಿಗೆ ನೀಡಿದರು. ಶಾಂತರಾಜು ಅವರು ಭಗವದ್ಗೀತೆ ಪರವಾಗಿ ಮಾತನಾಡಲು ಯಾರನ್ನೂ ಸಂಪರ್ಕಿಸಿರಲಿಲ್ಲ, ಸ್ವಾಮೀಜಿ ಅವರೇ ಈ ಹೆಸರುಗಳನ್ನು ಸೂಚಿಸಿದ್ದರು. ಪ್ರಣವಾನಂದ ಶ್ರೀಗಳು, ಪ್ರಹ್ಲಾದಾಚಾರ್ಯ, ಪ್ರತಾಪ ಸಿಂಹ, ಗೋ. ಮಧುಸೂದನ, ಚಕ್ರವರ್ತಿ ಸೂಲಿಬೆಲೆ ಮತ್ತು ಆನಂದ ಸಂಪಿಗೆ - ಇವು ಪೇಜಾವರ ಶ್ರೀಗಳು ಸೂಚಿಸಿದ್ದ ಹೆಸರುಗಳು.

ಪ್ರಗತಿಪರರ ಪರವಾಗಿ ಶ್ರೀಮತಿ ಬಿ.ಟಿ. ಲಲಿತಾನಾಯಕ್, ಪ್ರೊ. ಅರವಿಂದ ಮಾಲಗತ್ತಿ, ಬಂಜಗೆರೆ ಜಯಪ್ರಕಾಶ್, ಯೋಗೇಶ್ ಮಾಸ್ಟರ್, ಇಂದೂಧರ ಹೊನ್ನಾಪುರ, ಪ್ರೊ. ರಾಮಚಂದ್ರೇಗೌಡ ಮತ್ತು ನನ್ನನ್ನು ಶಾಂತರಾಜು ಅವರು ಗೊತ್ತುಪಡಿಸಿದ್ದರು.

ಮೈಸೂರು ವಿಶ್ವವಿದ್ಯಾನಿಲಯ ರಾಣಿಬಹದ್ದೂರ್ ಸಭಾಂಗಣವನ್ನು ರದ್ದು ಮಾಡಿದ ಮೇಲೆ ಮೈಸೂರು ಮೆಡಿಕಲ್ ಕಾಲೇಜಿನ ಅಮೃತೋತ್ಸವ ಭವನದ ಸಭಾಂಗಣವನ್ನು ಪಡೆಯಲಾಯಿತು. ಇದಕ್ಕಾಗಿ 20 ಸಾವಿರ ರೂ. ಬಾಡಿಗೆಯನ್ನೂ ಪಾವತಿ ಮಾಡಲಾಯಿತು.


ವಿಚಾರಸಂಕಿರಣ ನಡೆಸಲು ಅನುಮತಿ ಕೋರಿ ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ಜೂನ್ 22ರಂದು ಅರ್ಜಿಯನ್ನು ಸಲ್ಲಿಸಲಾಯಿತು.



ಜೂನ್ 24, 2015ರಂದು ವೈದ್ಯಕೀಯ ಕಾಲೇಜಿನ ಅಮೃತೋತ್ಸವ ಭವನದ ಕಾರ್ಯದರ್ಶಿ ಅವರಿಂದ ಶಾಂತರಾಜು ಅವರಿಗೆ ಪತ್ರ ಬಂತು. ಅದರಲ್ಲಿ "ನಿಮ್ಮ ಕಾರ್ಯಕ್ರಮ ಬಹಳ ಸೂಕ್ಷ್ಮ ವಿಚಾರವಾಗಿದ್ದು ಪೊಲೀಸ್ ಆಯುಕ್ತರ ಮತ್ತು ಜಿಲ್ಲಾಡಳಿತದ ಅನುಮತಿ ಪತ್ರ ನೀಡಿದರೆ ನಿಮ್ಮ ಕಾರ್ಯಕ್ರಮವನ್ನು ನಡೆಸಬಹುದು" ಎಂದು ಬರೆದಿದ್ದರು.

ಪೊಲೀಸ್ ಇಲಾಖೆಯ ಅನುಮತಿಗಾಗಿ ಟ್ರಸ್ಟ್‌ನ ಎಲ್ಲಾ ಪದಾಧಿಕಾರಿಗಳ ಸಮೇತ ಅಧ್ಯಕ್ಷ ಶಾಂತರಾಜು ಅವರು ಪೊಲೀಸ್ ಆಯುಕ್ತರನ್ನು ಜೂನ್ 27ರಂದು ಭೇಟಿ ಮಾಡಿದರು. ಆಯುಕ್ತರು ಮತ್ತು ಪದಾಧಿಕಾರಿಗಳ ನಡುವೆ ಅರ್ಧ ಗಂಟೆಗೂ ಹೆಚ್ಚು ಕಾಲ ಚರ್ಚೆ ನಡೆದರೂ ಅನುಮತಿ ಪತ್ರ ಕೊಡಲು ಆಯುಕ್ತರು ನಿರಾಕರಿಸಿದರು. ಆದಾಗ್ಯೂ ಪದೇಪದೇ ಪ್ರಶ್ನೆಗಳನ್ನು ಹಾಕಲಾಯಿತು. ನೂರಾರು ಪತ್ರಗಳು ಮತ್ತು ದೂರವಾಣಿ ಕರೆಗಳು, ಮೆಸೇಜುಗಳು ಹಾಗೂ ಕನ್ನಡ ರಕ್ಷಣಾ ವೇದಿಕೆ- ಇವರಿಂದ ಬಂದ ಪ್ರತಿಭಟನೆಗಳನ್ನು ಗಮನಿಸಿ ಅನುಮತಿ ನೀಡಲು ನಿರಾಕರಿಸಲಾಗಿದೆ ಎಂದರು ಕಮೀಷನರ್.

ತಂಗಡಗಿ ಗ್ಯಾಂಗಿನ ವಿರುದ್ಧ ಹುಲಿಹೈದರ್ ಚಲೋ



ಜೂನ್ 24 ರಂದು ಗಂಗಾವತಿ, ಕನಕಗಿರಿ ಸಮೀಪದ ಹುಲಿಹೈದರ್ ಗ್ರಾಮದಲ್ಲಿ ಸೇರಿದ ಜನಸಾಗರ ಪ್ರಜಾಪ್ರಭುತ್ವದ ಉಳಿವಿಗಾಗಿ ಧ್ವನಿ ಎತ್ತಿತು. ಕನಿಷ್ಠ ಮೂರು ಸಾವಿರದಷ್ಟು ಜನರು ಹುಲಿಹೈದರ್‌ನಲ್ಲಿ ಸೇರಿದ್ದರು. ಕೊಪ್ಪಳ, ಬಳ್ಳಾರಿ, ರಾಯಚೂರಿನ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸಂಗಾತಿಗಳು 'ಗೂಂಡಾಗಿರಿ ಅಳಿಯಲಿ ಪ್ರಜಾಪ್ರಭುತ್ವ ಉಳಿಯಲಿ, ಅಸ್ಪೃಶ್ಯತೆ ತೊಲಗಲಿ ಮಾನವೀಯತೆ ಬೆಳೆಯಲಿ' ಎಂಬ ಒಕ್ಕೊರಲಿನ ಧ್ವನಿ ಹೊಮ್ಮಿಸಿದರು. ಹುಲಿಹೈದರ್ ಗ್ರಾಮದಲ್ಲಿಯ ಈ 'ಚಲೋ' ಈ ಭಾಗದ ಜನತೆಗೆ ಅಂಟಿದ್ದ ಜಡತೆಯನ್ನು ಕೊಡವಿ ಜಾಗೃತಗೊಳಿಸುವಂತಿತ್ತು.

ಕೆಂಪು ಬಾವುಟಗಳು ರಂಗೇರಿದ್ದವು, ಪ್ರತಿಭಟನೆಯ ಘೋಷಣೆಗಳ ಫಲಕಗಳು ಜನರನ್ನು ಚುರುಕುಗೊಳಿಸುವಂತಿದ್ದವು. ಸಚಿವ ಶಿವರಾಜ ತಂಗಡಗಿಯ ಬೆಂಬಲಿತರ ಉಪಟಳಕ್ಕೆ ಬೇಸತ್ತ ಜನರು ಇಲ್ಲಿ ಒಟ್ಟಾಗಿದ್ದರು. ತಾವು ನೇರವಾಗಿ ಎದುರಾಗದಿದ್ದರೂ, ಈ ಜೀವವಿರೋಧಿ ಶಕ್ತಿಗಳನ್ನು ಎದುರಿಸುವ ಚಳವಳಿಗಾರರಿಗೆ ಶಕ್ತಿಯಾಗಿ ಜೊತೆಗಿರೋಣ ಎಂಬ ಭಾವ ಅಲ್ಲಿ ಸೇರಿದ್ದ ಜನರಲ್ಲಿ ಕಾಣುತ್ತಿತ್ತು, ಕಾರಣ ಶಿವರಾಜ ತಂಗಡಗಿ ಮತ್ತು ಹನುಮೇಶ ನಾಯಕರ ದೌರ್ಜನ್ಯವನ್ನು ವಿರೋಧಿಸಿ ಕಟುವಾದ ಮಾತುಗಳು ಸಭೆಯಲ್ಲಿ ವ್ಯಕ್ತವಾದಾಗಲೆಲ್ಲಾ ಜನರು ಸಿಳ್ಳೆ, ಚಪ್ಪಾಳೆ, ಜೈಕಾರದೊಂದಿಗೆ ಬೆಂಬಲ ಸೂಚಿಸುವುದು ಕಾಣುತ್ತಿತ್ತು.

ಕೊಪ್ಪಳ ಭಾಗದಲ್ಲಿ ದಲಿತ ಸಮುದಾಯವು ಮೇಲ್ಜಾತಿಯ ನಿರಂತರ ಶೋಷಣೆಗೆ ಒಳಗಾಗಿದೆ. ಈ ಪ್ರಕರಣಗಳಿಗೆ ನ್ಯಾಯ ಸಿಗದ ಸ್ಥಿತಿಯೂ ಈ ಚಳವಳಿಯ ಬೆನ್ನಿಗಿದೆ. ಹೊಸಗುಡ್ಡ ಗ್ರಾಮದ ಹನುಮವ್ವನ ಕೊಲೆ ಪ್ರಕರಣ, ಮರಕುಂಬಿ ಮತ್ತು ಬೋಚನಹಳ್ಳಿಗಳಲ್ಲಿ ದಲಿತರಿಗೆ ಕ್ಷೌರವನ್ನೂ ಮಾಡಗೊಡದ ಮೇಲ್ಜಾತಿ ಸಮುದಾಯ ದಲಿತರ ಬದುಕುವ ಹಕ್ಕನ್ನೇ ಕಸಿದುಕೊಂಡು ಇಲ್ಲಿನ ದಲಿತ ನಾಯಕತ್ವವನ್ನು ಥಳಿಸಿ ದಲಿತರಿಗೆ ಶಾಶ್ವತವಾಗಿ ಅಘೋಷಿತ ಬಹಿಷ್ಕಾರ ಹಾಕಿದ ಪ್ರಕರಣ, ಕಲಾಲಬಂಡಿ ಗ್ರಾಮದ ದಲಿತರಿಗೆ ಮೇಲ್ಜಾತಿಗಳು ಮೈಕಿನ ಮೂಲಕ ರಾಜಾರೋಷವಾಗಿ ಬಹಿಷ್ಕಾರವನ್ನು ಸಾರಿ ಕೇರಿಯ ರಸ್ತೆಗೆ ಅಡ್ಡವಾಗಿ ಮುಳ್ಳುತಂತಿಯನ್ನು ಜಡಿದ ಪ್ರಕರಣ, ಹಿರೇಖೇಡದ ದಲಿತ ಕುಟುಂಬಗಳಿಗೆ ಬಹಿಷ್ಕಾರ ಹಾಕಿದ ಇಂತಹ ಪ್ರಕರಣಗಳಿಂದಾಗಿ ಈ ಭಾಗದ ದಲಿತ ಸಮುದಾಯಕ್ಕೆ ತಮ್ಮ ಪಾಡಿಗೆ ತಾವು ಬದುಕುವುದೂ ಕಷ್ಟವಾಗಿದೆ. ಕೃಷಿ ಕೂಲಿಕಾರ ದಲಿತರು ತಮ್ಮ ಸಂಘದ ಬೋರ್ಡ್ ಹಾಕಲೂ ಅಡ್ಡಿಪಡಿಸಲಾಗಿದೆ. ಅಲ್ಲಿನ ಕುಟುಂಬಗಳು ಈಗಲೂ ಆತಂಕದಲ್ಲಿ ಜೀವಿಸುತ್ತಿವೆ. ಈ ಸಮುದಾಯದ ಆತಂಕವನ್ನು ದೂರ ಮಾಡಿ ಆತ್ಮವಿಶ್ವಾಸ ತುಂಬುವ, ಅವರಲ್ಲಿ ಧೈರ್ಯ ತುಂಬಿ ಬದುಕಿಗೆ ಹೊಸ ಚೈತನ್ಯ ಮೂಡಿಸುವ ಆಳದ ಕಾಳಜಿಯೂ 'ಹುಲಿಹೈದರ್ ಚಲೋ' ವನ್ನು ರೂಪಿಸಿದ್ದವು.

ಹುಲಿಹೈದರ್ ಗ್ರಾಮದ ದುರುಗಮ್ಮನ ಗುಡಿ ಬಯಲಿನಲ್ಲಿ ನೆರೆದ ಜನರಲ್ಲಿ ಹದಿನೇಳು ವರ್ಷದ ಎಳೆಯ ಯುವಕ ಕನಕಾಪುರದ ಯಲ್ಲಾಲಿಂಗನ ಕೊಲೆ ಆತಂಕವನ್ನು ಹುಟ್ಟಿಸಿತ್ತು, ಸಭೆಯಲ್ಲಿ ಮುದುಡಿದಂತೆ ದುಃಖದ ಕಡಲಾಗಿ ಕೂತಿದ್ದ ಯಲ್ಲಾಲಿಂಗನ ತಾಯಿ ಮಾತನಾಡುತ್ತಾ ಸಭೆಗೆ ಚಾಲನೆ ನೀಡಿದರು. "ನನಗೆ ಆದ ಅನ್ಯಾಯ ಯಾವ ತಾಯಿಗೂ ಆಗಬಾರದು, ನನ್ನ ಮಗನನ್ನು ಕೊಂದವರಿಗೆ ಗಲ್ಲು ಶಿಕ್ಷೆಯಾಗಬೇಕು. ನಾನು ಸರಕಾರವನ್ನು ನಂಬಿದ್ದೇನೆ. ಸರಕಾರವೆ ನನ್ನ ಮಗನನ್ನು ಕೊಂದವರಿಗೆ ಶಿಕ್ಷೆ ಕೊಡಬೇಕು" ಎಂದು ಕಣ್ಣೀರಿಟ್ಟರು. ನೊಂದ ಈ ತಾಯಿಯ ಮಾತು ನೆರೆದ ಜನರ ಅಂತಃಕರಣವನ್ನು ಕಲಕುವಂತಿತ್ತು, ಕೊಪ್ಪಳದ ವಿಠ್ಠಪ್ಪ ಗೋರಂಟ್ಲಿ ಅವರು ಇಡೀ ಈ ಪ್ರಕರಣದ ವೃತ್ತಾಂತವನ್ನೂ, ಅದರ ಹಿಂದಿನ ಕ್ರೌರ್ಯವನ್ನು ಬಿಡಿಸಿ ಹೇಳುತ್ತಾ ಈ ಭಾಗದ ದೌರ್ಜನ್ಯದ ಘಟನೆಗಳ ಹಿನ್ನೆಲೆಯನ್ನು ಮನವರಿಕೆ ಮಾಡಿದರು. ಪ್ರಗತಿಪರರನ್ನು ಡೋಂಗಿ ಪ್ರಗತಿಪರರೆಂದು ಬಿಂಬಿಸುತ್ತಿರುವುದರ ಹಿಂದಿನ ರಾಜಕಾರಣವನ್ನು ಚರ್ಚೆಗೊಡ್ಡಿದರು.

ಲೇಖಕಿ ಬಿ.ಟಿ.ಲಲಿತಾ ನಾಯಕ "ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರೌಡಿ ದರ್ಬಾರುಗಳು ನಡೆಯುವುದಿಲ್ಲ, ನಾವು ಈ ದರ್ಪವನ್ನು ಸಹಿಸಲಾರೆವು, ಜನರು ಸಿಡಿದೆದ್ದರೆ ಯಾರ ಆಟವೂ ನಡೆಯುವುದಿಲ್ಲ, ಸಂವಿಧಾನಕ್ಕೆ ಬದ್ಧರಾಗಿ ಇಲ್ಲಿ ಜೀವಿಸಬೇಕಾಗುತ್ತದೆ" ಎಂದು ಜನರಲ್ಲಿ ಉತ್ಸಾಹ ತುಂಬುವ ಮಾತನಾಡಿದರು. ಚಿತ್ರದುರ್ಗದ ಮುರುಘಾ ರಾಜೇಂದ್ರ ಒಡೆಯರ್ ಅವರ ಸಿಡಿಗುಂಡಿನಂತಹ ಜವಾರಿತನದ ಮಾತುಗಳಿಗೆ ಜನರು ಧ್ವನಿಗೂಡಿಸಿ ಬೆಂಬಲ ಸೂಚಿಸಿದರು. ಉಳಿದಂತೆ ಕಾಮ್ರೇಡ್ ಜೆ.ಬಾರದ್ವಜ್, ಡಿ.ಹೆಚ್.ಪೂಜಾರ್, ಚಂದ್ರಶೇಖರ ಗೊರೆಬಾಳ್, ಕುಮಾರ ಸಮತಳ, ಹೆಚ್.ಎನ್.ಬಡಿಗೇರ, ಕೆ.ಬಿ.ಗೋನಾಳ್, ಪಂಪಾರೆಡ್ಡಿ ಹರಳಹಳ್ಳಿ, ಹಳ್ಳಿ ಬಸವರಾಜ, ನಾಗರಾಜ ಪೂಜಾರ್ ಇಂತಹ ಹತ್ತಾರು ಸಂಗಾತಿಗಳು ಹುಲಿಹೈದರ್ ಚಲೋವನ್ನು ರೂಪಿಸಿದ್ದರು.



ತಂಗಡಗಿ ಗ್ಯಾಂಗಿನ ವಿರುದ್ಧ ಬೃಹತ್ ರ್‍ಯಾಲಿ....

ಆದರೆ ಡಿಸಿಪಿ ಲಾ ಅಂಡ್ ಆರ್ಡರ್ ಅವರು "ಮುಖ್ಯಮಂತ್ರಿಗಳು ಸೂರಿನಲ್ಲಿದ್ದಾರೆ, ಗಲಾಟೆ ಸಂಭವಿಸಬಹುದೆಂದು ಅನುಮತಿ ನಿರಾಕರಿಸಲಾಗಿದೆ" ಎಂದು ಹೇಳಿದರು.

ಈ ಮಧ್ಯೆ ಮೆಡಿಕಲ್ ಕಾಲೇಜ್ ಅಮೃತೋತ್ಸವ ಭವನದ ಅಧ್ಯಕ್ಷರಾದ ಎಸ್.ಪಿ. ಯೋಗಣ್ಣನವರು "ನೀವು ಪೊಲೀಸ್ ಆಯುಕ್ತರಿಂದ ಅನುಮತಿ ತಂದುಕೊಡದೇ ಇರುವುದರಿಂದ ಕಾರ್ಯಕ್ರಮವನ್ನು ಮುಂದೂಡಲು ಸೂಚಿಸಲಾಗಿದೆ" ಎಂದು ಶಾಂತರಾಜು ಅವರಿಗೆ ಪತ್ರ ಬರೆದರು.

ಅನಂತರ ಕರ್ನಾಟಕ ದಲಿತ ವೆಲ್‌ಫೇರ್ ಟ್ರಸ್ಟ್‌ನ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಜಿಲ್ಲಾ ಸಚಿವರನ್ನೂ ಭೇಟಿ ಮಾಡಿದರು. ಅವರು "ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಆದರೆ ಸಿಎಂ ಅವರು ಅನುಮತಿ ನೀಡದಿರಲು ಸೂಚಿಸಿರುತ್ತಾರೆ" ಎಂದು ತಿಳಿಸಿ ಹೊರಟುಹೋದರು.

ಇದು ಏನನ್ನು ತೋರಿಸುತ್ತದೆ ಎಂದರೆ 'ಸರ್ಕಾರ ಪ್ರಜೆಗಳ ಅಗತ್ಯಗಳನ್ನು ಪೂರೈಸುವ ಮಂತ್ರದಂಡವಾಗಿಲ್ಲ, ಬದಲಾಗಿ ಅದು ಅವರನ್ನು ನಿಯಂತ್ರಿಸುವ ದಂಡವಾಗಿದೆ' ಎಂಬುದನ್ನು.


ಕೊನೆಗೆ ಪೊಲೀಸ್ ಆಯುಕ್ತರು ಹಾಗೂ ಕಾನೂನು ಮತ್ತು ಸುವ್ಯವಸ್ಥೆಯ ಉಪ ಆಯುಕ್ತರು ಮಾಧ್ಯಮದವರ ಮುಂದೆ "ಕರ್ನಾಟಕ ದಲಿತ ವೆಲ್‌ಫೇರ್ ಟ್ರಸ್ಟ್‌ನವರು ಏರ್ಪಡಿಸಿರುವ ಭಗವದ್ಗೀತೆ ಹಾಗೂ ಶ್ರೀರಾಮಾಯಣದ ಚರ್ಚೆಗೆ ಅನುಮತಿಯನ್ನು ನಿರಾಕರಿಸಲಾಗಿದೆ" ಎಂದು ಜೂನ್ 27ರ ರಾತ್ರಿ ಹತ್ತು ಗಂಟೆಗೆ ಹೇಳಿಕೆ ನೀಡಿದರು.

ಹಾಗಾಗಿ ಜೂನ್ 28 ರಂದು ಏರ್ಪಡಿಸಿದ್ದ, ಶಾಂತಿಯುತವಾಗಿ ನಡೆಯಬಹುದಾಗಿದ್ದ ಸದಾಶಯದ ಕಾರ್ಯಕ್ರಮ ವ್ಯವಸ್ಥೆಯ ಪಿತೂರಿಯಿಂದ ನಿಂತುಹೋಯಿತು. ಆದರೂ ಬೆಂಗಳೂರು, ಬೀದರ್, ಚಾಮರಾಜನಗರ, ಬಾಗಲಕೋಟೆಯಿಂದ ನೂರಾರು ಜನರು ಕಾರ್ಯಕ್ರಮ ನಡೆಯಬೇಕಿದ್ದ ಸ್ಥಳಕ್ಕೆ ಆಗಮಿಸಿದ್ದರು. ಅವರೆಲ್ಲ ಸರ್ಕಾರದ ಕ್ರಮವನ್ನು ಟೀಕಿಸುತ್ತ ಬೇಸರದಿಂದ ವಾಪಸ್ಸಾದರು.

ಅದೇ ದಿನ ಅಂದರೆ ಜೂನ್ 28ರ ಮಧ್ಯಾಹ್ನ ಮೈಸೂರಿನ ಸಂಸದ ಪ್ರತಾಪ ಸಿಂಹ ತರಾತುರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ, ಪ್ರೊ. ಭಗವಾನ್ ಮತ್ತು ಡಾ. ಬಂಜಗೆರೆ ಜಯಪ್ರಕಾಶ್‌ರನ್ನು 'ಹಂದಿ'ಗಳೆಂದು ನಿಂದಿಸಿದರು. ಅವರು ಕ್ಷಮೆ ಕೇಳದಿದ್ದರೆ ಉಗ್ರ ಹೋರಾಟ ಮಾಡುತ್ತೇವೆಂದು ಅಧ್ಯಕ್ಷ ಶಾಂತರಾಜು ತಿಳಿಸಿದ್ದಾರೆ. ಈ ಮಾತು ಸಂಸದರಿಗೆ ಶೋಭೆ ತರುವುದಿಲ್ಲ ಎಂದು ಕೆ. ರಘುರಾಂ ಬರೆದಿದ್ದಾರೆ. ಇದು ಎಲ್ಲಾ ನಾಗರಿಕರ ಅಭಿಪ್ರಾಯವಾಗಿದೆ. ಮೈಸೂರಿನ ಸಂಸದ ಪ್ರತಾಪ ಸಿಂಹ ಇಂಥ ಕೀಳುಭಾಷೆಯನ್ನು ಬಳಸಿ ತಮಗೂ, ತಾವು ಪ್ರತಿನಿಧಿಸುವ ಮತದಾರರಿಗೂ ಮತ್ತು ಸಂಸತ್ತಿಗೂ ನಿಜವಾಗಿ ಅವಮಾನ ಮಾಡಿದ್ದಾರೆ.

ಗೀತೆ ಮತ್ತು ರಾಮಾಯಣದ ಬಗ್ಗೆ ಚರ್ಚೆ ಮಾಡಿಯೇ ತೀರುತ್ತೇವೆ ಎಂಬುದು ಕರ್ನಾಟಕ ದಲಿತ ವೆಲ್‌ಫೇರ್ ಟ್ರಸ್ಟ್‌ನ ನಿಲುವಾಗಿದೆ.

■ ಕೆ.ಎಸ್. ಭಗವಾನ್



ಬಹಿರಂಗ ಸಭೆಯ ಆರಂಭಕ್ಕೆ ಹೋರಾಟದ ಹಾಡುಗಳು ಮೈನವಿರೇಳಿಸುವಂತಿದ್ದವು. ಹಾಡುಗಾರ ದಾನಪ್ಪ ನಿಲೋಗಲ್ ತಂಡದವರು ಜನಪರ ಹಾಡುಗಳನ್ನು ಹಾಡಿದರು. ಶರಣಪ್ಪ ವಡ್ಡೀಗೆರೆ ಯಲ್ಲಾಲಿಂಗನ ಕೊಲೆಯ ಕುರಿತು ಜನಪದ ಹಾಡು ಕಟ್ಟಿದ್ದರು. ಈ ಹಾಡು ಯಲ್ಲಾಲಿಂಗನನ್ನು ಹುತಾತ್ಮನಂತೆ ಚಿತ್ರಿಸಿ ಆತನ ಸಾವಿಗೆ ಕಾರಣವಾದ ಕ್ರೌರ್ಯವನ್ನು ಮನಗಾಣಿಸಿತು. ಈ ಹಾಡು ಕೇಳುತ್ತಾ ಯಲ್ಲಾಲಿಂಗನ ತಾಯಿಯ ದುಃಖದ ಕಟ್ಟೆಯೊಡೆದಂತೆ ಕಣ್ಣೀರಾದರು.

ಈ ಘಟನೆಯನ್ನು ಬಿಜೆಪಿ ಪಕ್ಷವು ರಾಜಕೀಯಕ್ಕೆ ದಾಳವಾಗಿ ಬಳಸಿಕೊಳ್ಳುತ್ತಿರುವ ಅಪಾಯವನ್ನು ಈ ಸಭೆ ಮನಗಾಣಿಸಿತು. ಅಂತೆಯೇ ಹಿಂದುಳಿದ ಹಿನ್ನೆಲೆಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ ಎಂಬಂತೆ ಕಟುವಾದ ಮಾತುಗಳು ವ್ಯಕ್ತವಾದವು. ಹಾಗೆಯೇ 'ಹುಲಿಹೈದರ್ ಚಲೋ' ಬಹಳ ಮುಖ್ಯವಾದ ಕೆಲವು ಪ್ರಮುಖ ಬೇಡಿಕೆಗಳನ್ನು ಆಳುವ ಸರಕಾರದ ಮುಂದಿಟ್ಟಿತು.

ಅವುಗಳೆಂದರೆ, ಸರಕಾರಕ್ಕೆ ಕಳಂಕ ತರುತ್ತಿರುವ ರೌಡಿಶೀಟರ್ ಹನುಮೇಶ ನಾಯಕನ ಹಿತರಕ್ಷಕರಾಗಿರುವ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ, ಯಲ್ಲಾಲಿಂಗನ ಹತ್ಯೆ ಮತ್ತು ಜಿಲ್ಲೆಯಲ್ಲಿ ಹೆಚ್ಚುತ್ತಿರುವ ದಲಿತ ದೌರ್ಜನ್ಯಗಳ ಹೊಣೆಯಲ್ಲಿ ರಾಜೀನಾಮೆ ನೀಡಬೇಕು. ಜಿಲ್ಲೆಯ ಹಲವು ಗ್ರಾಮಗಳಲ್ಲಿ ಅನಾಥವಾಗಿ ನೆಲೆಸಿರುವ ಸಾವಿರಾರು ದಲಿತರು ಹೊಟ್ಟೆ-ಬಟ್ಟೆಗಾಗಿ ಗುಳೆ ಹೋಗುತ್ತಿದ್ದು, ಆಯಾ ಗ್ರಾಮಗಳಲ್ಲೇ ಅವರಿಗೆ ಪೂರ್ಣಪ್ರಮಾಣದ ಉದ್ಯೋಗ ಕಲ್ಪಿಸಿಕೊಡಬೇಕು. ಈಗಲೂ ಜಾರಿಯಲ್ಲಿರುವ ಅಸ್ಪೃಶ್ಯತೆಯನ್ನು ತೊಡೆದುಹಾಕುವಲ್ಲಿ ಜಿಲ್ಲಾಡಳಿತ ವಿಫಲವಾಗಿದ್ದು ಸವರ್ಣೀಯರೊಂದಿಗೆ ಕೂಡಿ ಬಾಳುವ ಸಾಂಸ್ಕೃತಿಕ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಬೇಕು. ಜಿಲ್ಲೆಯ ಸಾಮಾಜಿಕ ಸ್ವಾಸ್ಥ್ಯಕ್ಕೆ ಆತಂಕಕಾರಿಯಾಗಿರುವ ಹನುಮೇಶನಾಯಕನ ಅಕ್ರಮ ಆಸ್ತಿ ತನಿಖೆಯಾಗಬೇಕು ಎಂದು ಆಗ್ರಹಿಸಲಾಯಿತು.

■ ಅರುಣ್ ಜೋಳದಕೂಡ್ಲಿಗಿ

ರೈತರ ಆತ್ಮಹತ್ಯೆ ನಿಮ್ಮ ಅವಧೀಲಿ ಜಾಸ್ತಿ ಸಾರ್!

ಥೂತ್ತೇರಿ

ಯಾಹೂ

ಮಂಡ್ಯ ಜಿಲ್ಲೆಯ ಪಾಂಡವಪುರದ ಸಮೀಪ ಕಬ್ಬು ಬೆಳೆದ ರೈತನೊಬ್ಬ ಅದಕ್ಕೆ ಬೆಂಕಿ ಹಚ್ಚಿ ಹಾರಿಕೊಂಡಿದ್ದಾನಲ್ಲಾ, ಈ ಭಯಾನಕ ಸುದ್ದಿ ಕೇಳಿ ಪ್ರಜ್ಞಾವಂತರು ಡ್ಯಾಮು ಕಟ್ಟಿ ರೈತರಿಗೆ ನೀರೊದಗಿಸುವುದರಿಂದ ಏನು ಪ್ರಯೋಜನ ಎಂದು ಗಂಭೀರವಾಗಿ ಚಿಂತಿಸುತ್ತಿದ್ದಾರಲ್ಲ, ಈ ಮಧ್ಯೆ ಮೈಸೂರು ಪ್ರದೇಶದ ನರಿಯೊಂದು ಸಿಂಹದ ಚರ್ಮ ಹೊದ್ದುಕೊಂಡು ದಾರಿಹೋಕ ಸಾಹಿತಿಗಳನ್ನ ಹೆದರಿಸಿದೆಯಂತಲ್ಲ, ಸದರಿ ನರಿ ವಿಕೃತಭಟ್ಟನ ಸೃಷ್ಟಿಯಾಗಿದ್ದು ಅದರ ಪೂರ್ವಾಶ್ರಮವನ್ನು ಕೆಣಕಿದರೆ ಶ್ಯಾನೆ ಸ್ವಾರಸ್ಯವಾಗಿದೆಯಂತಲ್ಲಾ, ಈ ನರಿ, ಗುಳ್ಳೆನರಿಯಾಗಿ ಬಾಲ್ಯಾವಸ್ಥೆಯಲ್ಲಿದ್ದಾಗ, ದಾರಿಹೋಕ ಚೆಡ್ಡಿ, ನರಿಗಳೆಲ್ಲಾ ಮನೆಗೆ ಬಂದು ಗುಳ್ಳೆ ನರಿಗೆ, ಭಾರತಾಂಬೆಯ ಪುತ್ರನಾಗುವಂತೆ ಮಾಡಿದ ಉಪದೇಶವೇ ರಕ್ತಗತವಾಗಿ, ಜನಿವಾರದ ಚೆಡ್ಡಿಗಳನ್ನೇ ತೆಗೆದು ಪಕ್ಕಕ್ಕೆ ಇಡುವಂತಹ ಪಕ್ಕಾ ಚೆಡ್ಡಿಯಾದನಂತಲ್ಲಾ, ಥೂತ್ತೇರಿ!

* * *

ಸದ್ಯಕ್ಕೆ ಸಿಂಹದ ಚರ್ಮ ಹೊದ್ದಿರುವ ಈ ನರಿ ಕೊಬ್ಬಿ ಮಾಂಸದ ವಾಸನೆಯಿಂದ, ರಕ್ತದ ರುಚಿಯಿಂದ ಪ್ರಾಪ್ತ ವಯಸ್ಸಿಗೆ ಬಂದಾಗ ತನ್ನ ಸಂಗಾತಿಯನ್ನೇ ಸಹೋದರಿ ಎಂದು ಹೇಳಿ, ಸರಕಾರದ ಸೈಟಿಗೆ ಅಂಗಲಾಚಿದನಂತಲ್ಲ, ಆ ಬಗ್ಗೆ ಎಷ್ಟೇ ಉಗಿದರೂ ಈ ಸಿಮ್ಮ ಬಾಯಿಬಿಡಲಿಲ್ಲವಂತಲ್ಲಾ, ಸಾಮಾನ್ಯವಾಗಿ ಹೊಟ್ಟೆ ತುಂಬಿದ ನರಿಗಳು ಊಳಿಡುವುದಿಲ್ಲ, ಅಂತೂ ಭಟ್ಟನ ಈ ಮಾನಸ ನರಿ ಬೆಳೆದು ದೊಡ್ಡದಾದ ನಂತರ ಅದರ ಮೇಲೆ ದೇವೇಗೌಡರ ಕಣ್ಣು ಕೂಡ ಬಿತ್ತು, ಪರಿಣಾಮವಾಗಿ "ವಿಶ್ವನಾಥ್ ಎಂಬ ಕೊಂಬಿಲ್ಲದ ಟಗರನ್ನು ಕೆಡವಲು ಈ ನರಿಯೇ ಸರಿ" ಎಂದು ಗೌಡರು ರಾತ್ರಿ ರಾಜಕಾರಣ ಮಾಡಿದ್ದರ ಫಲವಾಗಿ ಈ ನರಿ ವೇಷ ಕಳಚಿಕೊಂಡು ಸಿಂಹದ ಘರ್ಜನೆ ಮಾಡುತ್ತಿದೆಯಂತಲ್ಲಾ, ಥೂತ್ತೇರಿ!!



* * *

ಭಗವದ್ಗೀತೆಯ ಬೈಠಕ್ ರದ್ದಾಗಿದೆ. ನಾಲಿಗೆ ಮಸೆದುಕೊಂಡಿದ್ದ ಸಾಹಿತಿಗಳು, ಉಗುರು ಬೆಳೆಸಿಕೊಂಡಿದ್ದ ಪೇಜಾವರರ ಪಡೆಗೆ ನಿರಾಶೆಯಾಗಿದೆ. ಆದರೂ ಸಾಹಿತಿಗಳು "ಆ ಕೃಷ್ಣನೇ ಬಂದರೂ ನಾವು ಚರ್ಚೆಗೆ ಸಿದ್ಧ" ಎಂದು ಘರ್ಜಿಸಿದ್ದಾರಲ್ಲಾ.

ಮಹಾಭಾರತವನ್ನ ಎತ್ತಮುಂದಾಗಿ ನೋಡಿದರೂ ಭಗವದ್ಗೀತೆ, ಪುರೋಹಿತರು ಸೇರಿಸಿರುವ ಭಾಗ. ತನ್ನ ಅಜೆಂಡಾಗಳ ಮಾತನ್ನ ಆಗಾಗ್ಗೆ ಪೇಜಾವರರೇ ಈಶ್ವರಪ್ಪನ ಬಾಯಿಂದ ಹೊರಡಿಸುವಂತೆ, ಪುರೋಹಿತಶಾಹಿ ಹಿತಕಾಯುವ ವಿದ್ವಾಂಸರು ತಮ್ಮನ್ನು ಕಾಯುವ ಭಗವಂತನನ್ನ ಸೃಷ್ಟಿಸಿವೆ. ಅಂತ ಕೃಷ್ಣ ಬಂದರೂ ಒಂದೆ, ಈಶ್ವರಪ್ಪ ಬಂದರೂ ಒಂದೇ, ಗೆಲುವವನು ಮಾತ್ರ ಆ ಪೇಜಾವರ ಶ್ರೀಯಂತಲ್ಲಾ, ಥೂತ್ತೇರಿ!!

* * *

ರಾಜಕಾರಣದಲ್ಲಿ ಹಗಲುವೈರಿಗಳಾದ ದೇವೇಗೌಡ ಮತ್ತು ಕೃಷ್ಣ ಒಂದಾದರಂತಲ್ಲಾ, ಹರೆಯದಲ್ಲಿ ಹೋರಾಡುತ್ತ ಅದೂ ಪೆಟ್ಟಾಗದಂತಹ ಹೋರಾಟ ಮಾಡುತ್ತ ಮುಪ್ಪಿನಲ್ಲಿ ಒಂದಾಗಿರುವ ದಿಗ್ಗಜರು "ಸಮಾಜದ ಒಳಿತಿಗಾಗಿ ಒಂದುಗೂಡಿ ಹೋರಾಡೋಣ" ಎಂದರಂತಲ್ಲ, ಬಹಳ ಒಳ್ಳೆಯ ಸಂದರ್ಭ ಇದು. ಕಲೆ, ಸಾಹಿತ್ಯ, ಸಂಗೀತ, ರಾಜಕಾರಣವನ್ನ ಹದವಾಗಿ ಬೆರೆಸಿ, ರಾಜಕೀಯ ಮಾಡಿದ ಶಂಕರೇಗೌಡರ ಕುಟುಂಬ ಎಲ್ಲವನ್ನು ಕಳೆದುಕೊಂಡು ಅನಾಥವಾಗಿದೆ. ಮನೆಯನ್ನು ಮಾರಿಕೊಂಡಿದೆ. ಶಂಕರೇಗೌಡರ ಜೊತೆಯಲ್ಲೇ ರಾಜಕಾರಣ ಮಾಡಿ, ಬೆಟ್ಟದಂತಹ ಆಸ್ತಿ ಮಾಡಿಕೊಂಡಿರುವ ದಿಗ್ಗಜರು, ಶಂಕರೇಗೌಡರು ಮಾರಿಕೊಂಡಿರುವ ಮನೆ ಬಿಡಿಸಿಕೊಟ್ಟರೆ ಅದೇ ಅವರಿಗೆ ತೋರುವ ಗೌರವ. ಆದರೆ ಸ್ವಾಭಿಮಾನಿಯಾಗಿ ಬದುಕಿದ್ದ ಶಂಕರೇಗೌಡರಿಗಿದು ಗೊತ್ತಾದರೆ, ಸ್ವರ್ಗದಿಂದಲೇ ಘರ್ಜಿಸಿ "ಆ ಇಬ್ಬರೂ ಕೊಟ್ಟ ಕಸವನ್ನ ಅವರ ಮುಖದ ಮೇಲೆ ಎಸೆಯಿರಿ" ಎಂದರೂ ಆಶ್ಚರ್ಯವಿಲ್ಲವೆಂದು ಜಯಪ್ರಕಾಶ್ ಗೌಡರು ಹೇಳುತ್ತಿದ್ದಾರಲ್ಲ, ಥೂತ್ತೇರಿ!!

* * *

ಕರ್ನಾಟಕದ ಶಿರಭಾಗದಲ್ಲಿರುವ ಬೆಳಗಾಂನಲ್ಲಿ ವಿಧಾನಸಭೆ ನಡೆದಿದೆ. ಧಾರವಾಡದಿಂದ ಕಾಲುನಡಿಗೆ ಬಂದ ಕುಮಾರಣ್ಣನ ಜೊತೆಗೆ ಅಗ್ರಜನಂತೆ ಜೊತೆಗೂಡಿದ ಈಶ್ವರಪ್ಪ, ತಮ್ಮ ಹಸಿರು ಟವಲ್‌ಗಳನ್ನೇ ಕುಮಾರಣ್ಣನ ಹೆಗಲಿಗೆ ಹಾಕಿದ ರೈತ ಸಂಘದವರು, ಕೆಟ್ಟರ್ ಪಡೆ, ಜೋಷಿಯ ಪರಿವಾರ, ಎಲ್ಲರೂ ಸೇರಿ ಹಸಿರು ಪಾಗಳ ಮಧ್ಯೆ ಇರುವ ಸುವರ್ಣ ಸೌಧದ ಕಡೆ ಬರುತ್ತಿರಬೇಕಾದರೆ ಬಾಬ್ರಿ ಮಸೀದಿ ಕಡೆ ಹರಿದುಬಂದ ಅಡ್ವಾನಿ ಪಡೆ ನೋಡಿದಂತಾಯ್ತಲ್ಲಾ, ಇಂತಹ ಅಪರೂಪದ ದೃಶ್ಯದ ಸಂಭ್ರಮ ಹಂಚಿಕೊಳ್ಳಲು ಕುಮಾರಣ್ಣನಿಗೆ ಫೋನ್ ಮಾಡಿದರೆ ರಿಂಗಾಯ್ತು

ರಿಂಗ್‌ಟೋನ್: "ಬಿಸಿಲಾದರೇನು.... ಮಳೆಯಾದರೇನು...."

"ಹಲೋ ಯಾರು?"

"ನಮಸ್ಕಾರ, ನಾನು ಸಾರ್ ತಿರುಬೋಕಿ ಟಿ.ವಿಯಿಂದ ಮಾತಾಡ್ತಾಯಿದ್ದಿನಿ."

"ತಮ್ಮ ಸರೇನು?"

"ಬಿ. ಬೇ. ಬಾ. ಭಟ್ಟ ಅಂತ ಸಾರ್."

"ಇದೇನು ಮೂರು ಇನಿಸಿಯಲ್ ಇಟಗೊಂಡಿದ್ದಿರಿ?"

"ಬಿಸಿಬೇಳೆ ಬಾತ್ ಭಟ್ಟ ಅಂತ ಸಾರ್. ಬಹಳ ರುಚಿಯಾಗಿ ಮಾಡತಿದ್ದೆ, ಹೋಟ್ಲು ಬಾಗಲಾಕಿ ಈಗ ತಿರುಬೋಕಿ ಟಿ.ವಿಲಿದ್ದಿನಿ."

"ಒಳ್ಳೆದು. ಮನುಷ್ಯ ಜೀವನ ಮಾಡ್ತಕಂತ ಸಂದರ್ಭದಲ್ಲಿ ಯಾವುದಾದ್ರು ಒಂದು ಉದ್ಯೋಗ ಮಾಡ್ತಯಿರಬೇಕಾಯ್ತದೆ."

"ತಮ್ಮ ಪಾದಯಾತ್ರೆ ತುಂಬಾ ಸುಂದರವಾಗಿತ್ತು, ಭವ್ಯವಾಗಿತ್ತು ಮತ್ತೆ ಅದ್ಭುತವಾಗಿತ್ತು ಸಾರ್."

"ಮೊದಲೇ ತಯಾರಿ ನಡೆಸಿದ್ರೆ ಮೈಸೂರಿನಿಂದ್ಲೇ ಮಾಡತಿದ್ದೆ. ಅದ್ರು ಧಾರವಾಡ ಏನು ಕಡಿಮೆ ದೂರ ಇಲ್ಲ. ನಡಿತಾಯಿರುವಾಗ ಗೊತ್ತಾಯ್ತು."

"ನಿಮ್ಮ ಜೊತೆ ಬರತಿದ್ದ ಕೆಲವರು ಮಧ್ಯದಲ್ಲೇ ಓಡಿಬುಟ್ರಲ್ಲ ಸಾರ್."

"ಚೆಲುವರಾಯಸ್ವಾಮಿ ಓಡಿದ ಅಷ್ಟೆ."

"ನಿಮ್ಮ ಪರಿವಾರನ ಸುವರ್ಣಸೌಧದತ್ರ ನಿಂತುಗಂಡು ನೋಡಿದಾಗ ನಿಜಕ್ಕು ರೋಮಾಂಚನ ಆಯ್ತು ಸಾರ್. ಒಂದು ತರ ನೀವು ದೇವೇಗೌಡರನ್ನ ಮುಖ್ಯಮಂತ್ರಿ ಮಾಡುವಾಗ ವಿಧಾನಸೌಧಕ್ಕೆ ಜನ ತಂದು ಮುತ್ತಿಗೆ ಹಾಕಿಸಿದ್ರಲ್ಲ, ಅಂಗೆ ಮಾಡ್ತಿರೇನೊ ಅನ್ನಕಂಡಿದ್ದೆ."

"ಅಂಗೆ ಮಾಡ್ತಕಂತದ್ದೇನೂ ದೊಡ್ಡ ಸುದ್ದಿಯಲ್ಲ, ಜನ ಸೇರಸದು ಅವುರಿಗೆ ಊಟ ವಸತಿ ಮಾಡೋದು ಮತ್ತೆ ಚಳವಳಿ ಮಾಡದಕಿಂತ ಇವತ್ತು ಕರ್ನಾಟಕದಲ್ಲಿ ರೈತರು ಆತ್ಮಹತ್ಯೆ ಮಾಡಿಕಳದನ್ನ ತಡಿಯದರ ಬಗ್ಗೆ ಆರು ಕೋಟಿ ಜನ ಚಿಂತನೆ ಮಾಡಬೇಕಾಗಿದೆ."

"ಸಾರ್ ತಮ್ಮ ಅವಧೀಲೂ ರೈತರು ಜಾಸ್ತಿನೆ ಆತ್ಮಹತ್ಯೆ ಮಾಡಿಕೊಂಡ್ರಂತಲ್ಲ ಸಾರ್?"

"ಯಾರ್ರಿ ಹೇಳಿದ್ದು? ನನ್ನ ಅವಧೀಲಿ ಜನ ಬೇರೆ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿರಬಹುದು. ರೈತರು ಮಾತ್ರ ನಮ್ಮ ಜೊತೆ ನಮ್ಮ ತಂದೆಯವರ ಜೊತೆ ಇದ್ರು."

"ಸಾರ್, ಒಂದು ನಿಖರವಾದ ಅಂಕಿಅಂಶ ಇದೆ. ಕೊಡ್ಲ ಸಾರ್?"

"ಹೇಳಿ, ಬೇಕಿದ್ರೆ ಸದನದಲ್ಲೇ ಪ್ರಸ್ತಾಪ ಮಾಡ್ತಿನಿ."

"ನೋಡಿ ಸಾರ್, ನಿಮ್ಮ ಒಂದು ವರ್ಷದ 253 ದಿನದ ಅವಧೀಲಿ ಕರಕ್ಟಾಗಿ 400 ಜನ ರೈತರು ಆತ್ಮಹತ್ಯೆ ಮಾಡಿಕೊಂಡವ್ರೆ. ಆಗ ನಿಮ್ಮ ತಂದೆ ಯಾವ ರೈತನ ಮನೆ ಬಾಗಲಿಗೂ ಹೋಗಲಿಲ್ಲ. ಆ ಪ್ರಸ್ತಾಪನೆ ಮಾಡಲಿಲ್ಲ."

"ಹಾಗಿದ್ರೆ ಅವರು ರೈತರಲ್ಲ ಕಂಡ್ರೀ."

"ಆಯ್ತು ಕೃಷಿಕರು ಅನ್ನಕಳನ. ಇನ್ನ ನಿಮ್ಮ ಆತ್ಮೀಯ ಯಡಿಯೂರಪ್ಪನ 4 ವರ್ಷದ 345 ದಿನದ ಆಡಳಿತದಲ್ಲಿ 1077 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದಾರೆ."

"ಇರಬಹುದು ಬಿಡಿ."

"ಈ ಸಿದ್ದರಾಮಯ್ಯನ 2 ವರ್ಷ 47 ದಿನದ ಆಡಳಿತದಲ್ಲಿ 47 ಜನ ಆತ್ಮಹತ್ಯೆ ಮಾಡಿಕೊಂಡಿದಾರೆ. ಇದಕೇನೇಳ್ತಿರಿ?"

"ಯಾರೂ ಆತ್ಮಹತ್ಯೆ ಮಾಡಿಕೋಬ್ಯಾರ್ದು ಅಂತ ಹೇಳ್ತಿನಿ. ನಾನು ಪಾದಯಾತ್ರೆ ಮಾಡಿದ್ದು ಅದಕ್ಕೆ ಕಂಡ್ರಿ."

"ಸಾರ್ ಇನ್ನೊಂದು ವಿಷಯ. ನೀವು ಪಾದಯಾತ್ರೆ ಮಾಡುವಾಗ ಮಹಿಳೆಯರು ನಿಮ್ಮ ನೋಡೋದಕ್ಕೆ ತುಂಬಾ ಹಾತೊರೀತಾಯಿದ್ರು ಸಾರ್."

"ಯಾಕೆ ಅಂದ್ರೆ ನಾನು ಅವುರ ಮನೆ ಮಗನ ತರ ಅಥವಾ ಅವರ ಅಣ್ಣ ತಮ್ಮನ ತರ ಕಾಣ್ತಿನಿ. ಅದಕ್ಕೆ ಅವರು ನನ್ನನ್ನ ನೋಡೋದಕ್ಕೆ, ಮುಟ್ಟೋದಕ್ಕೆ ಇಷ್ಟಪಡ್ತಾರೆ. ಚಾಮುಂಡೇಶ್ವರಿ ಚುನಾವಣೆ ಟೈಮಲ್ಲಿ ಒಬ್ಬ ಮಹಿಳೆ ಹಾಲು ಮಾರಿ ಹಾಲನ್ನ ಕೊಂಡಕಂಡು ಬಂದು ನನ್ನ ಫೋಟೋಗೆ ಅಭಿಷೇಕ ಮಾಡಿದ್ಲು, ಅಂದ್ರೆ ಕರ್ನಾಟಕದ ಮೂರು ಕೋಟಿ ಮಹಿಳೆಯರು ನನ್ನ ಬಗ್ಗೆ ಇಟ್ಟುಕೊಂಡಿರತಕ್ಕಂತ ಭಾವನೆಗೆ ಬಹುಶಃ ನಾನು ಈ ಜನ್ಮದಲ್ಲಿ ಅವರ ಋಣ ತೀರಿಸತಕ್ಕಂತ ಏನಾದ್ರು ಮಾಡಬೇಕು ಅನ್ನವಷ್ಟ ಈ ಅಧಿವೇಶನದ ನಂತರ ಚಿಂತನೆ ಮಾಡ್ತಿನಿ."

ಥೂ ಥೂ ಥೂತ್ತೇರಿ!! ■

ಲೋಕಾಯುಕ್ತರ ಬುರುಡೆಗೇ ಬಿಸಿನೀರು

ಯಾರು ಈ ಹೊಟ್ಟೆ ಕೃಷ್ಣ?

ಬೆಂಗಳೂರಿನ ಪ್ರತಿಷ್ಠಿತ ಸೆಂಟ್‌ಮಾರ್ಕ್ಸ್ ರಸ್ತೆಯಲ್ಲಿ ಐಷಾರಾಮಿ ಕಾಂಪ್ಲೆಕ್ಸ್ ಒಂದಿದೆ. ಅದರ ಹೆಸರು ಲಾರ್ಡ್ಸ್‌ಹೌಸ್. ಬಿಷಪ್ ಕಾಟನ್‌ಗೂ ಮುನ್ನ ಬೌರಿಂಗ್ ಇನ್‌ಸ್ಟಿಟ್ಯೂಟ್‌ನ ನಂತರ ಕಣ್ಣು ಕುಕ್ಕುವ ಲಾರ್ಡ್ಸ್‌ಹೌಸ್ ಕಾಂಪ್ಲೆಕ್ಸ್‌ನ ಎರಡನೇ ಮಹಡಿಯಲ್ಲಿರುವುದೇ 'ಕೃಷ್ಣ ಎಂಟರ್‌ಪ್ರೈಸಸ್' ಎಂಬ ನಿಗೂಢ ಛೇಂಬರ್. ಅಲ್ಲಿ ಏನು ನಡೆಯುತ್ತದೆ? ಇಂಥಾದ್ದೊಂದು ಛೇಂಬರ್‌ನ ಉದ್ದೇಶವೇನು? ಅದರ ಒಡೆಯರ್‍ಯಾರು? ಅಲ್ಲಿಗೆ ಯಾರ್‍ಯಾರು ಯಾಕಾಗಿ ಬರುತ್ತಾರೆ? ಇತ್ಯಾದಿ ಏನೊಂದೂ ಗೊತ್ತಾಗುವುದಿಲ್ಲ, ಕೆಲವರ ಪ್ರಕಾರ ಅದೊಂದು ಐಟಿ ಕಂಪೆನಿಯ ಹೆಡ್ಡಾಫೀಸು. ಇನ್ನೂ ಕೆಲವರ ಪ್ರಕಾರ ಅದು ಷೇರ್ ಮಾರ್ಕೆಟಿಂಗ್ ಕಂಪೆನಿ. ಮತ್ತೂ ಕೆಲವರ ಪ್ರಕಾರ ಅದರ ಧಣಿ ಓರ್ವ ನಟೋರಿಯಸ್ ಅಂಡರ್‌ವರ್ಲ್ಡ್ ಡಾನ್ ಮತ್ತು ಆತನ ದಂಧೆ ರಿಯಲ್ ಎಸ್ಟೇಟ್!

ದಿನದ ಯಾವ ಗಳಿಗೆಯಲ್ಲಾದರೂ ಫಾರ್ಚುನರ್ ಕಾರೊಂದು ಲಾರ್ಡ್ಸ್ ಹೌಸ್ ಪೋರ್ಟಿಕೋದಲ್ಲಿ ಬಂದು ನಿಂತಿತೆಂದರೆ ಅದರ ಧಾಂಡಿಗ ಡ್ರೈವರ್ ವಿನಮ್ರನಾಗಿ ಹೊರಬಂದು ಬಾಗಿಲು ತೆರೆಯುತ್ತಾನೆ. ಮೊದಲು ಡ್ರೈವರ್ ಸೀಟ್ ಪಕ್ಕದಿಂದ ಪಿಎ ಓರ್ವ ಬ್ರೀಫ್‌ಕೇಸ್ ಸಮೇತ ಹೊರಬಂದು ಧಣಿ ಇಳಿಯುವುದನ್ನೇ ಕಾದು ನಿಲ್ಲುತ್ತಾನೆ. ಆ ನಂತರ ಯಾರೋ ಬಾಡಿಗಾರ್ಡ್ ಗೆಟಪ್ಪಿನ ಮತ್ತೊಬ್ಬ ದಾಂಡಿಗ ಬಂದಿದ್ದೇ ಧಣಿಗೆ ಗನ್‌ಮನ್‌ನಂತೆ ಸುತ್ತುವರಿಯುತ್ತಾನೆ. ಜೊತೆಗೊಂದಿಬ್ಬರು ಗಿರಾಕಿಗಳಂಥವರೂ ಕಾರಿನಿಂದಿಳಿಯುತ್ತಾರೆ. ಇವರೆಲ್ಲರ ಮಧ್ಯೆ ಠೇಂಕಾರದಿಂದ ದಢೂತಿ ದೇಹವೊಂದು ಕಾರಿನಿಂದಿಳಿಯುತ್ತದೆ. ಅಂಗೈಗೆ ಬಂಗಾರದ ಖಡಗ. ಎರಡೂ ಕೈನ ಎಂಟೂ ಬೆರಳುಗಳಿಗೆ ಚಿನ್ನದುಂಗುರಗಳು. ಅವುಗಳ ನಡುವೆ ಮಿರಿಮಿರಿ ಮಿಂಚುವ ಹರಳು ಮತ್ತು ಕೊರಳಲ್ಲಿ ಹಗ್ಗ ಹೋಲುವ ಮಾರೆಳೆ ಚಿನ್ನದ ಚೈನು...!

ಈತನೇ ಕೃಷ್ಣ ಯಾನೇ ಕೃಷ್ಣರಾವ್ ಅಲಿಯಾಸ್ ಕೆಐಎಡಿಬಿ ಕೃಷ್ಣ ಅರ್ಥಾತ್ ಡೀಲರ್ ಕೃಷ್ಣ!

ಬೆಂಗಳೂರಿನಲ್ಲಿ ಬಿಡಿಎ, ಕೆಐಎಡಿಬಿ, ಬಿಬಿಎಂಪಿ, ಕಂದಾಯ ಭವನ, ಟೌನ್ ಪ್ಲಾನಿಂಗ್, ಬಿಎಂಆರ್‌ಡಿಎ ಇತ್ಯಾದಿ ರಿಯಲ್ ಎಸ್ಟೇಟ್ ಸಂಬಂಧಿ ಯಾವುದೇ ಸರ್ಕಾರಿ ಕಚೇರಿಗಳ ಅಧಿಕಾರಿಗಳಿಗೆ ಮೈತುಂಬಾ ಚಿನ್ನಾಭರಣಧಾರಿ ಕೃಷ್ಣನ ಚರ್ಯೆ ಹೊಸದೇನಲ್ಲ. ಕೆಲವೊಮ್ಮೆ ಪತ್ರಿಕಾಸಂಸ್ಥೆಯೊಂದರ ಧಣಿ, ಇನ್ನೊಮ್ಮೆ ಆರ್‌ಟಿಐ ಆಕ್ಟಿವಿಸ್ಟ್, ಮತ್ತೊಮ್ಮೆ ರಿಯಲ್ ಎಸ್ಟೇಟ್ ಧಣಿ, ಮಗದೊಮ್ಮೆ ಲೋಕಾಯುಕ್ತರ ಏಜೆಂಟ್ ಹೀಗೆ ಅವರವರ ಭಾವ ಮತ್ತು ಬಕುತಿಗೆ ತಕ್ಕಂತೆ ಅವತಾರವೆತ್ತುವ ಈ ಕೃಷ್ಣಾವತಾರಿ ಬಹುರೂಪಿ.




ಕೃಷ್ಣರಾವ್

ಯಾವುದೇ ದುಸ್ಸಾಧ್ಯ ಕೆಲಸವನ್ನೂ ಚಟಿಕೆ ಹೊಡೆದಷ್ಟೇ ಸಲೀಸಾಗಿ ಮುಗಿಸಬಲ್ಲ ಕೃಷ್ಣ ಕೊಡುಗೈ ದಾನಿಯೂ ಹೌದು. ಅಪರೂಪಕ್ಕೊಮ್ಮೆ ಸಾಮಾಜಿಕ ಚಿಂತಕ ಕೂಡ. ದಲಿತ ಚಳವಳಿ ಸೇರಿದಂತೆ ಕನ್ನಡ ಪರ ಹೋರಾಟ, ಭ್ರಷ್ಟಾಚಾರ ವಿರೋಧಿ ಪ್ರತಿಭಟನೆ ಎಲ್ಲಕ್ಕೂ ಈತ ಕೈಲಾದಮಟ್ಟಿಗೆ ಕಾಸು ಬಿಚ್ಚಬಲ್ಲ. ಆದರೆ ಎಲ್ಲರಿಗೂ ಪ್ರಶ್ನೆಯಾಗಿ ಕಾಡುವುದು ಈತನ ಆದಾಯ ಮೂಲ. ಈ ಹಿಂದೆ ಈತ ದಿನಂಪ್ರತಿ ಕೆಐಎಡಿಬಿ ಕಚೇರಿ ಇರುವ ನೃಪತುಂಗ ರಸ್ತೆಯಲ್ಲೇ ಅಡ್ಡೆ ಹಾಕುತ್ತಿದ್ದ. ನಂತರ ಬಿಡಿಎ ಕಚೇರಿ ಪಕ್ಕದಲ್ಲೇ ತನ್ನದೊಂದು ಚೇಂಬರ್ ತೆರೆದ. ತೀರಾ ಇತ್ತೀಚೆಗೆ ಕೃಷ್ಣ ಅಡ್ಡೆ ಹಾಕುತ್ತಿದ್ದದ್ದು ಅಂಬೇಡ್ಕರ್ ವೀಧಿಯ ಲೋಕಾಯುಕ್ತ ಕೇಂದ್ರ ಕಚೇರಿಯಲ್ಲಿ!

ಸದ್ಯ ಲೋಕಾಯುಕ್ತದ ಸಾರ್ವಜನಿಕ ಸಂಪರ್ಕ ವಿಭಾಗದ ಜಾಯಿಂಟ್ ಕಮೀಷನರ್ ಸೈಯದ್ ರಿಯಾಜ್‌ರ ಚೇಂಬರಿನಲ್ಲೇ ಅಡ್ಡೆ ಹಾಕುತ್ತಿದ್ದ. ಸೋಕಾಲ್ಡ್ ಕೃಷ್ಣರಾವ್ ಬೇರೆ ಯಾರೂ ಅಲ್ಲ ಇದೇ ಕೆಐಎಡಿಬಿ ಕೃಷ್ಣ ಲೋಕಾಯುಕ್ತ ನ್ಯಾಯಮೂರ್ತಿ ವೈ. ಭಾಸ್ಕರ್‌ರಾವ್ ಹೆಸರನ್ನು ಗಟಾರಕ್ಕೆಳೆದು ಅವರ ಮಗ ಅಶ್ವಿನ್‌ನನ್ನೇ ಬುಟ್ಟಿಗೆ ಹಾಕಿಕೊಂಡು ಇಡೀ ಲೋಕಾಯುಕ್ತ ವ್ಯವಸ್ಥೆಯನ್ನೇ ಗಡಗಡ ನಡುಗಿಸುತ್ತಿರುವ ಈ ಕೃಷ್ಣರಾವ್‌ನನ್ನೇ ಮೀಡಿಯಾಗಳು ಲೋಕಾಯುಕ್ತರ ಸಂಬಂಧಿಯೆಂಬ ಭ್ರಮೆಗೆ ಬಿದ್ದಿವೆ. ಸಿದ್ದು ಸರ್ಕಾರ ಲೋಕಾಯುಕ್ತ ಲಂಚಕಾಂಡದ ತನಿಖೆಗೆಂದೇ ಕಾರಾಗೃಹ ಎಡಿಜಿಪಿ ಕಮಲ್‌ಪಂತ್ ನೇತೃತ್ವದ ವಿಶೇಷ ತನಿಖಾ ತಂಡ ರಚಿಸಿದೆ. ಲೋಕಾಯುಕ್ತ ಎಸ್ಪಿ ಸೋನಿಯಾ ನಾರಂಗ್ ಇದೇ ಜುಲೈ 6ಕ್ಕೆ ತಮ್ಮದೇ ಪ್ರತ್ಯೇಕ ತನಿಖಾ ವರದಿ ಸಲ್ಲಿಸಲಿದ್ದಾರೆ. ಇದೆಲ್ಲಕ್ಕೂ ಅಂಕುಶವಿಟ್ಟಂತೆ ಹೈಕೋರ್ಟ್ ಲೋಕಾಯುಕ್ತ ಲಂಚಕಾಂಡದ ತನಿಖೆಗೇ ತಡೆ ನೀಡಿಬಿಟ್ಟಿದೆ.

ಲೋಕಾಯುಕ್ತದ ಒಳಗೇ ಭ್ರಷ್ಟರಕ್ಷಕ ಕೂಟವೊಂದು ಅಸ್ತಿತ್ವಕ್ಕೆ ಬಂದಿದ್ದು ನಿನ್ನೆಮೊನ್ನೆಯೇನಲ್ಲ, ಮೈಸೂರು ಬ್ಯಾಂಕ್ ಸರ್ಕಲ್ಲಿನ ಕಂದಾಯ ಭವನ, ಡಿಸಿ ಆಫೀಸ್, ತಹಸೀಲ್ದಾರ್ ಕಚೇರಿಗಳು, ಕೆಐಎಡಿಬಿ, ಬಿಬಿಎಂಪಿ, ಕೆ.ಆರ್. ವೃತ್ತದ ಲೋಕೋಪಯೋಗಿ ಕೇಂದ್ರ ಕಾರ್ಯಾಗಾರ, ಬಿಡಿಎ, ಎಂ.ಎಸ್. ಬಿಲ್ಡಿಂಗ್‌ನ ನಗರ ಯೋಜನಾ ಇಲಾಖೆ ಹೆಡ್ಡಾಫೀಸು, ನಗರ ಜಿಲ್ಲಾ ಪಂಚಾಯ್ತಿ ಕಚೇರಿ- ಹೀಗೆ ಬೆಂಗಳೂರಿನ ಆಯಕಟ್ಟಿನ ಸರ್ಕಾರಿ ಕಚೇರಿಗಳಲ್ಲಿ ನಡೆಯುತ್ತಿರುವ ಬಹಿರಂಗ ಭ್ರಷ್ಟಾಚಾರವನ್ನು ಕಂಡ ಯಾರಿಗಾದರೂ

ಲೋಕಾಯುಕ್ತ ಅಸ್ತಿತ್ವದ ಪ್ರಶ್ನೆ ಮೂಡಲೇಬೇಕು.

ಗರ್ಭಗುಡಿಯಲ್ಲೇ ಕಳ್ಳರು

ಅದು 2012ರ ಕಾಲ. ಆಗ ಲೋಕಾಯುಕ್ತರಾಗಿದ್ದದ್ದು ಸಂತೋಷ್ ಹೆಗ್ಡೆ. ನಿಷ್ಠುರಿ ಐಪಿಎಸ್‌ಗಳಲ್ಲೊಬ್ಬರಾದ ಮಧುಕರ್ ಶೆಟ್ಟಿ ಆಗ ಲೋಕಾಯುಕ್ತಕ್ಕೆ ಎಸ್ಪಿಯಾಗಿದ್ದರು. ಅದೊಂದು ದಿನ ಲೋಕಾಯುಕ್ತರ ಗನ್‌ಮನ್ ಆಗಿದ್ದ ಚನ್ನಬಸವಯ್ಯ ಎಂಬ ಪೊಲೀಸ್ ಪೇದೆಯ ಮನೆ ಮೇಲೆಯೇ ಮಧುಕರ್ ಶೆಟ್ಟರ ಪಡೆ ದಾಳಿ ನಡೆಸಿತು. ಪೇದೆ ಚನ್ನಬಸವಯ್ಯನ ಮನೆಯಲ್ಲಿ ಆತನಿಗೆ ಸೇರಿದ ಏಳು ಫ್ಲಾಟುಗಳು, ಎರಡು ಮನೆಗಳು, ಲಕ್ಷಾಂತರ ರೂಪಾಯಿಗಳ ಒಡವೆ, ಅಷ್ಟೇ ಮೊತ್ತದ ನಗದು ಪತ್ತೆಯಾಗಿತ್ತು. ಒಬ್ಬ ಸಾಮಾನ್ಯ ಪೇದೆಯೇ ತಾನು ಲೋಕಾಯುಕ್ತರ ಗನ್‌ಮನ್ ಎಂದು ಆಯಕಟ್ಟಿನ ಅಧಿಕಾರಿಗಳನ್ನು ಸುಲಿದು ಖಮಾಯಿಸಿದ್ದ ಮೊತ್ತವಿದು. ಇನ್ನು ಲೋಕಾಯುಕ್ತದ ಇನ್ಸ್‌ಪೆಕ್ಟರ್‌ಗಳು, ಡಿವೈಎಸ್‌ಪಿಗಳು, ಎಸ್‌ಪಿ ರ್‍ಯಾಂಕಿನ ಅಧಿಕಾರಿಗಳು ಜೇನು ಅಳೆದೂ ಕೈ ನೆಕ್ಕುವುದಿಲ್ಲವಾ?

ಇದು ಭ್ರಷ್ಟರ ಬೇಟೆಗೆಂದೇ ಹುಟ್ಟಿಕೊಂಡ ಲೋಕಾಯುಕ್ತ ಸಂಸ್ಥೆ ಬರುಬರುತ್ತಾ ಹೇಗೆ ಭ್ರಷ್ಟ ವ್ಯವಸ್ಥೆಯ ಭಾಗವಾಗತೊಡಗಿದೆ ಎಂಬುದಕ್ಕೊಂದು ಉದಾಹರಣೆಯಷ್ಟೆ. ಸಂತೋಷ್ ಹೆಗ್ಡೆ ನಿವೃತ್ತಿಗೊಂಡ ಆ ಜಾಗಕ್ಕೆ ಶಿವರಾಜ್ ಪಾಟೀಲ್ ಬರಬೇಕಿತ್ತು. ಆರೋಪ ಕೇಳಿ ಬಂತೆಂದು ಬನ್ನೂರ್‌ಮಠ್ ಹೆಸರು ತಂದರೆ ಅದಕ್ಕೂ ತಕರಾರಾಯಿತು. ಬೇರೆ ಗತಿಯಿಲ್ಲದೆ ಆಂಧ್ರಾ ಮೂಲದ ಭಾಸ್ಕರ್ ರಾವ್‌ರನ್ನು ಸರ್ಕಾರ ನೇಮಿಸಬೇಕಾಯಿತು. ಹಿಂದೆ ಸತ್ಯನಾರಾಯಣ ರಾವ್ ಲೋಕಾಯುಕ್ತ ಎಡಿಜಿಪಿಯಾಗಿದ್ದರು. ಆ ಜಾಗಕ್ಕೀಗ ಪ್ರೇಮ್‌ಶಂಕರ್ ಮೀನಾ ಬಂದಿದ್ದಾರೆ. ಐಜಿಪಿ ಹುದ್ದೆಗೂ ಅಷ್ಟೇ ದಕ್ಷರಾದ ಪ್ರಣಬ್ ಮೋಹಾಂತಿ ಬಂದಿದ್ದಾರೆ. ಬೆಂಗಳೂರು ನಗರ ಎಸ್ಪಿ ಸೋನಿಯಾ ನಾರಂಗ್, ಗ್ರಾಮಾಂತರದ ಎಸ್ಪಿ ಅಶ್ವಿನಿ ಮುಂತಾದ ನೇರ, ದಿಟ್ಟ ಅಧಿಕಾರಿಗಳನ್ನೇ ಆಯ್ದು ಸಿದ್ದು ಸರ್ಕಾರ ಲೋಕಾಯುಕ್ತಕ್ಕೆ ನೇಮಿಸಿದ್ದರಿಂದ ಭ್ರಷ್ಟಾಚಾರದ ವಿರುದ್ಧ ಬಲಾಢ್ಯ ಪಡೆಯೇ ಸಜ್ಜಾಗಿ ನಿಂತಿದೆ.

ಆದರೆ ಲೋಕಾಯುಕ್ತ ವ್ಯವಸ್ಥೆಯೊಳಗೇ ಅದರ ಕುಲಾಂತರಿ ವ್ಯವಸ್ಥೆಯೂ ಕಳೆಯಂತೆ ಬೆಳೆದುನಿಂತಿದೆ. ಯಾರೇ ಭ್ರಷ್ಟ ಅಧಿಕಾರಿ ಮನೆ ಮೇಲೆ ರೇಡಾಗುತ್ತದೆಯೆಂದರೆ ಅದರ ಮಾಹಿತಿ ಮೊದಲೇ ದಾಳಿಗೀಡಾಗುವಾತನಿಗೆ ಸಿಕ್ಕಿ ಬಿಡುತ್ತದೆ. ಇದಲ್ಲದೆ ಭ್ರಷ್ಟ ಅಧಿಕಾರಿಗಳನ್ನು ರಕ್ಷಿಸಿ ಅವರ ಖಮಾಯಿಯಲ್ಲಿ ಪಾಲು ಪಡೆಯುವ ಲೋಕಾಯುಕ್ತ ಸಿಬ್ಬಂದಿಯದ್ದೂ ಮತ್ತೊಂದು ತಂಡವಿದೆ. ಇಂಥ ದುರ್ಗತಿಗೆ ಆಪತ್ತು ಬಂದದ್ದು ಸೋನಿಯಾ ನಾರಂಗ್, ಮೊಹಾಂತಿಯಂಥವರನ್ನು ಸರ್ಕಾರ ಲೋಕಾಯುಕ್ತಕ್ಕೆ ತಂದ ನಂತರವೇ.

ಸೈಯದ್ ರಿಯಾಜ್?

ಲೋಕಾಯುಕ್ತದಲ್ಲಿ ಆ ಕಾಲದಿಂದಲೂ ಬೀಡುಬಿಟ್ಟ ಭ್ರಷ್ಟರನ್ನು ಸೂಕ್ಷ್ಮವಾಗೇ ಪತ್ತೆ ಹಚ್ಚಿದ ಸೋನಿಯಾ ನಾರಂಗ್, ಮೊಹಾಂತಿ, ಉಪ ಲೋಕಾಯುಕ್ತ ಸುಭಾಷ್ ಅಡಿ, ಎಡಿಜಿಪಿ ಮೀನಾ ಮೇಜರ್ ಸರ್ಜರಿಗೆ ಕೈಹಾಕಿದ್ದು ಮೊನ್ನೆ ಜೂನ್ ತಿಂಗಳ ಮೊದಲ ವಾರದಲ್ಲಿ, ಲೋಕಾ ಶುದ್ಧೀಕರಣ ಕಾರ್ಯಾಚರಣೆಗೆಂದೇ ಜೂನ್ 10 ರಂದು ನ್ಯಾಯಮೂರ್ತಿ ವೈ. ಭಾಸ್ಕರ್‌ರಾವ್ ನೇತೃತ್ವದಲ್ಲಿ ಹಿರಿಯ ಅಧಿಕಾರಿಗಳ ಸಭೆ ನಡೆದಿದೆ. ಸರಿಸುಮಾರು 25 ಮಂದಿ ಲೋಕಾಯುಕ್ತ ಅಧಿಕಾರಿಗಳನ್ನು ಎತ್ತಂಗಡಿ ಮಾಡುವ ನಿರ್ಧಾರಕ್ಕೆ ಬಂದ ಸದರಿ ಸಭೆಯ ಕಾರಣಕರ್ತನೇ ಕೃಷ್ಣರಾವ್ ಅಲಿಯಾಸ್ ಕೆಐಎಡಿಬಿ ಕೃಷ್ಣ.

ಅದೊಂದು ವಿಚಿತ್ರ ಎತ್ತುವಳಿ ಕಾರಸ್ಥಾನ. ಏಪ್ರಿಲ್ ತಿಂಗಳ ಅಂತ್ಯದ ಹೊತ್ತಿಗೆ ಬೆಂಗಳೂರು ನಗರ ಜಿಲ್ಲಾ ಪಂಚಾಯ್ತಿಯ ಎಕ್ಸಿಕ್ಯೂಟಿವ್ ಎಂಜನಿಯರ್ ಆಗಿದ್ದ ಕೃಷ್ಣಮೂರ್ತಿಗೆ ಲೋಕಾಯುಕ್ತ ಕಚೇರಿಯಿಂದಲೇ ಫೋನ್ ಕರೆಯೊಂದು ಹೋಗಿದೆ. ತಾನು ಲೋಕಾಯುಕ್ತ ಅಧಿಕಾರಿಯೆಂದೂ ನಿಮ್ಮ ವಿರುದ್ಧ ಸಿಕ್ಕಾಪಟ್ಟೆ ದೂರು ಬಂದಿದೆಯೆಂದೂ ಹಾಗೊಮ್ಮೆ ನೀವು ಬಂದು ಲೋಕಾ ಜಾಯಿಂಟ್ ಕಮೀಷನರ್ ಸೈಯದ್ ರಿಯಾಜ್‌ರನ್ನು ನೋಡದೇ ಹೋದರೆ ಎಸ್ಪಿ ಸೋನಿಯಾ ನಾರಂಗ್ ನಿಮ್ಮ ಮೇಲೆ ರೇಡ್ ಮಾಡಲಿದ್ದಾರೆಂದೂ ಫೋನ್ ಮಾಡಿದಾತ ಧಮಕಿ ಹಾಕಿದ್ದ!

ಶುರುವಿನಲ್ಲಿ ಕೃಷ್ಣಮೂರ್ತಿ ಈ ಕರೆಗಳ ಬಗ್ಗೆ ಅಷ್ಟೊಂದು ತಲೆ ಕೆಡಿಸಿಕೊಳ್ಳಲಿಲ್ಲ, ಆದರೆ ಪದೇಪದೇ ಲೋಕಾಯುಕ್ತ ಕಚೇರಿಯಿಂದಲೇ ಫೋನ್ ಬರುತ್ತಿರುವುದನ್ನು ಗಮನಿಸಿದ್ದೇ ಹುಷಾರಾಗಿದ್ದಾರೆ. ತಾನು ಲೋಕಾಯುಕ್ತ ಕಚೇರಿಗೇ ಬಂದು ನಿಮ್ಮನ್ನು ಕಾಣುವುದಾಗಿ ಹೇಳಿದ್ದಾರೆ. ಮೊದಲೇ ನಿಗದಿಯಾದಂತೆ ಮೇ 5ಕ್ಕೆ ಲೋಕಾ ಕಚೇರಿಗೆ ಬಂದು ಬರುತ್ತಿದ್ದ ನಂಬರ್‌ಗೆ ಫೋನ್ ಮಾಡಿದರೆ ಅತ್ತಲಿಂದ ಮಾತಾಡಿದ ಆಸಾಮಿ ಜಾಯಿಂಟ್ ಕಮೀಷನರ್ ಸೈಯದ್ ರಿಯಾಜ್‌ರ ಛೇಂಬರಿಗೆ ಬರುವಂತೆ ಸೂಚಿಸಿದ್ದಾನೆ. ಹೇಳಿಕೇಳಿ ಸೈಯದ್ ರಿಯಾಜ್ ಲೋಕಾಯುಕ್ತ ಪಿಆರ್‌ಓ. ಬಂದ ಪತ್ರಕರ್ತರು, ಅತಿಥಿಗಳಿಗೆಂದೇ ಹತ್ತಿಪ್ಪತ್ತು ಕುರ್ಚಿಗಳನ್ನು ರಿಯಾಜ್ ಛೇಂಬರಿನ ಹೊರಭಾಗದಲ್ಲಿ ಹಾಕಲಾಗಿದೆ.

ಇಂಜಿನಿಯರ್ ಕೃಷ್ಣಮೂರ್ತಿ ಜಾಯಿಂಟ್ ಕಮೀಷನರ್ ಛೇಂಬರ್ ಪ್ರವೇಶಿಸುತ್ತಿದ್ದಂತೆಯೇ ದಢೂತಿಯೊಬ್ಬ ರಿಯಾಜ್‌ರ ಛೇಂಬರಿನಿಂದ ಹೊರಬಂದಿದ್ದೇ 'ನೀವೇ ತಾನೇ ಕೃಷ್ಣಮೂರ್ತಿ...?' ಎಂದು ಪರಿಚಯಿಸಿಕೊಂಡ. ಕೆಲಕಾಲ ಸಂದರ್ಶಕರ ಕುರ್ಚಿಯಲ್ಲೇ ಕೂತು ಅದೂ ಇದು ಮಾತಾಡಿದ ನಂತರ ರಿಯಾಜ್ ಛೇಂಬರಿಗೆ ಹೊಂದಿಕೊಂಡಂತೆ ಇದ್ದ ಮತ್ತೊಂದು ಆ್ಯಂಟಿ ಛೇಂಬರಿಗೆ ಕರೆದೊಯ್ದಿದ್ದಾನೆ. ಅಲ್ಲಿ ಪೀವನ್ ಕಾಫಿಯನ್ನೂ ತಂದಿಟ್ಟ. ಆಗ ವಿಷಯಕ್ಕೆ ಬಂದ ಆ ದಢೂತಿ 'ನಾನು ಕೃಷ್ಣರಾವ್ ಅಂತ. ನಾನು ಲೋಕಾಯುಕ್ತ ಭಾಸ್ಕರ್‌ರಾವ್ ಸಂಬಂಧಿ. ನಿಮ್ಮ ಬಗ್ಗೆ ದೂರುಗಳು ಒಂದಾ ಎರಡಾ? ಎಂಪಿಎಲ್‌ಐಡಿ ಮತ್ತು ಎಂಎಲ್‌ಎ ಎಲ್‌ಡಿ ಸ್ಕ್ಯಾಂಡಲ್‌ಗಳ ಬಗ್ಗೆ ತನಿಖೆಯಾದರೆ ನೀವು ಜೈಲಿಗೆ ಹೋಗೋದು ಗ್ಯಾರಂಟಿ. ಅದನ್ನ ಸರಿಪಡಿಸಿಕೊಳ್ಳೋ ಬಗ್ಗೆನೂ ನಿಮಗೆ ಆಸಕ್ತಿ ಇಲ್ವಲ್ರೀ' ಎಂದಿದ್ದಾನೆ ಕೃಷ್ಣ.

ಒಂದು ಕೋಟಿ!

ಇಷ್ಟು ಕೇಳಿದ್ದೇ ಕೃಷ್ಣಮೂರ್ತಿ 'ನೀವೇ ಹೇಳಿ ಸಾರ್.... ಏನ್ ಮಾಡ್ಬೇಕು?' ಎಂದಿದ್ದಾರೆ. ಅದೂ ಇದು ಚೌಕಾಸಿಯ ನಂತರ ಕೃಷ್ಣರಾವ್ 'ಒಂದು ಕೆಲ್ಸ ಮಾಡೀ... ನಿಮಗೆ ಇನ್ನು ಎರಡೇ ದಿನ ಟೈಮು... ಅಷ್ಟರಲ್ಲಿ ಒಂದು ಸಿಆರ್ ರೆಡಿ ಮಾಡಿಕೊಂಡು ಬನ್ನಿ...!' ಎಂದಿದ್ದಾನೆ. 'ಹೌದಾ ಸಾರ್, ಕಮ್ಮಿ ಆಗೋಲ್ವಾ? ರೆಡಿ ಮಾಡಿಕೊಂಡು ನಾನೇ ನಿಮಗೆ ಫೋನ್ ಮಾಡ್ತೀನಿ' ಎಂದಿದ್ದಾರೆ ಕೃಷ್ಣಮೂರ್ತಿ. ಹೋಗುವ ಮುನ್ನ ಕೃಷ್ಣರಾವ್ ಮೇ 7ಕ್ಕೆ 1 ಕೋಟಿ ತಂದರೆ ಮಾತ್ರ... ಎಂದು ತಾಕೀತು ಮಾಡಿದ್ದಾನೆ. ತಾನು ಲೋಕಾಯುಕ್ತ ಕೃಷ್ಣರಾವ್‌ರ ಸಂಬಂಧಿಯೆಂಬುದನ್ನು ಒತ್ತಿ ಒತ್ತಿ ಹೇಳಿದ್ದಾನೆ.

ಒಂದು ಕೋಟಿಯೆಂದರೆ ಕಮ್ಮಿಯಾ? ಈ ಬಗ್ಗೆ ಏನೋ ಗುಮಾನಿ ಬಂದಂತಾಗಿ ಯಾವುದಕ್ಕೂ ಇರಲಿ ಎಂದು ಗ್ರಾಮಾಂತರ ಲೋಕಾ ಎಸ್‌ಪಿ ಡಾ. ಅಶ್ವಿನಿಯವರ ಬಳಿ ಕೃಷ್ಣಮೂರ್ತಿ ದುಮ್ಮಾನ ತೋಡಿಕೊಂಡಿದ್ದಾರೆ. ಡಾ. ಅಶ್ವಿನಿ ಇದು ತನ್ನ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ನಗರ ಲೋಕಾ ಎಸ್ಪಿ ಸೋನಿಯಾ ನಾರಂಗ್‌ರ ಬಳಿ ಹೇಳಿಕೊಳ್ಳಲು ಸೂಚಿಸಿದ್ದಾರೆ. ಅದರಂತೆ ಕೃಷ್ಣಮೂರ್ತಿ ಸೋನಿಯಾ ನಾರಂಗ್‌ರನ್ನು ಕಂಡು ವಿಷಯ ಮುಟ್ಟಿಸಿದ್ದಾರೆ.

ಸೋನಿಯಾ ನಾರಂಗ್ ಕಿವಿಗೆ ವಿಷಯ ಮುಟ್ಟಿದ್ದೇ ತಡ, ಇಡೀ ಪ್ರಕರಣಕ್ಕೆ ಬೇರೆಯದೇ ತಿರುವು ಸಿಕ್ಕಿದೆ. ಲೋಕಾ ಜಾಯಿಂಟ್ ಕಮೀಷನರ್ ಯಾನೇ ಪಿಆರ್‌ಓ ಸೈಯದ್ ರಿಯಾಜ್‌ರ ಛೇಂಬರಿನಲ್ಲೇ ಘಟನೆ ನಡೆದಿದೆಯೆಂದ ಮೇಲೆ ಅದು ಲೋಕಾ ಪ್ರತಿಷ್ಠೆಗೆ ದೊಡ್ಡ ಅಪಾಯವೆಂದು ಬಗೆದ ಸೋನಿಯಾ ಈ ಬಗ್ಗೆ ರಿಜಿಸ್ಟ್ರಾರ್‌ಗೆ ಸುವಿಸ್ತಾರ ವರದಿ ನೀಡಿದ್ದಾರೆ. ರಿಜಿಸ್ಟ್ರಾರ್‌ಗೆ ನೀಡಿದ ವರದಿ ಉಪಲೋಕಾ ಸುಭಾಷ್ ಅದಿ ಕೈಸೇರಿದ್ದು ಜೂನ್ ಎರಡನೇ ವಾರಕ್ಕೆ. ಜೂನ್ 23ರಂದು ಉಪಲೋಕಾ ಆದಿ ಈ ಬಗ್ಗೆ ತನಿಖೆ ಮಾಡುವಂತೆ ಸೋನಿಯಾಗೆ ಲಿಖಿತ ಆದೇಶ ರವಾನಿಸಿದ್ದಾರೆ. ಇದರ ನಂತರ ನಡೆದ ರಾದ್ಧಾಂತ, ಕೃಷ್ಣರಾವ್‌ಗೂ ನ್ಯಾಮೂ. ಭಾಸ್ಕರ್‌ರಾವ್ ಪುತ್ರ ಅಶ್ವಿನ್‌ಗೂ ಇರುವ ಸಂಬಂಧ, ಲೋಕಾಯುಕ್ತರ ನಿವಾಸವನ್ನೇ ತಮ್ಮ ಕಾರಸ್ಥಾನವನ್ನಾಗಿ ಮಾಡಿಕೊಂಡ ವಸೂಲಿ ಗ್ಯಾಂಗ್ ವಿವರಗಳು, ಈ ಗ್ಯಾಂಗ್ ಜೊತೆ ಲೋಕಾ ಪಿಆರ್‌ಓ ಸೈಯದ್ ರಿಯಾಜ್ ನೆಂಟಸ್ತಿಕೆ, ರಿಯಾಜ್‌ಗೂ ನ್ಯಾಮೂ. ಭಾಸ್ಕರ್‌ರಾವ್‌ಗೂ ಇರುವ ಅನುಬಂಧ ಎಲ್ಲವೂ ಒಂದೊಂದಾಗಿ ಅನಾವರಣಗೊಳ್ಳುತ್ತಲೇ ಇದೆ.


ಮೀಡಿಯಾ ಹುಚ್ಚು

ನಿಜಕ್ಕೂ ಸೈಯದ್ ರಿಯಾಜ್ ಇಂಥದೊಂದು ವಸೂಲಿ ಗ್ಯಾಂಗ್‌ನ ಪೋಷಕರೇ ಅಥವಾ ಮೀಡಿಯಾಗಳ ಬಗ್ಗೆ ಅವರಿಗಿದ್ದ ವ್ಯಾಮೋಹ-ಸಲುಗೆಯನ್ನೇ ಈ ದುಷ್ಟಕೂಟ ತನ್ನ ಸುಲಿಗೆಗೆ ಬಳಸಿಕೊಂಡಿತೆ ಎಂಬ ಬಗ್ಗೆ ಸ್ಪಷ್ಟವಾಗುತ್ತಿಲ್ಲ. ಮೀಡಿಯಾಗಳ ಪ್ರಚಾರದ ಹುಚ್ಚು ಪತ್ರಕರ್ತರೊಂದಿಗಿನ ಸಲುಗೆ ಕೆಲವೊಮ್ಮೆ ಇಂಥ ನಕಲಿ ಪತ್ರಕರ್ತರ ಪಾಲಿಗೆ ಸುಲಿಗೆಯ ಆಯುಧವಾಗಿ ಬಿಡುತ್ತದೆ. ಸೈಯದ್ ರಿಯಾಜ್ ಶುರುವಿನಿಂದಲೂ ಪತ್ರಕರ್ತರೊಂದಿಗಿನ ಒಡನಾಟವನ್ನೇ ತನ್ನ ಸಾಮರ್ಥ್ಯವೆಂದು ಬಗೆದರು. ಹಾಗೇ ಮೀಡಿಯಾ ಪ್ರಚಾರ ಕೊಡಿಸಿಬಿಟ್ಟರೆ ಲೋಕಾಯುಕ್ತರೇ ತನ್ನ ಜೇಬಿನೊಳಗಿರುತ್ತಾರೆಂದು ಲೆಕ್ಕ ಹಾಕಿದರು. ಲೋಕಾಯುಕ್ತರಾಗಿ ಬಂದ ವೆಂಕಟಾಚಲರಿಂದ ಹಿಡಿದು ಸಂತೋಷ್ ಹೆಗ್ಡೆ, ಈಗ ಭಾಸ್ಕರ್ ರಾವ್ ಎಲ್ಲರೂ ಸೈಯದ್ ರಿಯಾಜ್‌ರ ಈ ಪಿಆರ್‌ಓ ಚಾಕಚಕ್ಯತೆಯನ್ನು ಪ್ರೋತ್ಸಾಹಿಸುತ್ತಲೇ ಬಂದರು.

ಆದರೆ ಲೋಕಾಯುಕ್ತರ ಈ ಮೀಡಿಯಾ ವ್ಯಾಮೋಹವೇ ಈಗ ಸುಡುವ [illegible] ಪರಿಣಮಿಸಿದೆ. ನಕಲಿ ಮೀಡಿಯಾಗಳು ಅವುಗಳ ದಗಲುಬಾಜಿ ಮುಖ್ಯಸ್ಥರು ಅಂಥ ನಕಲಿ ಪತ್ರಿಕೆ/ ವೆಬ್ ಚಾನಲ್ಲುಗಳನ್ನಿಟ್ಟುಕೊಂಡೇ ಲೋಕಾಯುಕ್ತ ಹೊಕ್ಕಬಲ್ಲ ಖದೀಮರು ಅಂತಿಮವಾಗಿ ಲೋಕಾ ವ್ಯವಸ್ಥೆಗೇ ಕಂಟಕರಾಗುತ್ತಾರೆ. ಅದೀಗ ಕೃಷ್ಣರಾವ್ ಅಲಿಯಾಸ್ ಕೆಐಎಡಿಬಿ ಕೃಷ್ಣನ ಮೂಲಕ ಸ್ಫೋಟಗೊಂಡಿದೆ. ಕೇವಲ ಒಬ್ಬ ಕೃಷ್ಣನಷ್ಟೇ ಅಲ್ಲ (ಬಾಕ್ಸ್ ನೋಡಿ) ಲೋಕಾಯುಕ್ತ ದೌರ್ಬಲ್ಯವನ್ನು ಬಳಸಿಕೊಂಡು ಲೂಟಿ ನಡೆಸಿದ ದೊಡ್ಡ ಗ್ಯಾಂಗೇ ಅಸ್ತಿತ್ವದಲ್ಲಿರುವಂತಿದೆ.

■ ರಾ. ಸೋಮನಾಥ್

ಪ್ರೇಮ ಎನ್ನುವ ವಿಸ್ಮಯ!



ಈ ಜಗತ್ತಿನ ಅತ್ಯಂತ ವಿಸ್ಮಯ ಯಾವುದು? ಎಂಬ ಪ್ರಶ್ನೆಗೆ ನಿಸ್ಸಂಶಯವಾಗಿ ಉತ್ತರಿಸಬಹುದು, ಅದು ಪ್ರೇಮ. ದೇವರ ಎಲ್ಲಾ ಸೃಷ್ಟಿಗಳೂ ಅರ್ಥಪೂರ್ಣತೆಯನ್ನು ಪಡೆದುಕೊಳ್ಳುವುದು ಪ್ರೇಮದಿಂದ. ಕಡಲನ್ನು ಸೇರಲು ಹಪಹಪಿಸುತ್ತಾ ಓಡುವ ನದಿಗಳು, ನದಿಗಳನ್ನು ಸೇರಲು ಹಪಹಪಿಸುವ ತೊರೆಗಳು, ಮುಗಿಲ ಮೋಡವಾಗಲು ಹಂಬಲಿಸುವ ಕಡಲು, ಭೂಮಿಯನ್ನು ಸೇರಲು ತವಕಿಸುವ ಮಳೆ... ಈ ಎಲ್ಲ ಪ್ರಕ್ರಿಯೆಗಳು ಪ್ರೇಮಕ್ಕೆ ರೂಪಕಗಳಾಗಿವೆ. ಮರಗಿಡಗಳು ಪರಸ್ಪರ ಪ್ರೇಮದ ಕಾರಣದಿಂದಲೇ ಈ ಭೂಮಿಯ ಮೇಲೆ ಹರಡಿಕೊಂಡವು. ಜೊತೆಜೊತೆಗೇ ಕೀಟಗಳು, ಪಕ್ಷಿಗಳು, ಪ್ರಾಣಿಗಳು, ಡೈನಾಸರ್‌ಗಳು... ಅಂತಿಮವಾಗಿ ಮನುಷ್ಯ... ಹೀಗೆ ಭೂಮಿಯ ವ್ಯಾಖ್ಯಾನ ವಿಸ್ತಾರವಾಗುವುದಕ್ಕೆ ಕಾರಣವಾದದ್ದು ಪ್ರೇಮ. ಪ್ರೇಮ ಎಲ್ಲಿದೆ? ಕೆಲವರು ಎದೆಯನ್ನು ಮುಟ್ಟಿಕೊಳ್ಳುತ್ತಾರೆ. ಮನಸ್ಸು, ಬುದ್ಧಿ, ಮೆದುಳು ಹೀಗೆ ಬಗೆಬಗೆಯ ರೂಪದಲ್ಲಿ ಅದು ಅವಿತಿಟ್ಟುಕೊಂಡಿದೆ ಎನ್ನುತ್ತಾರೆ. ರಕ್ತ ಮಾಂಸದಲ್ಲೇ ಅದು ಹರಿಯುತ್ತಿದೆ ಎನ್ನುವವರೂ ಇದ್ದಾರೆ. ಆದರೆ ಎಲ್ಲ ಅಂಗಗಳನ್ನು ಮುಟ್ಟಿ ಸ್ಪಷ್ಟಪಡಿಸಿಕೊಳ್ಳುವಂತೆ ಪ್ರೀತಿಯನ್ನು ಸ್ಪಷ್ಟಪಡಿಸುವುದು ಸಾಧ್ಯವಿಲ್ಲ. ಇನ್ನೊಂದು ಜೀವವನ್ನು ಪ್ರೀತಿಸಬೇಕು ಎಂದು ನಮಗೆ ಅನ್ನಿಸುವ ಕಾರಣಗಳು ಯಾವುವು? ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರ ಈವರೆಗೆ ದೊರಕಿಲ್ಲವಾದುದರಿಂದಲೇ ಪ್ರೀತಿ ಬಗೆಬಗೆಯಲ್ಲಿ ವ್ಯಾಖ್ಯಾನಗೊಳ್ಳುತ್ತಲೇ ಇದೆ.

ಮನುಷ್ಯ ತನ್ನ ವಿಜ್ಞಾನ, ತಂತ್ರಜ್ಞಾನಗಳನ್ನು ಬಳಸಿಕೊಂಡು ಕೃತಕವಾಗಿ ನೂರಾರು ವಸ್ತುಗಳನ್ನು ಸೃಷ್ಟಿಸಿದ್ದಾನೆ. ಆದರೆ ಅವನ ಸೃಷ್ಟಿ ಪರಸ್ಪರ ಪ್ರೀತಿಸಲಾರವು. ಒಂದು ಫ್ರಿಜ್ಜು ಇನ್ನೊಂದು ಫ್ರಿಜ್ಜಿನ ಜೊತೆಗೆ ಪ್ರೀತಿಗೊಳಗಾಗಿ ಮರಿ ಫ್ರಿಜ್ಜೊಂದನ್ನು ಸೃಷ್ಟಿಸಲು ಅವುಗಳಿಗೆ ಸಾಧ್ಯವಿಲ್ಲ. ಒಂದು ರೋಬಟ್ ಇನ್ನೊಂದು ರೋಬಟ್ ಅನ್ನು ಪ್ರೀತಿಸಿ ಮಗದೊಂದು ಮರಿ ರೋಬಟ್ ಅನ್ನು ಸೃಷ್ಟಿಸಲಾರದು. ಒಂದು ಕಣ್ಣನ್ನು ಮಾದರಿಯಾಗಿಟ್ಟುಕೊಂಡು ಮನುಷ್ಯ ಶತಶತಮಾನಗಳಿಂದ ಸಂಶೋಧನೆ ನಡೆಸಿ ಕ್ಯಾಮರಾವೊಂದನ್ನು ಸೃಷ್ಟಿಸಿದ. ಅವನ ಜೀವನವೆಲ್ಲವನ್ನೂ ವ್ಯಯಿಸಿದರೂ ಒಂದು ಕಣ್ಣನ್ನು ಸರಿಗಟ್ಟುವ ಕ್ಯಾಮರಾವನ್ನು ಸೃಷ್ಟಿಸಲಾರ. ಇದೇ ಸಂದರ್ಭದಲ್ಲಿ ಇಬ್ಬರು ಪ್ರೇಮಿಗಳು ಪ್ರೇಮಿಸುವ ಐದು ನಿಮಿಷದ ಗಳಿಗೆಯಲ್ಲಿ ಕಣ್ಣು ಮಾತ್ರವಲ್ಲ, ಮೆದುಳು, ಹೃದಯಗಳೆನ್ನುವ ಅತ್ಯದ್ಭುತ ತಂತ್ರಜ್ಞಾನಕ್ಕೆ ವೇದಿಕೆ ನಿರ್ಮಾಣವಾಗಿ ಬಿಡುತ್ತದೆ. ತಾನು ಪ್ರೀತಿಸುವ ಗಳಿಗೆಯಲ್ಲಿ ತಾನೊಂದು ಸೃಷ್ಟಿಕ್ರಿಯೆಯಲ್ಲಿ ತೊಡಗಿದ್ದೇನೆ ಎನ್ನುವ ಅರಿವೂ ಇಲ್ಲದ ಹೊತ್ತಿನಲ್ಲಿ, ಅವನು ಅತ್ಯದ್ಭುತವಾದ ಸೃಷ್ಟಿಯೊಂದಕ್ಕೆ ಕಾರಣನಾಗುತ್ತಾನೆ. ಇದಕ್ಕೆ ಅವನು ವಿಜ್ಞಾನಿಯಾಗಬೇಕಾಗಿಲ್ಲ, ತಂತ್ರಜ್ಞಾನಿಯಾಗಬೇಕಾಗಿಲ್ಲ, ಚಿಂತಕನಾಗಬೇಕಾಗಿಲ್ಲ. ಬರೇ ಪ್ರೇಮಿಯಾಗಿದ್ದರೆ ಸಾಕು ಅಷ್ಟೇ. ಪ್ರೇಮವೆನ್ನುವುದು ಸೃಷ್ಟಿಕ್ರಿಯೆಯ ಭಾಗ ಎನ್ನುವುದರಲ್ಲಿ ಎರಡು ಮಾತಿಲ್ಲ. ಈ ಹಿನ್ನೆಲೆಯಲ್ಲಿಯೇ ಗಂಡು ಮತ್ತು ಹೆಣ್ಣು ಕೂಡಿದಾಗಲೇ ಪ್ರೇಮವೆನ್ನುವುದು ತನ್ನ ಉದ್ದೇಶವನ್ನು ಸಾಧಿಸಿಕೊಳ್ಳುವುದು. ಆದರೆ ಇದೇ ಸಂದರ್ಭದಲ್ಲಿ ಇವಷ್ಟೇ ಸತ್ಯ ಆಗಬೇಕಾಗಿಲ್ಲ. ಕೆಲವೊಮ್ಮೆ ಪ್ರಕೃತಿಗೆ ತನಗೆ ಎಲ್ಲವೂ ಗೊತ್ತು ಎನ್ನುವುದನ್ನು ತೋರಿಸುವ ಚಪಲ ಇರುತ್ತದೆ. ಮನುಷ್ಯನಿಗೆ ಅವನೊಳಗಿರುವ ಸಾಧನಗಳ ಅರಿವು ಮಾಡುವ ಉದ್ದೇಶ ಇದರ ಹಿಂದಿರಬಹುದು. ಕಣ್ಣನ್ನೇ ತೆಗೆದುಕೊಳ್ಳೋಣ. ಕಣ್ಣಿನ ಅರಿವನ್ನು ಮನುಷ್ಯನಿಗೆ ಅರಿವು ಮಾಡಿಕೊಡಲೋ ಎಂಬಂತೆ ಕೆಲವೊಮ್ಮೆ ಹುಟ್ಟುಕುರುಡರನ್ನು ಪ್ರಕೃತಿ ಸೃಷ್ಟಿಸಿ ಬಿಡುತ್ತೆ. ಮನುಷ್ಯನೆಂದ ಮೇಲೆ ಅವನಿಗೆ ಕಣ್ಣಿರುತ್ತೆ. ಇವನು ಹುಟ್ಟುಕುರುಡ ಎಂದಮೇಲೆ ಮನುಷ್ಯನಿಗೆ ಹೊರತಾದವನು ಎಂದು ಅವನ ಮೇಲೆ ತಪ್ಪನ್ನು ಹೊರಿಸುವಂತಿಲ್ಲ. ಎಲ್ಲರಿಗೂ ಕಾಣುವ ಜಗತ್ತು ಅವನಿಗೆ ಕಾಣುವುದಿಲ್ಲ ಎನ್ನುವುದನ್ನು, ಪ್ರಕೃತಿಗೆ ವಿರೋಧವಾದುದು, ಅವನು ಪ್ರಕೃತಿ ವಿರೋಧಿ ಎಂದು ಪರಿಗಣಿಸುವುದಕ್ಕಾಗುವುದಿಲ್ಲ. ಸಮಾಜದಿಂದ ದೂರವಿಡುವುದಕ್ಕೂ ಸಾಧ್ಯವಿಲ್ಲ. ಯಾಕೆಂದರೆ ಸ್ವತಃ ಪ್ರಕೃತಿಯೇ ಆತನನ್ನು ತನ್ನದೊಂದು ಭಾಗವಾಗಿ ಸೃಷ್ಟಿಸಿದೆ. ಉಳಿದ ಮನುಷ್ಯರೆಲ್ಲರೂ ಅವನನ್ನು ಒಪ್ಪಿಕೊಂಡು ಅವನ ಬದುಕನ್ನು ಗೌರವಿಸಬೇಕಾಗುತ್ತದೆ. ಗೌರವಿಸುತ್ತಾರೆ. ಅದುವೂ ಪ್ರೀತಿಯ ಒಂದುಭಾಗವೇ ಆಗಿದೆ. ಮನುಷ್ಯ ಮೂಲತಃ ಒಂದು ತಲೆಯುಳ್ಳವನು. ಆದರೆ ಪ್ರಕೃತಿ ತನಗೆ ಎರಡು ತಲೆಯುಳ್ಳವನನ್ನು ಸೃಷ್ಟಿಸಲೂ ಗೊತ್ತು ಎನ್ನುವ ಕಾರಣಕ್ಕಾಗಿ, ಆಗಾಗ ಸಯಾಮಿಗಳು, ಎರಡು ತಲೆಯ ಜೀವಿಗಳನ್ನು ಸೃಷ್ಟಿಸಿ ಬಿಡುತ್ತದೆ. ಹಿಂದೆ ಹೀಗೆ ಹುಟ್ಟಿದವರನ್ನು ದೆವ್ವ ಎಂಬ ಭೀತಿಯಿಂದ ಕೊಂದು ಬಿಟ್ಟದ್ದೂ ಇದೆ. ಮನುಷ್ಯ ತನಗೆ ಸಾಧ್ಯವಿದ್ದಷ್ಟು ಮಿತಿಯಲ್ಲಿ ಆ ಮಗುವಿಗೆ ಬದುಕುವುದಕ್ಕೆ ನೆರವಾಗುತ್ತಾನೆ. ನೆರವಾಗಬೇಕು. ಅದು ಮನುಷ್ಯನ ಕರ್ತವ್ಯ ಕೂಡ.

ಇದೇ ಸಂದರ್ಭದಲ್ಲಿ ಇನ್ನೊಂದು ಸೃಷ್ಟಿ ವಿಸ್ಮಯವೊಂದು ನಮಗೆ ಸವಾಲಾಗಿದೆ. ಅದು ಮತ್ತೆ ಪ್ರೇಮಕ್ಕೆ ಸಂಬಂಧಪಟ್ಟದ್ದು. ಗಂಡು-ಹೆಣ್ಣು ಪ್ರೀತಿಸಿದರಷ್ಟೇ ಪ್ರೇಮ ಸಾಧ್ಯವೇ? ಎಂದು ಆಗಾಗ ಪ್ರಕೃತಿ ಪ್ರಶ್ನಿಸುತ್ತದೆ. ತನ್ನ ಸೃಷ್ಟಿಯೊಳಗೆ, ಅದು ತಾನೇ ಸೃಷ್ಟಿಸಿಕೊಳ್ಳುತ್ತದೆ.

ಆಗ 'ಗೇ' ಅಥವಾ ಸಲಿಂಗ ಪ್ರೇಮಿ ಹುಟ್ಟುತ್ತಾನೆ. ಪ್ರೇಮವೆನ್ನುವುದು ಸೃಷ್ಟಿಕ್ರಿಯೆಗೆ ಪೂರಕವಾದದ್ದು ಮತ್ತು ಅದು ಆಡಂ ಮತ್ತು ಈವ್ ನಡುವೆ ನಡೆದಾಗಷ್ಟೇ ಅರ್ಥಪೂರ್ಣವಾಗುತ್ತದೆ ಎನ್ನುವುದನ್ನು ಕಲಿಸಿರುವುದು ಪ್ರಕೃತಿಯೇ. ಆದರೆ ಈಗ ಗೇಗಳನ್ನು ಸೃಷ್ಟಿಸಿ ಆ ಪ್ರಕ್ರಿಯೆಯನ್ನು ಪರೀಕ್ಷೆಗೊಡ್ಡುತ್ತಿರುವುದೂ ಪ್ರಕೃತಿಯೇ. ಇಲ್ಲಿ ಮನುಷ್ಯನ ಸ್ವಯಂಕೃತಾಪರಾಧವಿಲ್ಲ. ಹೇಗೆ ಮನುಷ್ಯ ಕಣ್ಣನ್ನು ಸ್ವಯಂ ಸೃಷ್ಟಿಸಿಕೊಳ್ಳಲಾರನೋ, ಹಾಗೆಯೇ ಪ್ರೇಮವನ್ನು ಕೂಡ ಸ್ವಯಂ ಸೃಷ್ಟಿಸಿಕೊಳ್ಳಲಾರ. ಪ್ರೇಮವೆನ್ನುವುದು ಬೋಧನೆಯಲ್ಲ. ಕಾನೂನು, ಕಾಯ್ದೆಗಳಿಂದ ಹುಟ್ಟುವಂತಹದ್ದಲ್ಲ. ಅದು ದೇಹದೊಳಗಿನ ಸಹಜಾತಿ ಸಹಜ ಅನುಭೂತಿ. ನೀನು ಇಂಥವರನ್ನು ಪ್ರೇಮಿಸಬೇಕು ಎಂದು ಕಲಿಸುವುದು ಮನುಷ್ಯನಲ್ಲ. ಒಬ್ಬ ಗೇ ಆಗಿರುವ ಗಂಡು ಅಥವಾ ಲೆಸ್ಬಿಯನ್ ಆಗಿರುವ ಹೆಣ್ಣು ಪರಸ್ಪರ ಪ್ರೇಮಿಸಲು ಹೊರಡುವುದು ಪ್ರಕೃತಿಯ ಲಯಕ್ಕೆ ಮೀರಿದ್ದಾಗಿರಬಹುದು. ಸೃಷ್ಟಿ ಕ್ರಿಯೆಯನ್ನು ವಿರೋಧಿಸುವಂತಹದ್ದೂ ಆಗಿರಬಹುದು. ಆದರೆ ಆ ಪ್ರಕೃತಿ ವಿರೋಧಿ ಗುಣವನ್ನು ಅವನು ಅಥವಾ ಅವಳಲ್ಲಿ ಬಿತ್ತಿರುವುದು ಪ್ರಕೃತಿಯೇ ಆಗಿದೆ. ಸಲಿಂಗ ಪ್ರೇಮಿಯ ಮುಂದೆ ದೇವತೆಯಂತಹ ತರುಣಿಯೊಬ್ಬಳು ಹಾದುಹೋದರೂ ಅವನು ಅದಕ್ಕೆ ಪ್ರೇಮ ರೂಪದಲ್ಲಿ ಪ್ರತಿಕ್ರಿಯಿಸಲಾರ. ಇದೇ ಸಂದರ್ಭದಲ್ಲಿ ಒಬ್ಬ ಗಂಡು ಅವನ ಮುಂದೆ ಹಾದು ಹೋದಾಕ್ಷಣ ಅವನೆದೆಯಲ್ಲಿ ಬಿರುಗಾಳಿಯೇ ಏಳಬಹುದು. ಅವನ ಬದುಕು ಚಂಡಮಾರುತಕ್ಕೆ ಸಿಕ್ಕಿ ದೋಣಿಯಂತಾಗಬಹುದು. ಆ ಒಬ್ಬ ಹುಡುಗನನ್ನು ನೋಡಿದಾಕ್ಷಣ ಇನ್ನೊಬ್ಬ ಹುಡುಗನ ಎದೆಯಲ್ಲಿ ಪ್ರೇಮವನ್ನು ಬಿತ್ತಿದ್ದು ಯಾರು? ಈಗ ಅವನೇನು ಮಾಡಬೇಕು? ಒಂದು ವೇಳೆ ಅವನು ಎದುರಾದ ಹುಡಗನೂ ಗೇ ಆಗಿದ್ದು ಇಬ್ಬರೂ ಪರಸ್ಪರ ಪ್ರೇಮಿಸತೊಡಗಿದರೆ ಅದು ಯಾರ ತಪ್ಪು? ಭಾರತದ ಕಾನೂನು ಅದನ್ನು ತಪ್ಪು ಎಂದು ಹೇಳುತ್ತದೆ. ಅದು ಪ್ರಕೃತಿ ವಿರೋಧಿಯಾದುದು ಎಂದು ವ್ಯಾಖ್ಯಾನಿಸುತ್ತದೆ. ಪರಸ್ಪರ ಪ್ರೇಮಿಸಿದ ಕಾರಣಕ್ಕಾಗಿಯೇ ಇಬ್ಬರು ಹುಡುಗರು ಜೈಲು ಸೇರಬೇಕಾದಂತಹ ವಾತಾವರಣ ನಾಗರಿಕತೆಗೆ ಒಪ್ಪುವಂತಹದ್ದೆ? ಎನ್ನುವ ಪ್ರಶ್ನೆ ಪ್ರೇಮಕ್ಕೆ ಒಂದು ಅಗ್ನಿಪರೀಕ್ಷೆಯೇ ಸರಿ. ನಾಗರಿಕ ಕಾನೂನು ಹೇಳುತ್ತದೆ, ಒಬ್ಬ ಹುಡುಗ ಇನ್ನೊಂದು ಹುಡುಗಿಯನ್ನೇ ಪ್ರೀತಿಸಬೇಕು. ಹುಡುಗ ಇನ್ನೊಬ್ಬ ಹುಡುಗನನ್ನು ಪ್ರೀತಿಸುವುದು ಅಪರಾಧ. ಸರಿ. ಅದನ್ನು ಒಪ್ಪಿ ಒಬ್ಬ ಹುಡುಗ ಇನ್ನೊಂದು ಹುಡುಗಿಯನ್ನು ಪ್ರೀತಿಸುವುದಕ್ಕೆ ಸಾಧ್ಯವೋ ಎಂದು ಶ್ರಮಿಸಬಹುದು. ಪ್ರೇಮವೆನ್ನುವುದು ಶ್ರಮದಿಂದ ಹುಟ್ಟುವಂತಹದಲ್ಲ ಎನ್ನುವುದು ಗೊತ್ತಿದ್ದೂ ಅದಕ್ಕಾಗಿ ಆತ ಶ್ರಮಿಸಬಹುದು. ಬಾಬಾ ರಾಮ್‌ದೇವ್‌ನಂತಹ ನಕಲಿ ಕಂಪನಿಗಳಿಂದ ನಕಲಿ ಔಷಧಿಗಳನ್ನು ಸೇವಿಸಿ ಮೋಸ ಹೋಗಬಹುದು. ಕಟ್ಟಕಡೆಗೆ ವಿಫಲನಾಗಿ ಹತಾಶನಾಗಬಹುದು. ಒಬ್ಬ ಹುಡುಗನ ಜೊತೆಗಿನ ತನ್ನ ಪ್ರೀತಿಯನ್ನು ಅಮುಮುಕ್ಕಲು ಅವನು ಬದುಕಿರುವವರೆಗೂ ತನ್ನೊಳಗಿನ ಪ್ರೇಮದ ಅನುಭೂತಿಯ ಜೊತೆಗೆ ಹೋರಾಡಬೇಕಾಗಬಹುದು. ಒಬ್ಬ ತನಗೆ ಕುರಿ ಇಷ್ಟ, ಕೋಳಿ ಇಷ್ಟ, ತರಕಾರಿ ಇಷ್ಟ ಎಂದು ಇಷ್ಟಪಟ್ಟಂತಲ್ಲ ಪ್ರೇಮ ಎನ್ನುವುದು. ತಾನು ಸಲಿಂಗಪ್ರೇಮಿ ಎನ್ನುವುದನ್ನು ನಿರ್ಧರಿಸುವುದು ಸ್ವಯಂ ಅವನಲ್ಲ, ಕಾನೂನು ರೂಪಿಸುವವರು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಗೇ ಎಂದರೆ ಏನು? ಅವನ ಮನಸ್ಸು ಹೇಗಿರುತ್ತದೆ ಮತ್ತು ಅದಕ್ಕಿರುವ ಹಿನ್ನೆಲೆ ಏನು ಎನ್ನುವುದನ್ನು ಒಬ್ಬ ಮನಶಾಸ್ತ್ರಜ್ಞನಾಗಿ ಅರ್ಥಮಾಡಿಕೊಳ್ಳದೇ ಗೇಗಳ ವಿರುದ್ಧ ಕಾನೂನನ್ನು ರೂಪಿಸಿದರೆ, ಅದು ಪರೋಕ್ಷವಾಗಿ ಮನುಷ್ಯನೊಬ್ಬ ಪ್ರೇಮಿಸಿದ ಕಾರಣಕ್ಕೆ ಜೈಲು ಪಾಲಾಗುವ ಪರಿಸರವನ್ನು ನಿರ್ಮಾಣ ಮಾಡಿಬಿಡುತ್ತದೆ.

ನಾನಿಲ್ಲಿ ಬೈ ಸೆಕ್ಷುಯಲ್ ಬಗ್ಗೆ ಚರ್ಚಿಸುತ್ತಿಲ್ಲ. ಪೂರ್ತಿ ಗೇ ಆದವನ ಸಂಕಟಗಳು ಹೇಗಿರಬಹುದು ಎನ್ನುವುದನ್ನು ಮಾತ್ರ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಬೈ ಸೆಕ್ಷುಯಲ್‌ಗೆ ಒಬ್ಬ ಹುಡುಗಿಯ ಜೊತೆಗೂ ಪ್ರೀತಿಸುವ ಅವಕಾಶ ಇರುತ್ತದೆ. ಅಂತಹವನಿಗೆ ಕನಿಷ್ಟ ಒಬ್ಬ ಹುಡುಗಿಯ ಜೊತೆಗೂ ಕಾಮ-ಪ್ರೇಮ ಯಾವುದಾದರೊಂದು ಹೆಸರಲ್ಲಿ ಬದುಕುವ ಅವಕಾಶವಿರುತ್ತದೆ. ಆದರೆ ಒಬ್ಬ ಪೂರ್ಣ ಗೇ ಒಬ್ಬನ ಸಂಕಟ ಭಿನ್ನವಾದುದು. ಆತ ತನ್ನ ನೆರೆಯ ಹುಡುಗನನ್ನೇ ಪ್ರೀತಿಸುತ್ತಿರಬಹುದು. ತಾನು ಪ್ರೀತಿಸಿದವನೂ ಗೇ ಆಗಿದ್ದರೆ ಅದು ಅವನ ಅದೃಷ್ಟ. ಆದರೆ ತಾನು ಪ್ರೀತಿಸಿದ ನೆರೆಯ ಹುಡುಗ ಗೇ ಅಲ್ಲದೇ ಇದ್ದರೆ, ಬದುಕಿನುದ್ದಕ್ಕೂ ತನ್ನ ಪ್ರೀತಿಯನ್ನು ಮನದಲ್ಲೇ ಇಟ್ಟುಕೊಂಡು ಅವನೊಂದಿಗೆ ಒಡನಾಡಬೇಕಾಗುತ್ತದೆ. ಸಾಧಾರಣವಾಗಿ ಅಸಂಖ್ಯ ಗೇಗಳು ಹೀಗೆಯೇ ಬದುಕುತ್ತಿರುತ್ತಾರೆ. ಒಂದು ಅಶಾಂತ್ಮ ಆತ್ಮದಂತೆ. ತಾನು ಇಷ್ಟಪಟ್ಟವನ ಜೊತೆಗೆ ಬದುಕಲೂ ಆಗದೆ, ಸಮಾಜದಲ್ಲಿ ನಾಗರಿಕರ ವೇಷದಲ್ಲಿರುವವರಿಂದ ಲೈಂಗಿಕವಾಗಿ ಶೋಷಣೆಗೊಳಗಾಗುವ ಗೇಗಳೂ ಇದ್ದಾರೆ. ಒಂದು ವೇಳೆ ಎದುರಿನವನೂ ಗೇ ಆಗಿರಬಹುದು. ಆದರೆ ಅದನ್ನು ವಿಚಾರಿಸಿ ಪರಸ್ಪರ ಹಂಚಿಕೊಳ್ಳುವಷ್ಟು ದೊಡ್ಡ ಹೃದಯದ ಸಮಾಜ ನಮ್ಮದಲ್ಲ. ಯಾವುದೋ ಅದೃಷ್ಟಕ್ಕೆ ಒಬ್ಬ ಗೇಗೆ ಪ್ರೀತಿಸುವ ಇನ್ನೊಬ್ಬ ಗೇ ದೊರಕಬಹುದು. ಅವರಿಬ್ಬರು ತಮ್ಮ ಬದುಕನ್ನು, ಪ್ರೀತಿಯನ್ನು ಹಂಚಿಕೊಳ್ಳಬಹುದು. ಅದೂ ಸಮಾಜದಿಂದ ಗುಟ್ಟಾಗಿ. ಆದರೆ ವಿಪರ್ಯಾಸ ಗಮನಿಸಿ. ಒಂದು ವೇಳೆ ಯಾರಾದರೂ ಅವರ ಮೇಲೆ ದೂರು ಕೊಟ್ಟದ್ದೇ ಆದಲ್ಲಿ ಪ್ರೀತಿಸಿದ ಕಾರಣಕ್ಕಾಗಿ ಅವರು ಜೀವಾವಧಿ ಶಿಕ್ಷೆಯನ್ನು ಎದುರಿಸಬೇಕಾಗಬಹುದು.

ಹಾಗಾದರೆ ಸಮಾಜ ಗೇಗಳಿಗೆ ಏನನ್ನು ನಿರ್ದೇಶಿಸುತ್ತದೆ? ಇಬ್ಬರು ಹುಡುಗರು ಪ್ರೀತಿಸುವುದು ಅಪರಾಧ ಎಂದು ಹೇಳುತ್ತದೆ. ಸರಿ. ಹಾಗಾದರೆ ಒಬ್ಬ ಗೇಗೆ ತನ್ನ ಬದುಕಿನುದ್ದಕ್ಕೂ ಪ್ರೀತಿಸುವ ಅವಕಾಶವೇ ಇಲ್ಲವೆ? ನೀನು ಹುಡುಗಿಯನ್ನು ಪ್ರೀತಿಸು ಎನ್ನುತ್ತದೆ ನಮ್ಮ ಕಾನೂನು, ಸಮಾಜ. ಆದರೆ ಯಾವ ಹುಡುಗಿಯೂ ಅವನ ಮನದಲ್ಲಿ ನವಿರುಭಾವನೆಗಳನ್ನೇ ಹುಟ್ಟಿಸುತ್ತಿಲ್ಲವೆ! ಹಾಗಾದರೆ ನೀನು ಷಂಡ ಇರಬೇಕು ಎನ್ನುತ್ತದೆ ಸಮಾಜ. ಆದರೆ ಗೇ ಷಂಡನಲ್ಲ, ಅದುವೇ ಅವನ ಸಮಸ್ಯೆ. ಒಬ್ಬ ಷಂಡ ಇಲ್ಲಿ ಯಾವ ಸಮಸ್ಯೆ ಬಿಕ್ಕಟ್ಟಿಲ್ಲದೆ ಬದುಕಬಲ್ಲ. ಆದರೆ ಗೇ ಹಾಗೆ ಬದುಕುವುದಕ್ಕೆ ಸಾಧ್ಯವಿಲ್ಲ. ಯಾಕೆಂದರೆ, ಅವನಿಗೆ ಪ್ರೀತಿಸುವುದು ಗೊತ್ತು. ಯಾರನ್ನು ನೋಡಿದಾಗ ಅವನ ಎದೆಯಲ್ಲಿ ನವಿರುಭಾವನೆ ಹುಟ್ಟುತ್ತದೆಯೋ ಅವನನ್ನು ಮಾತ್ರ ಪ್ರೀತಿಸುವುದಕ್ಕೆ ಗೊತ್ತು. ಕಾನೂನು ಹೇಳಿದವನನ್ನು ಪ್ರೀತಿಸುವುದು ಅಸಾಧ್ಯ. ನಿಜಕ್ಕೂ ಇಂಥವರನ್ನು ಪ್ರೀತಿಸಿ ಎಂದು ಕಾನೂನು ನಿರ್ದೇಶಿಸುವುದೇ ಪ್ರಕೃತಿ ವಿರೋಧವಾದುದು.

ಇದೇ ವೇಳೆ ಒಂದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಗೇಗಳ ಬಗ್ಗೆ ಭಾರೀ ತಪ್ಪು ಕಲ್ಪನೆಗಳಿವೆ. ಗೇ ಹಕ್ಕುಗಳಿಗಾಗಿ ಬೀದಿಯಲ್ಲಿ ವಿಚಿತ್ರ ವೇಷಭೂಷಣಗಳೊಂದಿಗೆ ಒಯ್ಯಾರದಿಂದ ಹೆಜ್ಜೆ ಇಡುವವರನ್ನೇ ಗೇಗಳೆಂದು ತಿಳಿದುಕೊಂಡವರಿದ್ದಾರೆ. ಮಂಗಳಮುಖಿಯರನ್ನು ಗೇಗಳು ಎಂದು ತಪ್ಪು ಭಾವಿಸುವವರೂ ನಮ್ಮ ನಡುವೆ ಇದ್ದಾರೆ. ಗೇಗಳು ಎಲ್ಲರಂತೆ ಸಹಜವಾಗಿರುವ ಮನುಷ್ಯರು. ನಿಮ್ಮ ಮನೆಯಲ್ಲಿ ಅತ್ಯಂತ ದೃಢ ಮೈಕಟ್ಟಿರುವ, ಗಂಭೀರವಾದ ಆಜಾನುಬಾಹು ಅಣ್ಣನೇ ಗೇ ಆಗಿರುವ ಸಾಧ್ಯತೆಯನ್ನು ಅಲ್ಲಗಳೆಯುವ ಹಾಗಿಲ್ಲ ಅಥವಾ ಆರೋಗ್ಯಪೂರ್ಣವಾಗಿರುವ, ಮೋಹಕವಾಗಿರುವ ಒಬ್ಬ ಸುಂದರ ಹೆಣ್ಣು ಲೆಸ್ಬಿಯನ್ ಆಗಿರುವ ಸಾಧ್ಯತೆಗಳಿರುತ್ತವೆ.

ಗೇಯನ್ನು ಗುರುತಿಸುವುದು ಇನ್ನೊಬ್ಬ ಗೇಗೆ ಮಾತ್ರ ಸಾಧ್ಯ. ನಾವು ಅವನನ್ನು ಊಹಿಸಿ, ಕಲ್ಪಿಸಿ, ಟೀಕಿಸಬಲ್ಲೆವು. ಅಸಹ್ಯಪಟ್ಟುಕೊಳ್ಳಬಲ್ಲೆವು. ಆದರೆ ಅಂತಿಮವಾಗಿ ಒಬ್ಬ ಗೇಯ ಒಳಗಿನ ಸುಳಿಗಳನ್ನು ಕಾಣಬಲ್ಲವನು ಇನ್ನೊಬ್ಬ ಗೇ ಮಾತ್ರ. ಪ್ರಕೃತಿ ಸಹಜವಾಗಿ ಬದುಕುತ್ತಿದ್ದೇವೆ ಎಂಬ ದುರಹಂಕಾರಿಗಳು, ಯಾವಾಗ ಇದನ್ನು ಅರ್ಥಮಾಡಿಕೊಳ್ಳುತ್ತಾರೋ ಆಗ ಅವರು ಪ್ರಕೃತಿಯನ್ನು ಅರ್ಥ ಮಾಡಿಕೊಳ್ಳುತ್ತಾರೆ. ಪ್ರೇಮವನ್ನು ಅರ್ಥಮಾಡಿಕೊಳ್ಳುತ್ತಾರೆ. ಗೇಗಳನ್ನು ಅರ್ಥಮಾಡಿಕೊಳ್ಳುತ್ತಾರೆ. ಮತ್ತು ಗೌರವಿಸಲೂ ಶುರು ಮಾಡುತ್ತಾರೆ.

■ ಬಿ.ಎಂ.ಬಶೀರ್

ಪಿಮ್‌ಜೀಯ ಮನದ ಮಾತು! ಗೌರವಿಸಿ!

ಪ್ರಧಾನಿಗಳು 'ಮನದ ಮಾತು'
ಆಡಿದ್ದಾರೆ! ಗೌರವ ಬೇಡವೇ!
ಸಾವಿರಾರು ಕೋಮು ಗಲಭೆಗಳಲ್ಲಿ
ಅತ್ಯಾಚಾರ, ಕೊಲೆಗಳಿಗೀಡಾದ ಹೆಣ್ಮಕ್ಕಳ
ಅಪ್ಪಂದಿರೇ, ನಿಮ್ಮ ಮಗಳ ಜೊತೆಗಿನ ಒಂದು ಸೆಲ್ಫಿ ಕಳಿಸಬಾರದೆ!

ಕೊಲೆಯಾದ ಅಸಂಖ್ಯಾತ ಅಪ್ಪಂದಿರ
ಅಳಿದುಳಿದ ಹೆಣ್ಣು ಮಕ್ಕಳೇ-
ಸುಡಲಾದ ಮನೆಯ ಅರೆಸುಟ್ಟ ಪೆಟ್ಟಿಗೆಯ
ಅಡಿಯಲ್ಲಿ ಎಲ್ಲೋ ಅಪ್ಪನ ಜೊತೆಗಿನ ಸೆಲ್ಫಿ
ಇರಬೇಕು ಹುಡುಕಿ, ಪ್ರಧಾನಿಗಳು ಕೇಳಿದ್ದಾರಮ್ಮ!

ಕೈರ್ಲಾಂಜಿಯ ಭಯ್ಯಲಾಲ್ ಭೋಟ್ಮಾಂಗೆ
ಪ್ರಿಯಾಂಕಳ ಜೊತೆಯ ಸೆಲ್ಫಿ ಇರಬಹುದಾ ನೋಡು, ಆಯ್ತು
ಅಪರಾಧಿಗಳು ಬಿಡುಗಡೆಯಾಗಿ
ವಿಜಯೋತ್ಸವ ಆಚರಿಸಿದ್ದಾರೆ! ಗೊತ್ತು, ಪತ್ರಿಕೆಯಲ್ಲಿ
ಓದಿದ್ದೇವೆ, ಆದರೂ
ದೊರೆ ನೋಯಬಾರದು ಕನಪ್ಪ!

ಏ! ಶೀತಲ್ ಸಾಠೆ! ಜೈಲಲ್ಲಿ ಬೆಳೆದ ಗರ್ಭದ ಸೆಲ್ಫಿ
ಒಂಚೂರು ಕಳಿಸಮ್ಮ
ಪ್ರಧಾನಿಗಳ 'ಮನದ ಮಾತು' ಮೀರಲಾದೀತೆ!

ಕಳಿಸಿ ಕೋಟ್ಯಾಂತರ ಇವೆಯಲ್ಲ,
ಸೆಲ್ಫಿಗಳ ರಾಶಿಯಲ್ಲಿ ದಿಲ್ಲಿ ಮುಳುಗಿಹೋಗಲಿ.



■ ಕೆ.ಫಣಿರಾಜ್

ಕೊಡಗು: ಪರಿಸರವ್ಯಾಧಿಗಳೊಂದಿಗೆ ಕೈಜೋಡಿಸಿದ ಮೂಲಭೂತವಾದಿಗಳು

ಪರಿಸರದ ಹೆಸರಿನಲ್ಲಿ ಜನಸಾಮಾನ್ಯರಿಗೆ ಕಿರುಕುಳ ನೀಡುವ ಕಾರ್ಯ ಕೆಲವೇ ಕೆಲವು ವ್ಯಕ್ತಿಗಳಿಂದ ನಿರಂತರವಾಗಿ ನಡೆಯುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಚಾರ. ಪರಿಸರ ಸಂರಕ್ಷಣೆಯಾಗಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಇದರ ಹೆಸರಿನಲ್ಲಿ ಖಾಸಗಿ ಜನಜೀವನವನ್ನು ಅಸ್ತವ್ಯಸ್ತಗೊಳಿಸುವುದು ಎಷ್ಟು ಸರಿ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಪರಿಸರವಾ(ದ್ಯಾ)ದಿಗಳ ನೋಟ ಯಾವಾಗಲೂ ಖಾಸಗಿ ಜನರ ಜಮೀನಿನ ಮೇಲೆ ಇರುತ್ತದೆಯೇ ವಿನಹ, ಸರಕಾರದ ಸಂರಕ್ಷಣೆಯಲ್ಲಿ ನಿರಂತರವಾಗಿ ಲೂಟಿಯಾಗುತ್ತಿರುವ ವಿವಿಧ ಬಗೆಯ ಅರಣ್ಯಗಳತ್ತ ಇರುವುದೇ ಇಲ್ಲ. ಇದರಿಂದಾಗಿಯೇ ಈ ಪರಿಸರವಾದಿಗಳನ್ನು ಇತ್ತೀಚಿನ ದಿನಗಳಲ್ಲಿ ಬಹಿರಂಗವಾಗಿ ಡೋಂಗಿ ಪರಿಸರವಾದಿಗಳು ಎಂದು ಜನರು ಜರೆಯುತ್ತಿರುತ್ತಾರೆ.

ಈ ಡೋಂಗಿ ಪರಿಸರವಾದಿಗಳ ಸಂಖ್ಯೆ ವಿಶೇಷವಾಗಿ ಕೊಡಗು ಜಿಲ್ಲೆಯಲ್ಲಿ ಹೆಚ್ಚಿದೆ. ಇವರನ್ನು ಬಲಗೊಳಿಸುತ್ತಿರುವುದು ಭ್ರಷ್ಟ ಅರಣ್ಯ ಇಲಾಖೆ ಮತ್ತು ಸರಕಾರ. ಸರಕಾರದ ಆಶಯಗಳಿಗೆ ವಿರುದ್ಧವಾಗಿ ಅಧಿಕಾರಿಗಳು ವರ್ತಿಸುತ್ತಿದ್ದರೂ ಅವರ ವಿರುದ್ಧ ಕ್ರಮ ತೆಗೆದುಕೊಳ್ಳದೆ ಇರುವುದು ಮತ್ತು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಾಜಕೀಯ ಪಕ್ಷಗಳು ಯಾವುದೇ ವಿಚಾರದ ಬಗ್ಗೆ ಸ್ಪಷ್ಟವಾದ ನಿಲುವನ್ನು ತಾಳದೇ ಇರುವುದು ಇದಕ್ಕೆ ಕಾರಣ. ಕೊಡಗು ಜಿಲ್ಲೆ ಹಿಂದೆ 'ಸಿ' ರಾಜ್ಯವಾಗಿದ್ದಾಗ ಕಂದಾಯ ಕಾಯ್ದೆ ಪ್ರತ್ಯೇಕವಾಗಿ ಇತ್ತು, ಇಲ್ಲಿ ಸಾಕಷ್ಟು ಭೂ ನಿಬಂಧನೆಗಳು ಇದ್ದವು. ಆದರೆ 1956ರಲ್ಲಿ ಕೊಡಗು ಅಂದಿನ ಮೈಸೂರಿನಲ್ಲಿ ವಿಲೀನವಾದಾಗ ಹಳೆ ಕಾನೂನುಗಳೆಲ್ಲವೂ ರದ್ದಾಗಬೇಕಾಗಿತ್ತು, 1964ರಲ್ಲಿ ಕರ್ನಾಟಕದಲ್ಲಿ ಜಾರಿಗೆ ಬಂದಂತಹ ಏಕರೂಪದ ಭೂ




ಕಂದಾಯ ಕಾಯ್ದೆಗಳು ಕೊಡಗಿಗೂ ಅನ್ವಯವಾಗಬೇಕಾಗಿತ್ತು, ಸರಕಾರದ ಇಚ್ಛಾಶಕ್ತಿಯ ಕೊರತೆಯಿಂದ ಮತ್ತು ಪಾಳೆಗಾರಿಕೆ ಮನೋಭಾವದ ವರ್ಗದವರಿಂದ 1999ರವರೆಗೆ ಕೊಡಗು ಜಿಲ್ಲೆಯಲ್ಲಿ ಹಿಂದಿನ ಭೂಕಂದಾಯ ಕಾಯ್ದೆಯೇ ಚಾಲ್ತಿಯಲ್ಲಿ ಇತ್ತು, ಇಲ್ಲಿ ಅಸ್ತಿತ್ವದಲ್ಲಿ ಇದ್ದಂತಹ 'ಜಮ್ಮಾ' ಪದ್ಧತಿಯ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಎ.ಕೆ.ಸುಬ್ಬಯ್ಯನವರು ಮೊಕದ್ದಮೆಯೊಂದನ್ನು ದಾಖಲಿಸಿದ ನಂತರ ಬಂದ ತೀರ್ಪಿನ ಆಧಾರದಲ್ಲಿ 1964ರ ಭೂಕಂದಾಯ ಕಾಯ್ದೆ ಜಾರಿಗೆ ಬಂತು. ಹಾಗಾಗಿ ಹಿಂದೆ ಇದ್ದಂತಹ ಭೂ ನಿಬಂಧನೆಗಳು ತನ್ನಿಂದ ತಾನೇ ರದ್ದಾಗಿತ್ತು,

ಇದು ಜಿಲ್ಲೆಯಲ್ಲಿ ಜನರಿಗೆ ಕಿರುಕುಳ ನೀಡುವ ಅಧಿಕಾರಿ ವರ್ಗದವರಿಗೂ, ಪರಿಸರವಾದಿಗಳಿಗೂ ಹಾಗೂ ಮೂಲಭೂತವಾದಿಗಳಿಗೂ ಇಷ್ಟವಾಗದ ವಿಚಾರವಾಗಿತ್ತು, ಹಾಗಾಗಿ ಕಂದಾಯ ಇಲಾಖೆ ತಮ್ಮದೇ ಆದ ರೀತಿಯಲ್ಲಿ ಹಳೆಯ ಕಾಯ್ದೆ ಮತ್ತು ಹೊಸ ಕಾಯ್ದೆಯ ಮಿಶ್ರಣ ಮಾಡಿಕೊಂಡು ಕಾರ್ಯಾಚರಣೆ ಮಾಡಿದರೆ, ಪರಿಸರವಾದಿಗಳು ಹಳೆಯ ಕಾಯ್ದೆಯಲ್ಲಿ ಇದ್ದಂತಹ ನಿಯಮಗಳು ಹೊಸ ಕಾಯ್ದೆಯಲ್ಲಿಯೂ ಇವೆ ಎಂಬ ವಾದವನ್ನು ಮಂಡಿಸಲಾರಂಭಿಸಿದರು. ಮೂಲಭೂತವಾದಿಗಳು ಹಳೆ ಕಾಯ್ದೆಯೇ ಇರಬೇಕು ಎಂಬ ವಾದವನ್ನು ಮಂಡಿಸುತ್ತಾ ಬಂದರು. ಇದರ ಲಾಭವನ್ನು ಪಡೆದುಕೊಂಡ ಕಂದಾಯ ಮತ್ತು ಅರಣ್ಯ ಇಲಾಖೆಯವರು ನಿರಂತರವಾಗಿ ಜನರನ್ನು ಶೋಷಣೆ ಮಾಡುತ್ತಾ ಇಂದಿಗೂ ಚಟುವಟಿಕೆಯನ್ನು ಮಾಡುತ್ತಿದ್ದಾರೆ. ಕೊಡಗಿನಲ್ಲಿ ಭೂ ಹಿಡುವಳಿದಾರರು ಪಡುತ್ತಿರುವಷ್ಟು ಬವಣೆ, ಕರ್ನಾಟಕದ ಯಾವುದೇ ಭಾಗದಲ್ಲಿ ಹಿಡುವಳಿದಾರರು ಅನುಭವಿಸುತ್ತಿಲ್ಲ,

ಜಾರಿಗೊಳಿಸದ ಭೂಕಂದಾಯ ಕಾಯ್ದೆಯ ತಿದ್ದುಪಡಿ

2011ರ ವೇಳೆಯಲ್ಲಿ ಕೊಡಗು ಜಿಲ್ಲೆಗೆ ಸಂಬಂಧಪಟ್ಟಂತೆ ಜಮ್ಮಾ ಬಾಣೆಯ ಕುರಿತು ಅಂದಿನ ಸ್ಪೀಕರ್ ಕೆ.ಜಿ.ಬೋಪಯ್ಯರವರ ವಿಶೇಷ ಪ್ರಯತ್ನದಿಂದ ಭೂ ಕಂದಾಯ ಕಾಯ್ದೆಗೆ ತಿದ್ದುಪಡಿಯನ್ನು ತರಲಾಗಿತ್ತು, ಡೋಂಗಿ ಪರಿಸರವಾದಿಗಳ ಪ್ರಭಾವದಿಂದ ಕಂದಾಯ ಕಾಯ್ದೆಗೆ ತಂದ ಈ ತಿದ್ದುಪಡಿಗೆ ಅಂಕಿತ ಹಾಕಲು ಅಂದಿನ



ರಾಜ್ಯಪಾಲ ಹಂಸರಾಜ ಭಾರದ್ವಾಜ್ ನಿರಾಕರಿಸಿದ್ದರು. ಕಾರಣ ಕಂದಾಯ ಕಾಯ್ದೆಗೆ ಆದ ತಿದ್ದುಪಡಿಯನ್ನು ರಾಜ್ಯ ಸರಕಾರದ ವಿಚಾರ ಎಂದು ಪ್ರತಿಪಾದಿಸದೆ, ಅರಣ್ಯ ಎಂದು ಹೇಳಿಕೊಂಡು ಕೇಂದ್ರ ಹಾಗೂ ರಾಜ್ಯದ ವ್ಯಾಪ್ತಿಗೆ ಬರುವ ವಿಚಾರ ಎಂದು ತಪ್ಪು ಮಾಹಿತಿಯನ್ನು ಅಧಿಕಾರಿಗಳು ನೀಡಿದ್ದರು. ಆ ನಂತರ ಎ.ಕೆ. ಸುಬ್ಬಯ್ಯ ಹಾಗೂ ವೀರಪ್ಪ ಮೊಯ್ಲಿಯವರ ವಿಶೇಷ ಪ್ರಯತ್ನದಿಂದ ರಾಷ್ಟ್ರಪತಿ ಪ್ರಣವ್ ಮುಖರ್ಜಿಯವರ ಅಂಕಿತವನ್ನು ಪಡೆಯಲಾಗಿತ್ತು, 2013ರಲ್ಲಿ ಇದು ಕಾನೂನಾಗಿ ಮಾರ್ಪಾಡಾಗಿದ್ದರೂ ಇಂದಿಗೂ ಅದನ್ನು ಅಧಿಕಾರಿಗಳು ಜಾರಿಗೊಳಿಸಿಲ್ಲ, ಇದಕ್ಕೆ ಜಿಲ್ಲಾಧಿಕಾರಿಗಳಾಗಿದ್ದ ಅನುರಾಗ್ ತಿವಾರಿ ಇಲ್ಲದ ಸಬೂಬುಗಳನ್ನು ಹೇಳಿಕೊಂಡು ಸರಕಾರದಿಂದ ಕೆಲವೊಂದು ಸ್ಪಷ್ಟನೆಯನ್ನು ಕೇಳಿದ್ದೇವೆ ಎಂದು ಕಾಲ ಕಳೆದದ್ದೇ ಕಾರಣವಾಗಿದೆ.

ಈ ತಿದ್ದುಪಡಿಯ ಪ್ರಕಾರ ಕೊಡಗಿನಲ್ಲಿ ಕಂದಾಯಕ್ಕೆ ಬಾರದೆ ಉಪಯೋಗಿಸಲ್ಪಡುತ್ತಿದ್ದ ಬಾಣೆ ಜಮೀನಿಗೆ ಕಂದಾಯವನ್ನು ವಿಧಿಸಬೇಕಾಗಿತ್ತು, ಅಧಿಕಾರಿಗಳ ಈ ನಿರ್ಲಕ್ಷ್ಯತನದಿಂದಾಗಿ ರಾಜ್ಯ ಸರಕಾರದ ಬೊಕ್ಕಸಕ್ಕೆ ಸಾಕಷ್ಟು ನಷ್ಟ ಉಂಟಾಗಿದೆ. ಮಾತ್ರವಲ್ಲ ಇದು ರದ್ದಾದ ಭೂ ಕಂದಾಯ ಕಾಯ್ದೆ ಅಸ್ತಿತ್ವದಲ್ಲಿ ಇದೆ ಎನ್ನುವ ಅರ್ಥವನ್ನು ಕೊಡುತ್ತದೆ. ಇದು ಡೋಂಗಿ ಪರಿಸರವಾದಿಗಳ ಮತ್ತು ಕಂದಾಯ ಇಲಾಖೆ ನಡುವಿನ ಒಳ ಒಪ್ಪಂದ. ಕಂದಾಯಕ್ಕೆ ಒಳಪಟ್ಟ ನಂತರ ಜಮೀನು ಪರಾಧೀನವಾಗುತ್ತದೆ. ಒಮ್ಮೆ ಪರಾಧೀನವಾದರೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಮರದ ಮೇಲಿನ ಹಕ್ಕು ಭೂ ಹಿಡುವಳಿದಾರನದಾಗುತ್ತದೆ. ಇದಾಗಬಾರದು ಎಂಬುದು ಅರಣ್ಯ ಇಲಾಖೆಯವರ ಮತ್ತು ಡೋಂಗಿ ಪರಿಸರವಾದಿಗಳ ಪ್ರತಿಪಾದನೆಯಾಗಿದೆ. ಇತ್ತೀಚೆಗೆ ಜಿಲ್ಲೆಯ ಹಿರಿಯ ಅರಣ್ಯ ಅಧಿಕಾರಿಯೊಬ್ಬರು ಸರ್ವೋಚ್ಚ ನ್ಯಾಯಾಲಯ 1975ರಲ್ಲಿ ನೀಡಿದ ಈ ತೀರ್ಪಿನ ಬಗ್ಗೆ ಮಾತನಾಡುತ್ತಾ ಪ್ರಭಾವಿ ವಕೀಲರು ಮತ್ತು ನ್ಯಾಯಾಧೀಶರ ನಡುವೆ ಉತ್ತಮ ಸಂಬಂಧವಿದ್ದರೆ ಯಾವುದೇ ತೀರ್ಪನ್ನು ಪಡೆಯಬಹುದು ಎಂದು ಹೇಳಿದ್ದಾರೆ. ಅರಣ್ಯ ಅಧಿಕಾರಿಗಳಲ್ಲಿ ಯಾವ ಪ್ರಮಾಣದಲ್ಲಿ ಜನವಿರೋಧಿ ಧೋರಣೆ ಇದೆ ಎನ್ನುವುದಕ್ಕೆ ಇದೊಂದು ನಿದರ್ಶನವಷ್ಟೇ.

ಮರ ಕಡಿಯಲು ಅಡ್ಡಿ

ಕರ್ನಾಟಕ ರಾಜ್ಯದಾದ್ಯಂತ ಮರಗಳ ವಿಚಾರದಲ್ಲಿ ಒಂದು ಕಾನೂನು ಇದ್ದರೆ, ಕೊಡಗು ಜಿಲ್ಲೆಗೆ ಸಂಬಂಧಪಟ್ಟಂತೆ ಇಲ್ಲದಿರುವ ಕಾನೂನನ್ನು ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಹೇರುತ್ತಾ ಬಂದಿದೆ. ಇದರಿಂದಾಗಿ ಕೊಡಗಿನಲ್ಲಿ ಬೆಲೆ ಬಾಳುವಂತಹ ಶ್ರೀಗಂಧದ ಮರದ ಬೇರು ಕೂಡ ಸಿಗುತ್ತಿಲ್ಲ, ಇದರ ಜೊತೆಯಲ್ಲಿ ಅತ್ಯಂತ ಬೆಲೆಬಾಳುವ ಸುಂದರವಾದ ಬೀಟೆ ಮರಗಳು ಕೂಡ ಕಣ್ಮರೆಯಾಗುತ್ತಿವೆ. ಕಾರಣ ಜಿಲ್ಲೆಯಲ್ಲಿ ಖಾಸಗಿ ಜಮೀನಿನಲ್ಲಿ ಬೆಳೆದಂತಹ ಮರಗಳ ಮೇಲಿನ ಹಕ್ಕು ಮರದ ಮಾಲಿಕನಿಗೆ ಇಲ್ಲ, ಇಲ್ಲಿ ರೆಡೀಮ್ಡ್ ಮತ್ತು ಅನ್‌ರೆಡೀಮ್ಡ್ ಎಂಬ ಎರಡು ಬಗೆಯ ಮರಗಳು ಅರಣ್ಯ ಇಲಾಖೆಯಲ್ಲಿ ಇದೆ. ಇದರಿಂದಾಗಿ ಮಾಲಿಕತ್ವ ಇಲ್ಲದ ಮರ ತನ್ನ ಜಮೀನಿನಲ್ಲಿ ಬೇಡ ಎಂದು ಹೇಳಿಕೊಂಡು ಈ ಮರವನ್ನು ನಾಶಪಡಿಸುತ್ತಿದ್ದಾರೆ ಮತ್ತು ಮತ್ತೊಮ್ಮೆ ನೆಡುವ ಸಾಹಸಕ್ಕೆ ಮುಂದಾಗುತ್ತಿಲ್ಲ,

ಡಾ.ಕಸ್ತೂರಿರಂಗನ್ ವರದಿಯಲ್ಲಿ ಖಾಸಗಿ ಜಮೀನಿನಲ್ಲಿ ಇರುವಂತಹ ಮರಗಳ ಬಗ್ಗೆ ನಿಯಮಗಳನ್ನು ಸಡಿಲಗೊಳಿಸಬೇಕು, ನೀತಿಯನ್ನು ಪುನರ್‌ರೂಪಿಸಬೇಕು ಮತ್ತು ಮರಗಳನ್ನು ಬೆಳೆಸಲು ಉತ್ತೇಜನಕಾರಿ ಅಂಶಗಳನ್ನು ಜಾರಿಗೆ ತರಬೇಕು ಎಂದು ಹೇಳಿದೆ. ಅಂದರೆ ಜಾರಿಯಲ್ಲಿರುವಂತಹ ಅರಣ್ಯ ಕಾಯ್ದೆ ದೋಷಪೂರ್ಣವಾಗಿದೆ. ಪರಿಸರ ಸಂರಕ್ಷಣೆಗೆ ಪೂರಕವಾಗಿ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅರಣ್ಯ ಇಲಾಖೆಯ ತಪ್ಪು ನೀತಿಯಿಂದಾಗಿ ಖಾಸಗಿ ಜಮೀನಿನ ಮಾಲಿಕರು ಮರಗಳನ್ನು ಬೆಳೆಸುವತ್ತ ಯತ್ನವನ್ನೇ ಮಾಡುತ್ತಿಲ್ಲ. ವಾಸ್ತವದಲ್ಲಿ ಕೃಷಿ ಮಾಡುವುದು ಲಾಭದಾಯಕವಲ್ಲ ಎನ್ನುವಂತಹ ಪರಿಸ್ಥಿತಿಯಲ್ಲಿ ಮತ್ತು ಪ್ರಯೋಜನವೂ ಇಲ್ಲ ಎನ್ನುವಾಗ, ತನ್ನ ಜಮೀನಿನಲ್ಲಿ ಮರಗಳನ್ನು ಬೆಳೆಸಿ ಅದನ್ನು ಸರಕಾರವು ಕೃಷಿ ಎಂದು ಪರಿಗಣಿಸಿದರೆ ಸಾಕಷ್ಟು ಕೃಷಿ ಮಾಡದ ಜಮೀನುಗಳಲ್ಲಿ ಕೃಷಿಕರು ಮರಗಳನ್ನು ನೆಟ್ಟು ಬೆಳೆಸುವುದರಲ್ಲಿ ಸಂಶಯವಿಲ್ಲ,

ಈ ನಡುವೆ ಕರ್ನಾಟಕ ರಾಜ್ಯ ಸರಕಾರವು ಅರಣ್ಯ ಕಾಯ್ದೆಗೆ ತಿದ್ದುಪಡಿಯನ್ನು ತಂದು ಕೆಲವೊಂದು ಜಾತಿಯ ಮೆದು ಮರಗಳನ್ನು ಮುಕ್ತವಾಗಿ ಕಡಿಯಲು ಅವಕಾಶವನ್ನು ಮಾಡಿಕೊಟ್ಟಿತ್ತು, ಬಹಳ ಹಿಂದೆಯೇ ಆಗಬೇಕಾಗಿದ್ದ ಈ



ಕಾರ್ಯ ವಿಳಂಬವಾಗಿಯಾದರೂ ಆಗಿತ್ತು, ಇನ್ನೂ ಕೆಲವು ಬಗೆಯ ಮರಗಳನ್ನು ಇದರ ವ್ಯಾಪ್ತಿಗೆ ತಂದಿದ್ದರೆ ಕೃಷಿಕನಿಗೂ, ಇಲಾಖೆಗೂ ಲಾಭವಾಗುತ್ತಿತ್ತು, ಉದಾಹರಣೆಗೆ ಸಿಲ್ಕ್ ಕಾಟನ್ ಎಂಬ ಬಗೆಯ ಬಹಳ ಬೇಗ ಬೆಳೆಯುವಂತಹ ಮರ ಕಡಿಯಲು ನಿಯಂತ್ರಣವಿದೆ. ಇದು ಮೆದು ಮರವಾದ ಕಾರಣ, ಬೇರೆ ಯಾವುದೇ ಕಾರ್ಯಕ್ಕೆ ಬಳಕೆಯಾಗುತ್ತಿಲ್ಲ, ಯಾವುದೇ ಪ್ರಯೋಜನವಿಲ್ಲದ ಇಂತಹ ಮರಗಳನ್ನು ಕೃಷಿಕ ಹಾಳು ಮಾಡುತ್ತಿದ್ದಾನೆ. ಬದಲಿಗೆ ಮಾರಾಟ ಮಾಡಲು ಅವಕಾಶ ನೀಡಿದರೆ ಆತನ ಆರ್ಥಿಕ ಪರಿಸ್ಥಿತಿಯ ಜೊತೆಯಲ್ಲಿ ಒಂದಷ್ಟು ಜನರಿಗೆ ಉದ್ಯೋಗ, ಸರಕಾರದ ಬೊಕ್ಕಸಕ್ಕೆ ಕೊಡುಗೆ ಸಿಗುತ್ತದೆ. ಇದರ ಸಾಲಿಗೆ ಹೆಬ್ಬಲಸು ಮತ್ತು ಆಜಿನಿ ಮರಗಳು ಕೂಡ ಸೇರ್ಪಡೆಗೊಳ್ಳುತ್ತವೆ. ಸರಕಾರ ತಂದ ತಿದ್ದುಪಡಿಯಲ್ಲಿ ಪ್ರಮುಖವಾಗಿ ಮಾವಿನ ಮರ ಮತ್ತು ಬಳಂಜಿ ಮರ ಇದೆ.

ಈ ತಿದ್ದುಪಡಿ ಜಾರಿಗೆ ಬರುತ್ತಿದ್ದಂತೆ ಮುಖ್ಯವಾಹಿನಿಯ ಪತ್ರಿಕೆಗಳಲ್ಲಿ ಮಾವಿನ ಮರವನ್ನು ಅರಣ್ಯದಲ್ಲಿ ಕಡಿಯುವುದರಿಂದ ಉಪ್ಪಿನ ಕಾಯಿ ಹಾಕಲು ಮಾವಿನ ಮಿಡಿಗಳು ಸಿಗುವುದಿಲ್ಲ ಎಂಬ ಲೇಖನದ ಸರಮಾಲೆಗಳೇ ಬಂದವು. ಅರಣ್ಯ ಪ್ರದೇಶದಲ್ಲಿ ಮಾವು ಎಲ್ಲಿದೆಯೋ ಯಾರಿಗೂ ತಿಳಿದಿಲ್ಲ, ಮಾವು ಇರುವುದು ಖಾಸಗಿ ಜಮೀನಿನಲ್ಲಿ, ಫಸಲು ಕೊಡುವ ಮಾವಿನ ಮರವನ್ನು ಬಹಳಷ್ಟು ಮಂದಿ ಕಡಿಯುವುದಿಲ್ಲ, ತೀರಾ ಆರ್ಥಿಕ ಮುಗ್ಗಟ್ಟಿನಲ್ಲಿರುವವರು ಇಂತಹ ಮರಗಳನ್ನು ಕಡಿಯುತ್ತಾರೆ. ಆದರೆ ಅರಣ್ಯ ಇಲಾಖೆಯ ಮರ್ಜಿಯ ಮೇಲೆ ಈ ಲೇಖನಗಳು ಬಂದಿದ್ದ ಕಾರಣ, ಅರಣ್ಯ ಇಲಾಖೆ ಲೇಖನದಿಂದ ಪ್ರಭಾವಿತನಾದಂತೆ ನಟಿಸಿ, ಮಾವಿನ ಮರದ ಸಾಗಾಟಕ್ಕೆ ನಿರ್ಬಂಧವನ್ನು ಹೇರಿತು. ಮರ ಕಡಿಯಲು ಅವಕಾಶವಿದೆ. ಆದರೆ ಸಾಗಾಟಕ್ಕೆ ಅವಕಾಶವಿಲ್ಲ ಎಂದು ಹೇಳುವ ಮೂಲಕ ತನ್ನ ತಿದ್ದುಪಡಿಯನ್ನು ತಾನೇ ಲೇವಡಿ ಮಾಡಿತು. ಇದು ಅರಣ್ಯ ಇಲಾಖೆಯ ಮತ್ತು ಡೋಂಗಿ ಪರಿಸರವಾದಿಗಳ ಕಾರ್ಯಸೂಚಿ.

ಈ ನಡುವೆ ಕೊಡಗಿನ ಮೂಲಕ ಹೈಟೆನ್ಷನ್ ವಿದ್ಯುತ್ ಮಾರ್ಗ ಹಾದುಹೋಗುವುದಕ್ಕೆ ಸುಮಾರು ಆರು ವರ್ಷಗಳ ಕಾಲ ವಿರೋಧವನ್ನು ವ್ಯಕ್ತಪಡಿಸಿ ಕೆ.ಎಸ್. ಪುಟ್ಟಣ್ಣಯ್ಯನವರ ನೇತೃತ್ವದ ರೈತ ಸಂಘವನ್ನು ಕೊಡಗಿಗೆ ಕರೆ ತಂದು ಅವರ ಮೂಲಕವೂ ಪ್ರತಿಭಟನೆಯನ್ನು ನಡೆಸಿ, ತಾನು ವೈಯಕ್ತಿಕವಾಗಿ ಸದೃಢನಾಗಿ, ಹೋರಾಟವನ್ನು ಹಳ್ಳ ಹತ್ತಿಸಿದ ಖ್ಯಾತಿಯ ಕಾವೇರಿ ಸೇನೆ ಎಂಬ ಕೊಡಗಿಗೆ ಕಂಟಕವಾದ ಸಂಘಟನೆಯ ರವಿಚಂಗಪ್ಪ ತಿದ್ದುಪಡಿಯ ಮೂಲಕ ಮರಗಳನ್ನು ಕಡಿಯಲು ಅವಕಾಶ ಮಾಡಿಕೊಟ್ಟ ವಿವಿಧ ಬಗೆಯ ಮರಗಳನ್ನು ಸಾಗಾಟ ಮಾಡುವುದಕ್ಕೆ ರಾಜ್ಯ ಉಚ್ಚ ನ್ಯಾಯಾಲಯದಿಂದ ತಾತ್ಕಾಲಿಕವಾದ ತಡೆಯಾಜ್ಞೆಯೊಂದನ್ನು ತಂದಿದ್ದಾರೆ. ಹೈಟೆನ್ಷನ್ ಹೋರಾಟದಿಂದ ಕಡಿದು ಹಾಕಿದ್ದು ಏನು ಎಂದು ಯಾರೂ ಅವರನ್ನು ಪ್ರಶ್ನಿಸಲಿಲ್ಲ,

ಈ ವ್ಯಕ್ತಿಗೆ ನ್ಯಾಯಾಲಯಕ್ಕೆ ಹೋಗುವುದು ಎಂದರೆ ಬಹಳ ಸಲೀಸು. ನ್ಯಾಯಾಲಯದ ದಿಕ್ಕು ತಪ್ಪಿಸಿ, ತಡೆಯಾಜ್ಞೆಗಳನ್ನು ಪಡೆಯುವುದು, ತನ್ಮೂಲಕ ತನ್ನ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳುವುದರಲ್ಲಿ ಸಿದ್ಧಹಸ್ತರಾಗಿದ್ದು ಉಚ್ಚ ನ್ಯಾಯಾಲಯ, ಹಸಿರು ಪೀಠ ಹಾಗೂ ಸರ್ವೋಚ್ಚ ನ್ಯಾಯಾಲಯದಿಂದ ಹಲವಾರು ಬಾರಿ ಛೀಮಾರಿ ಹಾಕಿಸಿಕೊಂಡು, ದಾಖಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ವಜಾಗೊಂಡಿದ್ದು ಮತ್ತು ಹಿಂದಕ್ಕೆ ಪಡೆದದ್ದು ಸಾಕಷ್ಟು ಇದ್ದರೂ, ಮತ್ತೆ ಮತ್ತೆ ಸುಳ್ಳು ಮಾಹಿತಿಗಳನ್ನು ನೀಡಿ, ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸುವ ಪರಿಪಾಠವನ್ನು ಇಟ್ಟುಕೊಂಡಿದ್ದಾರೆ. ಆದರೆ ನ್ಯಾಯಾಲಯಕ್ಕೆ ಹೋಗಲು ಬೇಕಾದಂತಹ ಆರ್ಥಿಕ ವ್ಯವಸ್ಥೆ ಎಲ್ಲಿಂದ ಆಗುತ್ತಿದೆ ಎಂಬುದು ನಿಗೂಢ.

ರಾಜ್ಯ ಉಚ್ಚ ನ್ಯಾಯಾಲಯದ ರಜಾಪೀಠವು ಈ ವ್ಯಕ್ತಿಯ ಅರ್ಜಿಯನ್ನು ಪುರಸ್ಕರಿಸಿ, ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡುತ್ತಾ ರಜೆ ಕಳೆದನಂತರ ಅರಣ್ಯ ಇಲಾಖೆ ತನ್ನ ಆಕ್ಷೇಪಗಳನ್ನು ಸಲ್ಲಿಸಬೇಕು ಎಂದು ದಿನಾಂಕವನ್ನು ನಿಗದಿಪಡಿಸದೆ ಮುಂದೂಡಿತ್ತು, ಸರಕಾರದ ಈ ತಿದ್ದುಪಡಿಯ ಆಧಾರದಲ್ಲಿ ಕೆಲವರು ತಮ್ಮ ತೋಟಗಳಲ್ಲಿ ಬೆಳೆದ ಮರಗಳನ್ನು ಕಡಿದಿದ್ದರು. ಸಾಗಾಟಕ್ಕೆ ನಿರ್ಬಂಧ ಹೇರಿರುವ ಕಾರಣ, ಮರ ಕಡಿದಿರುವ ರೈತರು ಕಂಗಾಲಾಗಿದ್ದಾರೆ. ಮೆದು ಮರವಾದ್ದರಿಂದ, ಮಳೆಗಾಲದ ಒಳಗೆ ಮರಗಳನ್ನು ಸಾಗಾಟ ಮಾಡದಿದ್ದರೆ, ಮರ ಹಾಳಾಗುವುದರಲ್ಲಿ ಸಂಶಯವಿಲ್ಲ, ಇದು ರೈತಾಪಿ ವರ್ಗಕ್ಕೆ ಸಹಿಸಲಾಗದ ನಷ್ಟ. ತಡೆಯಾಜ್ಞೆ ಬಂದಕೂಡಲೇ ಕಡಿದಿಟ್ಟಿರುವ ಮರಗಳನ್ನು ಅರಣ್ಯ ಇಲಾಖೆ ವಶಪಡಿಸಿಕೊಳ್ಳಬೇಕು ಎಂದು ರವಿಚಂಗಪ್ಪ ಹೇಳಿಕೆಯನ್ನು ನೀಡಿದರು. ಆತನೇ ತಮ್ಮ ಇಲಾಖೆಯ ಮುಖ್ಯಸ್ಥ ಎನ್ನುವ ರೀತಿಯಲ್ಲಿ ಕೆಲವು ಭಾಗಗಳಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿಗಳು ವರ್ತಿಸಿದರು. ಕೃಷಿಕನನ್ನು ಬೆದರಿಸಿ, ಮರಗಳನ್ನು ವಶಪಡಿಸಿಕೊಳ್ಳುತ್ತಿದ್ದೇವೆ ಎಂದು ಮರಗಳನ್ನು ಸಾಗಾಟ ಮಾಡಿ, ತಾವೇ ಮಾರಾಟ ಮಾಡಿಕೊಂಡರು. ಇದರಲ್ಲಿ ಅರಣ್ಯ ಇಲಾಖೆಗೆ ಪಾಲು ಎಷ್ಟು? ಮರಗಳ್ಳರಿಗೆ ಪಾಲು ಎಷ್ಟು? ಮತ್ತು ಇದಕ್ಕೆ ಸಹಕರಿಸಿದ ರವಿಚಂಗಪ್ಪನಿಗೆ ಪಾಲು ಎಷ್ಟು? ಎಂಬುದು ತಿಳಿದಿಲ್ಲ.

ಈಗ ರಜೆ ಕಳೆದನಂತರ ಅರಣ್ಯ ಇಲಾಖೆಯವರು ಈ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗೆ ತಮ್ಮ ಆಕ್ಷೇಪವನ್ನು ಸಲ್ಲಿಸಬೇಕಾಗಿದೆ. ಆದರೆ ಅವರು ಸಲ್ಲಿಸುತ್ತಿಲ್ಲ, ಕಾರಣ ಇದು ಅರಣ್ಯ ಇಲಾಖೆಯ ಕೆಲವು ಭ್ರಷ್ಟ ಅಧಿಕಾರಿಗಳ




ಮರ್ಜಿಯ ಮೇಲೆ ಸಲ್ಲಿಸಲ್ಪಟ್ಟ ಸಾರ್ವಜನಿಕ ಹಿತಾಸಕ್ತಿ ಅರ್ಜಿ. (ಅರಣ್ಯ ಇಲಾಖೆಯ ಮತ್ತು ಕಾವೇರಿ ಸೇನೆಯ ಹಿತಾಸಕ್ತಿ ಮಾತ್ರ ಅಡಗಿರುವ ಅರ್ಜಿ) ವಾಸ್ತವದಲ್ಲಿ ಕೃಷಿಕನೂ ಈ ಅರ್ಜಿಯಲ್ಲಿ ಪ್ರತಿವಾದಿಯಾಗಬೇಕಾಗಿತ್ತು, ಆದರೆ ತಮಗೆ ಬೇಕಾದಂತಹ ಆದೇಶಗಳನ್ನು ಪಡೆಯಬೇಕಾದರೆ ಕೃಷಿಕನನ್ನು ಪ್ರತಿವಾದಿಯಾಗಿಸಿದರೆ ಸಾಧ್ಯವಿಲ್ಲ ಎಂದು ತಿಳಿದಿರುವ ಇವರುಗಳು, ಅರಣ್ಯ ಕಾಯ್ದೆಗೆ ತಂದಿರುವ ತಿದ್ದುಪಡಿಯ ನಿಜವಾದ ಫಲಾನುಭವಿಯನ್ನು ಕತ್ತಲಿನಲ್ಲಿ ಇಟ್ಟು, ಏಕಪಕ್ಷೀಯವಾಗಿ ತೀರ್ಪು ಪಡೆಯಲು ಯತ್ನಿಸುತ್ತಿರುವುದರ ಹಿನ್ನೆಲೆ ಅರಣ್ಯ ಸಂರಕ್ಷಣೆಯಲ್ಲ, ತಮ್ಮ ವೈಯಕ್ತಿಕ ಹಿತಾಸಕ್ತಿಗಳು. ವಿಶೇಷವೆಂದರೆ ಕರ್ನಾಟಕ ರಾಜ್ಯಕ್ಕೆ ಈ ತಿದ್ದುಪಡಿ ಅನ್ವಯವಾಗುತ್ತಿದ್ದರೂ ಇದನ್ನು ಕೊಡಗು ಜಿಲ್ಲೆಗೆ ಗಂಡಾಂತರಕಾರಿ ಎನ್ನುವ ಚಿತ್ರಣವನ್ನು ನೀಡಲಾಗುತ್ತಿದೆ. ಎರಡು ವರ್ಷಗಳ ಹಿಂದೆ ನಾಗರಹೊಳೆ ವನ್ಯಧಾಮದ ಭಾಗದಲ್ಲಿ ಬೆಂಕಿ ಬಿದ್ದಿದ್ದು, ಅಲ್ಲಿ ಮತ್ತೆ ಅರಣ್ಯವನ್ನು ಪುನರುತ್ಥಾನ ಕಾರ್ಯ ಮಾಡದೆ ಇರುವುದರ ಬಗೆಯಾಗಲಿ, ಕಟ್ಟೆರೋಗಕ್ಕೆ ಬಲಿಯಾಗಿ ಆನೆಗಳಿಗೆ ಆಹಾರವೇ ಇಲ್ಲದಂತಾಗಿರುವ ಬಿದಿರು ಬೆಳೆಸುವ ಕಾರ್ಯಕ್ಕೆ ಆಗಲಿ, ಅರಣ್ಯ ಇಲಾಖೆ ಮುಂದಾಗದೆ ಇರುವುದರ ಬಗ್ಗೆ ಈ ಡೋಂಗಿ ಪರಿಸರವಾದಿಗಳು ಚಕಾರವೆತ್ತುತ್ತಿಲ್ಲ, ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ದಾಖಲಿಸುತ್ತಿಲ್ಲ, ಆನೆಗಳು ನಾಡಿಗೆ ಲಗ್ಗೆ ಇಡುತ್ತಿದ್ದರೆ, ಅದಕ್ಕೆ ಅರಣ್ಯ ಇಲಾಖೆಯ ವಶದಲ್ಲಿರುವ ಅರಣ್ಯಗಳು ನಾಶವಾಗುತ್ತಿರುವುದು ಕಾರಣ ಎಂದು ಹೇಳುತ್ತಿಲ್ಲ, ಬದಲಿಗೆ ಗಜಪಥವನ್ನು

▶▶ 14

ಸಂಘ ಪರಿವಾರಕ್ಕೆ ತುರ್ತುಪರಿಸ್ಥಿತಿಯನ್ನು ಖಂಡಿಸುವ ನೈತಿಕ ಹಕ್ಕು ಇದೆಯಾ?





1975ರಿಂದ 1977ರ ತನಕ ಇಪ್ಪತ್ತು ತಿಂಗಳುಗಳ ಕಾಲ ಹೇರಲಾದ ತುರ್ತುಪರಿಸ್ಥಿತಿ ಭಾರತದ ಇತಿಹಾಸದ ಅತ್ಯಂತ ಕರಾಳ ಹಾಗೂ ಎಂದೆಂದಿಗೂ ನೆನಪಿನಲ್ಲಿ ಉಳಿಯುವ ಅಧ್ಯಾಯಗಳಲ್ಲೊಂದು ಎನ್ನುವುದರಲ್ಲಿ ಸಂಶಯವಿಲ್ಲ. ಅಂದು ಹೆಚ್ಚುಕಮ್ಮಿ ಎಲ್ಲಾ ಅಧಿಕಾರವನ್ನೂ ತನ್ನ ವಶದಲ್ಲಿರಿಸಿಕೊಂಡಿದ್ದ ಇಂದಿರಾ ಗಾಂಧಿಯ ಸರ್ವಾಧಿಕಾರಿ ನಡೆಯನ್ನು ಖಂಡಿಸದವರು ತೀರಾ ವಿರಳ ಎನ್ನಬಹುದು. ಇಂತಹ ದುರ್ಘಟನೆ ಮತ್ತೆಂದೂ ಮರುಕಳಿಸಬಾರದೆಂಬ ಉದ್ದೇಶದಿಂದಲೆ ದೇಶ ಪ್ರತಿ ವರ್ಷ ತುರ್ತುಪರಿಸ್ಥಿತಿಯನ್ನು ಜ್ಞಾಪಿಸಿಕೊಳ್ಳುತ್ತದೆ. ಎಲ್ಲರೂ ಗಮನಿಸಿರುವ ಹಾಗೆ ವರ್ಷವರ್ಷವೂ ತುರ್ತುಪರಿಸ್ಥಿತಿ ಕುರಿತು ಮಿಕ್ಕೆಲ್ಲರಿಗಿಂತ ಹೆಚ್ಚು ಬೊಬ್ಬೆ ಹಾಕುತ್ತಿರುವುದು ಸಂಘ ಪರಿವಾರ. ಮೊನ್ನೆ ತುರ್ತುಪರಿಸ್ಥಿತಿಯ 40ನೇ ವಾರ್ಷಿಕದ ಸಂದರ್ಭದಲ್ಲಿಯೂ ಯಥಾಪ್ರಕಾರ ಕಾಂಗ್ರೆಸ್ ಪಕ್ಷದ ಮೇಲೆ ವಾಗ್ದಾಳಿ ನಡೆಸಿದ ನರೇಂದ್ರ ಮೋದಿ, ಆ ಕರಾಳ ದಿನಗಳಲ್ಲಿ ಭಾರತದ ಪ್ರಜಾಸತ್ತೆಯನ್ನು ತುಳಿದುಹಾಕಲಾಗಿತ್ತು; ದೇಶಕ್ಕೆ ಕೈಕೊಳ ತೊಡಿಸಿ ಇಡೀ ದೇಶವನ್ನೇ ಸೆರೆಮನೆಯನ್ನಾಗಿಸಲಾಗಿತ್ತು ಎಂದು ಗರ್ಜಿಸಿದ್ದಾನೆ. ಚಾಣಾಕ್ಷ ಮೋದಿಗೆ ತನ್ನ ಸರ್ಕಾರವೂ ಒಂದು ಅಘೋಷಿತ ತುರ್ತುಪರಿಸ್ಥಿತಿಯೊಂದನ್ನು ದೇಶದ ಮೇಲೆ ಹೇರಲಾರಂಭಿಸಿರುವುದರ ಅರಿವಿಲ್ಲದಿರಲು ಸಾಧ್ಯವೇ ಎನ್ನುವುದು ಮಿಲಿಯನ್ ಡಾಲರ್ ಪ್ರಶ್ನೆ. ತನ್ನ ವಾಗ್ದಾಳಿಯನ್ನು ಮುಂದುವರಿಸುತ್ತಾ 75ರ ತುರ್ತುಪರಿಸ್ಥಿತಿಯ ಹಲವಾರು ವೈಯಕ್ತಿಕ ನೆನಪುಗಳು ಮರುಕಳಿಸುತ್ತಿವೆಯೆಂದು ಟ್ವೀಟಿಸಿದ ಮೋದಿಗೆ ಕೆಲವೊಂದು ಅನಾನುಕೂಲಕರ ನೆನಪುಗಳು ಆಗದಿರುವುದನ್ನು ಜಾಣ ಮರೆವು ಎನ್ನದೆ ವಿಧಿಯಿಲ್ಲ. ಏಕೆಂದರೆ ತುರ್ತುಪರಿಸ್ಥಿತಿಯನ್ನು ಹೇರಿದ್ದ ಸರ್ವಾಧಿಕಾರಿಣಿಯನ್ನು ಹೊಗಳಿ ಆಕೆಯ ಆಳ್ವಿಕೆಯನ್ನು ನ್ಯಾಯಸಮ್ಮತವಾಗಿಸುವ ಪ್ರಸ್ತಾಪವೊಂದನ್ನು ಮುಂದಿಟ್ಟಿದ್ದೇ ಆರೆಸ್ಸೆಸ್! ಈ ಜನದ್ರೋಹಿ ಕೃತ್ಯ ಅನಾನುಕೂಲಕರ ನೆನಪುಗಳ ಪಟ್ಟಿಗಲ್ಲದೆ ಇನ್ನೆಲ್ಲಿಗೆ ಸೇರಬೇಕು ಹೇಳಿ?

1975ರಲ್ಲಿ ಇಂದಿರಾ ಗಾಂಧಿ ತುರ್ತುಪರಿಸ್ಥಿತಿ ಘೋಷಿಸುತ್ತಿದ್ದಂತೆ ದೇಶಾದ್ಯಂತ ಒಂದು ಲಕ್ಷಕ್ಕೂ ಅಧಿಕ ಜನರನ್ನು ಬಂಧಿಸಿ ಸೆರೆಮನೆಗೆ ತಳ್ಳಲಾಯಿತು. ಹಾಗೆ ಪುಣೆಯ ಯರವಾಡ ಜೈಲು ಸೇರಿದವರಲ್ಲಿ ಅಂದು ಆರೆಸ್ಸೆಸ್‌ನ ಸರಸಂಘಚಾಲಕನಾಗಿದ್ದ ಬಾಳಾ ಸಾಹೇಬ ದೇವರಸ್ ಕೂಡ ಒಬ್ಬರು. ಆದರೆ ಕಾರಾಗೃಹದ ಬದುಕನ್ನು ಅನುಭವಿಸಿದ ಕೆಲವೇ ಸಮಯದಲ್ಲಿ ಅಲ್ಲಿಂದ ಹೇಗಾದರೂ ಪಾರಾಗಬೇಕೆಂದು ಬಾಳಾಗೆ ಅನಿಸತೊಡಗಿತು. ಆಗ ಆತನೆದುರು ಗೋಚರಿಸಿದ್ದು ತಮ್ಮ "ಹಿಂದೂತ್ವ" ಸಿದ್ಧಾಂತದ ಪಿತೃವಾದ "ವೀರ" ಸಾವರ್ಕರ್ ಹಾಕಿಕೊಟ್ಟ ಶರಣಾಗತಿಯ ಮಾರ್ಗ. ಅಂತೆಯೆ ಇಂದಿರಾ ಗಾಂಧಿಗೆ ಮಾತ್ರವಲ್ಲ ಮಹಾರಾಷ್ಟ್ರದ ಮುಖ್ಯಮಂತ್ರಿ ಎಸ್.ಬಿ.ಚವಾಣ್ ಮತ್ತು ವಿನೋಬಾ ಭಾವೆಗೂ ಪತ್ರಗಳನ್ನು ಬರೆದು ತನ್ನನ್ನು ಬಿಡುಗಡೆ ಮಾಡಿರೆಂದು ದಮ್ಮಯ್ಯಗುಡ್ಡೆ ಹಾಕಿದರು. ಅಕ್ಟೋಬರ್ 18, 1977ರಂದು ಮಹಾರಾಷ್ಟ್ರ ಸದನದ ಮುಂದಿಡಲಾಗಿದ್ದ ಆ ಪತ್ರಗಳು ಇಂದಿಗೂ ದಾಖಲೆಗಳಲ್ಲಿ ಲಭ್ಯವಿವೆ.

ದೇವರಸ್ ಆಗಸ್ಟ್ 22ರಂದು ಇಂದಿರಾ ಗಾಂಧಿಗೆ ಬರೆದ ಮೊದಲ ಪತ್ರದಲ್ಲಿ ಆಕೆಯ ಸ್ವಾತಂತ್ರ್ಯ ದಿನದ ಭಾಷಣ ಸಮಯೋಚಿತವಾಗಿತ್ತಲ್ಲದೆ ಸಂದರ್ಭೋಚಿತವಾಗಿತ್ತೆಂದು ಹೊಗಳಿ ಆರೆಸ್ಸೆಸ್ ಮೇಲಿನ ನಿಷೇಧಾಜ್ಞೆಯನ್ನು ಹಿಂದೆಗೆದುಕೊಳ್ಳುವಂತೆ ಬೇಡಿಕೊಂಡರು. ಸರ್ವೋಚ್ಚ ನ್ಯಾಯಾಲಯದ ಐವರು ನ್ಯಾಯಾಧೀಶರು ಆಕೆಯ ಚುನಾವಣೆಯ ನ್ಯಾಯಸಮ್ಮತತೆಯನ್ನು ಎತ್ತಿಹಿಡಿದಿರುವುದಕ್ಕಾಗಿ ಆಕೆಗೆ ಅಭಿನಂದನೆ ಹೇಳಿದರು. ಜಯಪ್ರಕಾಶ ನಾರಾಯಣರ ಚಳವಳಿಗಳಿಗೂ ಆರೆಸ್ಸೆಸ್‌ಗೂ ಯಾವ ಸಂಬಂಧವೂ ಇಲ್ಲವೆಂದರು. ಬಂಧಿತ ಆರೆಸ್ಸೆಸ್ ಕಾರ್ಯಕರ್ತರನ್ನು ಬಿಡುಗಡೆಗೊಳಿಸಬೇಕೆಂದೂ, ಆರೆಸ್ಸೆಸ್ ಮೇಲಿನ ನಿಷೇಧಾಜ್ಞೆಯನ್ನು ಹಿಂದೆಗೆಯಬೇಕೆಂದೂ ಮತ್ತೊಮ್ಮೆ ಪ್ರಾರ್ಥಿಸಿದರು. ಗಮನಾರ್ಹ ವಿಷಯವೆಂದರೆ ದೇವರಸ್‌ರ ಎಲ್ಲಾ ಪತ್ರಗಳಲ್ಲಿ ಕೇವಲ ಆರೆಸ್ಸೆಸ್ ಬಗೆಗಿನ ಕಾಳಜಿಯನ್ನಷ್ಟೆ ಕಾಣಬಹುದು. ಆದರೆ ಆತ ಎಲ್ಲಾ ಬಂಧಿತರನ್ನು ಬಿಡುಗಡೆಗೊಳಿಸಬೇಕೆಂದಾಗಲಿ ತುರ್ತುಪರಿಸ್ಥಿತಿಯನ್ನು ರದ್ದುಗೊಳಿಸಬೇಕೆಂದಾಗಲಿ ಒಮ್ಮೆಯಾದರೂ ಯಾಚಿಸಲಿಲ್ಲ. ಪತ್ರದ ಕೊನೆಯಲ್ಲಿ "ರಾಷ್ಟ್ರೋನ್ನತಿಗಾಗಿ.... ಲಕ್ಷಗಟ್ಟಲೆ ಆರೆಸ್ಸೆಸ್ ಸ್ವಯಂಸೇವಕರ ಸೇವೆ"ಯನ್ನು ಒದಗಿಸಲೂ ತಾನು ಸಿದ್ಧನೆಂದು ಬರೆದರು. ಈ ರಹಸ್ಯ ಒಪ್ಪಂದದ ಕೊಡುಗೆ ಇಂದಿರಾ ಗಾಂಧಿಯ ಕಸದಬುಟ್ಟಿ ಸೇರಿತೆಂದು ಬೇರೆ ಹೇಳಬೇಕಾಗಿಲ್ಲ, ಮೊದಲ ಪತ್ರಕ್ಕೆ ಉತ್ತರ ಬರದಿದ್ದಾಗ ಜುಲೈ 16, 1976ರಂದು ದೇವರಸ್ ಇನ್ನೊಂದು ಪತ್ರ ಬರೆದರು. ಈ ಬಾರಿ "ಪಾಕಿಸ್ತಾನ ಮತ್ತು ಚೀನಾಗಳೊಂದಿಗಿನ ಸಂಬಂಧಗಳನ್ನು ಸುಧಾರಿಸುವುದಕ್ಕಾಗಿ ನೀವು ಮಾಡುತ್ತಿರುವ ಪ್ರಯತ್ನಗಳು ಪ್ರಶಂಸನೀಯ"ವೆಂದು ಆಕೆಯನ್ನು ಅಭಿನಂದಿಸಿದರು. ಆತ ಒಂದು ವೇಳೆ ಜೈಲಿನಲ್ಲಿರುವ ಬದಲು ಹೊರಗೇನಾದರೂ ಇದ್ದಿದ್ದರೆ ಇಂದಿರಾಳ ಈ ನೀತಿಯನ್ನು ತೀವ್ರವಾಗಿ ಖಂಡಿಸುತ್ತಿದ್ದರೆಂಬುದರಲ್ಲಿ ಸಂದೇಹವೆ ಇಲ್ಲ! ಮುಂದೆ ವಿನೋಬಾ ಭಾವೆಗೆ ಬರೆದ ಪತ್ರದಲ್ಲಿ ಸ್ವಲ್ಪವೂ ಮುಚ್ಚುಮರೆಯಿಲ್ಲದೆ, ದೇಶದ ಪ್ರಗತಿ ಮತ್ತು ಏಳಿಗೆಗೆ ಸಂಬಂಧಿಸಿದಂತೆ ಪ್ರಧಾನಮಂತ್ರಿ ನೇತೃತ್ವದ ಇಪ್ಪತ್ತು ಅಂಶಗಳ ಕಾರ್ಯಕ್ರಮದಲ್ಲಿ ಭಾಗವಹಿಸಲು ಆರೆಸ್ಸೆಸ್ ಮನಸಾರೆ ಒಪ್ಪಿಕೊಂಡಿದೆಯೆಂದು ಹೇಳಿದರು.

ಸೆರೆಮನೆಯೊಳಗೆ ಹರಿದಾಡುತ್ತಿದ್ದ ಈ ಪತ್ರಗಳ ಪ್ರತಿಗಳನ್ನೋದಿದ ಆರೆಸ್ಸೆಸ್ ಕಾರ್ಯಕರ್ತರ ನೈತಿಕ ಸ್ಥೈರ್ಯವೇ ಉಡುಗಿಹೋಗಿತ್ತು. ಮಧು ಲಿಮಯೆಗೆ ಕೂಡ ಈ ಕ್ಷಮಾಪಣಾ ಪತ್ರಗಳ ಕುರಿತು ತಿಳಿದಿತ್ತು. "ಬಂಧಿತರು ಒಂದು ವಾಗ್ದಾನ ಪತ್ರಕ್ಕೆ ಸಹಿಹಾಕಲು ಸಿದ್ಧರಿದ್ದಾರೆಯೇ ಎನ್ನುವ ಪ್ರಶ್ನೆಗಳಿದ್ದ ಸುತ್ತೋಲೆಯನ್ನು ಯರವಾಡಾ ಕೇಂದ್ರ ಜೈಲಿನಲ್ಲಿ ಮೂರ್ನಾಲ್ಕು ಬಾರಿ ಹಂಚಲಾಗಿತ್ತು. ಬಂಧಿತ ಆರೆಸ್ಸೆಸ್ ಕಾರ್ಯಕರ್ತರ ಪೈಕಿ ಗರಿಷ್ಠ ಸಂಖ್ಯೆಯ ಮಂದಿ ತಮ್ಮ ಒಪ್ಪಿಗೆ ಸೂಚಿಸಿ ಸಹಿಹಾಕಿದ್ದನ್ನು ನನ್ನ ಕಣ್ಣಾರೆ



ಕಂಡಿದ್ದೇನೆ" ಎಂಬುದಾಗಿ ಪುಣೆಯ ಕಾರ್ಮಿಕ ಮುಖಂಡ ಬಾಬಾ ಉದ್ಧವ್ ಸಾಕ್ಷ್ಯ ನುಡಿದಿದ್ದರು (ಜನತಾ, ಸಪ್ಟಂಬರ್ 16, 1979). ಸಂಜಯ ಗಾಂಧಿ ರಾಜಕೀಯಕ್ಕೆ ಪ್ರವೇಶ ಮಾಡಿದಾಗ ಪಾಂಚಜನ್ಯ (ಡಿಸೆಂಬರ್ 21, 1975) ಅದನ್ನು ಅತ್ಯುತ್ಸಾಹದಿಂದ ಸ್ವಾಗತಿಸಿತ್ತಲ್ಲದೆ ಹೊಗಳಿಕೆಯ ಮಳೆಯನ್ನೆ ಸುರಿಸಿತ್ತು. ಈ ವಿಚಾರದಲ್ಲಿ ಪುಣೆಯ ತರುಣ್ ಭಾರತ್ ಕೂಡಾ ಹಿಂದೆ ಬಿದ್ದಿರಲಿಲ್ಲ. ಇದನ್ನೆಲ್ಲ ಖ್ಯಾತ ನ್ಯಾಯವಾದಿ ನೂರಾನಿ ತಮ್ಮ ಆರೆಸ್ಸೆಸ್ ಮತ್ತು ಬಿಜೆಪಿ ಎಂಬ ಪುಸ್ತಕದಲ್ಲಿ ದಾಖಲಿಸಿದ್ದಾರೆ.

2000ನೆ ಇಸವಿಯಲ್ಲಿ ತುರ್ತುಪರಿಸ್ಥಿತಿಯ 25ನೆ ವಾರ್ಷಿಕದ ಸಂದರ್ಭದಲ್ಲಿ ಸ್ಫೋಟಕ ಮಾಹಿತಿಗಳನ್ನು ಹೊರಗೆಡವಿದ ಡಾ। ಸುಬ್ರಮಣ್ಯನ್ ಸ್ವಾಮಿ, ಆರೆಸ್ಸೆಸ್ ನಾಯಕರು ತುರ್ತುಪರಿಸ್ಥಿತಿಯ ವೇಳೆ ಎಸಗಿದ್ದ ವಿಶ್ವಾಸಘಾತುಕ ಕೃತ್ಯಗಳನ್ನೆ ಬಯಲಿಗೆಳೆದುದಲ್ಲದೆ ವಾಜಪೇಯಿ ಸರ್ಕಾರವೂ ತುರ್ತುಪರಿಸ್ಥಿತಿಯ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಆರೋಪಿಸಿದರು. ಈ ಕುರಿತು ಡಾ। ಸ್ವಾಮಿ ಬರೆದ ಲೇಖನವೊಂದು ದ ಹಿಂದು ಪತ್ರಿಕೆಯ ಜೂನ್ 13, 2000ರ ಆವೃತ್ತಿಯಲ್ಲಿ ಪ್ರಕಟವಾಗಿತ್ತು, ಅದರಲ್ಲಿ ಆತ ಹೇಳುವಂತೆ:

- 1977ರ ಜನವರಿ ತಿಂಗಳ ಕೊನೆಯಲ್ಲಿ ಆರೆಸ್ಸೆಸ್ ನಾಯಕತ್ವವು ಶರಣಾಗತಿಯ ಕಾಗದಪತ್ರಕ್ಕೆ ಸಹಿ ಮಾಡಲು ಸಿದ್ಧವಾಗಿತ್ತೆಂದು ಖುದ್ದು ಆರೆಸ್ಸೆಸ್ ನಾಯಕ ಮುಳೆಯವರೇ ಆತನಿಗೆ ತಿಳಿಸಿದ್ದರು.
- ದೇವರಸರಂತೆ ವಾಜಪೇಯಿ ಕೂಡ ಇಂದಿರಾ ಗಾಂಧಿಗೆ ಕ್ಷಮಾಪಣೆಯ ಪತ್ರಗಳನ್ನು ರವಾನಿಸಿದ್ದರು. ಮಾತ್ರವಲ್ಲ ತಾನು ಸರಕಾರದ ವಿರುದ್ಧ ಯಾವುದೇ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಿಲ್ಲವೆಂದು ಬರೆದುಕೊಟ್ಟು ಪರೋಲ್ ಮೇಲೆ ಬಿಡುಗಡೆಗೊಂಡಿದ್ದರು.
- ಇವರಿಬ್ಬರಲ್ಲದೆ ಇನ್ನೂ ಅನೇಕ ಸಂಘ ಪರಿವಾರದ ನಾಯಕರು ಸದ್ವರ್ತನೆಯ ವಾಗ್ದಾನ ನೀಡಿ ಜೈಲಿನಿಂದ ಹೊರಗೆ ಬಂದಿದ್ದರು. ಅಕಾಲಿ ನಾಯಕ ಸುರ್ಜಿತ್ ಸಿಂಗ್ ಬರ್ನಾಲ ಬರೆದ ಪುಸ್ತಕದಲ್ಲಿ ಅವರೆಲ್ಲರ ಹೆಸರುಗಳನ್ನು ನೀಡಲಾಗಿದೆ (ಜನಸಂಘದ ಹಲವಾರು ಮಂದಿ ಇಂದಿರಾ ಗಾಂಧಿಯ ಇಪ್ಪತ್ತಂಶ ಮತ್ತು ಸಂಜಯ ಗಾಂಧಿಯ ಐದಂಶ ಕಾರ್ಯಕ್ರಮಗಳಿಗೆ ಬೆಂಬಲ ವ್ಯಕ್ತಪಡಿಸಿ ಬಿಡುಗಡೆಗೊಂಡಿದ್ದರೆಂದು ಡಾ। ಸ್ವಾಮಿಯ ಸೋದರನ ಪತ್ನಿ ಕೂಮಿ ಕಪೂರ್ ಕೂಡ ತನ್ನ The Emergency: A Personal History ಎನ್ನುವ ಪುಸ್ತಕದಲ್ಲಿ ಬರೆದಿದ್ದಾರೆಂದು ಹಿರಿಯ ಪತ್ರಕರ್ತ ಅಜಾಜ್ ಅಶ್ರಫ್ ಹೇಳುತ್ತಾರೆ).

ಲೇಖನದ ಕೊನೆಯಲ್ಲಿ ಸ್ವಾಮಿ ಹೇಳಿರುವುದಕ್ಕೂ ಇವತ್ತಿನ ಸನ್ನಿವೇಶಕ್ಕೂ ಅಸಾದೃಶ ಹೋಲಿಕೆಗಳಿವೆ!

"ನಾವು ಇವತ್ತು ಪ್ರಜಾಸತ್ತೆಯ ರಕ್ಷಣೆ ಮಾಡುವಲ್ಲಿ 1975-77ಕ್ಕಿಂತಲೂ ದುರ್ಬಲರಾಗಿರುವೆವು. ಒಂದು ಕಾರಣವೆಂದರೆ ಜಾತಿ ವಿಚಾರದಲ್ಲಿ ನಿಷ್ಪಕ್ಷಪಾತ ಧೋರಣೆ ಹೊಂದಿದ್ದ ಸ್ವಾತಂತ್ರ್ಯ ಹೋರಾಟ ಕಾಲದ ನಾಯಕರು ಇಂದು ನಮ್ಮೊಂದಿಗಿಲ್ಲ. ಮತ್ತೊಂದು ಕಾರಣ ಏನೆಂದರೆ ನಿಷ್ಠಾವಂತ ಕಾರ್ಯಕರ್ತರನ್ನು ಆಧರಿಸಿದ ಫ್ಯಾಸಿಸ್ಟ್ ಸಂಘಟನೆಯೊಂದು ಅಧಿಕಾರದ ಹಿಡಿಕೆಗಳ ಮೇಲೆ ನಿಯಂತ್ರಣ ಸಾಧಿಸಿದೆ. ಅದು ಹುಟ್ಟುಹಾಕಿರುವ ಅಂಗಸಂಸ್ಥೆಗಳು ತಿಳಿವಳಿಕೆಯಿಲ್ಲದ ಕೆಳವರ್ಗಗಳಿಂದ ಕೂಡಿವೆ. ಈ ಸಂಘಟನೆಗಳು ಅನ್ಯಧರ್ಮಗಳ ಅಸುರಕ್ಷಿತ ಮತಪ್ರಚಾರಕರನ್ನು ಕೊಲ್ಲಲೂ ಹೇಸುವುದಿಲ್ಲ. ಇದಕ್ಕಿಂತಲೂ ಕೆಟ್ಟದಾದ ವಿಷಯವೆಂದರೆ ಮೆಲ್ಲಮೆಲ್ಲನೆ ತೆವಳುತ್ತ ಬರುತ್ತಿರುವ ತುರ್ತುಪರಿಸ್ಥಿತಿಯೊಂದು ಪ್ರತಿಯೊಂದು ಸಂಸ್ಥೆಯನ್ನೂ ಬುಡಮೇಲು ಮಾಡುತ್ತಿರುವ ಬಗ್ಗೆ ಸಾಕಷ್ಟು ಸೂಚನೆಗಳಿವೆ. ....ಬಿಜೆಪಿ ಕೇವಲ ಸಂವಿಧಾನದ ತಿದ್ದುಪಡಿ ಮಾಡುತ್ತಿಲ್ಲ, ಅದೀಗ ಸಂವಿಧಾನದ ರಿಪೇರಿ ಕೈಗೊಳ್ಳಲು ಸಕಲ ಸಿದ್ಧತೆಗಳನ್ನು ನಡೆಸಿದೆ. ಚರಿತ್ರೆಯ ಪರಿಷ್ಕರಣೆಯನ್ನು ಆರಂಭಿಸಿದೆ. ಆದರ ಅಂಗಸಂಸ್ಥೆಗಳಾದ ವಿಹಿಂಪ ಮತ್ತು ಬಜರಂಗ ದಳ ಈಗಾಗಲೆ ಸಮಾಜದ ತಳಮಟ್ಟದಲ್ಲಿ ವಿಕಟ, ಅಸ್ಪಷ್ಟ ಭಯೋತ್ಪಾದನೆಯನ್ನು ಹರಿಬಿಡುತ್ತಿವೆ. ಇಂತಹ ಸನ್ನಿವೇಶವಿರುವಾಗ ಬಿಜೆಪಿ ಅದು ಹೇಗೆ ಪ್ರಜಾಸತ್ತೆಯನ್ನು ಉಳಿಸುವ ಬಗ್ಗೆ ಮಾತನಾಡುತ್ತದೆ? ....ಪ್ರಜಾಸತ್ತೆ ಇಂದು ಅದೃಶ್ಯ ದಾಳಿಗೊಳಗಾಗಿದೆ...."

2000ನೆ ಇಸವಿಯಲ್ಲಿ ಎನ್‌ಡಿಎ 1 ಸರ್ಕಾರವನ್ನು ಹೀಗೆಲ್ಲ ತರಾಟೆಗೆ ತೆಗೆದುಕೊಂಡಿದ್ದ ಡಾ। ಸ್ವಾಮಿ 'ದಿಕ್ಕಿಲ್ಲದವನು ದೆವ್ವ ತಬ್ಬಿಕೊಂಡ' ಎಂಬ ಗಾದೆಯಂತೆ 2013ರಲ್ಲಿ ತನ್ನ ಜನತಾ ಪಕ್ಷವನ್ನು ವಿಸರ್ಜಿಸಿ ಸೀದಾ ಬಿಜೆಪಿಗೆ ಜಿಗಿದರು! ಈಗ 2015ರಲ್ಲಿ ಅದೇ ಫ್ಯಾಸಿಸ್ಟ್ ಸಂಘಟನೆ ಮತ್ತೆ ಅಧಿಕಾರದ ಹಿಡಿಕೆಗಳ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಿರುವಾಗ, ಪ್ರಸಕ್ತ ಸರ್ಕಾರವೂ ಸರ್ವಾಧಿಕಾರದತ್ತ ದಾಪುಗಾಲಿಡುತ್ತಿರುವ ಸೂಚನೆಗಳಿರುವಾಗ, ಪ್ರಜಾಸತ್ತೆಗೆ ಮತ್ತೊಮ್ಮೆ ಅಪಾಯ ಎದುರಾಗಿರುವಾಗ ಇದೇ ಡಾ। ಸ್ವಾಮಿ ಕಣ್ಣು, ಕಿವಿ, ಬಾಯಿ ಮುಚ್ಚಿಕೊಂಡಿರುವುದನ್ನು ಕಾಲದ ವೈಪರೀತ್ಯ ಎನ್ನಬೇಕೋ ಅಥವಾ ಅವಕಾಶವಾದ ಎನ್ನಬೇಕೋ ತಿಳಿಯದು. ಅದೇನಿದ್ದರೂ ಭ್ರಷ್ಟಾಚಾರದ ವಿಚಾರದಲ್ಲಿ ಮೌನಕ್ಕೆ ಶರಣಾಗಿರುವ ಮೋದಿಯಂತೆ ಈತನೂ 'ಮೌನಿ ಸ್ವಾಮಿ' ಆಗಿರುವುದಂತೂ ನಿಜ. ಆದರೂ ಅಪಾಯದ ಕರೆಗಂಟೆ ಬಾರಿಸಿದೆ ಮತ್ತು ಅತ್ಯಾಶ್ಚರ್ಯಕರವಾಗಿ ಅದನ್ನು ಬಾರಿಸಿದವರು ಸ್ವತಃ ಬಿಜೆಪಿಯ ವಿರೋಧಿ ಬಣದವರು! ತುರ್ತು ಪರಿಸ್ಥಿತಿಯ ವಾರ್ಷಿಕದ ವೇಳೆ ಮಾತನಾಡಿದ ಅಡ್ವಾಣಿ ದೇಶದ ಮೇಲೆ ಮತ್ತೊಮ್ಮೆ ತುರ್ತುಪರಿಸ್ಥಿತಿ ಹೇರಲ್ಪಡುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ ಎಂದಿದ್ದಾರೆ. ಮಹಾರಾಷ್ಟ್ರದ ಬಿಜೆಪಿ ಶಾಸಕ ರಾಜ್ ಪುರೋಹಿತ್ ಎಂಬಾತನೂ ಬೇರೊಂದು ವಿಧದಲ್ಲಿ ಇದಕ್ಕೆ ದನಿಗೂಡಿಸಿದ್ದಾನೆ. ಒಂದು ವೇಳೆ ತುರ್ತುಪರಿಸ್ಥಿತಿ ಹೇರಲ್ಪಟ್ಟರೆ ಅದರ ಮೊತ್ತಮೊದಲ ಗುರಿ ಅಡ್ವಾಣಿ ಬಣ ಎಂಬುದರಲ್ಲಿ ಅನುಮಾನವಿಲ್ಲ. ವಾಸ್ತವವಾಗಿ ಆರೆಸ್ಸೆಸ್ ನಿರ್ದೇಶನದನುಸಾರ ಆಡಳಿತ ನಡೆಸುತ್ತಿರುವ ಮೋದಿ ಸರ್ಕಾರ ಈಗಾಗಲೆ ಅಘೋಷಿತ ತುರ್ತುಪರಿಸ್ಥಿತಿಯೊಂದನ್ನು ಜಾರಿಗೊಳಿಸಿದೆ. ಇಂತಹ ಸನ್ನಿವೇಶದಲ್ಲಿ ಮತ್ತು ತನ್ನ ಶರಣಾಗತಿಯ ಇತಿಹಾಸದ ಹಿನ್ನೆಲೆಯಲ್ಲಿ ಸಂಘ ಪರಿವಾರಕ್ಕೆ 75ರ ತುರ್ತುಪರಿಸ್ಥಿತಿ ಕುರಿತು ದನಿ ಎತ್ತುವ ನೈತಿಕ ಹಕ್ಕು ಇದೆಯಾ?

(ಆಧಾರ: ಆರೆಸ್ಸೆಸ್ ಮತ್ತು ಬಿಜೆಪಿ, ಎ.ಜಿ.ನೂರಾನಿ; ದ ಹಿಂದು, 13-6-2000; www.firstpost.com ನಲ್ಲಿ ಅಜಾಜ್ ಅಶ್ರಫ್)

ಇನ್ನಾರಿಗೆ ದೂರಲಿ ಕೂಡಲಸಂಗಮದೇವ



ಘಟನೆ-1: ಎಸ್.ಎಂ.ಕೃಷ್ಣ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರ ಕರ್ನಾಟಕದಲ್ಲಿ ಶಾಲಾಮಕ್ಕಳಿಗೆ ಬಿಸಿಯೂಟದ ವ್ಯವಸ್ಥೆಯನ್ನು ದೇಶದಲ್ಲೇ ಮೊದಲಿಗೆ ಜಾರಿಗೆ ತಂದಿತ್ತು. ಆಗಲೂ ಪರ/ವಿರೋಧ ಚರ್ಚೆ ಭಾರೀ ಬಿರುಸಾಗಿ ನಡೆದಿತ್ತು. ನಮ್ಮನ್ನು ಸುತ್ತುವರಿದಿರುವ ಶೈಕ್ಷಣಿಕ/ಸಾಮಾಜಿಕ ಸಂಗತಿಗಳೆಲ್ಲವೂ ಬಿಸಿಯೂಟದ ಅನ್ನದ ಬಟ್ಟಲಿನ ಸುತ್ತ ಕುಣಿಯುತ್ತಿದ್ದವು. ನಾನು ಆಗ ಮೂಡುಬಿದಿರೆಯಲ್ಲಿ ಅಧ್ಯಾಪಕನಾಗಿದ್ದೆ. ವೈಯಕ್ತಿಕ ಕುತೂಹಲದಿಂದ ಮಧ್ಯಾಹ್ನದ ಒಂದು ಹೊತ್ತು ನನ್ನ ಇಬ್ಬರು ವಿದ್ಯಾರ್ಥಿಗಳೊಂದಿಗೆ ಸರಕಾರೀ ಶಾಲೆಯೊಂದಕ್ಕೆ ಭೇಟಿ ನೀಡಿದೆ. ಎಲ್ಲ ಮಕ್ಕಳಲ್ಲೂ ನಜ್ಜುಗುಜ್ಜಾದ ಅಲ್ಯೂಮಿನಿಯಂ ತಟ್ಟೆಗಳು (ಬಟ್ಟಲುಗಳು) ಆದರೆ ಒಂದು ಮಗು ಎರಡು ಎಲೆಗಳನ್ನು ಹಿಡಿದುಕೊಂಡು ಕುಳಿತಿತ್ತು. ಕೆಸುವಿನ (colocasia) ಎಲೆಗಳು ಅವು. (ಈ ಎಲೆಗಳ ರಸ ಸೋಕಿದರೆ ವಿಪರೀತ ತುರಿಕೆ) ನಾನು ಟೀಚರ್, ಅನ್ನು ಕೇಳಿದೆ. ಈ ಮಕ್ಕಳು ಯಾಕೆ ತಟ್ಟೆ ತಂದಿಲ್ಲ, ಆಗ ಟೀಚರ್ ಅಂದರು "ಸಾರ್, ಅದಕ್ಕೂ ಅವರಲ್ಲಿ ದುಡ್ಡಿಲ್ಲ, ಆ ಹುಡುಗ ಎರಡು ಎಲೆ ತಂದಿದ್ದಾನಲ್ಲ, ಅದು ಅವನ ತಮ್ಮನಿಗೆ. ಅವನಿಗೆ ಇನ್ನೂ ನಾಲ್ಕು ವರ್ಷ. ಈ ಶಾಲೆಗೆ ಅವನು ಪ್ರವೇಶವೇ ಪಡೆದಿಲ್ಲ, ಆದರೆ ಮನೆಯಲ್ಲಿ ಕೂಳಿಲ್ಲ, ಸ್ಕೂಲ್‌ಗೆ ಬಂದು ಹೊಟ್ಟೆ ತುಂಬಿಸ್ಕೋತಾರೆ ಪಾಪ. ಭಾನುವಾರ ಅವರು ಊಟಕ್ಕೆ ಏನು ಮಾಡುತ್ತಾರೆ ಎಂಬುದೇ ನನ್ನ ಚಿಂತೆ." ಇದು ಶಿಕ್ಷಣಕಾಶಿ, ಆಧುನಿಕತೆಯ ಹೆಬ್ಬಾಗಿಲು, ಬುದ್ಧಿವಂತರ ಜಿಲ್ಲೆ ಇತ್ಯಾದಿ ಏನೇನೋ ವಿಶೇಷಣಗಳನ್ನು ಪಡೆದುಕೊಂಡ ಜಿಲ್ಲೆಯಲ್ಲಿನ ನನ್ನ ಅನುಭವ.

ಘಟನೆ-2: ಕಾಲಾಂತರದಲ್ಲಿ ಉದ್ಯೋಗನಿಮಿತ್ತವಾಗಿ ನಾನು ತುಮಕೂರಿಗೆ ಬಂದೆ. ನನ್ನ ಪಕ್ಕದ ಮನೆಯಲ್ಲಿ ಸರಕಾರೀ ಉರ್ದು ಪ್ರಾಥಮಿಕ ಶಾಲೆಯ ಟೀಚರ್ ಒಬ್ಬರು ವಾಸವಾಗಿದ್ದರು. ಪ್ರತಿ ಭಾನುವಾರವೂ ಅವರು ಅರ್ಧದಿವಸದ ಮಟ್ಟಿಗಾದರೂ ಶಾಲೆಗೆ ಹೋಗುತ್ತಿದ್ದರು. "ಯಾಕೆ ಟೀಚರ್ ಭಾನುವಾರ ಸ್ಕೂಲ್‌ಗೆ ಹೋಗ್ತೀರಿ?" ಅಂದೆ ನಾನು. ಅದಕ್ಕವರು "ಇಲ್ಲ ಸಾರ್, ನಾನು ಭಾನುವಾರ ಹೋಗದೆ ಮಕ್ಕಳಿಗೆ ಏನೋ ಸ್ವಲ್ಪ ಬೇಯಿಸಿ ಹಾಕದೆ ಇದ್ರೆ ಅಂದರೆ ಸೋಮವಾರ ನಮ್ಮ ಶಾಲೆಗೆ ಯಾವ ಮಕ್ಕಳೂ ಬರೋ ಸ್ಥಿತಿಯಲ್ಲಿ ಇರಲ್ಲ" ಅಂದರು. ಇದು ಪ್ರತಿನಿತ್ಯ ಅನ್ನದಾಸೋಹ ನಡೆಯುವ ಊರಿನ ಘಟನೆ.

ಇದಕ್ಕೆ ತದ್ವಿರುದ್ಧವಾಗಿರುವ ಇನ್ನೆರಡು ಘಟನೆಗಳು ಇಲ್ಲಿವೆ.

ಘಟನೆ-1: ನನ್ನ ಗೆಳೆಯರಾದ ಅವರು ಮಂಗಳೂರಿನಲ್ಲಿ ಅಧಿಕ ಸಂಬಳ ಇರುವ ಸರಕಾರೀ ಉದ್ಯೋಗಿ. ಅವರ ಹೆಂಡತಿ ಸರಕಾರೀ ಕಿರಿಯ ಪ್ರಾಥಮಿಕ ಶಾಲೆಯೊಂದರಲ್ಲಿ ಅಧ್ಯಾಪಕಿ. ಅವರಿಗೆ ಮದುವೆಯಾಗಿ ಹತ್ತು ವರ್ಷಗಳಾಗಿವೆ. ಮಕ್ಕಳಿಲ್ಲ, ನಾನು ಅವರನ್ನು ಭೇಟಿಯಾದಾಗಲೆಲ್ಲ ಅವರು ಬಿಸಿಯೂಟ ಯೋಜನೆಯ ಬಗ್ಗೆ ವಿಪರೀತ ತಕರಾರು ತೆಗೆಯುತ್ತಿದ್ದರು. ಇತ್ತೀಚೆಗೆ ಅವರು ತಕರಾರು ತೆಗೆಯುವುದನ್ನು ಬಿಟ್ಟಿದ್ದರು. ಯಾಕೆ ಎಂದು ವಿಚಾರಿಸಿದೆ. ಅವರು ಹೇಳಿದ್ದು ಸ್ವಾರಸ್ಯಪೂರ್ಣವಾಗಿತ್ತು. ಅವರ ಹೆಂಡತಿ ಕೆಲಸ ಮಾಡುವ ಶಾಲೆಯಲ್ಲಿ ಈಗ ಬಿಸಿಯೂಟ ಬೇಯುವುದಿಲ್ಲವಂತೆ. ಅಲ್ಲಿಗೆ ಇಸ್ಕಾನ್‌ರವರ ಅಕ್ಷಯಪಾತ್ರೆಯು (ಸರಕಾರೀ ಯೋಜನೆಯನ್ನು ಔಟ್‌ಸೋರ್ಸ್‌ಗೊಳಿಸಿರುವುದರಿಂದ) ಬಿಸಿಯೂಟ ಬರುತ್ತದಂತೆ. ಆದರ ಸಾರಿನ ಘಮವೇ ಬೇರೆ ಅಂತೆ. ಅವರ ಹೆಂಡತಿ ಪ್ರತಿ ಸಂಜೆ ಬರುವಾಗ ಒಂದು ದೊಡ್ಡ ಟಿಫಿನ್ ಬಾಕ್ಸ್‌ನಲ್ಲಿ ಸಾರು-ಅನ್ನ ತರುತ್ತಿದ್ದಾರಂತೆ. ಕಳೆದ ಆರು ವರ್ಷದಿಂದ ಭಾನುವಾರ ಹಾಗೂ ಹಬ್ಬ-ಹರಿದಿನಗಳನ್ನು ಬಿಟ್ಟು ಮನೆಯಲ್ಲಿ ಅವರು ಯಾವತ್ತೂ ಮನೆಯಲ್ಲಿ ಪೂರ್ಣಪ್ರಮಾಣದ ಅಡಿಗೆ ಮಾಡಿದ್ದಿಲ್ಲವಂತೆ. ರಾತ್ರಿ ಊಟಕ್ಕೆ ಏನೋ ಸ್ವಲ್ಪ ಹಪ್ಪಳ-ಸಂಡಿಗೆ ಹುರ್ಕೊಂಡರೆ ಸಾಕಾಗುತ್ತದಂತೆ.

ಘಟನೆ-2: ಆ ಹುಡುಗನ ಹೆಸರು ನರಸಿಂಹರಾಜು. ತುಮಕೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಲ್ಲಿ ಅವನು ನನ್ನ ವಿದ್ಯಾರ್ಥಿ. ಮನೆಯಲ್ಲಿ ಕಡುಬಡತನ. ಜಾತಿಯಲ್ಲಿ ಅವನು ಆದಿಕರ್ನಾಟಕ ಸಮುದಾಯಕ್ಕೆ ಸೇರಿದವನು. ನಮ್ಮ ವಿಶ್ವವಿದ್ಯಾನಿಲಯದಲ್ಲಿ ರಾತ್ರಿ ಸೆಕ್ಯುರಿಟಿ ಕೆಲಸ ಮಾಡಿ. ಬೆಳಗ್ಗೆ ಕ್ಲಾಸ್‌ಗೆ ಬರುತ್ತಿದ್ದ ಹುಡುಗ. ಒಂದು ದಿನ ಸಂಜೆ ಹೊತ್ತು ನನ್ನ ಬಳಿ ಬಂದು "ಸಾರ್, ತಹಸೀಲ್ದಾರ್‌ರವರಿಗೆ ಒಂದು ಪತ್ರ ಬರೆಯಬೇಕು, ನೀವು ಸಹಾಯ ಮಾಡಬೇಕು ಸಾರ್" ಅಂದ. "ಏನು ಪತ್ರ ಅಪ್ಪೀ..?" ಅಂದೆ ನಾನು, ಅದಕ್ಕವನು "ಸಾರ್, ನನಗೊಬ್ಬ ಅಣ್ಣ ಇದ್ದ. ಅವನು ಹುಟ್ಟು ಅಂಗವಿಕಲ. ಅವನಿಗೆ ಅಂತ್ಯೋದಯ ಕಾರ್ಡ್ ಇತ್ತು. ತಿಂಗಳಿಗೆ ಮೂವತ್ತು ಕೆಜಿ ಅಕ್ಕಿ ಬರುತ್ತಿತ್ತು, ಮೊನ್ನೆ ಅವನು ಸತ್ತು ಹೋಗ್ಬಿಟ್ಟ. ಅದಕ್ಕೆ ಅವನ ಕಾರ್ಡ್ ಕ್ಯಾನ್ಸಲ್ ಮಾಡಬೇಕಿತ್ತು" ಅಂದ. ನಾನೆಂದೆ "ಪರವಾಗಿಲ್ಲೋ, ನೀನು ಕಷ್ಟ ಪಡುತ್ತಿದ್ದೀಯಲ್ಲ, ಆ ಅಕ್ಕಿ ನಿನಗೆ ಸಹಾಯಕ್ಕೆ ಬರುತ್ತೆ." ಅದಕ್ಕವನು "ಅಯ್ಯೋ ಬೇಡಿ ಸಾರ್. ನಮ್ಮ ಸಂಸಾರಕ್ಕೆ ಸಿದ್ರಾಮಣ್ಣನ ಅನ್ನಭಾಗ್ಯದ ಅಕ್ಕಿ ಸಿಗುತ್ತೆ. ಉಳಿದ ಖರ್ಚಿಗೆ ನನಗೆ ಸಂಬಳ ಬರುತ್ತೆ ಇದು ಅಂತ್ಯೋದಯ ಯೋಜನೆಯ ಅಕ್ಕಿ, ಯಾರಾದ್ರೂ ನನ್ನಂತಹ ಬೇರೆ ಬಡವರಿಗೆ ಅನುಕೂಲ ಆಗುತ್ತೆ ಸಾರ್. ನನಗೆ ತಹಸೀಲ್ದಾರ್‌ರವರಿಗೆ ಬರೆಯಬೇಕಾದ ಆ ಪತ್ರದ ಒಕ್ಕಣೆ ಹೇಗಿರ್ಬೇಕು ಅಂತ ಗೊತ್ತಾಗುತ್ತಿಲ್ಲ, ದಯವಿಟ್ಟು ಬರ್ಕೊಡಿ ಸಾರ್".

- ನನ್ನ ಜೀವನಾನುಭವದ ಈ ಮೇಲಿನ ಘಟನೆಗಳು ಕುಂ.ವೀ, ದೇಜಗೌ, ಭೈರಪ್ಪರಂಥ ಹಿರಿಯರು ಅನ್ನಭಾಗ್ಯದಂತಹ ಆಹಾರಭದ್ರತೆಯ ಕಾರ್ಯಕ್ರಮವನ್ನು ಹೊಸದಾಗಿ ನೋಡುವಂತೆ ಮಾಡಿಯಾವು ಎಂಬುದು ನನ್ನಂತಹ ಕಿರಿಯನ ವಿಶ್ವಾಸ.

ನಾನು ಗಮನಿಸಿದಂತೆ ಅನ್ನಭಾಗ್ಯದ ಈ ವಾಗ್ವಾದದಲ್ಲಿ ಯಾರು ನಿಜವಾದ ಫಲಾನುಭವಿಗಳೋ ಅವರು ಇವತ್ತಿನವರೆಗೆ ಮಾತಾಡಿಲ್ಲ, ಯಾಕೆಂದರೆ ಅವರಿಗೆ ತಿನ್ನುವ ಬಾಯಿ ಇದೆ. ಆದರೆ ಹೇಳಿಕೊಳ್ಳುವ ಬಾಯಿಯಿಲ್ಲ. ವಿಷಾದವೆಂದರೆ ಬಾಯಿ ಇಲ್ಲದವರ ಪರವಾಗಿ ಮಾತಾಡಬೇಕಾದ ನಾಗರಿಕ ಸಮಾಜದ ಪ್ರತಿನಿಧಿಗಳಾದವರು ತಮಗೆ ಮಾತಾಡಲು ಬರುತ್ತದೆ ಎಂಬ ಒಂದೇ ಅರ್ಹತೆಯಿಂದ ಬಡವರ ಹಕ್ಕಿನ ಅನ್ನದ ಚೀಲಕ್ಕೂ ಕನ್ನ ಹಾಕುತ್ತಿದ್ದಾರೆ.

ಅನ್ನಭಾಗ್ಯ ಯೋಜನೆ ಬೇಕೋ ಬೇಡವೋ ಎಂಬುದರ ಚರ್ಚೆಯೇ ಇಂದು ಅಪ್ರಸ್ತುತ. ಯಾಕೆಂದರೆ ಈ ಯೋಜನೆ ಏನಿದೆ ಅದು ಬಡತನ ಇನ್ನೂ ಸಂಪೂರ್ಣವಾಗಿ ನಿರ್ಮೂಲನೆಯಾಗದ ಭಾರತದಂತಹ ದೇಶದಲ್ಲಿ ಜಾರಿಗೊಳಿಸಲೇಬೇಕಾದ ಆಹಾರಭದ್ರತೆಗೆ ಸಂಬಂಧಪಟ್ಟಂತಹ ಸಂಗತಿ.

ಸಾಮಾಜಿಕ ಭದ್ರತೆಗೆ ಸಂಬಂಧಪಟ್ಟಂತಹ ಅನ್ನಭಾಗ್ಯದಂತಹ ಯೋಜನೆ ಆದರ ಎಲ್ಲ ಅರ್ಹ ಫಲಾನುಭವಿಗಳನ್ನು ತಲುಪುತ್ತಿದೆಯೋ ಇಲ್ಲವೋ ಎಂಬುದರ ಬಗ್ಗೆ ನಾಗರಿಕ ಸಮಾಜ ತನ್ನ ದೃಷ್ಟಿ ಹರಿಸಬೇಕಾಗಿದೆ. ನಾನೇ ಖುದ್ದು ನೋಡಿದಂತೆ ಎಷ್ಟೋ ಮಂದಿ ರೇಷನ್ ಅಂಗಡಿ ಮುಂದೆ ತಮ್ಮ ಕಾರು ನಿಲ್ಲಿಸಿ ಡಿಕ್ಕಿಯಲ್ಲಿ ಅನ್ನಭಾಗ್ಯದ ಅಕ್ಕಿ ತಗೊಂಡು ತಮ್ಮ ಮನೆಯಲ್ಲಿ ಸಾಕಿರುವ ನಾಟಿಕೋಳಿಗಳಿಗೆ ಮೇವು ಕೊಡುವವರಿದ್ದಾರೆ; ಬಡವರು ಅಕ್ಕಿ ತಗೊಂಡು ಹೋಟೇಲ್ ಮಾಲೀಕರಿಗೆ ಕೆಜಿಗೆ ಹತ್ತು ರೂಪಾಯಿಯಂತೆ ಮಾರುತ್ತಿದ್ದಾರೆ ಎನ್ನುವವರು ಇದನ್ನೂ ಸ್ವಲ್ಪ ಕಣ್ಣರಳಿಸಿ ನೋಡಬೇಕಾಗಿದೆ.

ಆದರೆ ಇನ್ನೊಂದೆಡೆ ಈ ಭಾಗ್ಯ ಯೋಜನೆಯ ... ಪಡೆಯಬೇಕಿದ್ದರೆ ಶಾಲೆಗೆ ಹೋಗುವ ಬಡವರ ಸಣ್ಣ... ಮಕ್ಕಳೂ ಅಕ್ಕಿ ಬಂದ ದಿವಸ ಶಾಲೆ ತಪ್ಪಿಸಿ ರೇ... ಅಂಗಡಿಗೆ ಹೋಗಿ ತಮ್ಮ ಹೆಬ್ಬೆಟ್ಟು ಒತ್ತಿ (ಬಯೋಮೆಟ್... ತಮ್ಮ ಪಾಲಿನ ಅಕ್ಕಿ ಪಡೆಯುತ್ತಿದ್ದಾರೆ. ದುಡಿ... ಹೋಗಬೇಕಾದವರು ತಮ್ಮ ದಿನದ ಕೂಲಿಗೆ ಎರ... ರೇಷನ್ ಅಂಗಡಿಯ ಮುಂದೆ ಕ್ಯೂ ನಿಲ್ಲುತ್ತಿದ... ಶ್ರೀಮಂತ/ಮಧ್ಯಮವರ್ಗದ ಜನರ ಮನೆಯಲ್ಲಿ ... ತಿಕ್ಕುವ ಹೆಣ್ಣುಮಕ್ಕಳ ಬೆರಳುಗಳೇ ಸವೆದು ಅವರು ... ಬಾರಿ ಬಯೋಮೆಟ್ರಿಕ್ ಒತ್ತಿದರೂ ಅವರಿಗೆ ಅ... ಸಿಗುತ್ತಿಲ್ಲ, ನೆರೆದ ಜನರ ನಡುವೆ ಸವೆದ ಬೆರಳಿನ ... ಹೆಣ್ಣುಮಗಳು ಅವಮಾನದಿಂದ ಅಪರಾಧಿಯಂತೆ ತಲೆ... ಇತ್ತ ಕೂಲಿಯೂ ಇಲ್ಲದೆ, ಅತ್ತ ಅಕ್ಕಿಯೂ ಇ... ನಡೆಯುತ್ತಿದ್ದಾಳೆ. (ಇಂತಹ ಘಟನೆಗಳ ಬಗ್ಗೆ ನಮ್ಮ ಕು... ಇನ್ನೊಂದು ಕಥೆ ಬರೆಯುತ್ತಿದ್ದರೆ 'ದೇವರ ಹೆಣ' ಕಥ... ಹಾಗೆ ಇನ್ನೊಂದು 'ಅನ್ನಬ್ರಹ್ಮನ ಹೆಣ' ಬೀಳುತ್ತಿ... ಏನೋ?) ಯೋಜನೆಯ ಈ ಬಗೆಯ ವಿಧಿ-ವಿಧಾನ... ನಮ್ಮ ನಾಗರಿಕ ಸಮಾಜ ದುಡಿದು ತಿನ್ನುವ ಬಡವ... ಭಿಕ್ಷುಕರಂತೆ/ಅಪರಾಧಿಗಳಂತೆ ನಡೆಸುತ್ತಿದೆ ಎ... ಅನ್ನಿಸುತ್ತಿಲ್ಲವೇ..? ಅವರು ಬಡವರೆಂಬ ಒಂದೇ ಕಾ... ಮಾನವ ಘನತೆಯನ್ನು ಅಲ್ಲಗಳೆಯಲಾಗುತ್ತಿದೆ ಎ... ಅನ್ನಿಸುತ್ತಿಲ್ಲವೇ? ಆದರ ಬಗ್ಗೆ ಯಾಕೆ ಸಂವಾದ ನಡೆಯ...

ಭಾರತವೂ ಸೇರಿದಂತೆ ಒಟ್ಟಾರೆಯಾಗಿ ಬಹು... ಮಧ್ಯಮವರ್ಗದ ಜನರು ಇಂದು ಮಾನವಿ... ಸಂವೇದನೆಗಳನ್ನು ಕಳೆದುಕೊಂಡವರೇ ಆಗಿದ್ದಾರೆ. ... ಎಲ್ಲ ಕಾಲದ ಸತ್ಯವೂ ಹೌದು. (ಹಿಟ್ಲರ್ ಯಹೂದಿ... ನರಮೇಧ ನಡೆಸುವಂತಹ ಸಂದರ್ಭದಲ್ಲಿ ಬೆಳಗ್ಗೆ 'ಹ... ಎಂದ ನೆರೆಮನೆಯವನೇ ಮಧ್ಯಾಹ್ನದ ಹೊತ್ತಿಗೆ ... ಎಂದು ಗೊತ್ತಾದಾಗಲೂ ಸಂಜೆ ವೇಳೆಗೆ ಐಸ್‌ಕ್ರೀ... ತಿನ್ನಲು ಬಂದ ಜರ್ಮನ್ ಮಧ್ಯಮವರ್ಗದ ಜನರಿ... ಮಧ್ಯಮವರ್ಗದ ಒಟ್ಟೂ ಬದುಕಿನಲ್ಲಿರುವ ಹುಸಿತನ... ಪೊಳ್ಳು ನಂಬಿಕೆಗಳು, ಇಡೀ ಸಮಾಜ ಇಸ್ತ್ರಿ ಮಾ... ಬಟ್ಟೆಯಂತೆ ಮಟ್ಟಸವಾಗಿ, ಗರಿಗರಿಯಾಗಿ ಇರಬೇ... ಈ ವರ್ಗದ ಬಯಕೆಗಳು ನಮ್ಮ ಸಾಹಿತ್ಯಿಕ ಧೀಮಂತ... ಅಟಕಾಯಿಸಿಕೊಂಡು ಬಿಟ್ಟರೆ ಇನ್ನಾರಿಗೆ ದೂ... ಕೂಡಲಸಂಗಮದೇವ.

■ ನಿತ್ಯಾನಂದ ಬಿ ...

12◀◀

ಕೊಡಗು....

ಖಾಸಗಿಯವರು ಅತಿಕ್ರಮಿಸಿರುವುದರಿಂದ ಈ ರೀತಿ ಆಗುತ್ತಿದೆ ಎಂದು ಅವೈಜ್ಞಾನಿಕವಾಗಿ ಪ್ರತಿಪಾದಿಸುತ್ತಾ ಬಂದಿದ್ದಾರೆ.

ಕೊಡಗು ಜಿಲ್ಲೆಯ ಮಟ್ಟಿಗೆ ಇಂತಹ ಅಸಂಬದ್ಧ ವಾದಗಳು ಹೆಚ್ಚಾಗುತ್ತಿವೆ. ಪರಿಸರ ಸಂರಕ್ಷಣೆಯ ಹೆಸರಿನಲ್ಲಿ ಕೃಷಿಕರ ಶೋಷಣೆಯಾಗುತ್ತಿದೆ. ಮೇಲ್ನೋಟಕ್ಕೆ ಇದು ಪರಿಸರವಾದ ಎಂದು ಅಂದುಕೊಂಡರೂ, ಇದರ ಹಿಂದೆ ಅಡಗಿರುವಂತಹದ್ದು ಮೂಲಭೂತವಾದ. ಇದಕ್ಕೆ ಪೂರಕವಾಗಿ ಕೆಲವೊಂದು ಹೋರಾಟಗಳು ಕೊಡಗಿನಲ್ಲಿ ರೂಪುಗೊಳ್ಳುತ್ತಿದೆ. ಇದರ ಒಂದು ಭಾಗವಾಗಿ ಈಗ ಕೊಡಗು ಜಿಲ್ಲೆಯಲ್ಲಿ "ಬಾಳೆಲೆಯಿಂದ ಮಡಿಕೇರಿಯವರೆಗೆ ಬೃಹತ್ ಪಾದಯಾತ್ರೆ" ಎಂಬ ಪ್ರಹಸನ ನಡೆಯುತ್ತಿದೆ.

ಹಿಂದಕ್ಕೆ ಚಲನೆ

ನಾಗರಿಕತೆ ಬೆಳೆಯುತ್ತಿರುವಂತೆ ಪ್ರತಿಯೊಂದು ಭಾಗದಲ್ಲಿಯೂ ಅಭಿವೃದ್ಧಿ ಮತ್ತು ಬೆಳವಣಿಗೆಗಳು ಆಗುತ್ತಿದೆ. ಜನಸಂಖ್ಯೆಯ ಸ್ಫೋಟದಿಂದ ವಲಸೆಯೂ ಪ್ರತಿಯೊಂದು ಭಾಗದಲ್ಲಿ ಕಂಡುಬರುತ್ತಿದೆ. ಕೊಡಗು ಜಿಲ್ಲೆಯು ಇದರಿಂದ ಹೊರತಾಗಿ ಇಲ್ಲ, ಆದರೆ ಕೊಡಗಿನಲ್ಲಿ ಮಾತ್ರ ಪ್ರತ್ಯೇಕತೆಯ ಕೂಗು, ಅಭದ್ರತೆಯ ಕೂಗು, ಸಂಸ್ಕೃತಿಯ ನಾಶದ ಕೂಗು ಕೇಳಿಬರುತ್ತಿದೆ. ಇಲ್ಲಿನ ನೈಜ ಮೂಲನಿವಾಸಿಗಳಾದ ಬುಡಕಟ್ಟು ಜನಾಂಗದವರು, ಹಿಂದುಳಿದವರು ವಾಸ್ತವದಲ್ಲಿ ವಿನಾಶದ ಅಂಚಿನಲ್ಲಿ ಇದ್ದಾರೆ. ಆದರೆ ತಮ್ಮ ಸ್ವಯಂಕೃತ್ಯಗಳಿಂದ ವಿವಿಧ ಕಾರಣಗಳಿಗಾಗಿ ತಮ್ಮ ಜಮೀನುಗಳನ್ನು ಮಾರಾಟ ಮಾಡಿ ವಲಸೆ ಹೋಗಿ ಈಗ ಅನ್ಯರು ತಮ್ಮ ಭೂಮಿಯನ್ನು ಅತಿಕ್ರಮಣ ಮಾಡುತ್ತಿದ್ದಾರೆ, ಸಂಸ್ಕೃತಿ ವಿನಾಶದ ಅಂಚಿನಲ್ಲಿ ಇದೆ, ತಾವೂ ಕೂಡ ವಿನಾಶದ ಅಂಚಿನಲ್ಲಿ ಇದ್ದೇವೆ ಎಂಬ ಮೂಲಭೂತವಾದವನ್ನು ಮುಂದಿಡುತ್ತಾ ಹೋರಾಟಗಳನ್ನು ಮಾಡುತ್ತಿರುವುದರ ಒಂದು ಭಾಗವೇ ಈ ಪಾದಯಾತ್ರೆಯಾಗಿದೆ.

ಒಂದು ರೀತಿಯಲ್ಲಿ ಇದು ಹಿಂದಕ್ಕೆ ಚಲನೆಯಾಗಿದೆ. ಕೊಡಗು ಭೂಕಂದಾಯ ಕಾಯ್ದೆ ರದ್ದಾಗಿ, ಕರ್ನಾಟಕ ಭೂಕಂದಾಯ ಕಾಯ್ದೆ ಜಾರಿಗೆ ಬಂದ ನಂತರವೂ ಈಗಲೂ ಹಳೆಯ ವ್ಯವಸ್ಥೆಯೇ ಜಾರಿಯಲ್ಲಿ ಇರಬೇಕು ಎಂದು ಪ್ರತಿಪಾದಿಸುತ್ತಿದ್ದಾರೆ. ಕೊಡಗಿಗೆ ವಿಶಿಷ್ಟವಾದ ಭೂನಿಬಂಧನೆ ಇತ್ತು, ಅದು ಜಮ್ಮಾ ಹಿಡುವಳಿಯಾಗಿತ್ತು, ಬಹುಸಂಖ್ಯಾತರು ಈ ಜಮ್ಮಾ ಹಿಡುವಳಿ ಎನ್ನುವುದು ತಮಗೆ ಶಾಪ ಎಂದು ಹೇಳಿದರೆ, ಈಗಲೂ ಪಾಳೆಯಗಾರಿಕೆ ಮಾಡಬೇಕು ಎಂದು ಬಯಸುವ ವರ್ಗ ಮತ್ತು ಕುಟುಂಬದಲ್ಲಿ ಬಲಾಢ್ಯರಾಗಿ ಇದ್ದುಕೊಂಡು, ತಮ್ಮ ಕುಟುಂಬಸ್ಥರನ್ನೇ ಶೋಷಣೆ ಮಾಡುತ್ತಾ ಇರುವ ವರ್ಗ ಹಳೆಯ ಕಾನೂನು ಇರಬೇಕು ಎಂದು ಹೇಳಿಕೊಂಡು ಈ ಪಾದಯಾತ್ರೆಯನ್ನು ನಡೆಸುತ್ತಿದ್ದಾರೆ. ಸೂರ್ಯಚಂದ್ರರು ಇರುವವರೆಗೆ ಕೊಡಗಿನ ನೆಲದ ಕಾನೂನನ್ನು ಯಾರಿಗೂ ಬದಲಾಯಿಸುವ ಹಕ್ಕು ಇಲ್ಲ ಎಂದು ಅತ್ಯಂತ ಬಾಲಿಶವಾಗಿ ಹೇಳುತ್ತಿದ್ದಾರೆ. ಹಿಂದೆ ದಾಖಲೆ ಪತ್ರಗಳನ್ನು ಸಿದ್ಧಪಡಿಸುವಾಗ ಪತ್ರಗಳನ್ನು ಬರೆಯುತ್ತಿದ್ದವರು "ಸೂರ್ಯ ಚಂದ್ರ ಇರುವವರೆಗೆ ವಂಶಪಾರಂಪರ್ಯವಾಗಿ ಜಮೀನಿನ ಮೇಲೆ ಹಕ್ಕು ಇರುತ್ತದೆ. ಭೂಮಿಯ ಒಳಗೆ ಇರುವ ನಿಧಿ ನಿಕ್ಷೇಪಗಳ ಮೇಲೂ ಮತ್ತು ಆಕಾಶದೆತ್ತರಕ್ಕೂ ಹಕ್ಕು ಇದೆ" ಎಂದು ಸುಂದರವಾದ ಒಕ್ಕಣೆಯಲ್ಲಿ ಬರೆಯುತ್ತಿದ್ದರು. ಇದನ್ನು ವಾಸ್ತವ ಎಂದು 21ನೇ ಶತಮಾನದಲ್ಲಿಯೂ ಭಾವಿಸಿಕೊಂಡು ಬಹಿರಂಗವಾಗಿ ಹೇಳಿಕೆಗಳನ್ನು ನೀಡುತ್ತಿರುವುದು ಬೌದ್ಧಿಕ ಮಟ್ಟದ ಕೊರತೆಯಿಂದಾಗಿಯೋ ಅಥವ ಉದ್ದೇಶಪೂರ್ವಕವಾಗಿಯೋ ಎಂದು ಪ್ರಶ್ನಿಸುವಂತಾಗಿದೆ. ಇಂತಹ ನಡೆಯಿಂದಾಗಿ ಇಲ್ಲಿಯವರು ತಲೆತಗ್ಗಿಸುವಂತಾಗಿದೆ.

ತಮ್ಮ ಈ ಕೃತ್ಯಕ್ಕೆ ರಾಜ್ಯದ ಇತರ ಭಾಗದಲ್ಲಿ ತಾವು ನಗೆಪಾಟಲಿಗೆ ಈಡಾಗುತ್ತಿದ್ದೇವೆ ಎಂಬ ಪರಿವೇ ಇಲ್ಲದೆ ಇಂತಹ ಹೋರಾಟಗಳನ್ನು ಮಾಡುತ್ತಿದ್ದಾರೆ. ಹಿಂದೆ ಇದ್ದಂತಹ ಕೆಲವೊಂದು ಸವಲತ್ತುಗಳು ಈಗ... ಚಾಲ್ತಿಯಲ್ಲಿದೆ. ಕೃಷಿ ಮಾಡುವುದು ಲಾಭದಾಯ... ಎಂಬ ಕಾರಣಕ್ಕಾಗಿ ಮತ್ತು ತಮ್ಮ ಭವಿಷ್ಯ... ಯುವಪೀಳಿಗೆ ಜಿಲ್ಲೆಯಿಂದ ವಲಸೆ ಹೋಗುತ್ತಿರುವ ಕ... ಕೊಡಗಿನಲ್ಲಿ ಬಹಳಷ್ಟು ಮನೆಗಳು ವೃದ್ಧಾಶ್ರಮ... ಪರಿವರ್ತನೆಯಾಗುತ್ತಿದೆ. ಯುವಕರಿಗೆ ಇಲ್ಲಿಯೇ ... ನಿಲ್ಲಲು ಆಕರ್ಷಕವಾದ ಯೋಜನೆಗಳನ್ನು ರೂಪಿಸುವ... ಬದಲಾಗಿ ತರ್ಕಬದ್ಧವಲ್ಲದ, ನಗೆಪಾಟಲಿಗೆ ಈಡಾ... ಹೇಳಿಕೆಗಳನ್ನು ನೀಡುವುದು ಮತ್ತು ಹೋರಾಟಗ... ನಡೆಸುವುದು ಸೂಕ್ತವಲ್ಲ, ಕೊಡಗು ಜಿಲ್ಲೆಯಲ್ಲಿ ವ... ನಿವಾಸಿಗಳು ಅಲ್ಪಸಂಖ್ಯಾತರಾಗಿದ್ದಾರೆ ಎನ್ನುವುದರಲ್ಲಿ ಸ... ವಿಲ್ಲ, ಆದರೆ ಇದಕ್ಕೆ ಕಾರಣ ವಲಸಿಗರು ಅಲ್ಲ, ... ತಮ್ಮ ಭವಿಷ್ಯಕ್ಕಾಗಿ ಕಂಡುಕೊಂಡಂತಹ ಮಾರ್ಗವಿ...

ಇಂತಹ ಡೋಂಗಿ ಪರಿಸರವಾದಿಗಳ ಕೈಯಿಂದ ... ಮೂಲಭೂತವಾದಿಗಳ ಕೈಯಿಂದ ಕೊ... ಮುಕ್ತವಾಗಬೇಕಾಗಿದೆ. ಇಲ್ಲದಿದ್ದರೆ ಸದಾ ... ಹಿತಾಸಕ್ತಿಯನ್ನೇ ಬಯಸುವ ಭ್ರಷ್ಟ ಅಧಿಕಾರಿಗಳು ... ಲಾಭವನ್ನು ಪಡೆದು ನಿರಂತರವಾಗಿ ಜನರನ್ನು ಶೋ... ಮಾಡುತ್ತಾರೆ.

■ ಬಿ.ಎನ್.ಮನು ...

ವೈದ್ಯ ಸಾಹಿತಿ: ಮರದೊಳಗೆ ಮರ ಹುಟ್ಟಿ..

ವೈದ್ಯರಾಗಿದ್ದು, ಲೇಖಕರಾಗಿಯೂ ಪ್ರಸಿದ್ಧರಾದ ಅನೇಕರ ಪಟ್ಟಿ ನಮ್ಮ ಮುಂದಿದೆ. ಪುರುಸೊತ್ತೇ ಸಿಗದ ವೈದ್ಯಕೀಯ ವೃತ್ತಿಯಲ್ಲಿರುವವರು ಸಮಯ ಮತ್ತು ಏಕಾಗ್ರತೆಯನ್ನು ಬೇಡುವ ಸಾಹಿತ್ಯದ ಜೊತೆಗಿನ ನಂಟನ್ನು ಹೊಂದಲು ಹೇಗೆ ಸಾಧ್ಯವಾಗುತ್ತದೆ ಎಂಬುದು ಎಲ್ಲರ ದೃಷ್ಟಿ. ವಿಜ್ಞಾನ ವಿಷಯ ಮತ್ತು ಕೊನೆಯಿರದ ಓದು ವೈದ್ಯಕೀಯ ವಿದ್ಯಾರ್ಥಿಗಳ ಅಲ್ಪಸ್ವಲ್ಪ ಸಾಹಿತ್ಯಾಸಕ್ತಿಯನ್ನೂ ದೂರ ಮಾಡುವಂತಿರುತ್ತದೆ. ನಂತರ ವೃತ್ತಿಯಲ್ಲಿ ನಿರತರಾದಾಗ ಜೀವದ ಜೊತೆಗಿನ ಹೋರಾಟದಲ್ಲಿ, ಸತತ ಜನಸಂಪರ್ಕದ ಗಲಾಟೆಯಲ್ಲಿ, ಖಾಸಗಿ ಸಮಯ ಕಡಿಮೆ ದೊರಕುವುದರಿಂದ ಬಹುಪಾಲು ವೈದ್ಯರು ಓದು - ಸಾಹಿತ್ಯದೆಡೆಗೆ ವಿಮುಖತೆ ಬೆಳೆಸಿಕೊಳ್ಳುತ್ತಾರೆ. ಎಷ್ಟೆಂದರೆ ಅದಕ್ಕೆಲ್ಲ ಸಮಯ ಕಳೆಯುವುದು ವ್ಯರ್ಥ ಹಾಗೂ ವೃತ್ತಿಸಂಹಿತೆಯಲ್ಲ ಎನ್ನುವಷ್ಟರಮಟ್ಟಿಗೆ. ಈ ತೆರನ ಆಂತರಿಕ ವಿರೋಧಗಳಿಗೆ ಹೊರತಾಗಿಯೂ ಬರೆದ/ಬರೆಯುತ್ತಿರುವ ವೈದ್ಯರ ಸಾಹಿತ್ಯ ಪ್ರೀತಿಯ ಮೂಲ ಯಾವುದು?

ಪ್ರಾಚೀನಕಾಲದಿಂದಲೂ ವೈದ್ಯಕೀಯ ಮತ್ತು ಬರಹ ಜೊತೆಗೂಡಿವೆ. ಇದು ದೇವದೇವತೆಗಳ ಜವಾಬ್ದಾರಿ ಹಂಚಿಕೊಳ್ಳುವುದರಲ್ಲೂ ಕಂಡುಬರುತ್ತದೆ. ಗ್ರೀಕ್ ಪುರಾಣಗಳ ಅಪೊಲೊ ಮತ್ತು ಅಥೆನೆ ದೇವತೆಗಳು ವೈದ್ಯಕೀಯ ಮತ್ತು ಕಾವ್ಯದ ದೇವರುಗಳು. ಹಾಗೆಯೇ ಕೆಲ್ಟಿಕ್ ಜನಾಂಗದ ಬ್ರಿಗಿಟ್ ದೇವತೆಯು ಕಾವ್ಯ ವೈದ್ಯಕೀಯ ಮತ್ತು ಶ್ರಮಿಕರ ದೇವತೆ. ಅತಿ ಹಳೆಯ ವೈದ್ಯಕೀಯ ಸಂಹಿತೆಗಳನ್ನು ಬರೆದ ಚರಕ - ಶುಶ್ರುತರೂ ಬರಹಗಾರರೇ. ಗ್ರೀಕ್ ತತ್ವಜ್ಞಾನಿ ಹಿಪ್ಪೋಕ್ರೆಟಿಸ್ ವೈದ್ಯ.

ಆಧುನಿಕ ವಿಶ್ವ ಸಾಹಿತ್ಯದಲ್ಲಿ ವೈದ್ಯ ಬರಹಗಾರ ಎಂದೊಡನೆ ಥಟ್ಟನೆ ಹೊಳೆಯುವ ಹೆಸರು ಖ್ಯಾತ ರಷಿಯನ್ ಲೇಖಕ ಆಂಟನ್ ಚೆಕಾಫ್. ಆ ಕಾಲದಲ್ಲಿ ಮಾರಣಾಂತಿಕವಾಗಿದ್ದ ಟಿಬಿಯಿಂದ ಅಕಾಲಮರಣಕ್ಕೀಡಾದ ವೈದ್ಯ ಸಾಹಿತಿ ಅವನು. ಅವನಲ್ಲದೇ ಅನೇಕ ಪ್ರಮುಖ ಇಂಗ್ಲಿಷ್ ಬರಹಗಾರರು ವೃತ್ತಿಯಿಂದ ವೈದ್ಯರು. ಹಲವಾರು ಹೆಸರುಗಳಿರುವ ಉದ್ದನೆಯ ಪಟ್ಟಿಯಲ್ಲಿ ಕೆಲವರನ್ನು ಹೆಸರಿಸುವುದಾದರೆ: ರಷಿಯನ್ ಲೇಖಕ ಮಿಖಾಯಿಲ್ ಬುಲ್ಗಾಕೊವ್, ಸೋಮರ್‌ಸೆಟ್ ಮಾಮ್, 'ಕೋಮಾ' ಖ್ಯಾತಿಯ ರಾಬಿನ್ ಕುಕ್, 'ಜುರಾಸಿಕ್ ಪಾರ್ಕ್' ಖ್ಯಾತಿಯ ಮೈಕೆಲ್ ಕ್ರಿಕ್‌ಟನ್, ಷೆರ್ಲಾಕ್ ಹೋಮ್ಸ್ ಜನಕ ಸರ್ ಆರ್ಥರ್ ಕಾನನ್ ಡಾಯ್ಲ್, ಇಂಗ್ಲಿಷ್ ಕವಿ ಜಾನ್ ಕೀಟ್ಸ್, ಮಲೇರಿಯಾ ಪತ್ತೆ ಮಾಡಿದ ರೊನಾಲ್ಡ್ ರಾಸ್, ಅಮೆರಿಕದ ಪ್ರಬಂಧಕಾರ, ಕವಿ ವಿಲಿಯಂ ಕಾರ್ಲೋಸ್ ವಿಲಿಯಂ, ಆಲಿವರ್ ಗೋಲ್ಡ್‌ಸ್ಮಿತ್, ಡೇವಿಡ್ ಲಿವಿಂಗ್ ಸ್ಟೋನ್, ಡೇನಿಯಲ್ ಮ್ಯಾಸನ್, ಕ್ರಿಸ್ ಆಡ್ರಿಯನ್ ಇವರುಗಳಲ್ಲದೇ ಈಗ ಬರೆಯುತ್ತಿರುವವರಲ್ಲಿ ಆಫ್ಘಾನಿಸ್ತಾನ ಮೂಲದ ಅಮೆರಿಕನ್ ವೈದ್ಯ ಖಾಲಿದ್ ಹೊಸೇನಿ, ಬಾಂಗ್ಲಾದ ತಸ್ಲೀಮಾ ನಸ್ರೀನ್, ಭಾರತೀಯ ದೀಪಕ್ ಚೋಪ್ರಾ ಅವರೆಲ್ಲರೂ ವೃತ್ತಿಯಿಂದ ವೈದ್ಯರು. ಅಷ್ಟೇ ಅಲ್ಲ, ಸಾಹಿತಿ ಎಂದು ಜಗತ್ತು ಒಪ್ಪದ, 'ಮೋಟಾರ್ ಸೈಕಲ್ ಡೈರೀಸ್' ಎಂಬ ಪ್ರವಾಸದ ಟಿಪ್ಪಣಿಗಳಿಂದ ಹಲವರ ಮನದಲ್ಲಿ ಅಚ್ಚಳಿಯದೆ ನಿಂತ ಕ್ರಾಂತಿಕಾರಿ ಅರ್ನೆಸ್ಟೋ ಚೆಗೆವಾರ ಕೂಡಾ ವೈದ್ಯನೇ. ಕನ್ನಡದ ಮಟ್ಟಿಗೆ ರಾಶಿ, ಅನುಪಮಾ ನಿರಂಜನ, ಬೆಸಗರಹಳ್ಳಿ ರಾಮಣ್ಣ, ಎಚ್.ಡಿ. ಚಂದ್ರಪ್ಪಗೌಡ ಅವರಲ್ಲದೆ ಈಗ ಕನ್ನಡದಲ್ಲಿ ಬರೆಯುತ್ತಿರುವ ಎಚ್. ಡಿ. ವಾಸು, ಅಶೋಕ್ ಕುಮಾರ್ ಮೊದಲಾದವರಿದ್ದಾರೆ.


ಇಷ್ಟು ದೊಡ್ಡ ಪಟ್ಟಿ ನೋಡಿದರೆ ವೈದ್ಯ ಲೇಖಕನಾಗಿ ಒಪ್ಪಿದ್ದು ಕೇವಲ ಆಕಸ್ಮಿಕ ಇರಲಿಕ್ಕಿಲ್ಲ ಎನಿಸುತ್ತದೆ. ಸೂಕ್ಷ್ಮ ಮನಸ್ಸಿಗೆ ವೈದ್ಯಲೋಕ ಏನೋ ಅಪರೂಪವಾದದ್ದನ್ನು ನೀಡಿ, ಬರಹಗಾರನಾಗಿ ರೂಪುಗೊಳ್ಳಲು ನೆರವಾಗಿರಬೇಕು. ಅಂಥ ಏನನ್ನು ಈ ವೃತ್ತಿ ನೀಡಬಹುದು?

ಉತ್ತಮ ವೈದ್ಯನಾಗಲು ತುಂಬ ಸೂಕ್ಷ್ಮ ಗ್ರಹಿಕೆ ಇರಬೇಕು. ಬದುಕಿನ ಬಗೆಗೆ ದೀರ್ಘ ಮುನ್ನೋಟ ಹೊಂದಿರಬೇಕು. ಒಬ್ಬನ ಭಾವನೆಗಳನ್ನು ಅರ್ಥಮಾಡಿಕೊಳ್ಳುತ್ತಲೇ ಅದರಿಂದ ದೂರ ನಿಂತು ಗಮನಿಸುವುದೂ ಗೊತ್ತಿರಬೇಕು. ಹೇಳುವುದಕ್ಕಿಂತ ಹೆಚ್ಚು ಕೇಳಲು ಕಲಿತಿರಬೇಕು. ಸಾವು ಮತ್ತು ಬದುಕುವ ಪ್ರೀತಿ ಎರಡೂ ಜೀವನದ ಅನಿವಾರ್ಯ ಗುರಿಗಳೆಂಬ ಅರಿವಿರಬೇಕು. [illegible]ವಾಗಿ ಬದುಕನ್ನು ನೋಡಿ, ಇತರರ ನಡವಳಿಕೆಗಳ ಬಗೆಗೆ ಹಗುರ ತೀರ್ಮಾನಗಳನ್ನು ತಾಳದೇ, ಯಾವ [illegible]ವನ್ನೂ ಹೇರದಂತೆ ಇರಬೇಕು. ಕುತೂಹಲದಿಂದ [illegible]ಲೇ ನೂರು ಗುಟ್ಟುಗಳನ್ನು ಅಡಗಿಸಿಕೊಳ್ಳಬೇಕು. [illegible]ಟಿಯಾಗಿರಬೇಕು ಹಾಗೆಯೇ [illegible]ದಿಯಾಗಿರಬೇಕು.

ಈ ಎಲ್ಲ ಗುಣಲಕ್ಷಣಗಳು ಉತ್ತಮ ಬರಹಗಾರನಿಗೂ [illegible]ಕಾಗುತ್ತವೆ ಅಲ್ಲವೇ?

ಬರಹಗಾರನಿಗೆ ತನ್ನ ಸುತ್ತಮುತ್ತ ಏನು ನಡೆಯುತ್ತಿದೆ ಎಂಬುದರ ಬಗೆಗೆ ಸ್ಪಷ್ಟ ಅರಿವಿರಬೇಕು. ಅಂತೆಯೇ ತನ್ನೊಳಗೆ ಏನು ನಡೆಯುತ್ತಿದೆಯೆಂದೂ ತಿಳಿದಿರಬೇಕು. ಒಳಹೊರಗಿನ ಬದಲಾವಣೆಗಳನ್ನು ಲೇಖಕ ಪ್ರಜ್ಞಾಪೂರ್ವಕ ಗಮನಿಸುತ್ತಿರುತ್ತಾನೆ. ಹಾಗೆಯೇ ವೈದ್ಯರೂ ಕೂಡಾ ತಮಗೆ ದೊರೆಯುವ ಅನಾಯಾಸ ಜನಸಂಪರ್ಕದಿಂದ ಸುತ್ತಮುತ್ತನ್ನು ಅರಿಯುವುದು ಕಷ್ಟವಲ್ಲ. ಪ್ರತ್ಯೇಕವಾಗಿ, ಏಕಾಂಗಿಯಾಗಿರಲಾರದ ವೈದ್ಯನಿಗೆ ಗುಂಪಿನೊಳಗಿನ ಪರಸ್ಪರತೆಯೂ ಅನಿವಾರ್ಯ. ಗುಂಪಿನೊಳಗಿದ್ದೂ ಆವಾಗೀವಾಗ ಮಾಡಿಕೊಳ್ಳಬೇಕಾದ ಸ್ವವಿಮರ್ಶೆಯ ಒಂದು ಭಾಗವೇ ಆಗಿ ಒಂಟಿಯಾಗುವ ವೈದ್ಯ ತನ್ನನ್ನೇ ತಾನು ಅರಿಯುವುದೂ ಅನಿವಾರ್ಯ. ಗೆಳೆಯ - ಸಂಬಂಧಿಯಲ್ಲದ ವ್ಯಕ್ತಿಯ ನೋವನ್ನು ತನ್ನದರ ಜೊತೆಗೆ ಸಮೀಕರಿಸಿಕೊಂಡು ಅದರಿಂದ ಹೊರಬರುವ ದಾರಿಯನ್ನು ತಿಳಿಸಿ ಬೀಳ್ಕೊಡುವ ಪ್ರಕ್ರಿಯೆಯಲ್ಲಿ ತನ್ನೊಳಗನ್ನೂ ತಾನು ಹೊಕ್ಕು ಬರಬೇಕಾಗುತ್ತದೆ. ಈ ಪರಕಾಯ ಪ್ರವೇಶವು ಆತನಿಗೆ ಹಲವು ಪ್ರಶ್ನೆಗಳನ್ನೊಡ್ಡಿ ಉತ್ತರ ಹೊರಡಿಸುತ್ತದೆ. ಈ ಆತ್ಮಪರೀಕ್ಷೆ ವೈದ್ಯನೊಳಗಿನ ಬರಹಗಾರನನ್ನು ಬಡಿದೆಬ್ಬಿಸಲು ಸಾಕು.

ಯಾವುದನ್ನು ಪರಿಣಾಮಕಾರೀ ಕ್ರಿಯೆಯಾಗಿಸಲು ವೈದ್ಯ



ಹೆಣಗುತ್ತಾನೋ ಅದನ್ನೇ ಅಕ್ಷರ ರೂಪಕ್ಕಿಳಿಸಲು ಬರಹಗಾರ ಪ್ರಯತ್ನಿಸುತ್ತಾನೆ. ಎಂದರೆ ಆವಶ್ಯಕ ಮೂಲದ್ರವ್ಯ ಒಂದೇ ಆಗಿರುವ ಇಬ್ಬರು ಬೇರೆ ಬೇರೆ ಅಂತಿಮ ಗುರಿಯ ಕಡೆಗೆ ಚಲಿಸುತ್ತಿದ್ದಾರೆನ್ನಬಹುದು. ಬದುಕು, ಪಾತ್ರ, ಘಟನೆಗಳನ್ನು ತಾನೇ ಊಹಿಸಿಕೊಳ್ಳುತ್ತ ಸಾಹಿತ್ಯಸೃಷ್ಟಿಯಲ್ಲಿ ತೊಡಗುವ ಲೇಖಕನಿಗೂ, ಕಣ್ಣೆದುರೇ ಕುಣಿವ ಪಾತ್ರಗಳ ಒಳಹೊಕ್ಕು ಅವರ ನಡೆಗಳನ್ನು ಊಹಿಸುತ್ತ ಕೆಲವು ಬಾರಿ ಮೂಕಸಾಕ್ಷಿಯಾಗುತ್ತ ಬದುಕಿನ ತಿರುವುಗಳನ್ನು ಗಮನಿಸುವ ವೈದ್ಯನಿಗೂ ಬಹಳಷ್ಟು ಸಾಮ್ಯವಿದೆ. ಕ್ರಿಯೆಯ ನಡುವಿನ ಈ ಸಾದೃಶ್ಯವೇ ಅನೇಕ ವೈದ್ಯರು ಬರಹಗಾರರಾಗಲಿಕ್ಕೂ, ಅನೇಕ ಬರಹಗಾರರ ಬರಹಗಳು ವೈದ್ಯರ 'ಮದ್ದು' ಕೊಡುವಷ್ಟೇ ಸಾಂತ್ವನ ಸಮಾಧಾನ ಕೊಡುವಂಥದು ಆಗಲಿಕ್ಕೂ ಕಾರಣವಾಗಿದೆ.

******

ಒಬ್ಬ ಶ್ರಮಜೀವಿ. ಆತನ ದುಡಿಮೆಯೇ ಕುಟುಂಬದ ಮೂಲಾಧಾರ. ಆತನಿಗೆ ಬಿಪಿ ಶುರುವಾಗಿ ಹೃದಯ ಸಂಬಂಧೀ ಕಾಯಿಲೆ ಶುರುವಾಯಿತೆನ್ನಿ. ಅದನ್ನು ತಿಳಿಸಿದರೆ ಅದನ್ನು ಆತ ಹೇಗೆ ಸ್ವೀಕರಿಸಿಯಾನು? ಅವನ ಕುಟುಂಬ ಹೇಗೆ ಸ್ವೀಕರಿಸೀತು? ಅವರ ಹೊಟ್ಟೆಬಟ್ಟೆಯ ಗತಿಯೇನು? ರೋಗಿ ಇನ್ನುಮುಂದೆ ಶ್ರಮದ ಕೆಲಸಕ್ಕೆ ಹೋಗುವ ಹಾಗಿಲ್ಲ, ಜೀವನಶೈಲಿಯ ಬದಲಾವಣೆ ಅಗತ್ಯ ಎಂದು ಹೇಳುವ ಮೊದಲು ವೈದ್ಯ ರೋಗಿಯ ಹಿನ್ನೆಲೆ ತಿಳಿದಿರಬೇಕು ಹಾಗೂ ಆತನಿಗೆ ಒಂದು ಪರ್ಯಾಯ ಸೂಚಿಸಿ ಸಮಾಧಾನ ಒದಗಿಸುವಂತಿರಬೇಕು.

ಆಗ ರೋಗಿಯ ಮಟ್ಟದಲ್ಲಿ ನಿಂತು ಯೋಚಿಸಬೇಕಾದ ಅನಿವಾರ್ಯತೆ ವೈದ್ಯನಿಗೆ ಬದುಕಿನ ನಿಜಮುಖಗಳನ್ನು ತೋರಿಸುತ್ತಾ ಜೀವನದ ಬಗೆಗಿನ ಅವನ ದೃಷ್ಟಿಕೋನವನ್ನು ರೂಪಿಸುತ್ತದೆ. ಕಾಯಿಲೆ, ಸಾವಿನಂತಹ ಅನಿವಾರ್ಯ ಅಪರಿಹಾರ್ಯ ಸುದ್ದಿಗಳನ್ನು ತಿಳಿಸುವಾಗ ಹಲವು ಪ್ರಶ್ನೆಗಳನ್ನೂ ಎದುರಿಸಬೇಕಾಗುತ್ತದೆ. 'ಈ ದುಃಖ ತನಗೇ ಏಕೆ ಬಂತು? ಇನ್ನು ಬದುಕಿ ಏನುಪಯೋಗ? ಇದಕ್ಕೆ ಎಷ್ಟು ದುಡ್ಡು ಖರ್ಚಾದರೂ ಸರಿ, ಪರಿಹಾರವಿಲ್ಲವೆ? ಸಾವನ್ನು ಮುಂದೂಡಲು ಸಾಧ್ಯವಿಲ್ಲವೇ? ತನಗಿಂತ ದುಷ್ಟರು ಸುಖದಿಂದಿರುವಾಗ ತನಗೆ ಮಾತ್ರ ಏಕೆ ಹೀಗೆ?' ಈ ತೆರನ ತನಗೂ ಉತ್ತರ ತಿಳಿಯದ ಪ್ರಶ್ನೆಗಳಿಗೆ ಉತ್ತರಿಸುವಾಗ ಬರಿಯ ವೈಜ್ಞಾನಿಕ ಮಾಹಿತಿ ಮತ್ತು ಜ್ಞಾನವನ್ನು ರೋಗಿಗೆ ವರ್ಗಾಯಿಸಿದರೆ ಸಾಲದು. ಅರಿವನ್ನು ಭಾವನೆಯೊಂದಿಗೆ ಬೆರೆಸಿ ಅವನಿಗೆ ತಿಳಿಸಬೇಕಾಗುತ್ತದೆ. ಭಾವನೆ ತಂತಾನೇ ಮೂಡಬೇಕಾದರೆ ವೈದ್ಯ ಪಂಚೇಂದ್ರಿಯಗಳನ್ನು ತೆರೆದು ಕುಳಿತಿರಬೇಕು. ಎಚ್ಚರಗೊಳಿಸುತ್ತಲೇ ಧೈರ್ಯ ತುಂಬಬೇಕು. ಎದುರಿರುವವರ ತಕ್ಷಣದ ಪ್ರಶ್ನೆಗಳು, ಪ್ರತಿಕ್ರಿಯೆಗಳು ಕೆಲವೊಮ್ಮೆ ವೈದ್ಯನನ್ನು ತತ್ವಜ್ಞಾನಿಯಾಗುವಂತೆ ಪ್ರೇರೇಪಿಸಿ ಸೂಕ್ಷ್ಮ ಸಂವೇದನೆಯನ್ನು ಹುಟ್ಟುಹಾಕುತ್ತವೆ.

ರೋಗಿ ಬರೀ ರೋಗಿಯಲ್ಲ, ಆತ ಯಾರದೋ ಗಂಡ/ಹೆಂಡತಿ, ಮಗ, ಮಗಳು, ಸೋದರ, ತಾಯಿ - ಹೀಗೇ. ಆ ಎಲ್ಲ ಪಾತ್ರ ನಿಭಾವಣೆಯಲ್ಲಿ ವೈದ್ಯಕೀಯವು ವ್ಯಕ್ತಿಗೆ ಸಹಾಯ ಮಾಡಬೇಕಾಗುತ್ತದೆ. ಬದುಕಿನ ಒಂದು ಭಾಗ ರೋಗ - ಔಷಧಿ ಆಗಬೇಕೇ ಹೊರತು ಬದುಕೇ ರೋಗದ ಭಾಗವಾಗಬಾರದು. ಈ ಎಚ್ಚರ ವೈದ್ಯನಿಗೆ ಮನುಷ್ಯನ ಮನಸ್ಸು, ಸಂಬಂಧಗಳ ಜಟಿಲತೆಗಳನ್ನು ಒಳಹೊಕ್ಕು ತಿಳಿಯಲು ಸಹಾಯ ಮಾಡುತ್ತದೆ. ಏನನ್ನೂ ಮುಚ್ಚಿಡದೇ ಇದ್ದದ್ದನ್ನು ಇದ್ದ ಹಾಗೇ ಹೇಳುವುದು - ಅದು ರೋಗಿಗೇ ಇರಲಿ ಅಥವಾ ಅವನ ಸಂಬಂಧಿಗಳಿಗೇ ಇರಲಿ - ವೈದ್ಯನಿಗೆ ಅನಿವಾರ್ಯ. ಆತ ಹೆಚ್ಚೆಚ್ಚು ವಾಸ್ತವವಾದೀ ಧೋರಣೆ ತಳೆಯಲು ಕೂಡಾ ಇದೇ ಕಾರಣವಾಗುತ್ತದೆ.

ಪತ್ರಕರ್ತ, ರಾಜಕಾರಣಿ, ಪುರೋಹಿತ, ನ್ಯಾಯವಾದಿ, ವಾಹನ ಚಾಲಕ - ಹೀಗೆ ಕೆಲವೇ ವೃತ್ತಿಗಳಲ್ಲಿರುವ ಜನರು ಸಮಾಜದ ಎಲ್ಲ ಸ್ತರದ, ಥರದ ಜನರನ್ನು ನೋಡುವ ಅವಕಾಶ ಹೊಂದಿರುತ್ತಾರೆ. ಅದರಲ್ಲೂ ವೈದ್ಯನಿಗಂತೂ ಬದುಕಿನ ನಾಟಕೀಯ ಕ್ಷಣಗಳಿಗೆ ಮುಖಾಮುಖಿಯಾಗಲು ಹೆಚ್ಚು ಅವಕಾಶವಿರುತ್ತದೆ.

ಹೀಗಾಗಿ ಬರೆವ ಕುಶಲತೆ ಮತ್ತು ಇಚ್ಛೆ ಇದ್ದಲ್ಲಿ ಹೇರಳ ಅನುಭವ ದ್ರವ್ಯ ಸಿಗುವ ವೈದ್ಯರಿಗೆ ವಸ್ತುವಿನ ಕೊರತೆ ಯಾವತ್ತೂ ಆಗಲಾರದು. ಇರುವ ಕೊರತೆ ಸಮಯದ್ದು. ಹಾಗಾದರೆ ವೈದ್ಯವೃತ್ತಿಯಲ್ಲಿರುವವರು ಬರವಣಿಗೆ ಹೇಗೆ ನಿಭಾಯಿಸುತ್ತಾರೆ? ಈ ಪ್ರಶ್ನೆಯನ್ನು ಸ್ವತಃ ಹಲವು ಬಾರಿ ಎದುರಿಸಿದ್ದೇನೆ: 'ನೀವು ಡಾಕ್ಟರಾಗಿಯೂ ಬರೆಯುವುದೇ ಆಶ್ಚರ್ಯ. ಅದರಲ್ಲೂ ಇಷ್ಟೆಲ್ಲ ಹೇಗೆ ಬರಿತಿರಿ? ಪ್ರಾಕ್ಟೀಸ್-ಗಂಡ-ಮಕ್ಕಳು ಎಲ್ಲ ಬಂಧನಗಳನ್ನು ಬಿಟ್ಟುಬಿಟ್ಟದ್ದೀರೋ ಹೇಗೆ?' ಎನ್ನುವರ್ಥದ ಪ್ರಶ್ನೆಗಳು ಎಲ್ಲ ಮೂಲೆಗಳಿಂದಲೂ ನನ್ನ ತಲುಪಿವೆ.

ಮನಸ್ಸು ಯಾವಾಗಲೂ ಮಾಡಬೇಕಾದ ಕೆಲಸಕ್ಕಿಂತ ಮಾಡದೇ ಉಳಿದಿರುವ ಕೆಲಸದ ಕಡೆಗೇ ಎಳೆಯುತ್ತಿರುತ್ತದಷ್ಟೇ. ಬಹುಪಾಲು ಸಮಯ, ಶ್ರಮವನ್ನು ರೋಗಿಗಳಿಗೇ ಮೀಸಲಿಡಬೇಕಾದ ಬರಹಗಾರ ವೈದ್ಯನಿಗೆ, ಬರವಣಿಗೆ ಎಂಬುದು 'ಮಾಡದಿರುವ', ಆದರೆ ಮಾಡಲೇಬೇಕಾಗಿರುವ ಕೆಲಸ. ಹೀಗಾಗಿ ಆ ಬಗೆಗೆ ಒತ್ತಡ ಹೆಚ್ಚುತ್ತ ಹೋದಹಾಗೆ ಅಕಸ್ಮಾತ್ ಸ್ವಲ್ಪ ಸಮಯ ದೊರೆತಾಗ ಮಾಡುವ ಬರವಣಿಗೆ ಥ್ರಿಲ್ ಕೊಡುತ್ತದೆ. 'ಬಿಡುವಿಲ್ಲ' ಎಂಬ ಪ್ರಜ್ಞೆಯೇ ಬಿಡುವು ಮಾಡಿಕೊಳ್ಳಲು, ಮಾಡಿಕೊಂಡು ಬರೆದು ಖುಷಿ ಅನುಭವಿಸಲು ಪ್ರಚೋದನೆ ನೀಡುತ್ತದೆ.

ಪ್ರವೃತ್ತಿಯ ಈ ಸೆಳೆತವನ್ನು ನಿಭಾಯಿಸುವುದು ಸುಲಭವಲ್ಲ, ಆದರೆ ವೃತ್ತಿ-ಪ್ರವೃತ್ತಿಗಳನ್ನು ವೈದ್ಯರು ಹೇಗೆ ನಿಭಾಯಿಸುತ್ತಾರೆ?

ಡೇನಿಯಲ್ ಮ್ಯಾಸನ್ ಎಂಬ ಅಮೆರಿಕನ್ ವೈದ್ಯಬರಹಗಾರ 'ವೈದ್ಯಕೀಯವು ಬರಹಕ್ಕೆ ಹೇರಳವಾದ ವಸ್ತುವನ್ನೊದಗಿಸುವುದಕ್ಕಿಂತ ಮುಖ್ಯವಾಗಿ ಬರವಣಿಗೆಗೆ ಅಗತ್ಯವಾದ ಭಾವನಾತ್ಮಕ ಹಾಗೂ ಮಾನಸಿಕ ಒತ್ತಡವನ್ನು ಹುಟ್ಟುಹಾಕುತ್ತದೆ. ಭಿನ್ನ ವ್ಯಕ್ತಿಗಳ ಬದುಕಿನ ಕಿಂಡಿಯಲ್ಲೊಮ್ಮೆ ಇಣುಕಿ ನೋಡುವುದು ಸಾಧ್ಯವಾಗುವುದರಿಂದ ನನ್ನ ವ್ಯಕ್ತಿತ್ವಕ್ಕಿಂತ ಭಿನ್ನ ಪಾತ್ರಗಳನ್ನು ನೈಜವಾಗಿ ಸೃಷ್ಟಿಸಲು ಸಾಧ್ಯವಾಗುತ್ತದೆ. ವೈದ್ಯನಲ್ಲದಿದ್ದರೆ ನಾನು ಬರೆಯುತ್ತಿರಲಿಲ್ಲ ಎನಿಸುತ್ತದೆ. ಬರವಣಿಗೆ ಕೆಲವೊಮ್ಮೆ ಥ್ರಿಲ್ ಎನಿಸುತ್ತದೆ, ಅದರಲ್ಲೂ ಅದು ನಾನು ಮಾಡಬೇಕಾದ ಕೆಲಸ ಅಲ್ಲ ಎಂದು ತಿಳಿದ ಮೇಲಂತೂ ಮತ್ತಷ್ಟು ರೋಮಾಂಚಕಾರಿ ಎನ್ನಿಸುತ್ತಿದೆ' ಎಂದು ಹೇಳಿದ್ದಾನೆ.

ಎಷ್ಟು ನೋಡಿದರೂ ಕಾಯಿಲೆ ಮುಗಿಯುವುದಿಲ್ಲ, ಸೇವೆ ಬಯಸುವ ರೋಗಿಗಳ ಸಂಖ್ಯೆ ಕೊನೆಯಾಗುವುದಿಲ್ಲ, ಹೀಗಿರುವಾಗ ಸ್ವಂತಕ್ಕೆಂದು, ವಿಶ್ರಾಂತಿಯೆಂದು ತನಗಾಗಿ ಸಮಯ ಮೀಸಲಿಡುವುದು ವೈದ್ಯನ ಮಟ್ಟಿಗೆ ಅಲಿಖಿತ ಅಪರಾಧ. ಅದರಲ್ಲೂ ಆತ ಬರೆವ ಕತೆ - ಕಾವ್ಯಗಳಿಂದ ಜನರ ಇವತ್ತಿನ ಕಷ್ಟಗಳಾಗಲೀ, ರೋಗರುಜಿನಗಳಾಗಲೀ ವಾಸಿಯಾಗುವುದಿಲ್ಲ, ಆದರೆ ವೈದ್ಯನೂ ಮನುಷ್ಯನೇ. ಎಲ್ಲ ಜಂಜಡಗಳ ನಡುವೆ ಸಮಯ ಉಳಿಸಿಕೊಂಡು ಓದು - ಬರಹದಲ್ಲಿ ತೊಡಗಲೋ, ವಿಶ್ರಾಂತಿ ಹೊಂದಲೋ ಬಯಸುತ್ತಾನೆ. ಕೆಲವೊಮ್ಮೆ ಇದು ಅವನ ಮನಸ್ಸಿನಲ್ಲಿ ವಿರುದ್ಧ ಭಾವನೆಗಳನ್ನು ಹುಟ್ಟುಹಾಕುತ್ತದೆ. ತೃಪ್ತಿಯ ಜೊತೆಗೇ ರೋಗಿಗೆ ಮೀಸಲಾದ ಸಮಯವನ್ನು ಬೇರೆಯದಕ್ಕೆ ಮೀಸಲಿಟ್ಟಿರುವುದು ಸಮಾಜ ಮೆಚ್ಚುವ ಕ್ರಿಯೆಯೆ ಎಂಬ ಅನುಮಾನವೂ ಹುಟ್ಟುತ್ತದೆ. ಇದು ಎಲ್ಲ ಲೇಖಕ ವೈದ್ಯರನ್ನು ಒಂದಲ್ಲ ಒಮ್ಮೆ ಕಾಡುವ ಪ್ರಶ್ನೆ. ಇದಕ್ಕೆ ಬೇರೆಬೇರೆ ಲೇಖಕರ ಪ್ರತಿಕ್ರಿಯೆ ಬೇರೆಬೇರೆ ರೀತಿಯಲ್ಲಿದೆ:

ಕ್ರಿಸ್ ಆಡ್ರಿಯನ್ ಎಂಬ ಲೇಖಕ 'ವೈದ್ಯಕೀಯ ಮತ್ತು ಬರವಣಿಗೆ - ಈ ಎರಡರಲ್ಲಿ ಯಾವುದನ್ನು ಆಯ್ದುಕೊಳ್ಳುತ್ತೀರಿ ಎಂದು ತುಂಬ ಜನ ಕೇಳುತ್ತಾರೆ. ಇದು ಕೈಗೊಂದು ಚಮಚೆ ಕೊಟ್ಟು ನಿಮ್ಮ ಯಾವ ಕಣ್ಣಿಗೆ ಇರಿದುಕೊಳ್ಳುವಿರಿ ಎಂದು ಕೇಳಿದ ಹಾಗೆ. ಚಮಚೆ ಕೊಡಬೇಡಿ, ಫೋರ್ಕ್ ಕೊಟ್ಟುಬಿಡಿ, ಆಗ ಹೇಳುವೆ ಎಂದು ಉತ್ತರಿಸುತ್ತೇನೆ' ಎಂದಿದ್ದಾನೆ. ಬರವಣಿಗೆಯ ಜೊತೆ ಇಷ್ಟು ತಾದಾತ್ಮ್ಯ ಸಾಧಿಸಿದ ಮೇಲೆ ವೈದ್ಯನಿಗೆ ಅದು ಅನಿವಾರ್ಯ ಕ್ರಿಯೆಯೇ ಆಗುತ್ತದೆ. ಅಲ್ಲಿ ಆಯ್ಕೆಯ ಪ್ರಶ್ನೆಯೇ ಅಸಮಂಜಸ.

ಆಂಟನ್ ಚೆಕಾಫ್ 'ವೈದ್ಯಕೀಯ ನನ್ನ ಕೈಹಿಡಿದ ಹೆಂಡತಿಯಾದರೆ ಬರವಣಿಗೆ ಪ್ರೇಯಸಿ. ಒಬ್ಬರ ಜೊತೆಗೆ ಬೇಸರ ಬಂದರೆ ಆ ರಾತ್ರಿಯನ್ನು ಮತ್ತೊಬ್ಬರ ಜೊತೆಗೆ ಕಳೆಯುತ್ತೇನೆ. ಇದು ಅಶಿಸ್ತು ಎನಿಸಿದರೂ ಬೇಸರವಾಗುವುದಿಲ್ಲ, ಅಲ್ಲದೇ ಈ ದ್ರೋಹದಿಂದ ಇಬ್ಬರಿಗೂ ನಷ್ಟವಿಲ್ಲ' ಎನ್ನುತ್ತಾನೆ!

ತಮಗಿಂತ ತುಂಬ ಭಿನ್ನ ವ್ಯಕ್ತಿತ್ವದ, ಭಿನ್ನ ಹಿನ್ನೆಲೆಯ ಜನರ ಕ್ರಿಯೆ ಪ್ರತಿಕ್ರಿಯೆಗಳನ್ನು ಅತಿ ಹತ್ತಿರದಿಂದ ಗಮನಿಸುವಾಗ ಅದನ್ನು ಬರೆದು ಹೇಳುವ ತೀವ್ರತೆ ಎಂದೋ ಹುಟ್ಟಬಹುದು. ವಿಲಿಯಂ ಕಾರ್ಲೋಸ್ ವಿಲಿಯಂ ಹೇಳುವ ಹಾಗೆ 'ಎಲ್ಲ ಬರವಣಿಗೆ ಒಂದು ರೋಗ. ಅದನ್ನು ತಡೆಗಟ್ಟಲಾಗುವುದಿಲ್ಲ.'

ಹಾಗಿದ್ದರೆ ಎಲ್ಲ ವೈದ್ಯರೂ ಏಕೆ ಸಾಹಿತಿಗಳಾಗಲಾರರು ಎಂದೆನಿಸಬಹುದು. ಅದು ಎಲ್ಲ ಅಕ್ಷರಸ್ಥನೂ ಏಕೆ ಕವಿಯಾಗಲಾರ ಎಂದು ಕೇಳಿದ ಹಾಗಾಗುತ್ತದೆ. ಮೂಲತಃ ಲೇಖಕರಿಗೆ ಬೇಕಾದುದು ಸೂಕ್ಷ್ಮಜ್ಞತೆ, ಮಾನವೀಯತೆ ಮತ್ತು ಸಂವೇದನೆ. ಅದಿರುವ ವ್ಯಕ್ತಿ ವೈದ್ಯ, ವಕೀಲ, ಇಂಜಿನಿಯರ್, ರಾಜಕಾರಣಿ, ಕ್ರಾಂತಿಕಾರಿ - ಹೀಗೆ ಯಾವ ವೃತ್ತಿಯ ಮುಖವಾಡ ಧರಿಸಿದ್ದರೂ ಸಾಹಿತ್ಯದ ಒಲವು ಹೊಂದುತ್ತಾನೆ. ವೈದ್ಯರಾಗಿ ಯಂತ್ರಗಳಂತೆ ವರ್ತಿಸುವವರು, ತಕ್ಕಡಿ ಹಿಡಿದು ಗಳಿಸಿದ್ದನ್ನು ತೂಗಿನೋಡುತ್ತ ವ್ಯಾಪಾರಿಗಳಾಗಿರುವವರು, ಕ್ರಿಮಿನಲ್‌ಗಳಾದವರು, ಕಟ್ಟಾ ಬಲಪಂಥೀಯ ಮನಸ್ಸು ಹೊಂದಿ ಜನರ ಮನಸ್ಸು ಒಡೆಯುವ ಕೆಲಸ ಮಾಡುವವರು ನಮ್ಮ ಕಣ್ಣೆದುರಿದ್ದಾರೆ. ಅದೇವೇಳೆ ಸ್ಟೆತೋಸ್ಕೋಪನ್ನು ಮರೆತು ಬಂದೂಕು ಹಿಡಿದ ಚೆಗೆವಾರನೂ ಇದ್ದಾನೆ. ಈ ಎರಡು ಅತಿಗಳ ನಡುವೆ ಬರಡು ಮನಸ್ಸಿಗೂ ತಾತ್ವಿಕ ಹಾಗೂ ಮಾನವೀಯ ಸ್ಪರ್ಶ ಕೊಡುವಲ್ಲಿ ವೈದ್ಯವೃತ್ತಿ ಉಳಿದೆಲ್ಲ ವೃತ್ತಿಗಳಿಗಿಂತ ಮುಂದಿದೆ ಎಂದಷ್ಟೇ ಹೇಳಬಹುದು.


******

ವಿಷಾದವೆಂದರೆ ಮೆಡಿಕಲ್ ಓದು ಮಾರಾಟಕ್ಕಿದೆ. ಅದೊಂದು ಹಣ ಸುಲಿಯುವ ಸದವಕಾಶ ಎಂದೇ ಭಾವಿಸಲಾಗುತ್ತಿದೆ. ಎಂದೇ ವೈದ್ಯರು/ವೈದ್ಯ ವಿದ್ಯಾರ್ಥಿಗಳಲ್ಲಿ ಸಾಹಿತ್ಯದ ಒಲವೂ ಕಡಿಮೆಯಾಗುತ್ತಿದೆ. ವೈದ್ಯರಿಗೆ ಭಾಷೆ, ಸಾಹಿತ್ಯ, ಸಮಾಜದ ಮೇಲೆ ಒಲವು ಮೂಡುವಂತೆ ಮಾಡಲು ಏನು ಮಾಡಬೇಕು?

ಸಮಾಜ ಯೋಚಿಸಬೇಕು. ವೈದ್ಯರೂ ಸಹಾ..

■ ಡಾ.ಎಚ್.ಎಸ್.ಅನುಪಮಾ

ಅಪರೂಪದ ಅಧಿಕಾರಿ ಶೇಖರಪ್ಪ



ಚಿಕ್ಕಮಗಳೂರು ಡಿಸಿಯಾಗಿದ್ದ ಶೇಖರಪ್ಪನವರನ್ನು ಸರಕಾರ ದಿಢೀರನೆ ವರ್ಗ ಮಾಡಿದೆ. ಎರಡು ವರ್ಷ ತುಂಬುವಷ್ಟರಲ್ಲೇ ಶೇಖರಪ್ಪ ವರ್ಗಾವಣೆಯಾಗಿರುವುದರಿಂದ ಚಿಕ್ಕಮಗಳೂರಿನ ಜನಸಾಮಾನ್ಯರು "ಇಂತಹ ಡಿಸಿ ಇನ್ನೂ ಇರಬೇಕಿತ್ತು" ಎಂಬ ಉದ್ಗಾರ ತೆಗೆಯುತ್ತಿರುವುದಲ್ಲದೆ ಹಿಂದೆ ಯಾವ ಡಿಸಿಗೂ ಮಾಡದಷ್ಟು ಬೀಳ್ಕೊಡುಗೆ ಸಮಾರಂಭಗಳನ್ನ ಮಾಡಿದ್ದಾರೆ. ಜನಸಾಮಾನ್ಯರ ಈ ಪ್ರತಿಕ್ರಿಯೆ ಹಿಂದೆ ರಾಜಕಾರಣಿಗಳಿಗಿಂತಲೂ ಅಧಿಕಾರಿಗಳು ಮಾತ್ರ ನಮ್ಮ ಸಮಸ್ಯೆ ಬಗೆಹರಿಸಬಲ್ಲರೆಂಬ ನಂಬುಗೆ ಬೆಳೆಯುತ್ತಿರುವಂತೆ ಕಾಣುತ್ತದೆ.

ಹಾಗೆ ನೋಡಿದರೆ ಸರಕಾರ ಒಂದು ಅಮೂರ್ತ ರೂಪದ್ದು. ಅದರ ಮೂರ್ತರೂಪವೇ ಜಿಲ್ಲೆ ಮಟ್ಟಿಗೆ ಡಿಸಿ. ಆತನನ್ನು ಮಾತನಾಡಿಸಬಹುದು, ಕೈಗೆ ಅರ್ಜಿ ಕೊಡಬಹುದು. ಮೂರ್ತ ರೂಪದ ಡಿ.ಸಿ. ಮಾನವೀಯ ಗುಣದ ಕರ್ತವ್ಯನಿಷ್ಠನಾಗಿದ್ದರೆ ರಾಜಕಾರಣಿಗಿಂತಲೂ ಜನಪ್ರಿಯನಾಗಿ ಜನಸಾಮಾನ್ಯರ ಸಮಸ್ಯೆ ಬಗೆಹರಿಸಬಲ್ಲ. ಈ ಪೈಕಿ ಶೇಖರಪ್ಪನವರು ಚಿಕ್ಕಮಗಳೂರು ಜಿಲ್ಲೆಗೆ ಬಂದ ಕ್ಷಣದಿಂದಲೂ ಅವಿಶ್ರಾಂತವಾಗಿ ದುಡಿದ ಅಧಿಕಾರಿ.

ಜಿಲ್ಲೆಯ ಯಾವುದೇ ಮೂಲೆಯಲ್ಲಿ ಸಮಸ್ಯೆ ಉದ್ಭವಿಸಿದ ಕೂಡಲೇ ಅಲ್ಲಿಗೆ ಭೇಟಿಯಿತ್ತು ಸಮಸ್ಯೆ ಬಗೆಹರಿಸುತ್ತಿದ್ದರು. ಅಜ್ಜಂಪುರದ ಅಮೃತಮಹಲ್ ಕೇಂದ್ರದಲ್ಲಿ ದನಗಳ ಸಗಣಿಯನ್ನೇ ತೆಗೆದಿಲ್ಲ, ಅದರ ಮೇಲೆ ಮಲಗುತ್ತವೆ, ಕರುಗಳನ್ನು ಹಾಕುತ್ತವೆ ಎಂಬ ಸುದ್ದಿ ಬಂದಕೂಡಲೇ ಅಜ್ಜಂಪುರಕ್ಕೆ ಹೋಗಿ ಪರಿಶೀಲಿಸಿ ಅಧಿಕಾರಿಗಳಿಗೆ ನೀರಿಳಿಸಿದರು. ಅದರ ಅಭಿವೃದ್ಧಿಗೆ ಸರಕಾರ ಗಮನ ಕೊಡುವಂತೆ ಮಾಡಿ ಮುಖ್ಯಮಂತ್ರಿ ಬಜೆಟ್‌ನಲ್ಲಿ ಅಮೃತಮಹಲ್ ಅಭಿವೃದ್ಧಿಗೆ ಹತ್ತು ಕೋಟಿ ತೆಗೆದಿಡುವುದಕ್ಕೆ ಕಾರಣಕರ್ತರಾದರು.

ಜನಸಾಮಾನ್ಯರು ನೇರ ಹೋಗಿ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಬಹುದಿತ್ತು, ಅರ್ಜಿ ಕೊಡಬಹುದಿತ್ತು. ಬೆಳಗ್ಗೆ ಅವರ ಸಾರ್ವಜನಿಕರ ಸಂದರ್ಶನ ಶುರುವಾದ ಉತ್ಸಾಹದಲ್ಲೇ ಸಂಜೆಯವರೆಗೂ ಇರುತ್ತಿದ್ದರು. ಅವರ ದಣಿದ ಮುಖವನ್ನೇ ಯಾರೂ ಕಾಣರು.

ಚಿಕ್ಕಮಗಳೂರು ಈಚೆಗೆ ತುಂಬ ಸಮಸ್ಯೆಗಳಿಗೆ ತುತ್ತಾಗಿರುವ ಜಿಲ್ಲೆ, ನಕ್ಸಲ್ ಸಮಸ್ಯೆ ಬಾಬಾ ಬುಡನ್‌ಗಿರಿ ಸಮಸ್ಯೆ ಮತಾಂಧ ರಾಜಕಾರಣಿಗಳ ಸಮಸ್ಯೆ ಹೀಗೆ ಬಗೆಹರಿಯಲಾರದ ಸಮಸ್ಯೆಯಿಂದ ನರಳುತ್ತಿರುವ ಈ ಸುಂದರ ಜಿಲ್ಲೆಗೆ ಬರುವ ಮುನ್ನ ಶೇಖರಪ್ಪನವರು ಅಳುಕಿದ್ದರು. ಆದರೆ ಬಂದಕೂಡಲೇ ಜನರ ಬಳಿಗೇ ಹೋಗಿ ಸಾಮಾನ್ಯರ ಅಹವಾಲುಗಳನ್ನ ಆಲಿಸಿದ್ದರಿಂದ ಸಮಸ್ಯೆಗಳು ತಾನಾಗಿಯೇ ಕರಗಿಹೋದವು.

ಕುದುರೆಮುಖದಲ್ಲಿ ಅರಣ್ಯ ಇಲಾಖೆಗೆ ಕಂದಾಯ ಭೂಮಿಯನ್ನು ಬದಲಿಯಾಗಿ ನೀಡುವ ಪ್ರಸ್ತಾವನೆ ಸಿದ್ಧಪಡಿಸಿ ಸರಕಾರಕ್ಕೆ ಸಲ್ಲಿಸಿದ್ದರು. ಅಕಸ್ಮಾತ್ ನ್ಯಾಯಯುತ ಪರಿಹಾರ ಸಿಗದಿದ್ದರೆ ಸಂತ್ರಸ್ತರಿಗೆ ಗರಿಷ್ಟ ಪ್ರಮಾಣದ ಧನಸಹಾಯ ಸಿಗಲೆಂಬ ದೃಷ್ಟಿಯಿಂದ 300 ಕೋಟಿ ರೂ. ಪ್ಯಾಕೇಜ್ ಸಿದ್ಧಪಡಿಸಿದ್ದರು. ಒತ್ತುವರಿಯ ತೆರವಿನ ವಿಷಯದಲ್ಲೂ ಮಾನವೀಯತೆ ಮೆರೆದು ಜನಪರವಾಗಿ ನಿಂತಿದ್ದರಿಂದ ಮೇಲಧಿಕಾರಿಗಳ ಹಾಗು ನ್ಯಾಯಾಲಯದ ಎಚ್ಚರಿಕೆಯನ್ನು ಎದುರಿಸಿದ್ದರು.

ಇದೆಲ್ಲಕ್ಕಿಂತ ಮುಖ್ಯವಾಗಿ ಚಿಕ್ಕಮಗಳೂರಿನ ಬಿಜೆಪಿ, ಕಾಂಗ್ರೆಸ್, ದಳ, ಸಿಪಿಐ ಹಾಗು ದಲಿತ ಸಂಘದ ಜನಗಳನ್ನು ಸಮಾನಭಾವದಲ್ಲಿ ಕಂಡು ಅವರ ತರಲೆಗಳಿಗೆ ಅವಕಾಶವಿಲ್ಲದಂತೆ ಮಾಡಿದ್ದರು. ಈ ಪೈಕಿ ಸಿ.ಟಿ. ರವಿ ಕಡೆಯ ಕಿಡಿಗೇಡಿಗಳು ಸರಕಾರಕ್ಕೆ ಕೆಟ್ಟ ಹೆಸರು ತರಲು ಎಷ್ಟೇ ಪ್ರಯತ್ನಪಟ್ಟರೂ ಸಾಧ್ಯವಾಗದಂತೆ ನೋಡಿಕೊಂಡರು. ಶೇಖರಪ್ಪನವರ ಅವಧಿಯಲ್ಲಿ ಇಬ್ಬರು ನಕ್ಸಲ್ ನಾಯಕರು ಮುಖ್ಯವಾಹಿನಿಗೆ ಬಂದದ್ದಲ್ಲದೆ ಇನ್ನೂ ಕೆಲವರು ಬರುವವರಿದ್ದರು. ನಿಜಕ್ಕೂ ಇದೊಂದು ಐತಿಹಾಸಿಕ ಘಟನೆ.

ಶೇಖರಪ್ಪನವರು ಜನಪ್ರತಿನಿಧಿಗಳು ಹೇಳುವುದನ್ನು ಕೇಳುತ್ತಲೇ ತಮ್ಮ ವಿವೇಚನೆಯಂತೆ ಸರಿಯಾದ ತೀರ್ಮಾನ ತೆಗೆದುಕೊಳ್ಳುತ್ತಿದ್ದರಿಂದ ಜನಪ್ರತಿನಿಧಿಗಳು ತಮ್ಮ ಓರೆಕೋರೆ ತಿದ್ದಿಕೊಂಡು ಜಿಲ್ಲಾಧಿಕಾರಿಗಳಿಗೆ ಸಹಾಯಕವಾಗಿದ್ದರು. ಈ ಪೈಕಿ ಯಾವುದನ್ನೂ ಒಪ್ಪದ ಬಿಜೆಪಿಗಳು ಶೇಖರಪ್ಪನವರನ್ನು ಮೆಚ್ಚಿ ಸುಮ್ಮನಾಗಿದ್ದರು. ಆದರೂ ತಮ್ಮ ಎಂದಿನ ಅಜೆಂಡಾಗಳಾದ ಕೋಮು ಗಲಭೆ ಎಬ್ಬಿಸಲು ಆಗಾಗ್ಗೆ ಪ್ರಯತ್ನಿಸುತ್ತಿದ್ದವು. ಅದೆಕ್ಕೆಲ್ಲ ಕಡಿವಾಣ ಹಾಕಿದ ಶೇಖರಪ್ಪ ಜಿಲ್ಲೆಯಲ್ಲಿ ಕೋಮು ದಳ್ಳುರಿಯ ಅನಾಹುತಗಳು ಸಂಭವಿಸದಂತೆ ನೋಡಿಕೊಂಡರು. ಇದೊಂದು ಮಹತ್ತರವಾದ ಸಾಧನೆ.

ತಮ್ಮ ಕೆಳಗಿನ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಎಸ್‌ಪಿ, ಎಡಿಸಿ ಮತ್ತು ಎಸಿಯವರನ್ನೆಲ್ಲಾ ಹುರಿದುಂಬಿಸಿ ಎರಡು ವರ್ಷ ಜಿಲ್ಲೆಯನ್ನು ಅಭಿವೃದ್ಧಿ ಪಥದಲ್ಲಿ ನಿಲ್ಲಿಸಿದ ಶೇಖರಪ್ಪನಂತಹ ಹತ್ತು ಜನ ಡಿಸಿಗಳಿದ್ದರೆ ಒಂದು ಸರಕಾರ ಅದು ಒಳ್ಳೆ ಸರಕಾರವಾಗಿದ್ದರೆ ಮತ್ತೆ ಅಧಿಕಾರಕ್ಕೆ ಬರಬಲ್ಲದು.

ಶೇಖರಪ್ಪನವರು ಎಷ್ಟರಮಟ್ಟಿಗೆ ಶೀಘ್ರವಾಗಿ ಕಾರ್ಯತತ್ಪರರಾಗುತ್ತಿದ್ದರೆಂದರೆ "ಇಲ್ಲಿನ ಜಿಲ್ಲಾ ಗ್ರಂಥಾಲಯದ ಕಟ್ಟಡ ಶ್ರೀಕೃಷ್ಣ ರಾಜೇಂದ್ರ ಒಡೆಯರ್ ಕಟ್ಟಿಸಿದ್ದು. ಈಗ ಸೋರುತ್ತಿದೆ" ಎಂದು ಅಲ್ಲಿನ ಗ್ರಂಥಾಲಯಾಧಿಕಾರಿ ದೂರು ಹೇಳಿದ ಕೂಡಲೇ ಎದ್ದು ಬಂದು ಗ್ರಂಥಾಲಯ ಪರಿಶೀಲಿಸಿದ ಶೇಖರಪ್ಪ ಕೂಡಲೇ ಇಂಜಿನಿಯರ್ ಕರೆದು, ಎಸ್ಟಿಮೇಟ್ ಮಾಡಿಸಿ, ಎರಡು ಲಕ್ಷ ಮಂಜೂರು ಮಾಡಿಸಿದರು. ಅಲ್ಲದೆ ಎಂಪಿ ಫಂಡ್‌ನಿಂದ ಎರಡು ಲಕ್ಷಕ್ಕೆ ಬೇಡಿಕೆಯಿಟ್ಟು, ಇಲಾಖೆಯಿಂದ ಒಂದು ಲಕ್ಷ ಒದಗಿಸಿದರು. ಗ್ರಂಥಾಲಯ ನವೀಕರಣಗೊಳ್ಳಲು ನೀಲನಕ್ಷೆ ರೂಪಿಸಿದ್ದರು.

ಅಷ್ಟೇ ಅಲ್ಲದೆ ಗ್ರಂಥಾಲಯಾಧಿಕಾರಿಯ ವಿವೇಚನಾ ಕೋಟಾದಲ್ಲಿ ಎರಡು ಲಕ್ಷ ರೂ.ಗಳಲ್ಲಿ ಕನ್ನಡದ ಅಪರೂಪದ ಪುಸ್ತಕಗಳನ್ನು ಕೊಳ್ಳಬೇಕೆಂದು ಹೇಳಿ, ಕೊಂಡ ನಂತರ ಹೋಗಿ ಪರಿಶೀಲಿಸಿದರು. ಇದು ಯಾವ ಅಧಿಕಾರಿಯಲ್ಲೂ ಕಾಣದ ಒಂದು ಅಪರೂಪದ ಗುಣ.

ತಮ್ಮ ವ್ಯಾಪ್ತಿಯ ಎಲ್ಲಾ ಇಲಾಖೆಗಳೂ ಚಟುವಟಿಕೆಯಿಂದ ಕೆಲಸ ಮಾಡುವಂತೆ, ಸದಾ ಮೀಟಿಂಗ್ ಕರೆದು ಮಾರ್ಗದರ್ಶನ ನೀಡುತ್ತಿದ್ದ ಶೇಖರಪ್ಪ ಒಂದು ತಿಂಗಳಲ್ಲಿ 45 ಮೀಟಿಂಗ್ ಮಾಡುತ್ತಿದ್ದರು. ಜನಸಾಮಾನ್ಯರ ಅಹವಾಲುಗಳಿಗೆ ಕೂಡಲೇ ಸ್ಪಂದಿಸುತ್ತಿದ್ದರು. ಆ ಕಾರಣಕ್ಕೆ ತುಂಬ ಜನಾನುರಾಗಿ ಅಧಿಕಾರಿಯಾಗಿದ್ದರು.

ಶೇಖರಪ್ಪ ಚಿಕ್ಕಮಗಳೂರಿಗೆ ಬಂದಿದ್ದೂ ಒಂದು ಆಕಸ್ಮಿಕ. ಈ ಹಿಂದಿದ್ದ ಜಿಲ್ಲಾಧಿಕಾರಿಗೆ "ಸರಕಾರದ ಕ್ಷೀರಭಾಗ್ಯ ಕಾರ್ಯಕ್ರಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೇಗೆ ನಡೆದಿದೆ?" ಎಂದು ಮುಖ್ಯಮಂತ್ರಿಗಳು ಡಿಸಿಗಳ ಮೀಟಿಂಗ್‌ನಲ್ಲಿ ಕೇಳಿದರು. ಆಗ ಮಾನ್ಯ ಜಿಲ್ಲಾಧಿಕಾರಿಗಳು "ನನಗೆ ಗೊತ್ತಿಲ್ಲ" ಎಂದು ಉತ್ತರಿಸಿದ್ದರು. ಅದು ನಿಜವಾದ ಉತ್ತರವಾಗಿತ್ತು. ಚಿಕ್ಕಮಗಳೂರು ಚಳಿಗೆ ಮನೆಯ ಕೋಣೆಯಲ್ಲೇ ಇದ್ದು ನಂತರ ಮುಖಮುಸುಡಿಗೆಲ್ಲ ವಿಕ್ಸ್, ಅಮೃತಾಂಜನ್ ಹಚ್ಚಿಕೊಂಡು ಆಫೀಸಿಗೆ ಬರುತ್ತಿದ್ದ ಆ ಅಧಿಕಾರಿ ಟೂರ್ ಮಾಡಿದ್ದರೆ ಕ್ಷೀರಭಾಗ್ಯ ಕಾರ್ಯಕ್ರಮದ ಜಾರಿ ಅರಿವಿಗೆ ಬರುತ್ತಿತ್ತು.

"ಇಂತಹ ಡಿಸಿ ನಮಗೆ ಬೇಡ. ಒಳ್ಳೆ ಡಿಸಿ ಕೊಡಿ" ಎಂದು ಕಾಂಗ್ರೆಸ್ ಮುಖಂಡರು ಸಿದ್ದರಾಮಯ್ಯನವರ ಬಳಿ ಹೋದಾಗ "ಶೇಖರಪ್ಪ ಅಂತ ಒಬ್ಬ ಒಳ್ಳೆ ಅಧಿಕಾರಿ ಅವ್ರನೆ. ಹಾಕ್ತಿನಿ ಹೋಗಿ" ಎಂದಿದ್ದರು. ಚಿಕ್ಕಮಗಳೂರು ಜಿಲ್ಲೆಗೆ ಬಂದ ಶೇಖರಪ್ಪನವರು ಕಳುಹಿಸಿಕೊಟ್ಟವರಿಗೆ, ಕರೆತಂದವರಿಗೆ ಮತ್ತು ಜಿಲ್ಲೆಗೆ ಹೆಸರು ತಂದಿದ್ದಾರೆ. ಒಬ್ಬ ಕ್ರಿಯಾಶೀಲ ಅಧಿಕಾರಿಗೆ ಜನ ಮೆಚ್ಚುಗೆಗಿಂತಲೂ ಮಿಗಿಲಾದ ಪ್ರಶಸ್ತಿಯಿರಲಾರದು.

■ ವರದಿಗಾರ

ಜಾತಿಭ್ರಮೆ ಕಳೆಯುವಾತ ಯೋಗಿ

"ಜಾತಿಭ್ರಮೆ, ನೀತಿಭ್ರಮೆ ಎಂಬ ಕರ್ಮಂಗಳನು
ಘಾತಿಸಿ ಕಳೆಯಬಲ್ಲಡಾತ ಯೋಗಿ.
ಕ್ಷೇತ್ರಭ್ರಮೆ, ತೀರ್ಥಭ್ರಮೆ, ಪಾಷಾಣಭ್ರಮೆ ಎಂಬ ಕರ್ಮಂಗಳನು
ನೀಕರಿಸಿ ಕಳೆಯಬಲ್ಲಡಾತ ಯೋಗಿ.
ಲೋಕಕ್ಕಂಜಿ ಲೌಕಿಕವ ಮರೆಗೊಂಡು ನಡೆವಾತ ತೂತಯೋಗಿ
ಎಂದಾತನಂಬಿಗ ಚೌಡಯ್ಯ."

- ಅಂಬಿಗರ ಚೌಡಯ್ಯ

ವೈದಿಕರ ಕರ್ಮಸಿದ್ಧಾಂತದಿಂದಾಗಿ ಸೃಷ್ಟಿಯಾದ ನಾಲ್ಕುವರ್ಣಭೇದ ಮತ್ತು ಜಾತಿಭೇದದ ಭ್ರಮೆ ಮತ್ತು ಎಲ್ಲ ಬಗೆಯ ತಾರತಮ್ಯಗಳನ್ನು ಪುಷ್ಟೀಕರಿಸುವ ನೀತಿಭ್ರಮೆಗೆ ಜ್ಞಾನದಬಲದಿಂದ ಪೆಟ್ಟುಕೊಟ್ಟು ಆ ವೈದಿಕ ವ್ಯವಸ್ಥೆಯಿಂದ ಹೊರ ಬರುವಾತನು ಮಾತ್ರ ಯೋಗಿ. ಪುಣ್ಯಕ್ಷೇತ್ರಗಳ ಭ್ರಮೆ, ತೀರ್ಥಕ್ಷೇತ್ರಗಳ ಭ್ರಮೆ ಮತ್ತು ಸ್ಥಾವರಕ್ಷೇತ್ರಗಳ ಭ್ರಮೆಗಳಿಂದ ಉಂಟಾದ ಕರ್ಮವ ಅಲ್ಲಗಳೆಯಬಲ್ಲಾತನೆ ಯೋಗಿ ಎಂದು ಯೋಗಿ ಶಬ್ದಕ್ಕೆ ಅಂಬಿಗರ ಚೌಡಯ್ಯನವರು ಹೊಸ ವ್ಯಾಖ್ಯಾನ ಬರೆದಿದ್ದಾರೆ.

ಲೋಕದ ಗೊಡ್ಡು ಸಂಪ್ರದಾಯಗಳಿಗೆ ಅಂಜಿ, ಐಹಿಕ ಬಯಕೆಗಳಿಗೆ ಶರಣಾಗತನಾಗಿ ದಿನ ಕಳೆಯುವಾತ ತೂತಯೋಗಿ ಎಂದು ಸಾತ್ವಿಕ ಕೋಪ ವ್ಯಕ್ತಪಡಿಸಿದ್ದಾರೆ.

ಯೋಗಾಸನವನ್ನೇ 'ಯೋಗ' ಎಂದು ಭ್ರಮೆ ಹುಟ್ಟಿಸುತ್ತಿರುವ ಈ ಕಾಲಮಾನದಲ್ಲಿ ಶರಣರು ಯೋಗದ ಹಳೆಯ ವ್ಯಾಖ್ಯಾನವನ್ನೂ ತಿರಸ್ಕರಿಸಿ ಹೊಸ ವಿಚಾರಧಾರೆಯನ್ನೇ ಹರಿಸಿದ್ದಾರೆ.

"ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ
ವಿಶುದ್ಧಿ ಆಜ್ಞೆ ಎಂದೆಂಬರು;
ಈ ಆರ ಬಲ್ಲಡೆ ನೀವು ಹೇಳಿರೇ.
ಆದಿಯನುಳ್ಳುದೆ ಆಧಾರ;
ಆಧಾರವ ಕೂಡಿಪ್ಪುದೆ ಸ್ವಾಧಿಷ್ಠಾನ;
ಮಣಿಯ ಬೆಳಗಿನಲ್ಲಿಪ್ಪುದೆ ಮಣಿಪೂರಕ;
ಆಸೆ ಇಲ್ಲದುದೆ ಅನಾಹತ;
ಅಲ್ಲ ಅಹುದೆಂಬುದನತಿಗಳೆಯದಿಹುದೆ ವಿಶುದ್ಧಿ;
ಸರ್ವ ಜೀವಂಗಳಲಿ ದಯವನುಳ್ಳಡೆ ಆಜ್ಞೆ,
ಇಂತಿಪ್ಪುದೀಗ ಶಿವಯೋಗ.
ಉಳಿದ ಅಭ್ಯಾಸಿಗಳ ಕಂಡು ನಗುತಿರ್ದೆನಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನಾ."

- ಸಿದ್ಧರಾಮ

ಎಂದು ಸಿದ್ಧರಾಮರು ಸಕಲಜೀವಾತ್ಮರಿಗೆ ಲೇಸನ್ನೇ ಬಯಸುವ ಶಿವಯೋಗದ ಮಹತ್ವವನ್ನು ತಿಳಿಸಿದ್ದಾರೆ. ಯೋಗ ಶಬ್ದ 'ಯುಜ್' ಧಾತುವಿನಿಂದ ಸೃಷ್ಟಿಯಾಗಿದೆ. 'ಯುಜ್' ಎಂದರೆ ಕೂಡುವುದು. 'ಶಿವಯೋಗ' ಎಂದರೆ ಮಂಗಳಕರವಾದುದರ ಜೊತೆಗೆ ಕೂಡುವುದು. ವೈದಿಕರ ಆಧಾರಸ್ತಂಭವಾದ ಕರ್ಮಸಿದ್ಧಾಂತದಿಂದ ಸೃಷ್ಟಿಯಾದ ಚಾತುರ್ವರ್ಣ ಪದ್ಧತಿ ಮತ್ತು ಜಾತಿವ್ಯವಸ್ಥೆಯು 'ಇವನಾರವ, ಇವನಾರವ, ಇವನಾರವ' ಎನ್ನುತ್ತ ಮಾನವರನ್ನು ಬೇರ್ಪಡಿಸುವ ನೀತಿಯನ್ನು ಹೊಂದಿದೆ. ಆದರೆ ಬಸವಧರ್ಮವು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎನ್ನುತ್ತ ಎಲ್ಲ ಮಾನವರನ್ನು ಒಂದು ಮಾಡುವ ನಿಜವಾದ 'ಯೋಗಧರ್ಮ'ವಾಗಿದೆ.

"ಅರಿವೆ ಗುರು, ಆಚಾರವೆ ಶಿಷ್ಯ, ಜ್ಞಾನವೆ ಲಿಂಗ,
ಪರಿಣಾಮವೆ ತಪ, ಸಮತೆಯೆಂಬುದೆ ಯೋಗದಾಗು ನೋಡಾ.
ಆಸುವನರಿಯದೆ ವೇಷವ ಧರಿಸಿ, ಲೋಚು ಬೋಳಾದಡೆ
ಮಹಾಲಿಂಗ ಕಲ್ಲೇಶ್ವರದೇವರು ನಗುವರು."

- ಹಾವಿನಾಳ ಕಲ್ಲಯ್ಯ


ಎಂದು ಹಾವಿನಾಳ ಕಲ್ಲಯ್ಯ ಶರಣರು ಹೇಳುತ್ತಾರೆ. ನಮ್ಮ ಅರಿವು ನಮಗೆ ಗುರು, ಆ ಅರಿವನ್ನು ಆಚರಣೆಯಲ್ಲಿ ತರುವುದೇ ಆ ನಮ್ಮೊಳಗಿನ ಗುರುವಿನ ಶಿಷ್ಯರಾದ ನಮ್ಮ ಕರ್ತವ್ಯವಾಗಿದೆ. ಅರಿವನ್ನು ಆಚರಣೆಯಲ್ಲಿ ತರಬೇಕೆಂಬ ಜ್ಞಾನವೇ ಲಿಂಗವಾಗಿದೆ. ಇದರ ಪರಿಣಾಮವೇ ತಪಸ್ಸು. ಇವೆಲ್ಲವುಗಳ ಒಟ್ಟು ಮೊತ್ತವೇ ಯೋಗ. ಮಾನವ ಕುಲಕ್ಕೆ ಸಮತೆ ಎಂಬುದೇ ಈ ಯೋಗದ ಲಾಭ. ಇದನ್ನೆಲ್ಲ ಬಿಟ್ಟು ವೇಷಧಾರಿಗಳಾಗಿ, ಕೂದಲು ಉದುರಿ ತಲೆ ಬೋಳಾದಾಗ ಜ್ಞಾನಿ ಎನಿಸಿಕೊಂಡು ಅಲೆದಾಡಿದರೆ ದೇವರು ನಗುತ್ತಾನೆ.

"ಅರ್ಥವೆಂಬುದೆ ಪಾಪ, ಬೇರೆ ಪಾಪವಿಲ್ಲ ಕಂಡಯ್ಯಾ.
ಪರಿಣಾಮವೆಂಬುದೆ ಪುಣ್ಯ, ಬೇರೆ ಪುಣ್ಯವಿಲ್ಲ ಕಂಡಯ್ಯಾ.
ಪಾಪಪುಣ್ಯಗಳನತಿಗಳೆದ ಉಳುಮೆ ಶಿವಯೋಗ.
ಮಹಾಲಿಂಗ ಕಲ್ಲೇಶ್ವರನು ಬಲ್ಲ ಸಿದ್ಧರಾಮನ ಪರಿಯ."

- ಹಾವಿನಾಳ ಕಲ್ಲಯ್ಯ

ಎಲ್ಲ ಪಾಪಗಳಿಗೆ ಅರ್ಥವೆಂಬ ವಸ್ತುಮೋಹವೇ ಕಾರಣವಾಗಿದ್ದು ಇದುವೇ ಪಾಪದ ಮೂಲವಾಗಿರುವುದರಿಂದ ಪಾಪವು ಬೇರೆ ಕಡೆಯಿಂದ ಬರಲು ಸಾಧ್ಯವಿಲ್ಲ. ಈ ಮೋಹವೇ ಬದುಕಿನ ಎಲ್ಲ ಶೋಷಣೆ ಮತ್ತು ಅತ್ಯಾಚಾರಗಳಿಗೆ ಕಾರಣವಾಗಿದೆ. ವಸ್ತುಮೋಹವನ್ನು ತ್ಯಜಿಸಿ ಮಾಡುವ ಸತ್ಕಾರ್ಯಗಳಿಂದ ಬರುವ ತೃಪ್ತಿಯೇ ಪುಣ್ಯ. ಬೇರೆ ಪುಣ್ಯ ಇಲ್ಲ. ಪಾಪಪುಣ್ಯಗಳನ್ನು ಕಡೆಗಣಿಸುವ ಸ್ಥಿತಿಯೇ ಶಿವಯೋಗ ಎಂದು ಹಾವಿನಾಳ ಕಲ್ಲಯ್ಯನವರು ಹೇಳಿದ್ದು 21ನೇ ಶತಮಾನಕ್ಕೆ ದಾರಿದೀಪವಾಗಿದೆ. ಹೀಗೆ ಶಿವಯೋಗವು ಮಂಗಳಕರವಾಗಿದೆ, ಮಾನವ ಏಕತೆಯ ಪ್ರತೀಕವಾಗಿದೆ. ಸಮಾನತೆಯ ಸಂಕೇತವಾಗಿದೆ. ಪಾಪ ಪುಣ್ಯಗಳ ಭ್ರಮೆಯಿಂದ ಹೊರತರುವ ಸಾಧನವಾಗಿದೆ. ಸರ್ವದಯಾಪಾರಿ ಮನಸ್ಸನ್ನು ರೂಪಿಸುವಂತದ್ದಾಗಿದೆ.


ಕಾಯಕಯೋಗಿಗಳಾಗಿ ದೇಹ ಮತ್ತು ಮನಸ್ಸಿನ ಸಮತೋಲನ ಕಾಪಾಡಿಕೊಳ್ಳುತ್ತ ಸತ್ಯಶುದ್ಧ ಕಾಯಕ ಮಾಡುವುದು. ಕಾಯಕದಿಂದ ಬಂದುದನ್ನು ದೇವರ ಪ್ರಸಾದವೆಂದು ಸ್ವೀಕರಿಸುವುದು. ಸಕಲಜೀವರಾಶಿಯಿಂದ



ಕೂಡಿದ ಸಮಾಜವೇ ಜಂಗಮಲಿಂಗ ಎಂಬುದನ್ನು ಅರಿಯುವುದು. ಹೀಗೆ ಅರಿತು ದಾಸೋಹಂ ಭಾವದಿಂದ ಸಮಾಜಸೇವೆ ಮಾಡುತ್ತ ನಮ್ಮೊಳಗಿನ ದೇವರ ಜೊತೆ ಲಿಂಗಾಂಗಸಾಮರಸ್ಯದಿಂದ ಬದುಕುವುದೇ ಶಿವಯೋಗ.

ಯೋಗಾಸನಗಳು ಕೂಡ ಶಾರೀರಿಕ ಕಸರತ್ತಿನ ಹಾಗೆ ಶರೀರಕ್ಕೆ ಅವಶ್ಯವಾಗಿವೆ. ಆದರೆ ಯೋಗಾಸನಗಳೇ ಯೋಗ ಎಂಬ ಭ್ರಮೆಯಿಂದ ಹೊರಬಂದು ಎಲ್ಲ ಯೋಗಗಳ ಯೋಗವಾದ ಶಿವಯೋಗವನ್ನು ಅರಿಯುವುದರ ಮೂಲಕ ಮಾನವಕುಲವನ್ನು ಒಂದು ಮಾಡುವುದು ಮತ್ತು ಮಾನವಕುಲವನ್ನು ಸಕಲಜೀವರಾಶಿಯೊಂದಿಗೆ ಒಂದಾಗಿಸಿ ಜೀವಜಾಲ ಸಮತೋಲನವನ್ನು ಸಾಧಿಸುವುದು ಬಸವಧರ್ಮದ ಗುರಿಯಾಗಿದೆ.


■ ರಂಜಾನ್ ದರ್ಗಾ




ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಬುದ್ಧನ ಒಂಭತ್ತು ಸಂಕಷ್ಟಗಳು






ಮನೆಯ ಆರ್ಥಿಕ ತೊಂದರೆಯನ್ನು ದೂರ ಮಾಡುವುದಕ್ಕೋಸ್ಕರ ನೀವು ಏನು ಮಾಡಬೇಕಪ್ಪಾ ಅಂದರೆ, 'ಆಕಳ ಹಾಲಿನ ಮೊಸರಿನಲ್ಲಿ ಸ್ವಲ್ಪ ಜೋಳ ಮತ್ತು ಎಳ್ಳಿನ ಹಿಟ್ಟನ್ನು ಮಿಶ್ರಣ ಮಾಡಿರಿ. ನಂತರ ಅದನ್ನು ದೇಹಕ್ಕೆ ಉಜ್ಜುತ್ತಾ 'ಓಂ ಲಕ್ಷ್ಮೀನಾರಾಯಣಾಯ ನಮಃ' ಜಪವನ್ನು ಮಾಡಿರಿ. ನಂತರ ಸ್ನಾನ ಮಾಡಿರಿ." ಹೀಗೆ ಮಾಡುವುದರಿಂದ ಮನೆಯಲ್ಲಿ ಸಂಪತ್ತು ವೃದ್ಧಿಯಾಗುವುದಂತೆ.

ಹೀಗೆಂದು ಒಂದು ಅದ್ಭುತವಾದ ಸುಲಭವಾದ ಉಪಾಯವನ್ನು ಹೇಳಿಕೊಟ್ಟವರು ಪರಮ ಪೂಜ್ಯ ಆಶಾರಾಂ ಬಾಪೂಜಿಯವರು.

ಅಂಬಾನಿ, ಲಕ್ಷ್ಮೀ ಮಿಟ್ಟಲ್ ಇತರೇ ಭಾರತದ ಲಕ್ಷ್ಮೀಪುತ್ರರು ಹೀಗೆ ಮಾಡಿರಬಹುದು. ಇರಲಿ, ವಿಷಯ ಅದಲ್ಲ.

ಸಂತರ ಮೇಲೆ ಅನ್ಯಾಯ ಕೊನೆಗೂ ಎಲ್ಲಿಯವರೆಗೆ?

"ಧರತಿಯು ಎಲ್ಲರ ಮಿತ್ರವಾಗಿದೆ. ಎಷ್ಟು ಅನ್ಯಾಯವನ್ನು ಮಹಾಪುರುಷರು ಸಹಿಸಿದರೋ, ಅಷ್ಟೇ ಪ್ರಮಾಣದಲ್ಲಿ ಸಮಾಜವು ಅವರನ್ನು ಗುರುತಿಸಿತು. ಅನೇಕ ಸಂತರು ಸಹಿಸಿದರು. ನಮ್ಮ ಸಂಗಡವೂ ಆಗುತ್ತಿದೆ. ಧೈರ್ಯದಿಂದಿರಿ. ಎಲ್ಲರ ಮಂಗಳವಾಗಲಿ." - ಪೂಜ್ಯ ಸಂತ ಶ್ರೀ ಆಶಾರಾಮಜೀ ಬಾಪೂ.



ಅಪ್ರಾಪ್ತ ಹುಡುಗಿಯ ಮೇಲಿನ ಲೈಂಗಿಕ ಶೋಷಣೆಯ ಕಾರಣದಿಂದಾಗಿ ಜೈಲು ಸೇರಿರುವ ಆಶಾರಾಂ ಬಾಪುವಿನ ಮೇಲಿನ ಆರೋಪಗಳೆಲ್ಲಾ ಸುಳ್ಳು, ಇವೆಲ್ಲಾ ಷಡ್ಯಂತ್ರದ ಒಂದು ಭಾಗ ಎಂದು ವಿವರಿಸುತ್ತಾ "ಋಷಿ ಪ್ರಸಾದ" ಎಂಬ ಸಣ್ಣ ಕಿರುಹೊತ್ತಿಗೆಯಲ್ಲಿ "ಸಂತರು - ಅವತಾರಗಳ ಭೂಮಿಯಾದ ಭಾರತದಲ್ಲಿ ಕೊನೆಗೂ ಎಲ್ಲಿಯವರೆಗೆ ಸಂತರು ಅತ್ಯಾಚಾರವನ್ನು ಸಹಿಸುವರು?" ಎಂಬ ಮುಖವಾಣಿಯೊಂದಿಗೆ ಹೇಳುವುದೇನೆಂದರೆ, 'ಸರಿಯಾದ ಸಾಕ್ಷಿಯಿಲ್ಲ, ಮೆಡಿಕಲ್ ಆಧಾರವಿಲ್ಲ ಮತ್ತು ಒಳಸಂಚಿನಲ್ಲಿ ಸಿಲುಕಿಸುವ ಅನೇಕ ಪ್ರಕರಣ, ಆದರೂ ಕೂಡ "ಬಾಪೂ ಜೈಲಿನಲ್ಲಿ ಏಕೆ ಇದ್ದಾರೆ?" ಪರದೆಯ ಹಿಂದಿನ ಸತ್ಯವನ್ನು ತಿಳಿಯಿರಿ ಎಂದು ವಿಶೇಷಾಂಕವೇ ಪ್ರಕಟವಾಗಿದೆ.

ಅದರಲ್ಲಿ ಅಟಲ್ ಬಿಹಾರಿ ವಾಜಪೇಯಿ, ನರೇಂದ್ರ ಮೋದಿ, ಉಮಾಭಾರತಿ, ಉದ್ಧವ್ ಠಾಕರೆ, ಜಗನ್ನಾಥ ಪುರಿ ಮಠದ ಜಗದ್ಗುರು ಶಂಕರಾಚಾರ್ಯ, ಪ್ರವೀಣ್ ತೊಗಾಡಿಯಾ, ರಾಜನಾಥ್ ಸಿಂಗ್, ವಸುಂಧರಾ ರಾಜೇ ಸಿಂಧಿಯಾ, ಎಲ್ಲರಿಗಿಂತ ಮುಖ್ಯವಾಗಿ ಡಾ ಸುಬ್ರಹ್ಮಣ್ಯಂ ಸ್ವಾಮಿ ಎಲ್ಲರೂ "ಸಂತ ಶ್ರೀ ಆಶಾರಾಂ ಬಾಪು" ಅದೆಷ್ಟು ಸಾತ್ವಿಕ ಸಂತರು, ಎಂತಹ ಅವತಾರ ಪುರುಷರು, ಅದೆಷ್ಟು ಈ ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರಕ್ಕೆ ಬೇಕಾಗಿರುವಂತಹ ಆಧ್ಯಾತ್ಮಿಕ ಪುರುಷರು ಎಂದು ಹಾಡಿ ಹೊಗಳಿ ಭಜನೆ ಮಾಡಿದ್ದಾರೆ. ಬಹುಶಃ ಅವುಗಳಲ್ಲಿ ಎಷ್ಟೋ ಜನ ಈ ಬಾಪು ಲೈಂಗಿಕ ಪ್ರಕರಣಕ್ಕೆ ಸಿಲುಕುವ ಮುನ್ನ, ಆತ ತನ್ನ ಆಶ್ರಮಗಳಲ್ಲಿ ಅವರುಗಳನ್ನು ಕರೆಸಿದಾಗ ಹೊಗಳಿರುವಂತಹ ಸಾಂಪ್ರದಾಯಿಕ ಗುಣಗಾನದ ಭಾಗಗಳಾಗಿರಬಹುದು. ನಮ್ಮ ಮಾಜಿ ಪ್ರಧಾನಿ ದೇವೇಗೌಡರೂ ಅವರಿಗೆ ಅಡ್ಡಡ್ಡ ಬಿದ್ದು ನಮಸ್ಕರಿಸುತ್ತಿರುವ ಚಿತ್ರಪಟವೂ ಅದರಲ್ಲಿ ಇದೆ.

ಏನೇ ಆಗಲಿ, ಮೇಲೆ ಹೇಳಿರುವಂತಹ ಮಹನೀಯರೆಲ್ಲಾ ಶಿಫಾರಸು ಮಾಡುವಂತಹ ದೈವೀಮಾನವನ ಗುಣಾವಗುಣಗಳನ್ನು ನಾವು ಪ್ರತ್ಯೇಕವಾಗಿ ಜರಡಿ ಹಿಡಿಯುವ ಅಗತ್ಯವೇನಿಲ್ಲ. ಇರಲಿ, ಈ ಪತ್ರಿಕೆಯ ಒಂದು ಪುಟವನ್ನು ನೋಡಿ ನಮ್ಮ ಕಲಾವಿದ ಮಿತ್ರರಾದ ಬಿ.ಪಿ.ಕಾರ್ತಿಕ್ ಒಂದು ಸ್ಪಷ್ಟನೆಗೆ ಫೋನ್ ಮಾಡಿದ್ದರು. ಅವರು ಬುದ್ಧನ ಜೀವನದ ವಿವಿಧ ಹಂತಗಳನ್ನು ನೂರಾರು ಪಟಗಳಲ್ಲಿ ಸಂಚಿದಿಂದ ಅರಳಿಸಿರುವಂತವರು. ಅವರಿಗೆ ಒಂದು ಗೊಂದಲ ಉಂಟಾಗಿತ್ತು, ಅದೇನೆಂದರೆ, ಮಹಾತ್ಮ ಬುದ್ಧನ ಮೇಲೆ ಅತ್ಯಾಚಾರದ ಆರೋಪವಾಗಿತ್ತು ಎಂಬುದು. ಇದು ಯಾವುದು? ಹೇಗೆ ಮತ್ತು ಏಕೆ? ಇತ್ಯಾದಿ ಪ್ರಶ್ನೆಗಳು ಎದ್ದಿದ್ದವು.

ಬುದ್ಧನ ಕುರಿತಾದ ಸರಣಿಯ ಲೇಖನಗಳು ಪ್ರಾರಂಭವಾದ್ದರಿಂದ ಇದರ ಮೇಲೆ ಬೆಳಕು ಚೆಲ್ಲಲು ಕೇಳಿದರು.

ಆ ಪತ್ರಿಕೆಯಲ್ಲಿರುವುದು ಹೀಗೆ:

ಸ್ವಾಮಿ ವಿವೇಕಾನಂದರು

ಅತ್ಯಾಚಾರ: ಕ್ರಿಶ್ಚನ್ ಮಿಶನರಿಗಳು ಹಾಗೂ ಅವರ ಕೈಗೊಂಬೆಯಾಗಿರುವ ಪ್ರತಾಪ ಮಜೂಮದಾರನ ಮುಖಾಂತರ ದುಶ್ಚರಿತ್ರತೆ, ಸ್ತ್ರೀ ಲಂಪಟತೆ, ಮೋಸ, ಕುಟಿಲತೆ, ಕಪಟ ಮುಂತಾದ ಆರೋಪಗಳನ್ನು ಮಾಡಿ ಪತ್ರಿಕೆ ಮುಖಾಂತರ ಹೆಸರನ್ನು ಹಾಳು ಮಾಡಿದರು.

ಪರಿಣಾಮ: ಬಹಳ ಸಮಯದವರೆಗೆ ಅವರ ನಿಂದನೆಗಳು ನಡೆಯುತ್ತಿದ್ದವು. ಅದರ ಪ್ರತೀಕಾರವನ್ನು ಮಾಡಲು ಅವರ ಅನುಯಾಯಿಗಳು ಭಾರತದಲ್ಲಿ ಸಾರ್ವಜನಿಕ ಸಭೆಗಳನ್ನು ಆಯೋಜನೆ ಮಾಡಿದರು ಮತ್ತು ಕೊನೆಯಲ್ಲಿ ಸ್ವಾಮಿ ವಿವೇಕಾನಂದರ ಪಕ್ಷಕ್ಕೆ ಜಯವಾಯಿತು.

ಮಹಾತ್ಮ ಬುದ್ಧ

ಅತ್ಯಾಚಾರ: ಸುಂದರಿ ಹೆಸರಿನ ಬೌದ್ಧ ಬಿಕ್ಷುಣಿಯ ಸಂಗಡ ಅಕ್ರಮ ಸಂಬಂಧ ಹಾಗೂ ಅವಳ ಹತ್ಯೆಯ ಆರೋಪವನ್ನು ಮಾಡಿದರು ಮತ್ತು ಎಲ್ಲ ಕಡೆ ಘೋರ ದುಷ್ಪ್ರಚಾರ ಆಯಿತು. ಕೆಲವು ಸಮಯದ ನಂತರ ಮಹಾತ್ಮ ಬುದ್ಧ ನಿರ್ದೋಷಿಯೆಂದು ಸಾಬೀತಾಯಿತು.

ಪರಿಣಾಮ: ಅವರ ಶಿಷ್ಯರು ಸುಪ್ರಚಾರ ಮಾಡಿದರು. ಜನರು ಇಂದಿಗೂ ಅವರ ಆದರ ಸನ್ಮಾನವನ್ನು ಮಾಡುವರು.

ಸಂತ ಕಬೀರರು

ಅತ್ಯಾಚಾರ: ಅಧರ್ಮಿ, ಕುಡುಕ, ವೇಶ್ಯಾಗಾಮಿ ಮುಂತಾದ ಎಷ್ಟೋ ಕೀಳು ಆರೋಪವನ್ನು ಮಾಡಲಾಗಿದೆ ಮತ್ತು ಬಾದಶಹ ಸಿಕಂದರನ ಆದೇಶದಂತೆ ಕಬೀರರನ್ನು ಬಂಧಿಸಲಾಯಿತು ಮತ್ತು ಎಷ್ಟೋ ಪ್ರಕಾರವಾಗಿ ಸತಾಯಿಸಲಾಯಿತು.

ಪರಿಣಾಮ: ಕೊನೆಯಲ್ಲಿ ಬಾದಶಹನು ಕ್ಷಮೆಯನ್ನು ಕೇಳಿದನು ಮತ್ತು ಶಿಷ್ಯನಾದನು.

ಹೀಗೇ ಮುಂದುವರಿದು ಸಂತ ನರಸಿಂಹ ಮೆಹತಾಜೀ, ಸ್ವಾಮಿ ರಾಮತೀರ್ಥರು, ಸಂತ ಜ್ಞಾನೇಶ್ವರ ಮಹಾರಾಜ, ಭಕ್ತಿಮತಿ ಮೀರಾಬಾಯಿ ಹೀಗೆ ಪಟ್ಟಿಯನ್ನು ಕೊಡುತ್ತಾರೆ.

ವಿವೇಕಾನಂದ, ಬುದ್ಧ, ಕಬೀರ್, ನರಸಿಂಹ ಮೆಹ್ತಾ ರಾಮತೀರ್ಥ ಹೀಗೆ ಅನೇಕರ ಮೇಲೆ ಅನೇಕ ಆರೋಪಗಳು ಬಂದಿದ್ದವು. ಆದರೆ ಅವರು ಅದನ್ನೆಲ್ಲಾ ಸಮರ್ಥವಾಗಿ ಎದುರಿಸಿದರು. ಅವರೆಲ್ಲರೂ ಪುಟಕಿಟ್ಟ ಚಿನ್ನವಾದರು. ಹಾಗೆಯೇ ಆಶಾರಾಂ ಬಾಪೂರವರೂ ಬುದ್ಧನಂತೆ, ವಿವೇಕಾನಂದನಂತೆ ಈ ರೀತಿಯ ಅತ್ಯಾಚಾರದ ಆರೋಪವನ್ನು ಎದುರಿಸುತ್ತಿದ್ದಾರೆ. ಯಾರ ಸತ್ಸಂಗದ ಸಾನಿಧ್ಯದಿಂದ ಕೋಟ್ಯಾಂತರ ಜನರ ದೋಷಗಳು ಬಿಟ್ಟುಹೋಯಿತೋ ಅಂತಹ ಬಾಪೂಜೀಯವರೂ ಹೊರಗೆ ಬರುತ್ತಾರೆ. ಸತ್ಯ ಮೇವ ಜಯತೆ ಎಂಬುದು ಅದರಲ್ಲಿದ್ದ ಸಾರ!

ಬುದ್ಧನ ಮೇಲಿನ ಆರೋಪದಂತೆಯೇ ತಮ್ಮ ಸಂತರ ಮೇಲೂ ಆರೋಪ ಬಂದಿದೆ ಎಂದು ಯಾವ ಈ ಸನಾತನವಾದಿಗಳು ಲೇಖನಗಳನ್ನು ಬರೆಯುತ್ತಿದ್ದಾರೋ ಅಂತಹ ಸನಾತನ ಧರ್ಮದ ವಾದಿಗಳೇ ಅಂದು ಬುದ್ಧನ ಮೇಲೆ ಅಂತಹ ಆರೋಪವನ್ನು ಮಾಡಿದ್ದು ಮತ್ತು ಬುದ್ಧನಿಗೆ ಅಪಕೀರ್ತಿ ತರಲು ಯತ್ನಿಸಿದ್ದು.

ಒಂಭತ್ತು ಮಹಾ ಸಂಕಷ್ಟಗಳು

ಜಪಾನಿ ಭಾಷೆಯಲ್ಲಿ ಕುಓ ನೊ ದೈನನ್ ಎಂದು ಕರೆಯಲಾಗುವ ಬುದ್ಧನು ಎದುರಿಸಿದ ಒಂಭತ್ತು ಮಹಾ ಸಂಕಷ್ಟಗಳನ್ನು ಸಾಂಪ್ರದಾಯಕವಾಗಿ ವಿವರಿಸುತ್ತಾರೆ. ಕೆಲವು ಗ್ರಂಥಗಳಲ್ಲಿ ಸಣ್ಣಪುಟ್ಟ ಬದಲಾವಣೆಗಳಿವೆ.

1. ಕೆಲವು ಸನಾತನವಾದಿಗಳ ಗುಂಪೊಂದು ಸುಂದರಿ ಎಂಬ ಸುಂದರಿಯನ್ನು ಬುದ್ಧನು ಇದ್ದ ಆಶ್ರಮಕ್ಕೆ ಕಳುಹಿಸಿದ್ದರು. ಅವಳು ಪದೇಪದೇ ಆಶ್ರಮಕ್ಕೆ ಹೋಗಿ ಬರುತ್ತಾ ತಾನು ಅಲ್ಲಿ ಬುದ್ಧನೊಂದಿಗೆ ರಾತ್ರಿ ಕಳೆದೆ ಎಂದು ಹೇಳುವುದಕ್ಕೆ ಅನುಕೂಲವಾಗುವಂತೆ ಹೋಗಿ ಬರುವುದನ್ನು ಮಾಡುತ್ತಾ ಬುದ್ಧನಿಗೆ ಅಪಕೀರ್ತಿ ತರಲು ಯತ್ನಿಸಿದ್ದಳು. ಆಮೇಲೆ ಅವಳನ್ನು ಕಳುಹಿಸಿದವರೇ ಅವಳನ್ನು ಕೊಂದು ಅವಳ ದೇಹವನ್ನು ಬುದ್ಧನ ಕುಟೀರದ ಸಮೀಪವೇ ಹೂತು ಹಾಕಿ, ಆಕೆ ಕಾಣೆಯಾಗಿದ್ದಾಳೆಂದು ದೊರೆಗೆ ದೂರು ಸಲ್ಲಿಸಿ, ಹುಡುಕಿಸಿದಾಗ ದೇಹವು ಆಶ್ರಮದಲ್ಲಿ ದೊರಕಿ ಬಿಕ್ಕುಗಳ ಮೇಲೆ ಅತ್ಯಂತ ಕಠಿಣ ಆರೋಪವನ್ನು ಹೇರಲಾಯ್ತು.
2. ಹಳಸಿದ ಮತ್ತು ಕೊಳಕಾದ ಆಹಾರವನ್ನು ಭಿಕ್ಷೆಯಾಗಿ ಪಡೆಯುತ್ತಾನೆಂಬ ಆರೋಪದಿಂದ ಬುದ್ಧನನ್ನು ನಿಂದಿಸಿದ್ದರು.
3. ವೈರಂಜದಲ್ಲಿ ಅಗ್ನಿದತ್ತನೆಂಬ ಬ್ರಾಹ್ಮಣ ಬುದ್ಧನನ್ನೂ ಮತ್ತು ಅವನ ಐನೂರು ಶಿಷ್ಯರನ್ನೂ ತನ್ನ ಸ್ಥಳಕ್ಕೆ ತಂಗಲು ಮತ್ತು ಆತಿಥ್ಯ ಪಡೆಯಲು ಆಮಂತ್ರಿಸಿದನು. ಅದನ್ನು ಮನ್ನಿಸಿ ಬಂದ ಬುದ್ಧನನ್ನು ಕಡೆಗಣಿಸಿ ತಾನು ತನ್ನ ಪಾಡಿಗೆ ಲೋಲುಪತೆಯಲ್ಲಿ ಮುಳುಗಿದ್ದನು. ತೊಂಭತ್ತು ದಿನಗಳ ಕಾಲ ಕುದುರೆಗೆ ಹಾಕುವ ತವುಡನ್ನೇ ತಿಂದು ಬುದ್ಧ ಮತ್ತು ಅವನ ಶಿಷ್ಯರು ಇರಬೇಕಾಗಿತ್ತು.
4. ಕೋಸಲದ ರಾಜ ವಿರೂಧಕ ಬುದ್ಧನು ಸೇರಿದ್ದಂತಹ ಶಾಕ್ಯ ಬುಡಕಟ್ಟಿನವರನ್ನು ಕೊಂದು ಬಹುದೊಡ್ಡ ಹತ್ಯಾಕಾಂಡ ಮಾಡಿದ.
5. ಬ್ರಾಹ್ಮಣ ಪಟ್ಟಣದೊಳಗೆ ಬುದ್ಧನು ಪ್ರವೇಶಿಸಿದಾಗ ರಾಜನು ತನ್ನ ಜನರಿಗೆ ಬುದ್ಧನಿಗೆ ಭಿಕ್ಷೆಯನ್ನು ನೀಡಬಾರದೆಂದು ಮತ್ತು ಅವನ ಮಾತುಗಳನ್ನು ಕೇಳಬಾರದೆಂದು ರಾಜಾಜ್ಞೆ ವಿಧಿಸಿದ್ದ.
6. ಓರ್ವ ಬ್ರಾಹ್ಮಣ ಹೆಂಗಸು, ಚಿಂಚಾ ಎಂಬಾಕೆಯು ತನ್ನ ಹೊಟ್ಟೆಗೆ ಬಟ್ಟೆ ಸುತ್ತುಕೊಂಡು ಬುದ್ಧನಿಂದಾಗಿ ನಾನು ಗರ್ಭಿಣಿಯಾದೆ ಎಂದು ಪ್ರಚಾರ ಮಾಡಿದ್ದಳು.
7. ದೇವದತ್ತ ಬಂಡೆಗಲ್ಲೊಂದನ್ನು ಬುದ್ಧನ ಮೇಲೆ ಶಿಖರದ ಮೇಲಿಂದ ತಳ್ಳಿ ಕೊಲೆ ಮಾಡಲು ಯತ್ನಿಸಿದ್ದನು. ಅದು ಗುರಿ ತಪ್ಪಿ ಬುದ್ಧನ ಕಾಲ್ಬೆರಳಿಗೆ ಘಾಸಿಯಾಯ್ತು.
8. ಒಮ್ಮೆ ಭೀಕರವಾದ ಚಳಿಗಾಲದಲ್ಲಿ ಸ್ಥಿರವಾದ ನೆಲೆಯಿದ್ದಿರದಿದ್ದ ಕಾರಣದಿಂದ ಬುದ್ಧ ಮತ್ತು ಅವನ ಶಿಷ್ಯರು ಸಂಕಷ್ಟಕ್ಕೆ ಒಳಗಾಗಿದ್ದರು.
9. ರಾಜ ಅಜಾತಶತ್ರು ಬುದ್ಧ ಅವನ ಶಿಷ್ಯರ ಮೇಲೆ ಅಮಲೇರಿದ್ದ ಆನೆಯನ್ನು ಬಿಟ್ಟು, ಅದರ ತುಳಿತದಿಂದ ಅವರು ಸಾಯಬೇಕೆಂಬ ಸಂಚು ಹೂಡಿದ್ದ.

ಇವುಗಳನ್ನು ಬುದ್ಧನು ಎದುರಿಸಿದ ಒಂಭತ್ತು ಸಂಕಷ್ಟಗಳು ಎಂದು ವಾಡಿಕೆಯಲ್ಲಿ ಹೇಳುತ್ತಾರೆ.

ಬುದ್ಧನ ಧಮ್ಮಪದದ ದುರ್ಗತಿ ವರ್ಗ (ನಿರಯವಗ್ಗೋ)ದ ಪ್ರಾರಂಭಿಕ ಸೂತ್ರ ಹೀಗೆ ಹೇಳುತ್ತದೆ.


"ಸುಳ್ಳು ಹೇಳುವವನು ದುಃಖದ ಹುಟ್ಟಿನ ದುರ್ಗತಿಗಳಲ್ಲಿ ಹುಟ್ಟುವನು. ಹಾಗೆಯೇ, ಪಾಪ ಮಾಡಿದ್ದನ್ನು ಮಾಡಿಲ್ಲವೆಂದು ಹೇಳುವವನೂ ಕೂಡ. ಇವರಿಬ್ಬರೂ ದುರ್ಗತಿಗಳಲ್ಲಿ ನರಳುತ್ತಾ ಮುಂದಿನ ಇರುವಿಕೆಗೆ ಹೋಗುತ್ತಾರೆ."


ಸುಂದರಿಯ ಪ್ರಕರಣದಲ್ಲಿ ಬುದ್ಧನು ಮತ್ತು ಅವನ ಸಂಘದ ಇತರ ಬಿಕ್ಕುಗಳು ನಿಜಕ್ಕೂ ಸಂಕಷ್ಟವನ್ನು ಎದುರಿಸಿದರು. ಚಾರಿತ್ರ್ಯವಧೆ ಮಾತ್ರವಲ್ಲದೇ ಅವರಿಗೆ ಭಿಕ್ಷೆ ದೊರಕುವುದು ಕೂಡ ಕಷ್ಟವಾಯಿತು. ಭಿಕ್ಷೆಗೆ ಹೋದಾಗ ಬಾಯಿಗೆ ಬಂದಂತೆ ಮಾತಾಡಿ ಬುದ್ಧನ ಶಿಷ್ಯರನ್ನು ಅಪಮಾನಿಸುತ್ತಿದ್ದರು.


ನಿರಯವಗ್ಗೋ, ಈ ವರ್ಗದಲ್ಲಿ ಅನೇಕ ಸೂತ್ರಗಳು ಬುದ್ಧನ ಮೊದಲನೆಯ ಸಂಕಷ್ಟವಾದ ಸುಂದರಿ ಪ್ರಕರಣವನ್ನು ಧ್ವನಿಸುತ್ತದೆ.

ಆದರೆ, 'ಹೇಗೆ ಗಡಿಯಲ್ಲಿರುವ ನಾಡನ್ನು ಒಳಗಿನಿಂದ ಮತ್ತು ಹೊರಗಿನಿಂದ ಎಚ್ಚರದಿಂದ ರಕ್ಷಿಸುವರೋ ಹಾಗೆ ನಿನ್ನನ್ನು ನೀನು ಕಾಯ್ದುಕೋ' ಎಂದು ಎಚ್ಚರಿಸುವ ಬುದ್ಧ 'ನಾಚಿಕೆಪಡಬೇಕಾಗಿಲ್ಲದುದರ ಬಗೆಗೆ ನಾಚಿಕೆ ಪಟ್ಟು, ನಾಚಿಕೆ ಪಡಬೇಕಾದುದರ ಬಗೆಗೆ ನಾಚಿಕೆ ಪಡದ, ಭಯಕ್ಕೆ ಎಡೆಯಿಲ್ಲದ ಕಡೆ ಭಯಪಡುವ, ಭಯಪಡಬೇಕಾದುದರ ಬಗ್ಗೆ ಭಯಪಡದ, ಎಲ್ಲಿ ಕೆಡುಕಿಲ್ಲವೋ ಅಲ್ಲಿ ಕೆಡುಕಿದೆ ಎಂದು ಭಾವಿಸುವ ಮತ್ತು ಕೆಡುಕಿರುವ ಕಡೆ ಕೆಡುಕನ್ನು ಕಾಣದಿರುವ ಜನ ಹುಟ್ಟಿನ ದುರ್ಗತಿಗಳಿಗೆ ಹೋಗುವರು' ಎಂದು ಹೇಳುವುದಲ್ಲದೇ, 'ಕೆಟ್ಟದ್ದನ್ನು ಕೆಟ್ಟದೆಂದೂ, ಕೆಟ್ಟದ್ದಲ್ಲದ್ದನ್ನು ಕೆಟ್ಟದ್ದಲ್ಲವೆಂದೂ ಅರಿಯುವುದು ಸಮ್ಯಕ್ ದೃಷ್ಟಿ' ಎಂದು ಬುದ್ಧ ಹೇಳುತ್ತಾನೆ.

ಇದೇ ಸುಂದರಿಯ ಪ್ರಕರಣದಲ್ಲಿ ಬ್ರಾಹ್ಮಣರ ವರ್ಗ ಮಾಡುವ ಕುತಂತ್ರದಲ್ಲಿ ಅನೇಕ ವಿಷಯಗಳು ಅನಾವರಣಗೊಳ್ಳುತ್ತವೆ. ಅಲ್ಲಿ ಅಸೂಯೆ, ದಂಭಿಕೆ, ಸುಳ್ಳು ಇತ್ಯಾದಿಗಳೆಲ್ಲಾ ಸೇರಿ ಬುದ್ಧನನ್ನು ಕೆಡವಲು ದೊಡ್ಡ ಯೋಜನೆ ರೂಪುಗೊಳ್ಳುತ್ತದೆ. ಅದು ಹೇಗೆ ಮತ್ತು ಏಕೆಂದು ಮುಂದೆ ನೋಡೋಣ. ■







ಯೋಗವೂ ದೇವರ ಹರಕೆಯಾಗಿ ರೂಪಾಂತರಗೊಂಡರೆ...

ದಿಲ್ಲಿಯಲ್ಲಿ ನಡೆಯುವ ವಿಶ್ವ ಯೋಗ ದಿನದಂದು ಮುಖ್ಯ ಅತಿಥಿಗಳಾಗಿ ತಮ್ಮನ್ನು ಆಹ್ವಾನಿಸಬಹುದೆಂಬ ಆಸೆಯಿಂದ ಕರಾವಳಿಯ 83 ವರ್ಷದ ಪ್ರಚಾರಪ್ರಿಯ ಶ್ರೀಗಳೊಬ್ಬರು ಹಲವು ಕನ್ನಡ ಮತ್ತು ಇಂಗ್ಲಿಷ್ ದಿನಪತ್ರಿಕೆಗಳಲ್ಲಿ ತಮ್ಮ ಯೋಗಾಸನಗಳ ವಿವಿಧ ಭಂಗಿಗಳ ಫೋಟೋ ಹಾಕಿಸಿ ಕೇಂದ್ರದ ನೇತಾರರ ಗಮನ ಸೆಳೆಯಲು ಪ್ರಯತ್ನಿಸಿದ್ದರು. ಯೋಗದಿಂದ ಗಟ್ಟಿಯಾದ ಶ್ರೀಗಳ



ಅಂಗಸೌಷ್ಠವ ನೋಡಿ ಎಲ್ಲರಿಗೂ ಬಹಳ ಖುಷಿಯಾಗಿತ್ತು. ಆದರೆ ದಿಲ್ಲಿಯ ನೇತಾರರು ಇದನ್ನು ಗಮನಿಸಲೇ ಇಲ್ಲ. ಪಾಪ ಶ್ರೀಗಳು ಬಹಳ ಕಷ್ಟಪಟ್ಟು ಯೋಗದ ವಿವಿಧ ಆಸನ ಹಾಕಿ ಫೋಟೋ ತೆಗೆಸಿದ್ದು ವ್ಯರ್ಥವಾಗಿದ್ದು ನಮಗೆ ತುಂಬಾ ಬೇಜಾರಾಯಿತು. ಜೈನನಾದ ಅಮಿತ್ ಶಹಾ ತನ್ನದೇ ಜಾತಿಗೆ ಮನ್ನಣೆ ಕೊಟ್ಟು, ಒಬ್ಬ ಜೈನರನ್ನೇ ವಿಶ್ವಯೋಗ ದಿನಕ್ಕೆ ಮುಖ್ಯ ಅತಿಥಿಯಾಗಿ ಆಹ್ವಾನಿಸಲು ಮೋದಿಗೆ ಸಲಹೆ ಕೊಟ್ಟಿದ್ದರಂತೆ. ಇದರಿಂದ ಶ್ರೀಗಳು ಧೃತಿಗೆಡಬಾರದು. ಅವರಿಗೆ ಯೋಗ ನಿಜವಾಗಿ ಗೊತ್ತಿದ್ದರೆ ಇನ್ನೊಂದು ಒಳ್ಳೆಯ ದಿನದಂದು ತಮ್ಮೂರಿನಲ್ಲಿ ಅವರೇ ಒಂದು ಸಾರ್ವಜನಿಕ ಯೋಗ ಪ್ರದರ್ಶನ ಕಾರ್ಯಕ್ರಮ ಆಯೋಜಿಸಿ ಆ ಸಭೆಯಲ್ಲಿ ಅವರು ಎಪ್ಪತ್ತು ವರ್ಷಗಳ ತಮ್ಮ ಯೋಗ ಸಿದ್ಧಿ ಹಾಗೂ ಈಜಿಪ್ಟ್ ಮಮ್ಮಿಯಂತಹ ಪ್ರಚಂಡ ಅಂಗಸೌಷ್ಠವ ಪ್ರದರ್ಶಿಸಿ ಜನರ ಮನ ಗೆಲ್ಲಬಹುದು. ಹಿಂದೂತ್ವದ ಪ್ರಯೋಗಶಾಲೆಯಾದ ನಮ್ಮ ಕರಾವಳಿಯ ಶ್ರೀಮಂತ ದೇವಸ್ಥಾನಗಳ ಗುಂಡುಗುಂಡಾಗಿರುವ ಅರ್ಚಕರೂ ವಾರಕ್ಕೊಂದು ದಿನ ಅರ್ಧರ್ಧ ಗಂಟೆ ತಮ್ಮ ತಮ್ಮ ದೇವಳಗಳಲ್ಲಿ ಯೋಗಾಸನ ಪ್ರದರ್ಶಿಸಿ ದೇವಸ್ಥಾನಕ್ಕೆ ಬರುವ ಭಕ್ತರಿಗೆಲ್ಲ ಯೋಗದ ಬಗ್ಗೆ ಆಸಕ್ತಿ ಹುಟ್ಟಿಸಿದರೆ ಯೋಗ ವೇಗವಾಗಿ ಹರಡಿ ಜನರು ದೇವರಿಗೆ ಉರುಳು ಸೇವೆ ಹಾಗೂ ಮಡೆಸ್ನಾನದ ಹರಕೆ ಹೊತ್ತಂತೆ ಮುಂದೊಂದು ದಿನ ದೇವರ ಪ್ರೀತ್ಯಾರ್ಥ ದೇವಳದಲ್ಲಿ ಯೋಗಾಸನ ಹಾಕುವ ಹರಕೆ ಹೊತ್ತರೂ ಹೊರಬಹುದು ಅಲ್ಲವೇ!


ಹಿಂದೆಲ್ಲ ಕರಾವಳಿಯಲ್ಲಿ ಹಳ್ಳಿಗರ ಮನೋರಂಜನೆಗೆ ನೂರಾರು ಪೌರಾಣಿಕ ಕಥೆ ಆಧಾರಿತ ಯಕ್ಷಗಾನದ ವಿವಿಧ ಪ್ರಸಂಗಗಳನ್ನು ಆಡಲಾಗುತ್ತಿತ್ತು. ಆದರೆ ಅದ್ಯೇಗೋ ಯಾರೋ ಒಬ್ಬರು ಒಮ್ಮೆ ಈ ಯಕ್ಷಗಾನವನ್ನು ದುರ್ಗಾ ದೇವಿಗೆ ಹರಕೆ ರೂಪದಲ್ಲಿ ಆಡಿಸಿದರಂತೆ. ಆ ನಂತರ ದುರ್ಗಾದೇವಿಗೆ ಹರಕೆಯ ಯಕ್ಷಗಾನ ಆಡಿಸುವ ಹುಚ್ಚು ಕರಾವಳಿಯ ಜನರಿಗೆ ಅಮರಿಕೊಂಡು ಕೇವಲ 'ದೇವಿ ಮಹಾತ್ಮೆ' ಎಂಬ ಒಂದೇ ಒಂದು ಕಥೆಯ ಹೊರತಾಗಿ ಬೇರೆಲ್ಲಾ ಕಥೆಗಳು ಗೋರಿ ಸೇರಿದವು. ಇದೇ ರೀತಿ ಕರಾವಳಿಯಲ್ಲಿ ಯೋಗವೂ ದೇವರ ಹರಕೆಯಾಗಿ ರೂಪಾಂತರಗೊಂಡರೆ ಆಶ್ಚರ್ಯಪಡಬೇಕಿಲ್ಲ. ದೇವರು- ಧರ್ಮ-ದೇವಸ್ಥಾನಗಳನ್ನು ವ್ಯಾಪಾರಿ ಸರಕನ್ನಾಗಿಸುವುದರಲ್ಲಿ ನಮ್ಮ ಕರಾವಳಿಯ ಜನರನ್ನು ಯಾರೂ ಬೀಟ್ ಮಾಡಲಾರರು.

- ಅಭಿಷೇಕ್ ಪಡಿವಾಳ್ ಜೈನ್, ಸುಳ್ಯ

ಯೋಗದ ಬಗೆಗಿನ ಗೌರಿ ಅವರ ಸಂಪಾದಕೀಯ ಮತ್ತು ಡಾ.ಎಚ್.ವಿ.ವಾಸು ಅವರ ಲೇಖನ ಓದಿದ ಮೇಲೆ ಮೋದಿಯ ನೌಟಂಕಿ ಸರಕಾರವು ಯೋಗಕ್ಕೆ ಅಗತ್ಯಕ್ಕಿಂತ ಹೆಚ್ಚು ಪ್ರಾಮುಖ್ಯತೆ ಕೊಡುತ್ತಿದೆ ಎಂಬುದು ಅರ್ಥವಾಗುತ್ತದೆ. ಸಮಾಜ ಕಲ್ಯಾಣ ಸಚಿವ ಆಂಜನೇಯ ಇವರು ಸೋಮಾರಿಗಳು ಮತ್ತು ಐಷಾರಾಮಿ ಜೀವನ ನಡೆಸುವವರಿಗೆ ಯೋಗದ ಅಗತ್ಯವಿದೆ, ಶ್ರಮಜೀವಿಗಳಾದ ಕೃಷಿಕರಿಗೆ ಕೂಲಿ ಕಾರ್ಮಿಕರಿಗೆ ಯೋಗದ ಅಗತ್ಯವಿಲ್ಲ ಎಂದು ಹೇಳಿದ್ದರಲ್ಲಿ ತಪ್ಪೇನೂ ಇಲ್ಲ. ಇಡೀ ದಿನ ಒಂದೇ ಕಡೆ ಕುಳಿತು ಕೆಲಸ ಮಾಡುವ ಮತ್ತು ಜಂಕ್‌ಫುಡ್ ತಿನ್ನುವ ಐಟಿ-ಬಿಟಿ ಅಥವಾ ಸರಕಾರಿ ನೌಕರರಿಗೆ ಹಾಗೂ ವ್ಯಾಪಾರಿಗಳಿಗೆ ಯೋಗ ಬಹಳ ಅಗತ್ಯ ಎಂದು ಸಚಿವರು ಹೇಳಿದ್ದು ಸರಿ. ತಿಂಗಳುಗಟ್ಟಲೇ ಒಂದೇ ಕಡೆ ಕುಳಿತು ಬರೆಯುವ ಸಾಹಿತಿಗಳಿಗೆ ಹಾಗೂ ಏನೂ ಕೆಲಸ ಮಾಡದೇ ಉಂಡು ಮಲಗುವ ಸ್ವಾಮೀಜಿಗಳಿಗೆ ಯೋಗ ತುಂಬಾ ಅಗತ್ಯ ನಿಜ. ಆದರೆ ರೈತರು ಮತ್ತು ಶ್ರಮಜೀವಿಗಳು ಮೈ ಬಗ್ಗಿಸಿ ಕೆಲಸ ಮಾಡುವಾಗ ಅವರ ದೇಹದ ಶಕ್ತಿ ಬಿಂದುಗಳಾದ ಚಕ್ರಗಳಿಗೆ ಒತ್ತಡ ಬಿದ್ದು ಅವುಗಳಲ್ಲಿಯ ಎನರ್ಜಿ ಫೀಲ್ಡ್ ತಾನಾಗಿಯೇ ಊರ್ಜಿತಗೊಂಡು ಆರೋಗ್ಯ ಕಾಪಾಡುತ್ತದೆ.


ಇನ್ನು ಸತತ ಯೋಗ ಮಾಡುವುದರಿಂದ ಕುಂಡಲಿನಿ ಶಕ್ತಿ ಜಾಗೃತವಾಗುತ್ತದೆ ಮೂರನೆಯ ಕಣ್ಣು ತೆರೆಯುತ್ತದೆ ಅತೀಂದ್ರಿಯ ಶಕ್ತಿಗಳು ಮನುಷ್ಯನಿಗೆ ಒಲಿಯುತ್ತವೆ ಎನ್ನುವುದು ಕೇವಲ ಯೋಗ ವಿದ್ಯಾರ್ಥಿಗಳಲ್ಲಿ ಅದರ ಅಲೌಕಿಕತೆ ಬಗ್ಗೆ ಆಸಕ್ತಿ ಹುಟ್ಟಿಸುವ ಮಾರ್ಕೆಟಿಂಗ್ ತಂತ್ರ ಅಷ್ಟೇ. ಅಲೌಕಿಕ-ಅತೀಂದ್ರಿಯ ಶಕ್ತಿಗಳ ವಿಷಯ ಬಂದಾಗ ಭಾರತೀಯರು ಸುಲಭವಾಗಿ ಗುಂಡಿಗೆ ಬೀಳುತ್ತಾರೆ ಎಂಬುದು ಇಡೀ ಜಗತ್ತಿಗೆ ಗೊತ್ತಿರುವ ವಿಷಯ. ಜಪಾನಿನ ರೇಖಿ ಮತ್ತು ಪ್ರಾಣಿಕ್ ಹೀಲಿಂಗ್ ಎಂಬ ಭ್ರಾಮಕ ಚಿಕಿತ್ಸಾ ವಿಧಾನಗಳು ನಮ್ಮದೇ ಯೋಗದ ಕೆಟ್ಟ ಬೈಪ್ರೊಡಕ್ಟುಗಳು. ಈಗ ಇವು ಭಾರತದಲ್ಲೂ ನೆಲೆ ಕಂಡುಕೊಂಡಿದ್ದು ವಿದ್ಯಾವಂತರ ಭ್ರಮೆಯನ್ನೇ ಬಂಡವಾಳ ಮಾಡಿಕೊಂಡು ಮೋಸದಿಂದ ಹಣ ಗಳಿಸುವ ಉಪಾಯಗಳಷ್ಟೇ ಎಂದು ಈ ರೇಖಿ ಮತ್ತು ಪ್ರಾಣಿಕ್ ಹೀಲಿಂಗ್ ಕೋರ್ಸುಗಳನ್ನು ನಾನೇ ಕಲಿತು ಹಣ ಕಳೆದುಕೊಂಡ ಮೇಲೆ ನನಗೆ ಮನವರಿಕೆಯಾಗಿದೆ.

- ವೀರಪ್ಪ ಡಿ.ಎನ್, ಮಡಿಕೇರಿ



ಭಗವದ್ಗೀತೆ ಹೇಳಿದ್ದು ಕೇಳಿದ್ದು ಮತ್ತು ಬೆಳೆಸಿದ್ದು?

ಭಾನುವಾರ ಮೈಸೂರಿನಲ್ಲಿ ಶ್ರೀಕೃಷ್ಣನ ಪಾರ್ಟ್ ಟೈಮ್ ಅವತಾರವಾದ ಪೇಜಾವರರು ಕಲಿಯುಗದ ಭಗವಾನರೊಬ್ಬರಿಗೆ ಮರು ಗೀತೋಪದೇಶಕ್ಕೆ ಹಾಕಿಕೊಂಡಿದ್ದ ಪ್ಲಾನು ಅವರು ಆಶಿಸಿದಂತೆಯೇ ಪೊಲೀಸ್ ಆಯುಕ್ತರ ತಡೆಯಿಂದಾಗಿ ಫ್ಲಾಪ್ ಆಗಿಹೋಗಿದೆ. ಈ ಭಗವದ್ಗೀ... ಯನ್ನು ಭಗವಾನ್ ಶ್ರೀಕೃಷ್ಣ ತನ್ನ ಸ್ವಂತ ಬಾಯಿಯಿಂದಲೆ... ಅರ್ಜುನನಿಗೆ ಸಿಕ್ಕಾಪಟ್ಟೆ ಪುರಸೊತ್ತಿನಲ್ಲಿರುವವನಂ... (ಸಾಂದರ್ಭಿಕವಾಗಿ ಮಾತನಾಡದೇ ಇದ್ದುಬಿದ್ದ ವಿಷಯಗಳನ್ನೆ... ಸೇರಿಸಿ ಮಾತನ್ನಾಡುವುದು ಇಂತಹ ಹೊತ್ತಿನಲ್ಲೆ... ಲೋಕಾಭಿರಾಮವಾಗಿ ಮಾತಾಡುವಂತೆ ಅರ್ಜುನನಿ... ಗೌಜು ಗದ್ದಲಗಳ ಯುದ್ಧಭೂಮಿಯಲ್ಲಿ ಹೇಳಿದ...



ಅನ್ನಭಾಗ್ಯದ ಫಲಾನುಭವಿಗಳು ಸೋಮಾರಿಗಳಲ್ಲ

ಕಳೆದ ಭಾನುವಾರ ನನ್ನೂರಿಗೆ ಹೋಗಿದ್ದೆ, ನನ್ನ ತಾಯಿಯ ಹೆಸರಿನಲ್ಲಿರುವ ಪಡಿತರ ಕಾರ್ಡನ್ನು ಪರಿಶೀಲಿಸಿದೆ. ನನ್ನ ತಾಯಿ, ಅಣ್ಣ, ಅತ್ತಿಗೆ ಸೇರಿದಂತೆ ಮೂರು ಜನ ಸದಸ್ಯರಿರುವ ಕುಟುಂಬಕ್ಕೆ ಅನ್ನಭಾಗ್ಯ ಯೋಜನೆಯಡಿ 12 ಕೆ.ಜಿ ಅಕ್ಕಿ, ಮೂರು ಕೆ.ಜಿ. ಗೋಧಿ, ಒಂದು ಕೆ.ಜಿ. ಸಕ್ಕರೆ, ಒಂದು ತಾಳೆಎಣ್ಣೆ ಪಡೆದಿರುತ್ತಾರೆ. ಒಂದು ತಿಂಗಳಿಗೆ ಒಂದು ಕುಟುಂಬಕ್ಕೆ ಇವಿಷ್ಟೆ ಸಾಕೆ? ಇತರ ಅವಶ್ಯಕತೆಗಳಿಗೆ ದುಡಿಯುವುದು ಬೇಡವೆ? ಪ್ರತಿವರ್ಷವು ಮಳೆಯಾಶ್ರಿತ ವ್ಯವಸಾಯದಲ್ಲಿ ರಾಗಿ, ಶೇಂಗಾ, ದ್ವಿದಳ ಧಾನ್ಯಗಳನ್ನು ಬೆಳೆಯುತ್ತಿದ್ದಾರೆ. ಉಪ ಕಸುಬಾಗಿ ರೇಷ್ಮೆ-ಸಾಗಾಣಿಕೆ, ಹೈನುಗಾರಿಕೆ ಇದೆ. ಅನ್ನಭಾಗ್ಯದ ಫಲಾನುಭವಿಗಳು ಸೋಮಾರಿಗಳಲ್ಲ, ಶ್ರಮಜೀವಿಗಳು ಎಂಬುದಕ್ಕೆ ನನ್ನ ಕುಟುಂಬವೇ ಸಾಕ್ಷಿ.

ಸರ್ಕಾರದಿಂದ ಎಲ್ಲ ಸವಲತ್ತುಗಳನ್ನು, ವಿನಾಯಿತಿಗಳನ್ನು ಪಡೆಯುವ ಮೋಹನ್‌ದಾಸ್ ಪೈರಂಥ ಉದ್ಯಮಿಗಳು ಆರಂಭದಲ್ಲೇ ಅನ್ನಭಾಗ್ಯ ಯೋಜನೆಯನ್ನು ಟೀಕಿಸಿದಾಗ, ಮೈಸೂರಿನಲ್ಲಿ ಸಚಿವ ಶ್ರೀನಿವಾಸ ಪ್ರಸಾದರು ತುಂಬಾ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದರು. ಕೇಂದ್ರದಿಂದ ಗೌರವಧನ ಪಡೆಯುವ, ಮೈಸೂರು ವಿ.ವಿ.ಯಲ್ಲಿ ಮಗ ಮಾಡಿದ ಹಗರಣಗಳನ್ನು ಮುಚ್ಚಿ ಹಾಕಲು ರಾಜಭವನದ ಬಾಗಿಲು ತಟ್ಟಿದ್ದವರಿಗೆ ಅನ್ನಭಾಗ್ಯದ ಫಲಾನುಭವಿಗಳು ಸೋಮಾರಿಗಳಲ್ಲ ಎಂಬುದು ಅರ್ಥವಾಗಲಿ.

- ಕೆ.ಎಂ. ಓದುಸಿದ್ದೇಗೌಡ, ಕೆಬ್ಬೇಹಳ್ಳಿ

'ಎಸ್.ಎಲ್. ಭೈರಪ್ಪ ಕಾದಂಬರಿ ಪ್ರಿಯ ಕೂಟ' ಎಂಬ ಭಟ್ಟಂಗಿಗಳ ಗುಂಪು ಫೇಸ್‌ಬುಕ್ ಎಂಬ ಸಾಮಾಜಿಕ ಜಾಲದಲ್ಲಿ ಮಾಡುತ್ತಿರುವ ಕಲರವವನ್ನು ನೀವು ನೋಡಿದ್ದೀರಾ?

ಭೈರಪ್ಪನವರಿಗೆ ತಮಗಿನ್ನೂ 'ಜ್ಞಾನಪೀಠ' ಬಾರದಿರುವ ಬಗ್ಗೆ ಇರುವ ಕೊರಗು, ಅದಕ್ಕೆ ಕಾರಣ ತಮಗಾಗದ 'ನವ್ಯರ' ಹುನ್ನಾರ ಎಂಬ ಹತಾಶೆಯ ಕೂಗು ಹಲವಾರು ವರ್ಷಗಳಿಂದ ಕೇಳುತ್ತಲೇ ಇದೆ. ಈಗ ಬಿಜೆಪಿ ಸರ್ಕಾರ ಬಂದ ಮೇಲಾದರೂ ತಮಗೆ 'ಜ್ಞಾನಪೀಠ' ದೊರೆಯಬಹುದೆಂಬ ಆಶೆ. ತಾನು ಹಿಂದೂತ್ವವಾದಿಯಾಗಿರುವುದರಿಂದ ಈ ಸಲ ತನಗೆ ಈ ಪ್ರಶಸ್ತಿ ಸಿಕ್ಕಲೇಬೇಕೆಂಬ ಹಠ ಅವರನ್ನು ಯಾವ ಮಟ್ಟಕ್ಕೆ ಇಳಿಸಿದೆ ಎನ್ನುವುದನ್ನು ನೋಡಬೇಕಾದರೆ ಫೇಸ್‌ಬುಕಿನ ಈ "SLBKPK" ನೋಡಬೇಕು.

ತಮ್ಮ ಸೊಸೆ ಅನುರಾಧ ಉದಯ ಶಂಕರಳ ಮೂಲಕ ಈ 'ಕೂಟ'ವನ್ನು ಪ್ರಾರಂಭಿಸಿರುವ ಭೈರಪ್ಪ ಇದನ್ನು ತನ್ನನ್ನು ತಾನೇ ಹೊಗಳಿಕೊಳ್ಳಲು, ಮುಖ್ಯವಾಗಿ ನವ್ಯರನ್ನು, ದಲಿತರನ್ನು ತೆಗಳಿ, ಬ್ರಾಹ್ಮಣಿಕೆ, ಸನಾತನ ಮೌಲ್ಯಗಳನ್ನು ಎತ್ತಿ ಹಿಡಿಯಲು ಬಳಸುತ್ತಿದ್ದಾರೆ. ತನ್ನನ್ನು ಹೊಗಳುವ ಮುಖಸ್ತುತಿ ಮಾಡುವ ಭಟ್ಟಂಗಿಗಳ ಬರಹಗಳನ್ನು 'ವಿಮರ್ಶೆ'ಯ ಹೆಸರಿನಲ್ಲಿ ತಾವೇ ಬರೆಸಿ ಪ್ರಕಟಪಡಿಸಿ, ಅದಕ್ಕೆ ಸ್ಪರ್ಧೆಯನ್ನು ಏರ್ಪಡಿಸಿ, ಬಹುಮಾನ ನೀಡಲು ಹೊರಟಿದ್ದಾರೆ. ಇಲ್ಲಿ ಬರೆಯುತ್ತಿರುವವರೆಲ್ಲಾ ಅವರ ಸೊಸೆ ಹಾಗೂ ಅವಳ ಗೆಳೆಯ/ಗೆಳತಿಯರೇ ಆಗಿರುವುದು ಗಮನಾರ್ಹ. ಬೇರೆ ಯಾರಾದರೂ ಒಂದಿಬ್ಬರು ಅಪಸ್ವರ ಎತ್ತಿದರೆ, ತಕ್ಷಣವೇ ಅವರನ್ನು ಗುಂಪಿನಿಂದ ಹೊರಹಾಕಿ ಬಾಯಿ ಮುಚ್ಚಿಸಲಾಗುತ್ತದೆ. "ಪೋಸ್ಟ್"ಗಳನ್ನು ಕಿತ್ತು ಹಾಕಲಾಗುತ್ತದೆ.

ಅಡಿಗ/ಅನಂತಮೂರ್ತಿ ಬದುಕಿದ್ದಷ್ಟು ದಿನವೂ ಅವರನ್ನು ದ್ವೇಷಿಸಿ, ಟೀಕಿಸುತ್ತಿದ್ದ ಭೈರಪ್ಪ ಅವರ ಮರಣಾನಂತರವಾದರೂ ಸುಮ್ಮನಾಗುತ್ತಾರೇನೋ ಎಂದರೆ, ಈಗ 'ಜ್ಞಾನಪೀಠ'ದ ಹಟ ಅವರ ನಿದ್ದೆಗೆಡಿಸಿದೆ. 'ವಂಶವೃಕ್ಷ' ಕಾದಂಬರಿಗೆ 50 ವರ್ಷ ತುಂಬಿತೆಂಬ 'ಸಂಭ್ರಮಾಚರಣೆ'ಯ ನೆಪದಲ್ಲಿ ಸನಾತನ ಮೌಲ್ಯಗಳನ್ನು ಮತ್ತು ಹಿಂದೂತ್ವವಾದವನ್ನು ಪ್ರತಿಪಾದಿಸಿ ಬಿಜೆಪಿಯ ಗಮನ ಸೆಳೆಯಲು ಪ್ರಯತ್ನ ನಡೆಸಿದ್ದಾರೆ. ಇವರಿಗೆ ಶತಪಥಾನಿ ಗಣೇಶನೆಂಬ ವಿಪ್ರೋತ್ತಮನ ಸಾಥ್ ಬೇರೆ.

ಸರ್ಕಾರದ ಸಂಬಳ ಸವಲತ್ತುಗಳನ್ನು ತಿನ್ನುತ್ತಲೇ ಕಚೇರಿಯಲ್ಲೇ ಕುಳಿತು 'ಅಧ್ಯಯನ' ಮಾಡಿ, ಕಚೇರಿಯಲ್ಲೇ 8-10 ಕಾದಂಬರಿಗಳನ್ನು ಬರೆದು ಪ್ರಕಟಪಡಿಸಿ, ಕಿಂಚಿತ್ತಾದರೂ ಪಾಪಪ್ರಜ್ಞೆ ಇಲ್ಲದೆ ದುಡ್ಡು ಮಾಡಿದ ಮೇಲೂ, ಸೈಟುಗಳನ್ನು ಪಡೆದ ಮೇಲೂ ಇನ್ನೂ ತೀರದ ಇವರ 'ಮನ್ನಣೆಯಾತುರ' ನೋಡಿ ಅಯ್ಯೋ ಎನಿಸುತ್ತದೆ. ನಗಬೇಕೋ ಅಳಬೇಕೋ ತಿಳಿಯುತ್ತಿಲ್ಲ.

- ಹೆಸರು ಬೇಡ

ಗ್ಯಾಟ್ಸ್ ದಾಳಿಯಿಂದ ಉನ್ನತ ಶಿಕ್ಷಣವನ್ನು ಉಳಿಸಿಕೊಳ್ಳೋಣ

ಭಾರತದ ಕೃಷಿ ಮತ್ತು ಕೈಗಾರಿಕೆಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ರೈತ-ಕಾರ್ಮಿಕರನ್ನು ವಿನಾಶದಂಚಿಗೆ ತಳ್ಳುತ್ತಿರುವ ಮಹಾಮಾರಿ ಗ್ಯಾಟ್ಸ್ ಶಿಕ್ಷಣ ಕ್ಷೇತ್ರಕ್ಕೂ ಕಾಲಿಡುತ್ತಿರುವುದನ್ನು ಡಾ.ವಾಸು ಅವರು ತಮ್ಮ 'ಅಂಚಿನಿಂದ' ಅಂಕಣದಲ್ಲಿ (ಜೂನ್ 24, 2015ರ ಸಂಚಿಕೆ) ವಿಶ್ಲೇಷಿಸುವ ಮೂಲಕ ಎಚ್ಚರಿಕೆಯ ಕರೆಗಂಟೆಯನ್ನು ಬಾರಿಸಿದ್ದಾರೆ.

ಮೋದಿ ಸರ್ಕಾರವು ರಾಷ್ಟ್ರಮಟ್ಟದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಕೆಲವು ಮುಖ್ಯ ನೀತಿಗಳನ್ನು ಜಾರಿಗೊಳಿಸುತ್ತಿದೆ. ಮೊದಲನೆಯದಾಗಿ ಎನ್‌ಡಿಎ ಸರ್ಕಾರವು ಹೊಸ ಶಿಕ್ಷಣ ನೀತಿಯನ್ನು ತರಲು ಉದ್ದೇಶಿಸಿದ್ದು ಅದಕ್ಕೆ ಸಾರ್ವಜನಿಕರಿಂದ, ಶಿಕ್ಷಣ ತಜ್ಞರಿಂದ, ಶಿಕ್ಷಕರಿಂದ ಮೊದಲಾದವರಿಂದ ಸಲಹೆಗಳನ್ನು, ಪ್ರಸ್ತಾಪಗಳನ್ನು ಕೊಡಬೇಕೆಂದು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಆದರೆ ವೆಬ್‌ಸೈಟ್‌ಅನ್ನು ತೆರೆದು ನೋಡಿದರೆ ಅಲ್ಲಿ ಏನೂ ಇಲ್ಲ, ಅಂದರೆ ಅಕ್ಷರಶಃ ಏನೂ ಇಲ್ಲ, ಶಿಕ್ಷಣದ ವ್ಯಾಪಾರೀಕರಣ ತಡೆಗಟ್ಟಿ, ಎಲ್ಲಾ ಮಕ್ಕಳಿಗೂ ಉಚಿತ, ಸಮಾನ ಗುಣಮಟ್ಟದ, ವೈಜ್ಞಾನಿಕವಾದ, ನೆರೆಹೊರೆ ಶಾಲಾ ಆಧಾರಿತ ಸಮಾನ ಶಿಕ್ಷಣ ನೀತಿಯನ್ನು ಜಾರಿಗೊಳಿಸಿ ಎಂದು ಹಲವಾರು ಸಂಘಟನೆಗಳು, ಶಿಕ್ಷಣ ತಜ್ಞರು ದಶಕಗಳ ಕಾಲದಿಂದ ಹೋರಾಡುತ್ತಾ ಬರುತ್ತಿದ್ದರೂ ಅದನ್ನು ಪರಿಗಣಿಸದ ಸರ್ಕಾರ ಈಗ ಸಲಹೆಗಳನ್ನು ಆಹ್ವಾನಿಸಿದೆ!

ಎರಡನೆಯದಾಗಿ ಡಬ್ಲ್ಯೂಟಿಓ ಮತ್ತು ಗ್ಯಾಟ್ಸ್‌ಗಳಿಗೆ ಉನ್ನತ ಶಿಕ್ಷಣವನ್ನು ಆಫರ್ ಮಾಡುವುದು, ಅಂದರೆ ಮಾರಾಟ ಮಾಡುವುದು, ವಿದೇಶಿ ವಿಶ್ವವಿದ್ಯಾನಿಲಯಗಳಿಗೆ ಮುಕ್ತ ಸ್ವಾಗತ ನೀಡುವುದು ಅಂದರೆ ಅಮೆರಿಕಾ, ಕೆನಡಾ, ಜಪಾನ್‌ಗಳಲ್ಲಿ 3ನೇ ದರ್ಜೆಗೂ ಸೇರದ ಕಳಪೆ ಅಥವಾ ಅಲ್ಲಿ ನಿಷೇಧಕ್ಕೊಳಗಾಗಿರುವ ವಿಶ್ವವಿದ್ಯಾಲಯಗಳು ಇಲ್ಲಿ ಬಂದು ರಾಜಮರ್ಯಾದೆಯಿಂದ ವರ್ತಿಸುವುದು ಮತ್ತು ದುಬಾರಿ ಶುಲ್ಕ ವಸೂಲಿ ಮಾಡಲು ಅವಕಾಶ ನೀಡುವುದು, ಕೇಂದ್ರೀಯ ವಿಶ್ವವಿದ್ಯಾಲಯ ಕಾಯ್ದೆಯನ... ಜಾರಿಗೊಳಿಸುವುದು ಅಂದರೆ ಈಗ ಪಠ್ಯಕ್ರಮ ರಚ... ಸಂಶೋಧನೆ, ಪರೀಕ್ಷೆಗಳನ್ನು ನಡೆಸುವುದು, ಹೊ... ಚಿಂತನೆಗಳನ್ನು ರೂಪಿಸುವುದು ಇತ್ಯಾದಿ ಸ್ವಾಯತ್ತತೆಗಳ... ಪಡೆದಿರುವ ಭಾರತದ ವಿವಿಗಳು ಇನ್ನು ಮುಂದೆ ಒಂ... ಕೇಂದ್ರೀಯ ವಿ.ವಿಯ ಕೆಳಗೆ ಅದರ ನಿಯಮಗಳ ಅನುಸ... ಕೆಲಸ ಮಾಡಬೇಕು.

ಇವೆಲ್ಲವುಗಳನ್ನು ಮೋದಿ ಸರ್ಕಾರವು ದೇಶಭಕ್ತಿ... ಆಧುನಿಕತೆಯ, ಅಭಿವೃದ್ಧಿಯ ಮುಖವಾಡದಲ್ಲಿ ತರ... ಪ್ರಯತ್ನಿಸುತ್ತಿದೆ. ಆದರೂ ಈ ನೀತಿಗಳನ್ನು ಈಗ... ಜಗಜ್ಜಾಹೀರುಮಾಡಲು ತಾನು ತಯಾರಿಲ್ಲ, ಏಕೆಂ... ಇವುಗಳಿಗೆ ಬರಬಹುದಾದ ವಿರೋಧಗಳನ್ನು ಎದುರಿಸ... ಶಕ್ತವಲ್ಲದ ಸರ್ಕಾರ ಇವುಗಳನ್ನು ತೆರೆಮರೆಯಲ್ಲಿ ತಂ... ಕೊನೆಗಳಿಗೆಯಲ್ಲಿ ಸಂಸತ್ತಿನಲ್ಲಿ ಮಂಡಿಸಿ ಒಪ್ಪಿಗೆ ಪಡೆಯ... ಹವಣಿಸುತ್ತಿದೆ. ಹೇಳೋದು ವೇದಾಂತ, ತಿನ್ನೋ... ಬದನೆಕಾಯಿ ಅನ್ನುವ ಹಾಗೆ ಸರ್ಕಾರವು ಸ್ವದೇಶಿ, ದೇಶ... ಎಂದೆಲ್ಲಾ ಬೊಗಳೆ ಬಿಡುತ್ತಾ, ಪೋಸು ಕೊಡುತ್ತಾ ದೇ... ಶಿಕ್ಷಣವನ್ನು ವಿದೇಶಿ ಶಕ್ತಿಗಳಿಗೆ ಹರಾಜು ಹಾಕುತ್ತಿದೆ...

ಇಂತಹ ಅಪಾಯಕಾರಿ ಸಂದರ್ಭದಲ್ಲಿ ಮೊ... ಸರ್ಕಾರದ ಜನವಿರೋಧಿ ಶಿಕ್ಷಣನೀತಿಗಳನ್ನು ಹೊರತರ... ಕೆಲಸವನ್ನು ಪತ್ರಿಕೆ ಮತ್ತು ಡಾ.ವಾಸುರವರು ಮಾಡಿದ... ಈಗ ಇದನ್ನು ಸಮರ್ಥವಾಗಿ ಎದುರಿಸಿ ಇದರ ವಿರ... ದೊಡ್ಡ ಚಳವಳಿ ನಿರ್ಮಿಸುವ ಹೊಣೆಗಾರಿಕೆ ನಮ್ಮೆ... ಮೇಲಿದೆ. ಈಗ ಇದನ್ನು ಪರಿಣಾಮಕಾರಿಯ... ಎದುರಿಸದಿದ್ದಲ್ಲಿ ಮುಂದೆ ಇನ್ನೂ ದೊಡ್ಡ ಅಪಾ... ಬಂದೊದಗುವ ಅಪಾಯವಿರುವುದರಿಂದ ಎಚ್ಚೆತ್ತುಕೊಂ... ಬಲಿಷ್ಠ ಹೋರಾಟ ರೂಪಿಸುವುದು ಒಳಿತು.

- ಮುತ್ತುರಾಜು, ಮ...

ಅದಕ್ಕೊಂದು ರೂಪಕೊಟ್ಟು ತಮಗೆ ಬೇಕಾದಂತೆ ಶೃಂಗರಿಸಿಕೊಂಡು ಅದನ್ನು ಆರೈಕೆ ಮಾಡಿ ಗೊಬ್ಬರಹಾಕಿ ಬೆಳೆಸಿ ಸಾಕಿದ್ದು ಮಾತ್ರ ಪುರೋಹಿತಶಾಹಿಗಳು. ಇಂತಹ ಮುದ್ದಿನ ಕೂಸನ್ನು ಯಾವನೋ ಚಿವುಟಿ ಹೋದರೆ ಪೇಜಾವರರ ಮಗುವಿನಂತಹ ಮನಸ್ಸಿಗೆ ಘಾಸಿಯಾಗದೇ ಇದ್ದೀತೆ?

ಜನರನ್ನು ಮೌಢ್ಯದ ಸೆಳೆತಕ್ಕೆಳೆದು ದಾರಿತಪ್ಪಿಸುವ (ಯಾವ ಸಂಸ್ಕೃತಿಯದ್ದೇ ಆಗಿರಲಿ ಪುರಾಣಗಳು ಬರೀ ಕಥೆಗಳಾಗಿಯೇ ಚಾಲ್ತಿಯಲ್ಲಿದ್ದರೆ ಅದು ನಿರುಪಾಯಕಾರಿ ಆದರೆ ಕೆಲವರ ಸ್ವಾರ್ಥಕ್ಕಾಗಿ ಅದನ್ನು ಸಾಮಾಜಿಕ ಕಟ್ಟುಪಾಡುಗಳೊಂದಿಗೆ ತಾಳೆಹಾಕಿ ಬೆರೆಸಹೋದರೆ ಅದರ ಪರಿಣಾಮ ಅಪಾಯಕಾರಿ. ಇದಕ್ಕೆ ಜಾತೀಯತೆ, ಸ್ತ್ರೀ ಹಾಗು ವರ್ಗಸಂಬಂಧಿ ಮೌಢ್ಯಗಳ ಸಮರ್ಥಕರಿಗೆ ಆಧಾರ ಪ್ರಮಾಣವೆನಿಸುವ ಗೀತೆ ಮೊದಲಾದ ಶಾಸ್ತ್ರಗಳನ್ನಿಲ್ಲಿ ಉದಾಹರಿಸಬಹುದು.) ಗೀತೆಯ ಬಗ್ಗೆ ಭಗವಾನ್ ಮತ್ತು ಬಂಜಗೆರೆಯಂತವರಿಗೆ ನೇರವಾಗಿ ಸಂಬಂಧವಿಲ್ಲದೇ ಇರಬಹುದು. ಗೀತೆಯ ಬಗ್ಗೆ ಅವರುಗಳು ತಲೆಕೆಡಿಸಿಕೊಳ್ಳುವುದರಲ್ಲಿ ಅರ್ಥವಿಲ್ಲವೇನೋ ಹೌದು (ಇದು ಕೆಲವರ ಆರೋಪ. ಅದನ್ನು ನಂಬದಿದ್ದರೆ ಸುಮ್ಮನಿರಿ ಅದರ ಬಗ್ಗೆ ಟೀಕೆ ಯಾಕೆ? ಎನ್ನುವುದು ಇವರ ವಾದ). ಆದರೆ ಸಂಬಂಧವಿಲ್ಲದಿದ್ದರೂ ಸಂಬಂಧಿಸಿರುವುದು ಮೇಲಿನ ಮೌಢ್ಯ ಹರಡುವಿಕೆಯ ಕಾರಣಗಳಿಗಾಗಿ ಅಷ್ಟೆ ಹೊರತು ಕೇವಲ ಬಾಯಿ ಚಪಲಕ್ಕಲ್ಲ. ಇದನ್ನು ಸೋ ಕಾಲ್ಡ್ ಗೀತೋಪಾಸಕರು ಮೊದಲು ಅರ್ಥಮಾಡಿಕೊಳ್ಳಬೇಕು.

ಮೊನ್ನೆ 21ರಂದು ಯೋಗದ ಮರ್ಯಾದೆ ತೆಗೆವ ದಿನವನ್ನು ಆಚರಿಸಲಾಯ್ತು. (ಆ ದಿನ ನೆರೆಯ ಚೀನಾದಲ್ಲಿ ನಾಯಿಮಾಂಸ ತಿನ್ನುವ ದಿನವಂತೆ! ಎಂತಹ ಯೋಗಾಯೋಗ!) ಯೋಗ ಬೇರೆ ಯೋಗಾಸನ ಬೇರೆ. ಈ ಆಸನಗಳು ಯೋಗದ ಒಂದು ಸಣ್ಣ ಭಾಗವಷ್ಟೇ ವಿನಹ ಆಸನವೇ ಯೋಗವಲ್ಲ. ಪತಂಜಲಿ ಹೇಳುವ (ಜೊತೆಗೆ ಗೀತೆಯಲ್ಲೂ ಕೂಡ) "ಯೋಗ ಚಿತ್ತ ವೃತ್ತಿ ನಿರೋಧ" ಎಂಬುದು ಇದನ್ನೇ ಹೇಳುತ್ತದೆ. ಕಳೆದ ಬಾರಿ ಪ್ರವೀಣ್ ಶೆಟ್ಟರು ಹೇಳಿದಂತೆ ಯೋಗ ಹಿಂದೂಗಳ ಕೊಡುಗೆ ಎನ್ನಲು ಯಾವ ಆಧಾರವೂ ಇಲ್ಲ. ಪತಂಜಲಿಯನ್ನು ಕುರಿತಾದ ಶ್ಲೋಕದಲ್ಲಿ "ಯೋಗೇನ ಚಿತ್ತಸ್ಯ ಪದೇನ ವಾಚಾ ಮಲಂ ಶರೀರಸ್ಯ ಚ ವೈದ್ಯಕೇನ ಯೋಪಾಕರೋತ್ತಾಂ ಪ್ರವರಂ ಮುನೀನಾಂ.." ಎಂಬ ವಾಕ್ಯವಿದೆ. ಅಂದರೆ ಈ ಪತಂಜಲಿ ಯೋಗ, ಆಯುರ್ವೇದ ಮತ್ತು ಭಾಷಾ ಶಾಸ್ತ್ರಗಳಿಗೆ ಕೊಡುಗೆ ನೀಡಿದ್ದಾನೆ ಎಂದಿದೆ. ಅಂದರೆ ಈ ಯೋಗ-ಆಸನ ಶೋಧನೆಯಲ್ಲ. ಅದನ್ನು (ಆಯುರ್ವೇದ, ಭಾಷಾಶಾಸ್ತ್ರವೂ ಸೇರಿ) ಶಾಸ್ತ್ರೀಯವಾಗಿ ಸಂಗ್ರಹಿಸಿ ಕೊಟ್ಟಿದ್ದಾನಷ್ಟೆ. ಒಬ್ಬನೇ ಮೂರೂ ಕ್ಷೇತ್ರದಲ್ಲಿ ಆರಂಭಿಕ ಕೊಡುಗೆ ನೀಡಲು ಸಾಧ್ಯವೇ? ದೆಲ್ಲಿಯ ರಾಜ್‌ಪಥದಲ್ಲಿ ಯೋಗಾಸನ ಮಾಡಿ ಇದನ್ನೇ ಯೋಗವೆಂದು ಇದನ್ನು ಮಾಡಿದವರು ಸ್ವಯಂ ಯೋಗಿಗಳೆಂದು ವಿಶ್ವಾದ್ಯಂತ ಡಂಗುರ ಬಜಾಯಿಸಲಾಯ್ತು. ಈ ಡ್ರಿಲ್ ಭರ್ಜರಿ ಯೋಗವೆಂದು ಗಿನ್ನಿಸ್ ದಾಖಲೆ ಸೇರಿದ್ದು ಮೋದಿಯ ಸಾಧನೆಯೆನಿಸಿತು.

ಯೋಗವನ್ನು ವಿರೋಧಿಸುವವರು ಸಮುದ್ರಕ್ಕೆ ಹಾರಲಿ, ಪಾಕಿಸ್ತಾನಕ್ಕೆ ಹೋಗಲಿ ಎಂದ ಪ್ರಾಚಿಗಳಂತವರೂ ಯೋಗಿಗಳೆನಿಸಿದರು. ಗೀತೆಯಲ್ಲಿ ಸಮತ್ವಂ ಯೋಗ ಉಚ್ಯತೆ ಎಂದಿದೆ ಸಮತ್ವ ಕಳಕೊಂಡ ಪಾಚಿಗಟ್ಟೇದ ಪ್ರಾಚಿಯಂತವರೂ ಆವತ್ತು ಯೋಗಿಗಳೆನಿಸಿಬಿಟ್ಟರು. ಇದೇ ರೀತಿಯಲ್ಲಿ ಗೀತೆಯನ್ನು ಸಮರ್ಥಿಸಿ ಮಾತಾಡುವವರು ನಿಜಕ್ಕೂ ಅದನ್ನು ಓದಿಕೊಂಡಿರುವುದಿಲ್ಲ. ಪ್ರತಾಪ್ ಸಿಂಹನಂತಹ ಶೂದ್ರರು ಬದಲಿಸಲಾಗದ ವೈದಿಕ ಗುಲಾಮೀ ಮೆದುಳನ್ನು ಹೊಂದಿದ್ದರೆ ಸೂಲಿಬೆಲೆಯಂತವರು (ಈತನ ಮಾತಿನಲ್ಲಿನ ಕನ್ನಿಂಗ್ ಬೆರೆತ ನಯವಂತಿಕೆ ನೋಡಿದರೆ ಈತ ಅಪ್ಪಟ "ಬೆಲ್ಟ್ ವಾಲಾ"ನೆಂದೇ ತಿಳಿಯುತ್ತದೆ) ಇದಕ್ಕೆಂದೇ ನಿಯೋಜಿತಗೊಂಡಂತವರು. ಗೋ ಮಧುಸೂದನ ಮತ್ತು ಪ್ರಹ್ಲಾದಾಚಾರ್ಯ ಹರಿದಾಸ್ ಭಟ್ (ಇವರೆಲ್ಲರೂ ಸಂವಾದದ ದಿನ ಪೇಜಾವರ ಪರ ಮಾತಾಡಲು ನಿಯೋಜನೆಗೊಂಡಿದ್ದರು. ಬಿಜೆಪಿಯಲ್ಲಿ ಧನಂಜಯಕುಮಾರ್ ಇನ್ನೂ ಇದ್ದಿದ್ದರೆ ಈ ಬಾಯಿಹರುಕರ ಸಾಲಿಗೆ ಅವರೂ ಸೇರಿಕೊಳ್ಳುತ್ತಿದ್ದರು. ಹೇಗಿದ್ದರೂ ಇವರೆಲ್ಲ ವಾದಕ್ಕಿಂತ ವಿತಂಡವಾದಕ್ಕೇ ಹೆಚ್ಚು ಖ್ಯಾತರು ತಾನೆ?) ಎಲ್ಲರೊಂದಿಗೆ ಹೆಸರಿಗಷ್ಟೇ ಪೇಜಾವರರನ್ನು ಮುಂದಿಟ್ಟುಕೊಂಡು ಭಗವಾನರನ್ನು ಹಳಿಯುವ ಪ್ಲಾನ್ ಅವತ್ತು ಫ್ಲಾಪ್ ಆಗಿದ್ದುದು ಒಂದು ರೀತಿಯಲ್ಲಿ ಒಳ್ಳೆಯದೇ ಅನಿಸುತ್ತಿದೆ.

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

‘ನಿರ್ಮಾಪಕರಿಗೆ ಅನ್ಯಾಯ ಮಾಡಲ್ಲ’: ಪ್ರಜ್ವಲ್

ಸತತ ಸೋಲಿನ ಸುಳಿಯಲ್ಲಿರುವ ಪ್ರಜ್ವಲ್ ದೇವರಾಜ್, ಈಗ ‘ಅರ್ಜುನ್’ ಸಿನಿಮಾದ ಮೂಲಕ ಭರವಸೆ ಮೂಡಿಸಿದ್ದಾರೆ. ಈ ಸಿನಿಮಾದಿಂದ ಅವರಿಗೊಂದು ಬ್ರೇಕ್ ಸಿಗುವ ನಿರೀಕ್ಷೆ ಇದೆ. ಈ ಕುರಿತು ಅವರು ಮಾತಾಡಿದ್ದಾರೆ.



* ನಿಮಗೆ ಅವಕಾಶ ಇಲ್ಲ ಅನ್ನುವ ಕಾರಣಕ್ಕೆ ನಿಮ್ಮದೇ ಬ್ಯಾನರ್ ಶುರು ಮಾಡಿದ್ರಾ?

ಹಾಗೇನೂ ಇಲ್ಲವಲ್ಲ. ಕೆಲವು ಸಿನಿಮಾಗಳು ಸೋತರೂ ಬೇಡಿಕೆ ಇದೆ. ಹೀಗಾಗಿಯೇ ಸತತವಾಗಿ ಶೂಟಿಂಗ್‌ನಲ್ಲಿರುತ್ತೇನೆ. ವೀಕೆಂಡ್ ಕಳೆಯಲೂ ನನ್ನ ಹತ್ತಿರ ಸಮಯವಿಲ್ಲ. ಬ್ಯಾನರ್ ಶುರು ಮಾಡಿದ್ದು, ಸಿನಿಮಾ ಇಂಡಸ್ಟ್ರಿಗಾಗಿ ನಾವೂ ಏನಾದರೂ ಕೊಡುಗೆ ಕೊಡೋಣ ಅನ್ನುವ ಕಾರಣಕ್ಕೆ. ನಿರಂತರವಾಗಿ ಈ ಕೆಲಸ ನಡೆಯುತ್ತದೆ.

* ಹಾಗಾದರೆ, ಮತ್ತೆ ನಿಮ್ಮ ಬ್ಯಾನರ್‌ನಿಂದ ಸಿನಿಮಾ ನಿರೀಕ್ಷೆ ಮಾಡಬಹುದಾ?

ಯಾಕಾಗಬಾರದು? ಒಳ್ಳೆಯ ಕತೆಗಳು ಸಿಕ್ಕರೆ ಖಂಡಿತಾ ಸಿನಿಮಾ ನಿರ್ಮಾಣ ಮಾಡುತ್ತೇವೆ. ಸಿನಿಮಾ ಮಾಡಲೆಂದೆ ಶುರು ಮಾಡಿದ ಸಂಸ್ಥೆಯದು. ಯಾವ ಕಾರಣಕ್ಕೂ ಸಿನಿಮಾ ನಿರ್ಮಾಣ ನಿಲ್ಲಿಸಲ್ಲ.

* ನಿಮ್ಮ ತಮ್ಮ ಕೂಡ ಸಿನಿಮಾ ರಂಗಕ್ಕೆ ಬರುತ್ತಾರೆ ಎಂಬ ಸುದ್ದಿ ಇದೆಯಲ್ಲಾ?

ಹಾಗಂತ ಮನೆಯಲ್ಲೂ ಡಿಸ್‌ಕಶನ್ ನಡೆದಿದೆ. ಸದ್ಯ ಇನ್ನೂ ಯಾವುದೂ ಅಂತಿಮಗೊಂಡಿಲ್ಲ. ಅವನ ಆಸೆ ಏನಿದೆಯೋ ಅವನೇ ಹೇಳಬೇಕು. ನಮ್ಮ ನಿರ್ಮಾಣದ ಸಿನಿಮಾದಲ್ಲಿ ಅವನು ನನ್ನೊಟ್ಟಿಗೆ ಕೆಲಸ ಮಾಡಿದ್ದಾನೆ. ನಿರ್ಮಾಣದ ಅನುಭವವನ್ನು ಪಡೆದಿದ್ದಾನೆ.

* ರಮ್ಯಾ ಜತೆಗಿನ ‘ದಿಲ್ ಕಾ ರಾಜಾ’ ಏನ್ ಆಯ್ತು?

ಇನ್ನೂ ಒಂದಿಷ್ಟು ದೃಶ್ಯಗಳು ಶೂಟಿಂಗ್ ಆಗಬೇಕು. ಸಿನಿಮಾ ಯಾಕೆ ನಿಂತಿದೆ ಎಂಬ ವಿಷಯ ಎಲ್ಲರಿಗೂ ಗೊತ್ತಿದೆ. ಕಲಾವಿದರು ಮತ್ತೆ ಸಿಕ್ಕರೆ ಶೂಟಿಂಗ್ ಶುರು ಮಾಡುವುದಾಗಿ ನಿರ್ದೇಶಕರು ಹೇಳಿದ್ದಾರೆ. ನನ್ನಿಂದ ಯಾವಾಗಲೂ ಅವರಿಗೆ ಸಪೋರ್ಟ್ ಇದ್ದೇ ಇರುತ್ತದೆ.

* ‘ಸಿಕ್ಸರ್’ ನಂತರ ಮತ್ತೆ ಅಂಥದ್ದೊಂದು ಸಿನಿಮಾ ಕೊಡಲಿಲ್ಲ ಎಂಬ ಫೀಲ್ ಇದೆಯಾ?

‘ಸಿಕ್ಸರ್’ ನಂತರವೂ ನಾನು ಬೇರೆ ಬೇರೆ ಪಾತ್ರಗಳನ್ನು ಮಾಡುತ್ತಾ ಬಂದಿದ್ದೇನೆ. ನೂರಕ್ಕೆ ನೂರರಷ್ಟು ಚಿತ್ರಗಳು ಚೆನ್ನಾಗಿ ಬಂದಿವೆ ಅಂತ ಹೇಳೋಕೆ ಕಷ್ಟ. ಆದರೆ, ನಾನು ನನ್ನ ಪ್ರಯತ್ನ ಮಾಡಿದ್ದೇನೆ. ಎಂಟರ್‌ಟೇನ್‌ಮೆಂಟ್‌ಗೆ ಕೊರತೆ ಇಲ್ಲದ ಕತೆಗಳನ್ನು ಕಣ್ಣುಮುಚ್ಚಿ ಒಪ್ಪಿಕೊಳ್ಳುವೆ. ನೆಗೆಟಿವ್ ಪಾತ್ರ ಇದ್ದರೆ, ದೂರಕ್ಕೆ ತಳ್ಳುವೆ.

* ಹೊಸ ನಿರ್ಮಾಪಕರಿಗೆ ಕಾಲ್‌ಶೀಟ್ ಕೊಡಲ್ಲ ಎಂಬ ಮಾತಿದೆ?

ಇಲ್ಲ. ನಾನು ಯಾವ ನಿರ್ಮಾಪಕರಿಗೂ ನಿರಾಶೆ ಮಾಡಲ್ಲ. ನನ್ನನ್ನು ನಂಬಿಕೊಂಡು ಬಂದ ಯಾವುದೇ ನಿರ್ದೇಶಕರಿಗೂ ನಿರಾಶೆ ಮಾಡುವುದಿಲ್ಲ. ಹಾಗಂತ ಎಲ್ಲಾ ಕತೆಗಳನ್ನೂ ಒಪ್ಪಿಕೊಳ್ಳುತ್ತಿಲ್ಲ. ಕತೆ ಹೇಳುತ್ತೇನೆ ಅಂತ ಬರುವವರಿಗೆ ಸ್ವಾಗತ.

* ನಿಮ್ಮ ತಂದೆಯನ್ನು ನಿರ್ದೇಶಕರನ್ನಾಗಿ ಮಾಡಬೇಕು ಅನ್ನುವ ಕನಸು?

ಹಾಗೇ ಇದೆ. ಈಗಲೂ ಹೇಳುತ್ತೇನೆ. ಅಪ್ಪ ನಿರ್ದೇಶಕನಾಗಬೇಕು. ಅವರ ನಿರ್ದೇಶನದ ಮೊದಲ ಚಿತ್ರದಲ್ಲಿ ನಾನು ಪಾತ್ರ ಮಾಡಬೇಕು. ತುಂಬಾ ದಿನಗಳಿಂದ ಈ ದಿನಕ್ಕಾಗಿ ಕಾಯುತ್ತಿದ್ದೇನೆ. ■


ರಾಜಕಾರಣಿಗಳು ಮನೆಮುರುಕರಲ್ಲವಂತೆ!

ರಾಜಕಾರಣಿಗಳು ಅಂದ್ರೆ ಮನೆ ಮುರುಕರು ಅಂದುಕೊಂಡಿದ್ದೆ. ಅವ್ರು ಆಡೋದು ಹಂಗೇಯ ಜನ ಅನ್ನೋದು ಹಂಗೇಯ ಅಂತಾನೂ ಕೆಲವರು ಅಂತಿದ್ರು. ಆದರೆ ಛೇ ಪಾಪ ಅವರು ಹಂಗಲ್ಲವಂತೆ. ಕೇಂದ್ರದ ಮೋದಿ ಸರ್ಕಾರವೇ ಇದಕ್ಕೆ ಉದಾಹರಣೆಯಂತೆ. ಆ ಸರ್ಕಾರಕ್ಕೆ ಅಂದ್ರೆ ಅಲ್ಲಿರೋರ್ಗೆ ಜನಗಳ ಮೇಲೆ ಭಾರೀ ಕಳಕಳಿಯಂತೆ. ಅವರಿಗೆ ಒಂದಿಷ್ಟು ಅನ್ಯಾಯ ಆದ್ರೂ ತಡ್ಕೊಳ್ಳಾರರಂತೆ. ಸಾರ್ವಜನಿಕರು ಹೂಡಿರುವ ಬಂಡವಾಳಾನ ಏಳು ಎಡೆ ಸರ್ಪ ನಿಧಿ ಕಾಯ್ತದಲ್ಲ ಹಂಗೆ ಜತನದಿಂದ ಕಾಯ್ತಾರಂತೆ. ಜನರಿಗೆ ನಷ್ಟ ಆಗದಂತೆ ಕಾಪಾಡೋಕೆ ಶಾನೆ ಕಷ್ಟಾನೆ ಪಡ್ತಾರಂತೆ ಪಾಪ.

ಈ ಸಾರ್ವಜನಿಕ ಉದ್ಯಮಗಳು ಅಂತ ಅವಲ್ಲ ಅವ್ಕೆಲ್ಲ ಜನರ ದುಡ್ಡೇ ಅಲ್ವ ಹಾಕಿರೋದು. ಜನಕ್ಕೆ ಅನುಕೂಲ ಆಗ್ಲಿ ಅದ್ರಲ್ಲಿ ಲಾಭ ಮಾಡಾನ ಅಂತ ಹೋದ್ರೂ ಲುಕ್ಸಾನೇ ಆಯ್ತ ಕುಂತದಂತೆ. ವರ್ಷವರ್ಷ ಹಿಂಗಾಗ್ತಾ ಇದ್ರೆ ಜನರಿಗೆ ಅನ್ಯಾಯ ಮಾಡ್ದಂಗೆ, ಮೋಸ ಮಾಡ್ದಂಗೆ ಅಲ್ವಾ. ಮೋದಿಯೋರಿಗೆ ಇದು ಬೋ ನೋವು ತಂತಂತೆ. ಛೇ ಹಿಂಗಾಗಬಾರದು. ಇವು ಇದ್ರೆ ತಾನೆ ನಷ್ಟ ಆಗೋದು. ಇವ ಹೋದಷ್ಟಕ್ಕೆ ಸುಟ್ಟು ಹಾಕಿಬುಡಾನ ಅಂತ ತೀರ್ಮಾನಿಸಿದರಂತೆ. ನಷ್ಟದ ವ್ಯಾಪಾರ ಅಂದ್ರೆ ಸುಣ್ಣದಕಲ್ಲು ಕಟ್ಕೊಂಡು ನೀರಿಗೆ ಬಿದ್ದಂಗಲ್ವಾ. ಅವ್ರ ತೀರ್ಮಾನವೂ ನ್ಯಾಯವೇಯ....

ಮೋದಿಯೋರೇನೋ ತೀರ್ಮಾನ ಮಾಡಿದ್ರು. ನಷ್ಟದಲ್ಲಿರೋ ಉದ್ಯಮ ಕೊಂಡುಕೊಳ್ಳಲು ಯಾರು ಬರ್‍ತಾರೆ, ಇರುಳು ಕಂಡ ಬಾವಿಗೆ ಹಗಲಲ್ಲೇ ಬೀಳೋಕೆ ಉದ್ಯಮಿಗಳೇನು ಹುಚ್ಚರಾ ಅಂದುಕೊಂಡಿದ್ರೊ. ಆದರೆ ಏನು ಆಶ್ಚರ್ಯ ಅಂತೀರಿ. ನಷ್ಟದ ಉದ್ಯಮ ಕೊಂಡುಕೊಳ್ಳೋಕೆ ಉದ್ಯಮಿಗಳು ಪೈಪೋಟಿ ಮೇಲೆ ಬರ್‍ತಾ ಅವ್ರೆ. ಇದು ಲುಕ್ಸಾನ್‌ನಲ್ಲಿರೋ ಉದ್ಯಮ ಕಣ್ರಪಾ. ಇದಕ್ಕೆ ಕೈ ಹಾಕೋದು ಅಂದ್ರೆ ಉಸುಕಿನಲ್ಲಿ ಸಿಕ್ಕಿರೋನ ಮೇಲಕ್ಕೆಳೆಯಲು ಪ್ರಯತ್ನಿಸಿದಂತೆ. ಅವನ್ನ ಉಳಿಸೋಕೆ ಹೋಗಿ ನೀವೇ ಸಿಗಾಕತ್ತೀರಿ ಅಂತ ಗಿಣಿಗೆ ಹೇಳಿದ ಹಾಗೆ ಹೇಳಿದ್ರೂ ಕಿವಿ ಮೇಲೇ ಹಾಕಿಕೊಳ್ಳಲೊಲ್ಲರು. ಉದ್ದಿಮ ಕೊಂಡುಕೊಂಡ್ರೆ ಆಗೋಯ್ತು, ಅದು ನಡೆಸಲು ಬಂಡವಾಳ ಬೇಕಲ್ಲ, ಅದೇ ಇಲ್ಲದ ಮೇಲೆ ನೂರಾರು ಕಾರ್ಮಿಕರು ಬೀದಿಗೆ ಬೀಳಬೇಕಾಯ್ತದೆ ಅಲ್ವಾ. ಇಂತಹ ಸ್ಥಿತಿ ಊಹಿಸಿಯೇ ಚಾಯ್‌ವಾಲಾ ಮೋದಿಯೋರ್‍ಗೆ ಕರುಳು ಚುರುಕ್ ಅಂತು. ಕಾರ್ಮಿಕರ ಮೇಲೆ ಕನಿಕರ ಉಕ್ಕಿಬಂತು. ಇಂತಹ ಕಷ್ಟದ ದಿನಗಳು ಯಾರ್‍ಗೂ ಬರಬಾರದು ಅಂತಾವ ರಾಷ್ಟ್ರೀಯ ಬ್ಯಾಂಕು ಅಂತ ಅವಲ್ಲ ಅಲ್ಲಿ ಬಂಡವಾಳ ಕೊಡ್ಸೋಕೂ ವ್ಯವಸ್ಥೆ ಮಾಡ್ತಾರಂತೆ ಕರುಣಾಳು ಮೋದಿಯವರು!

ಇದನ್ನ ಪವಾಡ ಅಂತಾದ್ರೂ ಅನ್ನಿ. ಹಸ್ತಗುಣ ಅಂತಾದ್ರೂ ಅನ್ನಿ. ಇನ್ನು ಏನಾದ್ರೂ ಅನ್ನಿ. ನಷ್ಟದಲ್ಲಿರೋ ಉದ್ಯಮಗಳು ಕೈಬದಲಾಯಿಸುತ್ತಿದ್ದಂಗೆ ಲಾಭ ಮಾಡಕ್ಕೆ ಶುರು ಮಾಡ್ತವಂತೆ! ಯಾರಿಗೋ ಒಳ್ಳೆಯದಾದರೆ ಸರಿ.



ಅತ್ಯಾಶ್ಚರ್ಯಕರವಾದ ಇಂತಹ ಸಂಗತಿಗಳನ್ನು ನೋಡಿದಾಗ ಕಳೆದ ಐವತ್ತರ ದಶಕದ ಘಟನೆ ನೆನಪಾಯಿತು. ಆಗಿನ್ನೂ ರಾಜ್ಯಸಾರಿಗೆ ಸಂಸ್ಥೆ ಪ್ರಾರಂಭ ಆಗಿರಲಿಲ್ಲ. ಹಳೆಯ ಮೈಸೂರು ಸಂಸ್ಥಾನದಲ್ಲಿ ಖಾಸಗಿ ಬಸ್ಸುಗಳದ್ದೇ ದರ್ಬಾರು. ಅವುಗಳಲ್ಲಿ ಸಿಪಿಸಿ ಮೋಟಾರ್ಸ್ ಸರ್ವೀಸ್ ಅವರದ್ದೇ ಸಿಂಹಪಾಲು. ಅದರ ಮಾಲೀಕರು ಸಿ. ಪೆರುಮಾಳ್ ಚೆಟ್ಟಿಯಾರ್ ಅನ್ನೋರು. ಮೈಸೂರಿನಲ್ಲಿ ಅವರ ವಾಸ. ಅಂತಹ ಕಾಲಘಟ್ಟದಲ್ಲಿ ರಾಜ್ಯ ಸಾರಿಗೆ ಸಂಸ್ಥೆ ಪ್ರಾರಂಭ ಆಯಿತು. ಆಯ್ದ ಲೈನುಗಳಲ್ಲಿ ಬಸ್ಸುಗಳನ್ನು ಓಡಿಸಿತು. ಸಿಪಿಸಿ ಬಸ್ಸುಗಳ ಬಣ್ಣ ಕೆಂಪು. ಸರ್ಕಾರದ್ದೂ ಕೆಂಪು ಬಸ್ಸು. ಆಗ ರಾಜ್ಯದ ಹಣಕಾಸು ಸಚಿವರಾಗಿದ್ದವರು ಟಿ. ಮರಿಯಪ್ಪನವರು. ಅವರೂ ಚೆಟ್ಟಿಯಾರ್ ಅವರಂತೆಯೇ ಮೈಸೂರು ನಿವಾಸಿ! ಇಬ್ಬರ ಸಂಬಂಧವೂ ಅನ್ಯೋನ್ಯವಾಗಿತ್ತು. ಬಸ್ಸುಗಳ ಬಣ್ಣ, ಇಬ್ಬರ ಅನ್ಯೋನ್ಯ ಸಂಬಂಧ, ರಾಜ್ಯ ಸಾರಿಗೆ ಸಂಸ್ಥೆ ಪ್ರಾರಂಭ ಇಂತಹವು ಸಾರ್ವಜನಿಕರ ಬಾಯಿಗೆ ಎಲೆ ಅಡಿಕೆ ಆದುವು. ಅದರ ವರದಿ ಇದು.

ರಾಜ್ಯ ಸಾರಿಗೆ ಸಂಸ್ಥೆ ಪ್ರಾರಂಭಿಸಿದ್ದರಿಂದ ಚೆಟ್ಟಿಯಾರ್ ಅವರಿಗೆ ಆದಾಯ ಹಿಂಜರಿಕೆ ಆಯಿತು. ಇಂತಹ ಮಿತ್ರದ್ರೋಹದ ಕೆಲಸವನ್ನು ಟಿ. ಮರಿಯಪ್ಪನವರು ಯಾಕೆ ಮಾಡಿದರು? ಎಂಬ ಪ್ರಶ್ನೆ ಬಂದಾಗ ಬಂದ ಉತ್ತರ- ಇದು ಮಿತ್ರದ್ರೋಹಿ ಕೆಲಸ ಅಲ್ಲ, ಮಿತ್ರಸ್ನೇಹಿ ಕೆಲಸ ಅನ್ನೋದಾ! ಇದು ಹೆಂಗಪ್ಪಾ ಅಂದ್ರೆ ರಾಜ್ಯ ಸಾರಿಗೆ ಸಂಸ್ಥೆಗಳನ್ನು ಆಯ್ದ ರೂಟುಗಳಲ್ಲಿ ಓಡಿಸಲು ಸಲಹೆ ನೀಡಿದವರೇ ಸಿ. ಪೆರುಮಾಳ್ ಚೆಟ್ಟಿಯಾರ್ ಅಂತೆ!

ರಾಜ್ಯ ಸಾರಿಗೆ ಸಂಸ್ಥೆಯ ಕಾರ್ಯ ಚಟುವಟಿಕೆಯಿಂದ ಪೆರುಮಾಳ್ ಚೆಟ್ಟಿಯಾರ್‌ಗೆ ಬರುತ್ತಿದ್ದ ಆದಾಯ ಕುಂಠಿತ ಆಗಿತ್ತು. ಹಾಗಿದ್ದರೂ ಯಾಕೆ ಇಂತಹ ಸಲಹೆ ನೀಡಿದರು. ಇದರ ಪರಿಣಾಮದ ಅರಿವು ಅವರಿಗೆ ಇರಲಿಲ್ಲವೆ ಎಂದರೆ ಎಲ್ಲ ಗೊತ್ತಿದ್ದೂ ಹಾಗೆ ಮಾಡಿದರಂತೆ. ಅದು ಯಾಕೆ ಅಂದರೆ ಅದು ಹಿಂಗಂತೆ... ಸರ್ಕಾರಿ ಸಂಸ್ಥೆ ಪ್ರಾರಂಭ ಆಗುವುದಕ್ಕೆ ಮುನ್ನ ಪ್ರಮುಖ ಲೈನುಗಳು ಹಲವರ ಸುಪರ್ದಿನಲ್ಲಿದ್ದವು. ಚೆಟ್ಟಿಯಾರ್ ಅವರಿಗೂ ಕೆಲವು ಪ್ರಮುಖ ಲೈನುಗಳು ಇದ್ದರೂ ಇತರರು ಹೊಂದಿರುವ ಕೆಲವು ಲೈನುಗಳ ಮೇಲೆ ಕಣ್ಣಿಟ್ಟಿದ್ದರಂತೆ. ಈಗ ಆ ಲೈನುಗಳಲ್ಲಿ ಸರ್ಕಾರಿ ಬಸ್ಸು ಓಡುತ್ತಿದ್ದವು. ಸರ್ಕಾರ ಅಂದರೆ ಅದಕ್ಷತೆಗೆ ಇನ್ನೊಂದು ಹೆಸರು ಎಂದು ಚೆಟ್ಟಿಯಾರ್ ನಂಬಿದ್ದರಂತೆ. ಹಿಂಗಾಗಿ ಕೆಲವೇ ದಿನಗಳಲ್ಲಿ ಸರ್ಕಾರ ಭರಿಸಲಾಗದ ನಷ್ಟ ಅನುಭವಿಸುತ್ತದೆ. ಆಗ ಬಸ್ಸು ಲೈನು ಮಾರದೆ ಸರ್ಕಾರಕ್ಕೆ ಗತ್ಯಂತರವಿಲ್ಲ, ಆಗ ಅದನ್ನು ಕೊಳ್ಳುವವರು ಯಾರು? ಸಿ. ಪೆರುಮಾಳ್ ಚೆಟ್ಟಿಯಾರ್! ಇದರಿಂದ ಪ್ರಮುಖ ರೂಟುಗಳು ಯಾವುದೇ ಅಡಚಣೆ ಇಲ್ಲದೆ ತಮ್ಮ ಪಾಲಾಗುತ್ತದೆ ಎನ್ನುವುದು ಚೆಟ್ಟಿಯಾರರ ಪ್ಲಾನಂತೆ!

ನನಗೆ ಏನು ಅನುಮಾನ ಅಂದ್ರೆ ಸಿ. ಪೆರುಮಾಳ್ ಚೆಟ್ಟಿಯಾರರ ಮನೆತಾಳು ಯೋಚನೆ ಇತ್ತಾ. ಅದು ನಿಜವೋ, ಊಹೆಯೋ ಗೊತ್ತಿಲ್ಲ. ಆದರೆ ಇದು ಇವತ್ತಿನ ಉದ್ದಿಮೆದಾರರಿಗೂ ಬಂದಿದೆಯಾ ಅಂತ...

■ ಎಚ್ಕೆಲ್ಕೆ

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Friday R B P LANKESH, Kannada Weekly Price Rs. 15/- 15-07-2015

ಹುಚ್ಚ ವೆಂಕಟ್ ಮತ್ತೆ ಬಂದ



ಕಳೆದ ವರ್ಷ ಹುಚ್ಚ ವೆಂಕಟ್ ಹಲವು ಕಾರಣಗಳಿಂದಾಗಿ ಸುದ್ದಿ ಆಗಿದ್ದ. ರಾತ್ರೋರಾತ್ರಿ ಹುಚ್ಚ ವೆಂಕಟ್ ಸೇನೆ ಹುಟ್ಟಿಕೊಂಡಿತ್ತು. ಫೇಸ್‌ಬುಕ್ ತುಂಬಾ ಮರಿ ಹುಚ್ಚ ವೆಂಕಟ್‌ಗಳ ಕಾರುಬಾರು ನಡೆದಿತ್ತು. ಮೀಡಿಯಾಗಳು ಅದೇ ರೀತಿ ಆತನಿಗೆ ಪ್ರಚಾರ ಕೊಟ್ಟವು. ಕಾರಣ ಆವನು ಒಂದು ಸಿನಿಮಾ ಮಾಡಿ ಬರೋಬ್ಬರಿ ಎರಡು ಕೋಟಿ ರೂಪಾಯಿ ಕಳೆದುಕೊಂಡ. ಆದರೂ ಸಿನಿಮಾ ಮಾಡುವ ಹುಚ್ಚು ಇನ್ನೂ ಬಿಟ್ಟಂತಿಲ್ಲ. ಹೀಗಾಗಿಯೇ ಮತ್ತೊಂದು ಸಿನಿಮಾದೊಂದಿಗೆ ವೆಂಕಟ್ ಮತ್ತೆ ಸಿನಿಮಾರಂಗಕ್ಕೆ ಮರಳಿದ್ದಾನೆ. ಚಿತ್ರಕ್ಕೆ 'ಪೋರ್ಕಿ ಹುಚ್ಚ ವೆಂಕಟ್' ಎಂದು ಹೆಸರಿಟಿದ್ದಾನೆ.

ಈ ಚಿತ್ರಕ್ಕೂ ನಿರ್ದೇಶಕ, ನಟ, ನಿರ್ಮಾಪಕ ಹೀಗೆ ಎಲ್ಲವೂ ಹುಚ್ಚ ವೆಂಕಟನೆ. ನಾಯಕಿ ಮಾತ್ರ ಕಾವೇರಿಯಂತೆ. ಆ ಕಾವೇರಮ್ಮ ಎಲ್ಲಿದ್ದಾಳೋ ಅವನೇ ಬಲ್ಲ. ಆದರೆ ಆ ಹುಡುಗಿಯ ಹೆಸರನ್ನು ಆತ ಮಂತ್ರದಂತೆ ಪಠಿಸುತ್ತಲೇ ಇರುತ್ತಾನೆ.

ಮೊನ್ನೆಯಷ್ಟೇ ಸಿನಿಮಾದ ಟೀಸರ್ ಬಿಡುಗಡೆ ಮಾಡಿದ್ದಾನೆ. ಎಂದಿನಂತೆ ತನ್ನದೇ ಶೈಲಿಯಲ್ಲಿ ಡೈಲಾಗ್ ಹೊಡೆದಿದ್ದಾನೆ. ಅತ್ತಿದ್ದಾನೆ. ಮಂಗನಾಟ ಮಾಡಿದ್ದಾನೆ. ಈ ಬಾರಿಯೂ ಪ್ರೇಕ್ಷಕನಿಗೆ ಖಡಕ್ ಆದ ಸಂದೇಶ ರವಾನಿಸಿದ್ದಾನೆ. "ಪೆನ್ನು ಹಿಡಿದ ಕೈಗೆ ಗನ್ ಕೊಡಿಸಿದವರು ನೀವೇ" ಎಂದು ಪ್ರೇಕ್ಷಕರನ್ನು ದೂರಿದ್ದಾನೆ. ತನ್ನ ಸಿನಿಮಾದಲ್ಲಿ ಐಟಂ ಸಾಂಗ್ ಇರಲ್ಲ, ವಲ್ಗರ್ ಡೈಲಾಗ್ ಹೇಳಲ್ಲ ಎಂದೂ ಮಾತಾಡಿದ್ದಾನೆ. ಕಳೆದ ಬಾರಿಯೇ ವೆಂಕಟ್‌ಗೆ ಚಿಕಿತ್ಸೆಯ ಅಗತ್ಯವಿದೆ ಎಂದು ಅನೇಕ ನಿರ್ಮಾಪಕರು ಮಾತಾಡಿಕೊಂಡಿದ್ದರು. ಆದರೂ ವೆಂಕಟ್ ಚಿಕಿತ್ಸೆ ತೆಗೆದುಕೊಳ್ಳಲಿಲ್ಲ, ಕೌನ್ಸಿಲಿಂಗ್‌ಗೆ ಹೋಗಲಿಲ್ಲ. ಮತ್ತೆ ಅಪ್ಪನ ದುಡ್ಡಿನ ಜತೆ ಆಟ ಆಡುತ್ತಿದ್ದಾನೆ. ಸಿನಿಮಾಗಿಂತ ಆಚೆಯೇ ಪ್ರೇಕ್ಷಕರು ಮನರಂಜನೆ ತೆಗೆದುಕೊಳ್ಳುತ್ತಿರುವುದು ವಿಪರ್ಯಾಸ.

ಕೈಕೊಟ್ಟ ಸುನೀಲ್ ಶೆಟ್ಟಿ

ವರ್ಷದ ಹಿಂದೆ 'ಅಲೋನ್' ಸಿನಿಮಾ ಸಾಕಷ್ಟು ಸುದ್ದಿ ಮಾಡಿತ್ತು. ಕಾರಣ, ಈ ಸಿನಿಮಾದಲ್ಲಿ ಬಾಲಿವುಡ್ ಸೂಪರ್‌ಸ್ಟಾರ್ ಸುನೀಲ್ ಶೆಟ್ಟಿ ನಟಿಸುತ್ತಾರೆಂದು ನಿರ್ದೇಶಕರು ಹೇಳಿದ್ದರು. ಎಲ್ಲಾ ಸುದ್ದಿಯಂತೆ ಇದನ್ನೂ ನಿಜ ಎಂದು ನಂಬಲಾಗಿತ್ತು. ಈಗ ಸಿಕ್ಕಿರುವ ಮಾಹಿತಿ ಪ್ರಕಾರ ಸುನೀಲ್ ಶೆಟ್ಟಿ ಆ ಚಿತ್ರದಲ್ಲಿ ನಟಿಸುವುದಿಲ್ಲವೆಂದು ಹೇಳಿದ್ದಾರೆ. ಇವರಿಗಾಗಿ ಕಾದು ಕೂತಿದ್ದ ನಿರ್ದೇಶಕರು ತಮ್ಮ ಪಾಡಿಗೆ ಬೇರೊಬ್ಬ ನಟರನ್ನು ಹುಡುಕಿ ಆ ಪಾತ್ರವನ್ನು ಮಾಡಿಸಿದ್ದಾರೆ.



ಇದು ಜೆಕೆಎಸ್ ನಿರ್ದೇಶನದ ಸಿನಿಮಾ. ಸಸ್ಪೆನ್ಸ್ ಥ್ರಿಲ್ಲರ್ ಕತೆಯನ್ನು ಈ ಸಿನಿಮಾ ಹೊಂದಿದ್ದು, ನಿಕೇಶಾ ಪಟೇಲ್ ಪ್ರಧಾನ ಪಾತ್ರಧಾರಿ. ಜತೆಗೆ ಕಾಮ್ನಾ ಜೇಠ್ಮಲಾನಿ ಕೂಡ ಸಿನಿಮಾದಲ್ಲಿದ್ದಾರೆ. ಬೀಚ್ ತಟದಲ್ಲಿರುವ ಮನೆಯೊಂದರಲ್ಲಿ ಏಳು ದಿನಗಳ ಕಾಲ ನಡೆಯುವ ಈ ಕಥೆಯಲ್ಲಿ ಹಲವು ವಿಶೇಷಗಳಿವೆಯಂತೆ. ಸುನೀಲ್ ಶೆಟ್ಟಿ ಇದ್ದರೆ ಆ ವಿಶೇಷತೆಗಳಿಗೆ ಇನ್ನಷ್ಟು ಮೆರುಗು ಇರುತ್ತಿತ್ತು ಎನ್ನುವುದು ನಿರ್ದೇಶಕರ ಮಾತು.

ದಳಪತಿ ನಾಪತ್ತೆ




ಪ್ರೇಮ್ ಅಭಿನಯದ, ಪ್ರಶಾಂತ್ ರಾಜು ನಿರ್ದೇಶನದ 'ದಳಪತಿ' ಸಿನಿಮಾ ಮುಹೂರ್ತವಾಗಿ ಒಂದು ವರ್ಷವೇ ಕಳೆದಿದೆ. ಅಂದುಕೊಂಡಂತೆ ಎಲ್ಲವೂ ನಡೆದಿದ್ದರೆ ಈ ಚಿತ್ರ ಈಗಾಗಲೇ ಬಿಡುಗಡೆ ಆಗಬೇಕಿತ್ತು. ಆದರೆ ಅದು ಇನ್ನೂ ಡಬ್ಬಾದಲ್ಲಿ ಕೂತಿದೆ. ಇದೇ ನಿರ್ದೇಶಕರ ಮತ್ತೊಂದು ಸಿನಿಮಾ 'ಜೂಮ್' ತೆರೆಗೆ ಬರಲು ರೆಡಿ ಆಗುತ್ತಿದೆ. ಇದಕ್ಕೆ ಕಾರಣ ಈಗ ಪ್ರೇಮ್ ಮಾರ್ಕೆಟ್ ಕುಸಿದಿದೆಯಂತೆ. ಹೀಗಾಗಿಯೇ ನಿರ್ದೇಶಕರು 'ದಳಪತಿ'ಗಿಂತ 'ಜೂಮ್' ಮೇಲೆ ಹೆಚ್ಚು ಒಲವು ತೋರಿಸುತ್ತಿದ್ದಾರೆ. ಜೂಮ್‌ಗೆ ಗಣೇಶ್ ನಾಯಕ. ವಿದೇಶದಲ್ಲಿ ಈ ಚಿತ್ರದ ಶೂಟಿಂಗ್ ನಡೆಯುತ್ತಿದೆ.

'ದಳಪತಿ' ಎಂಬ ಹೆಸರಿದ್ದರೂ ಇದು ಚಾರಿತ್ರಿಕ ಸಿನಿಮಾ ಅಲ್ಲ. ಅಲ್ಲದೇ ಹೇಳಿಕೊಳ್ಳುವಂಥ ಸ್ಕ್ರಿಪ್ಟ್ ಕೂಡ ಆದಾಗಿಲ್ಲ. ಹೀಗಾಗಿ ನಿರ್ದೇಶಕರು ಸಿನಿಮಾವನ್ನು ಅರ್ಧಕ್ಕೆ ನಿಲ್ಲಿಸಿದ್ದಾರೆ. ಪ್ರೇಮ್ ಮಾತ್ರ ಈಗಲೂ 'ದಳಪತಿ'ಯ ಜಪ ಮಾಡುತ್ತಿದ್ದಾರೆ.

ಅರ್ಜುನ್ ಪ್ರಜ್ವಲ್ ಭಾಮಾ



ದಿಗಂತ್ ಪ್ರೀತಿಗೆ ತ




ಐದು ವರ್ಷದ ಹಿಂದೆಯೇ ರೆಡಿ ಆಗಿರುವ 'ಈ ಪ್ರೀತಿ' ಸಿನಿ... ಇವತ್ತಿಗೂ ಬಿಡುಗಡೆಯ ಭಾಗ್ಯ ದೊರೆಯುತ್ತಿಲ್ಲ. ಕಾರಣ, ನಿರ್ದೇ... ಎಳೆದುಕೊಂಡ ಹಲವು ಸಂಕಷ್ಟಗಳು. ನಾಯಕ ಮತ್ತು ನಾಯಕಿಯರ ನ... ಗಲಾಟೆಯಿಂದಾಗಿ ವಿಳಂಬವಾದ ಸಿನಿಮಾ, ಇವತ್ತಿಗೂ ಹಲವು ಸಮಸ್ಯೆ... ಎದುರಿಸುತ್ತಲೇ ಇದೆ. ಅದಕ್ಕೆ ದಾರಿ ಕಾಣದೇ, ಸಿನಿಮಾದ ಬ... ನೋಡುತ್ತಾ ಕೂತಿದ್ದಾರೆ ನಿರ್ದೇಶಕರು.

ಆದರೂ, ಮೊನ್ನೆಯಷ್ಟೇ ಬಿಡುಗಡೆಯ ಮಾತುಗಳನ್ನು ಆಡಿ... ಸದ್ಯ ಸಿಕ್ಕಿರುವ ಮಾಹಿತಿ ಪ್ರಕಾರ, ಸಿನಿಮಾ ಹಳೆಯದ್ದಾಗಿದೆ. ಹ... ವಿತರಣೆ ಮಾಡಲು ಯಾರೂ ಮುಂದೆ ಬರುತ್ತಿಲ್ಲ ಎನ್ನಲಾಗ... ಅಲ್ಲದೇ ದಿಗಂತ್ ಮತ್ತು ನಾಯಕಿ ತೇಜಸ್ವಿನಿ ಇಬ್ಬರೂ ಪ್ರಚಾರ... ದೂರ ಸರಿಯುತ್ತಿದ್ದಾರೆ ಎಂಬ ಮಾತೂ ಕೇಳಿಬರುತ್ತಿದೆ.

ಇದು ಪ್ರಿಯಾ ಭಾರತಿ ನಿರ್ದೇಶನದಲ್ಲಿ ಮೂಡಿಬಂದಿರುವ ಸಿ... ಸಮಕಾಲೀನ ಸಮಸ್ಯೆಗಳು, ಪ್ರೀತಿ ಮತ್ತು ಗೆಳೆತನ ಈ ಸಿನಿಮಾದ ... ಹೂರಣ. ವಾಶಿಂಗ್‌ಟನ್ ಡಿಸಿ, ನ್ಯೂಯಾರ್ಕ್ ಮತ್ತು ಬೆಂಗಳೂ... ಚಿತ್ರವನ್ನು ಶೂಟ್ ಮಾಡಿದ್ದು ವಿಶೇಷ.

ಬುಗುರಿ ಆಡಿಸೋಣ

'ಚೆಲ್ಲಾಟ' ಸಿನಿಮಾದ ನಿರ್ದೇಶಕ ಎಂ.ಡಿ. ಶ್ರೀಧರ್ ಮತ್ತು ಗ... ಜೋಡಿ ಮತ್ತೆ ಈಗ ಒಂದಾಗಿದೆ. ಈ ಕಾಂಬಿನೇಷನ್‌ನಲ್ಲಿ 'ಬು... ಸಿನಿಮಾ ಮೂಡಿಬಂದಿದೆ. 'ಚೆಲ್ಲಾಟ'ದಲ್ಲಿ ಭಾರೀ ಮಾತುಗಾರ ಆಗಿದ್ದ ಗಣೇಶ್, ಈ ಸಿನಿಮಾದಲ್ಲಿ ಸ್ಟೂಡೆಂಟ್. ಚೆಲ್ಲಾಟಕ್ಕಿಂತ ಇಲ್ಲಿ ತುಂಟಾಟ ಹೆಚ್ಚಿದೆಯಂತೆ.



ಇದು ಗಣೇಶ್ ಅವರ ಇಪ್ಪತ್ತೈದನೇ ಸಿನಿಮಾ. ಹೀಗಾಗಿ ಕಲರ್‌ಫುಲ್ಲಾಗಿ ಚಿತ್ರೀಕರಿಸಿದ್ದಾರೆ ನಿರ್ದೇಶಕರು. ಗಣೇಶ್ ಪಾತ್ರಕ್ಕೆ ನಾಯಕಿ ಆಗಿ ಎರಿಕಾ ಫರ್ನಾಂಡಿಸ್ ಕಾಣಿಸಿಕೊಂಡಿದ್ದಾರೆ.

ಕಾಲೇಜ್ ಲೈಫ್‌ಅನ್ನು ಉಡಾಫೆಯಾಗಿ ತೆಗೆದುಕೊಂಡ ಸ್ಟೂಡೆಂಟ್ ಮುಂದೆ ಏನೆಲ್ಲ ಕಷ್ಟಪಡಬೇಕಾಗುತ್ತದೆ ಎಂಬ ಕತೆ ಇಲ್ಲಿದೆ. ಇದು ಕಾಲೇಜು ಯುವಕರಿಗಾಗಿಯೇ ಮಾಡಿದ ಸಿನಿಮಾ ಅಂತಾರೆ ಗಣೇಶ್.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com